25 Celebrating Silver Jubilee
PADI
ಪಡಿ

# ಬೊಳ್ಳಿ



# ಕವನ

ಡಾ. ಕೆ. ಶಿವರಾಮ ಕಾರಂತ

ಮಕ್ಕಳ ನಗುವೇನೆಂದು
ಅರಿಯದವನು
ಉಪಧ್ಯಾಯನಾಗಲು ಅರ್ಹನಲ್ಲ
ಮಕ್ಕಳ ಶಿಕ್ಷಣವೆಂದರೆ ನಗುವಿನ ಶಿಕ್ಷಣ
ಶಿಕ್ಷಣದ ಗುರಿಯಾದರೂ ನಗುವೇ
ನಗಲಾರದ ಮಕ್ಕಳನ್ನು
ನೀವೆಲ್ಲಾದರೂ ಕಂಡರೆ - ಅವಕ್ಕೆ
ಶರೀರ ಬೇನೆಯಿದೆ ಎಂದು
ತಿಳಿಯಬೇಕು. ಇಂದಿನ ಶಾಲೆಗಳಲ್ಲಿ
ಅಲಕ್ಷಿಸಿರುವುದಾದರೆ ಅದನ್ನೇ
ಮಕ್ಕಳಿಗೆ ನಗುವೇ ಜೀವ
ಎಂದು ತಿಳಿಯದಿರುವ ತನಕ
ನಾವು ವಿದ್ಯಾಭ್ಯಾಸಕ್ಕಾಗಿ ಹೋರಾಡುವುದು ವ್ಯರ್ಥ
ನಗುಮೊಗದ ಮಕ್ಕಳಿರುವ
ಶಾಲೆಯೇ ಅರಳಿದ ಹೂಗಳ
ಉದ್ಯಾನ ಬಾಡಿರುವ ಮೋರೆಯ
ಮಕ್ಕಳಿರುವ ಸ್ಥಳವೇ ಮಸಣ.
ಈಗ ನಾವ್ಯವ ಶಾಲೆಯಲ್ಲಿ ಕಾಲಿಟ್ಟರೂ
ಮಸಣದ ಛಾಯೆಯೇ ಒಡೆದು
ಕಾಣುವುದಲ್ಲದೆ-ಉದ್ಯಾನದ
ಕಳೆಯು ಅದರಲ್ಲಿಲ್ಲ. ಬಾಡಿ,
ಒಣಗಿದ ಗಿಡಗಳಿಗೆ ನೀರೆರೆದು
ಫಲವೇನು ಬಂದೀತು?

## ಪಡಿ–ವೆಲೊರೆಡ್ ಯೋಜನೆಯ
## ರಜತ ಸಂಭ್ರಮದ ಅಂಗವಾಗಿ

# ಬೊಳ್ಳಿ

## ಸ್ಮರಣ ಸಂಚಿಕೆ - 2018

**BOLLI** : A Souvenir on the occasion of Silver Jubilee Celebration of **PADI-VALORED**

**ಬೊಳ್ಳಿ** : ಬೆಳ್ಳಿ ಹಬ್ಬದ ಸಂಭ್ರಮದ ಅಂಗವಾಗಿ ಬಿಡುಗಡೆಗೊಳ್ಳುತ್ತಿರುವ **ಸ್ಮರಣ ಸಂಚಿಕೆ**

Copy Rights : PADI

First Edition : 2018

Editorial Team : Ms. B.M. Rohini

Dr. Jayantha H

Mr.Thukarama Ekkaru

Ms. Joicy Watson

Mr. Chandrashekar

Cover page Design : V.K. Vitla

Printed By : PIXELS Designers, Mangaluru

ಹಕ್ಕು ಸ್ವಾಮ್ಯ : ಪಡಿ

ಪ್ರಥಮ ಮುದ್ರಣ : 2018

ಸಂಪಾದಕ ಮಂಡಳಿ : ಬಿ.ಎಂ. ರೋಹಿಣಿ

ಡಾ. ಜಯಂತ ಎಚ್

ತುಕಾರಾಮ ಎಕ್ಕಾರು

ಜಾಯ್ಸ್ ವಾಟ್ಸನ್

ಚಂದ್ರಶೇಖರ್

ಮುಖಚಿತ್ರ : ವಿ.ಕೆ ವಿಟ್ಲ

ಮುದ್ರಣ : ಪಿಕ್ಸೆಲ್ ಡಿಸೈನರ್ಸ್, ಮಂಗಳೂರು

# DEDICATED TO OUR

# FOUNDERS



DESMOND A. D'ABREO

(29-01-1929 to 25-10-2000)



MARGARET D'ABREO

(13-09-1936 to 13-01-2013)

# CRISIS OF VISION AND VALUES

DESMOND A.D'Abreo, 1989

Today, most development voluntary organizations are very clearly in a directional crisis. The cause for this is a lack of societal vision. Not only is this malaise of individual organizations, but there seems to be a crisis of a congruent development vision. This prevailing crisis of a congruent vision where everyone and every organization is being preoccupied with building roads, but there is no time or concern left to distinguish and clarify where all these roads are leading to!

This blind activism of the voluntary organizations is supported by national and international resource agencies who seem to prefer the promoting of projects which build roads, but are not committed to reflecting on where the roads should leads!.

The present crisis of vision can be seen as the result of a failure of the hitherto prevailing vision of society and development. This vision was strongly influenced by the dominant development ideology which has been propagated and perpetuated by the elitist sector of society. As a matter of fact, many development workers who initiated or joined the voluntary organization hail from this same sector. There was very little voluntary organization which tried to have a real socio-economic perspective of the grassroots people and of the development workers or place them in a framework of a critical understanding of society. To do this, a holistic understanding of society, with its various classes was essential.

Because of their different socio-economic backgrounds, and their lack of identity with the life situations of the marginalized and oppressed section of society, the voluntary organizations and their development workers have a totally different vision of society from that of the grassroots peoples.

They do not even think it was needed to see whether the people themselves have a vision or not. They develop a vision of their own and impose it on the people they were working with. Very little effort was made, or even today is still being made to identify the people's own vision and enable them to articulate and operationalise it.

Basically, the whole problem gravitates on the vision that the voluntary organizations and their development workers have of the human person. Many are concerned with an economic development of the people they work with. Some others, whose number has been increasing in the past two decades, are committed to developing the people's critical awareness of the socio-economic, political and cultural situation in which they live and to organizing them to struggle for their rights. But very few indeed have a holistic view of the human person, who is not just an economic, political, social and cultural entity but an autonomous being who can reflect, love selflessly and make decisions for himself or herself in every aspect of human existence. such a person can flourish only in an ambiance of values that flow from the very nature of a rational and communitarian being, values like cooperation, collaboration, sharing, solidarity, respect for each and every other human being, irrespective of caste, creed or gender, respect for the rights of nature of which he or she is a trustee for the coming generation, service and simplicity of lifestyle

However, given the present global socio-economic trends which are rooted in an ideology that glorifies modernization and nurture its under pinning pseudo-values the voluntary organization, their workers as well as the grass people themselves, are enticed and entrapped by this dominant ideology. Hence, these organizations and workers are in and acute dilemma of vision.

These values constitute the elements for a framework of reference or value premise for the transformation of society, without such a framework, the voluntary organizations and development workers will not get much further from achieving some kind of economic upliftment or social advancement. They will not be able to help to build-up a society that is rooted in the values that sustain and authentic human community. But this frame of reference is also required to explore the critical issues that be set

our society as well as to formulate the alternative vision of society.

This vision can be derived from several sources. The most outstanding would be the preamble to the constitution of the republic of India:

“We the People of India, Having solemnly resolved to constitute India into a Sovereign, Socialist, Secular, Democratic, Republic and to secure to all the citizens.

Justice, Social, Economic and Political;

Liberty of thought, expression, belief, faith and worship; Equality of status and of opportunity; and to promote among them all Fraternity assuring the dignity of the individual and integrity of the Nation...”

The vision of society and development of the Father of the Nation, Mahatma Gandhi was based on the principle of Sarvodaya with its integral elements of Satyagraha, Gram Nirman, Gram Swaraj and Antyodaya. The principles on which this social order is based are:

Unity among people

Non-violence

Truth as a harmonizing thrust

Systematic consciousness, and

Compatibility between ends and means.

If we were to blend these visions together with that of the World Council of Churches which is “ a just, participatory and sustainable society”, we will be able to envisage a society that is based on a holistic world view, which regards all other human beings as created to the image and likeness of God, therefore worthy of appropriate respect, justice and concern, irrespective of caste, creed, race or gender. This world view respects the rights of nature and of the future generations to the earth and its bounty. It respects the unity and inviolability of body, mind and spirit of all human persons.

Consequently, this society will reject all manner of hierarchy, domination and violence which establishes the superiority of some persons over others. It will build up a moral economy based on self-reliant subsistant communities which will include all human beings, and give due importance to life-enhancing creativity while striving to eradicate selfish, oppressive and destructive greed, which together with injustice that has until now had divided the world into those who possess and those who are owned!.

**Voluntary organizations and this Value Framework**

The voluntary organization or development worker that undertakes the responsibility of enabling the grassroots people to bring about their own development must have this vision foremost in every aspect of the tasks linked up with this development, Since this vision is built up on some fundamental values, it is essential that the voluntary organization first find itself rooted in these very values. Nobody can give what he or she has not got, and values cannot be taught but must be caught through example.

It stands to reason that it is an impossible mission task for a voluntary agency to bring decision-making to the level of the grassroots people if it is built up on a hierarchy that restricts organization to bring about simplicity of life styles, service, sharing and solidarity if it lives in a level far removed from that of the people, in an affluence and luxury or even a level of comfort that the people can never aspired to.

In order to be effective, the voluntary organization must give prime importance to Justice which is social, economic and political within itself, to liberty of thought, expression, belief, faith and worship, and to equality of status and opportunity for all its members, in a spirit of fraternity. Else its efforts to be built up a society based on the preamble of the constitution of the Republic of India will only turn out to be hypocrisy. In keeping with the spirit of Mahatma Gandhi, it must base itself on the principles of unity, non-violence, truth and transparency and compatibility between ends and means.

Does this not seen to be asking for too much? is this not an ideal that is hardly attainable? Perhaps! But if people or organization thinks so they should in no way profess to be working for genuine human development of the poor, the marginalized, and the oppressed. Rather, they should realize that they are using these poor, oppressed and marginalized people as the raw material for their own economic, social and perhaps, Spiritual salvation!.

# PADI GENERAL BODY 2017-18



**Dr. Shobha Devi M.G.**
President



**Mrs. Shreelatha A. Ullal**
Vice President



**Mr. Thukaram Ekkar**
Treasurer



**Mr. Renni D'Souza**
Secretary



**Mr. Mohanchandra**
Member



**Ms. B. M. Rohini**
Member



**Dr. Jayantha H.**
Member



**Rev. Osmond N. Shiri**
Member



**Mrs. Sarah Aboobakkar**
Member



**Mr. Gopal Peraje**
Member



**Mrs. Hyacinth Pinto**
Member

# PADI GOVERNING BODY

**2003-04 to 2009-10**

President : Ms. Margaret D'Abreo,
Vice President : Ms. B.M. Rohini,
Secretary : Mr. Renni D'Souza,
Treasurer : Dr. M.G. Shobhadevi,
Members : Ms. Suneetha Vittal, Mr. Mohanchandra, Ms. Merlyn Martis, Rev. Osmond N Shiri, Dr. Gananatha Ekkaru

**2010-11 to 2012-13**

President : Ms. Margaret D'Abreo,
Vice President : Ms. B.M. Rohini,
Secretary : Mr. Renni D'Souza,
Treasurer : Dr. M.G. Shobhadevi,
Members : Mr. Mohanchandra, Mr. Thukarama Ekkaru, Rev. Osmond N Shiri, Dr. Gananatha Ekkaru; Dr. Jayantha H

**2013-14 to 2014-15**

President : Dr. Jayantha H
Vice President : Ms. Shreelatha A. Ullal,
Secretary : Mr. Renni D'Souza,
Treasurer : Dr. M.G. Shobhadevi,
Members : Mr. Mohanchandra, Ms. B.M. Rohini, Rev. Osmond N Shiri, Dr. Gananatha Ekkaru; Mr. Thukarama Ekkaru

**2015-16 to 2016-17**

President : Dr. Jayantha H
Vice President : Ms. Shreelatha A. Ullal,
Secretary : Mr. Renni D'Souza,
Treasurer : Mr. Thukarama Ekkaru
Members : Mr. Mohanchandra, Ms. B.M. Rohini, Dr. M.G. Shobhadevi, Rev. Osmond N Shiri, Dr. Gananatha Ekkaru;, Mr. Gopal Peraje, Mrs. Sarah Aboobakker

**2017 to 18**

President : Dr. M.G. Shobhadevi
Vice President : Ms. Shreelatha A. Ullal
Secretary : Mr. Renni D'Souza
Treasurer : Mr. Thukarama Ekkaru
Members : Dr. Jayantha H, Mr. Mohanchandra, Ms. B.M. Rohini, Rev. Osmond N Shiri, Mr. Gopal Peraje, Mrs. Sarah Aboobakker Mrs. Hyacinth Pinto.

# PADI - VALORED'S SILVER JUBILEE CELEBRATION (1993 - 2018)
# RELEASE OF SOUVENIR & CHILD RIGHTS CULTURAL FESTIVAL

## CONCEPT

VALORED-PADI is conducting various programs in the primary education sector for the past 25 years. To provide value oriented education and life-related qualitative education, parents and with community organizations it has organized various consultation and trainings. In order to protect the rights of the children awareness programmes, workshops, advocacy with local and state level departments has been organizing regularly. Along with that survey, research, like minded meet-up, education conventions as well as action research to bring rules and regulations has helped in the children field. As a result local societies have identified state level organizations.

In order to provide a quality education, to free from sexual harassment as well to recognize the special children needs and to construct a platform of equal opportunity has been always a big challenge. Therefore unique ideas, planning, relevant platform and systems to work are required immediately. Local administration, Government, different departments, local communities, various organizations and parents has to join hands to bring diverse action research programmes for the best results.

**Hence, we have planned to implement the activities for children to bring quality and value based education and execute following programmes :**

- Information sharing through consultation/Workshops programmes to parents, SDMC, Grama Panchayath members, local community organization members.
- Teacher training and inventive -virtuous consultations to Teacher Educator.
- Providing basic needs to the Marginalized, Children in conflict with Law, sexually Harassed, Special needs children.
- Release of a souvenir to make known to all concerned about the programmes & Projects undertaken from the beginning, success and challenges of the Organisation.
- Educational conventions and Child Rights Rangostava 2018. Also we have the plan to have a Centre for Training & Research of Child Protection & Quality Education. This is a major long term plan of PADI.

To begin with, we have organized CHILD RIGHTS CULTURAL FESTIVAL – 2018" on September 01, 2018, at Don Bosco Hall, Mangaluru. This event has to turn out to be festive of all. Through this event we have to spread widely the importance of Quality & Value Based education in Primary schools, converse about various reddressal mechanisms. The fulfillment of the dreams of organization such that children can be safe and free from unnecessary problems and the success of such an attempt is possible, only by the participation of civil society.

***

# ಪಡಿ–ವೆಲೊರೆಡ್ ಯೋಜನೆಯ ಬೆಳ್ಳಿ ಹಬ್ಬದ ಆಚರಣೆ (1993–2018)
# ಸ್ಮರಣ ಸಂಚಿಕೆ ಬಿಡುಗಡೆ ಮತ್ತು ಮಕ್ಕಳ ಹಕ್ಕುಗಳ ರಂಗ ಕಲೋತ್ಸವ 2018

## ಪರಿಕಲ್ಪನೆ

ಪಡಿ–ವೆಲೊರೆಡ್ ಸಂಸ್ಥೆಯು ನೋಂದಾಯಿತ ಸರಕಾರೇತರ ಸಂಸ್ಥೆಯಾಗಿದ್ದು, ಕಳೆದ 25 ವರ್ಷಗಳಿಂದ ಪ್ರಾಥಮಿಕ ಶಿಕ್ಷಣ ಮತ್ತು ಮಕ್ಕಳ ಹಕ್ಕುಗಳ ಕ್ಷೇತ್ರದಲ್ಲಿ ಕಾರ್ಯೋನ್ಮುಖವಾಗಿ ತನ್ನನ್ನು ತೊಡಗಿಸಿಕೊಂಡಿದೆ. ಮಕ್ಕಳಿಗೆ ಮೌಲ್ಯಯುತ ಮತ್ತು ಜೀವನ ಸಂಬಂಧಿ ಶಿಕ್ಷಣ ಲಭ್ಯಗೊಳಿಸುವ ನಿಟ್ಟಿನಲ್ಲಿ ಶಿಕ್ಷಕರಿಗೆ, ಮಕ್ಕಳ ಪೋಷಕರು–ಸಮುದಾಯಾಧಾರಿತ ಸಂಘ ಸಂಸ್ಥೆಗಳಿಗೂ ಅಗತ್ಯ ತರಬೇತಿ–ಸಮಾಲೋಚನಾ ಸಭೆಗಳನ್ನು ನಡೆಸಿದೆ. ಮಕ್ಕಳ ಹಕ್ಕುಗಳ ರಕ್ಷಣೆಯ ಹಿನ್ನೆಲೆಯಲ್ಲೂ ಜಾಗೃತಿ ಕಾರ್ಯಕ್ರಮಗಳು, ಕಾರ್ಯಾಗಾರಗಳು, ಸ್ಥಳೀಯ ಮತ್ತು ರಾಜ್ಯ ಇಲಾಖೆ–ಸರಕಾರಗಳೊಂದಿಗೆ ವಕಾಲತ್ತುಗಳನ್ನು ನಡೆಸುತ್ತಾ ಬಂದಿದೆ. ಜೊತೆಗೆ ಸಮೀಕ್ಷೆ, ಅಧ್ಯಯನಗಳು, ಸಮಾನ ಮನಸ್ಕರ ಸಮ್ಮಿಲನಗಳು, ಶಿಕ್ಷಣ ಸಮಾವೇಶಗಳು–ಹೀಗೆ ಜನೋಪಯೋಗಿ ಕ್ರಿಯಾಶೀಲ ಚಟುವಟಿಕೆಗಳ ಮೂಲಕ ಉತ್ತಮ ಶಿಕ್ಷಣ ವಾತಾವರಣವನ್ನು ನಿರ್ಮಿಸಲು ಸಾಧ್ಯವಾಗಿಸಿ, ಶಿಕ್ಷಣ ಕ್ಷೇತ್ರದಲ್ಲಿ ಮತ್ತು ಮಕ್ಕಳ ಕ್ಷೇತ್ರದಲ್ಲಿ ನೀತಿ ನಿಯಮಗಳನ್ನು ಜಾರಿಗೊಳಿಸುವಲ್ಲಿ ಸಫಲವಾಗಿದೆ. ಇದರ ಪರಿಣಾಮವಾಗಿ ಸ್ಥಳೀಯ ಸಂಘ–ಸಂಸ್ಥೆಗಳು, ರಾಜ್ಯಮಟ್ಟದ ಇಲಾಖೆಗಳು ಸಂಸ್ಥೆಯನ್ನು ಗುರುತಿಸುವಂತಾಗಿದೆ.

ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಲಭ್ಯಗೊಳಿಸುವುದು, ಮಕ್ಕಳನ್ನು ಲೈಂಗಿಕ ದೌರ್ಜನ್ಯಗಳಿಂದ ಮುಕ್ತಗೊಳಿಸುವುದು, ಜೊತೆಗೆ ವಿಶೇಷ ಅಗತ್ಯವಿರುವ ಮಕ್ಕಳನ್ನು ಮುನ್ನೆಲೆಗೆ ತರುವುದು–ಅವರಿಗೆ ಪೂರಕ ವಾತಾವರಣ ಒದಗಿಸುವುದು ಇಂದಿಗೂ ಸವಾಲಾಗಿದೆ. ಇದಕ್ಕೆ ವಿಭಿನ್ನ ಚಿಂತನೆ, ಯೋಜನೆ, ಪೂರಕ ವ್ಯವಸ್ಥೆಗಳ ಅಗತ್ಯವಿದೆ ಎಂಬುವುದನ್ನು ಮನಗಂಡಿರುತ್ತೇವೆ. ಇದು ತುರ್ತು ಅಗತ್ಯ ಎಂಬುವುದು ನಮ್ಮ ಅನುಭವ. ಸ್ಥಳೀಯಾಡಳಿತ, ಸರಕಾರ, ವಿವಿಧ ಇಲಾಖೆಗಳು, ಸ್ಥಳೀಯ ಸಂಘಸಂಸ್ಥೆಗಳು, ಪೋಷಕರು ಒಂದೆಡೆ ಸೇರಿ, ಈ ಬಗ್ಗೆ ಚರ್ಚಿಸಿ, ಯೋಜಿಸಿ–ಕಾರ್ಯಗತಗೊಳಿಸುವುದು ಅಗತ್ಯ ಎನ್ನುವುದು ನಮ್ಮ ಭಾವನೆ.

ಶಾಲಾ ಮಕ್ಕಳಿಗೆ ಗುಣಮಟ್ಟದ–ಮೌಲ್ಯಯುತ ಶಿಕ್ಷಣಕ್ಕಾಗಿ ಶೈಕ್ಷಣಿಕ ಯೋಜನೆಗಳು 2017–2020, ಈ ಹಿನ್ನೆಲೆಯಲ್ಲಿ ಕೆಳಕಂಡ ಕೆಲವೊಂದು ಯೋಜನೆಗಳನ್ನು ಕಾರ್ಯಗತಗೊಳಿಸಲು ಯೋಜಿಸಿರುತ್ತೇವೆ. ಮುಖ್ಯವಾಗಿ,

- ✦ ಮಕ್ಕಳ ಪೋಷಕರು, ಎಸ್‌ಡಿಎಂಸಿ, ಗ್ರಾಮ ಪಂಚಾಯತ್ ಸದಸ್ಯರು, ಸ್ಥಳಿಯ ಸಂಘಸಂಸ್ಥೆಗಳೂ ಸೇರಿದಂತೆ ಸಮುದಾಯ ಸದಸ್ಯರಿಗೆ ಮಾಹಿತಿ ಕಾರ್ಯಾಗಾರಗಳು
- ✦ ಶಿಕ್ಷಕರಿಗೆ ಬೋಧನಾ ಮತ್ತು ಸೃಜನಶೀಲ ಕಾರ್ಯಾಗಾರಗಳು
- ✦ ನೊಂದ ಮತ್ತು ನ್ಯಾಯಿಕ ಪ್ರಕ್ರಿಯೆಯಲ್ಲಿರುವ ಮಕ್ಕಳಿಗೆ, ಲೈಂಗಿಕ ದೌರ್ಜನ್ಯಕ್ಕೊಳಗಾದ, ವಿಶೇಷ ಅಗತ್ಯವಿರುವ ಮಕ್ಕಳಿಗೆ ಅಗತ್ಯ ಮೂಲ ಸೌಲಭ್ಯಗಳ ವ್ಯವಸ್ಥೆ.
- ✦ ಯೋಜನೆಯ 25 ಸಂವತ್ಸರಗಳಲ್ಲಿ ಕೈಗೆತ್ತಿಕೊಂಡ ಯೋಜನೆಗಳು, ಅವುಗಳ ಸಫಲತೆಗಳು ಮತ್ತು ಸಂಸ್ಥೆಯ ಮುಂದಿರುವ ಸವಾಲುಗಳನ್ನು ಸರ್ವರಿಗೂ ತಲುಪಿಸುವ ಪ್ರಯತ್ನವಾಗಿ ಸ್ಮರಣ ಸಂಚಿಕೆಯ ಬಿಡುಗಡೆ.
- ✦ ಶೈಕ್ಷಣಿಕ ಸಮಾವೇಶ ಮತ್ತು ಮಕ್ಕಳ ಹಕ್ಕುಗಳ ರಂಗೋತ್ಸವ–2018. ಅಲ್ಲದೆ ದೀರ್ಘ ಕಾಲೀನ ಯೋಜನೆಯಾಗಿ ಮಕ್ಕಳ ರಕ್ಷಣೆ ಮತ್ತು ಗುಣಮಟ್ಟದ ಶಿಕ್ಷಣಕ್ಕಾಗಿ ತರಬೇತಿ ಮತ್ತು ಸಂಶೋಧನಾ ಕೇಂದ್ರದ ಕಟ್ಟಡ ನಿರ್ಮಾಣ.

ಯೋಜನೆಯ ಉದ್ದೇಶಗಳನ್ನು ಈಡೇರಿಸುವ ನಿರಂತರ ಕಾರ್ಯದಲ್ಲಿ ಸಮಾಜದ ಎಲ್ಲರ ಸಹಕಾರವನ್ನು ನಿರೀಕ್ಷಿಸುವುದಕ್ಕಾಗಿ ಮಕ್ಕಳ ಹಕ್ಕುಗಳ ರಂಗ ಕಲೋತ್ಸವ–2018 ಮೊದಲ ಪ್ರದರ್ಶನವನ್ನು 01–09–2018ರಂದು ಮಂಗಳೂರಿನ ಡಾನ್ ಬಾಸ್ಕೋ ಹಾಲ್‌ನಲ್ಲಿ ನಡೆಸುವುದು ಮತ್ತು 25 ವರ್ಷಗಳ ಯೋಜನೆಯ ಬೆಳ್ಳಿ ಹಬ್ಬದ ನೆನಪಿಗಾಗಿ ಸಂಸ್ಥೆ ಸಮಾಜದ ಬದಲಾವಣೆಗಾಗಿ ಮಾಡಿದ ವಿವಿಧ ಪ್ರಯತ್ನಗಳು, ದಾಖಲೆಗಳನ್ನು ಸ್ಮರಣ ಸಂಚಿಕೆಯ ಮೂಲಕ ಬಿಡುಗಡೆ ಮಾಡುತ್ತಾ, ಈ ಕಾರ್ಯಕ್ರಮವು ಸಾರ್ವಜನಿಕ ಹಬ್ಬವಾಗಬೇಕೆಂಬುದು ನಮ್ಮ ಆಶಯ. ಇಲ್ಲಿ ಮಕ್ಕಳು ಮತ್ತು ಶಿಕ್ಷಣ ಕ್ಷೇತ್ರದ ಚಟುವಟಿಕೆಗಳು, ಮಾಹಿತಿಗಳು ಲಭ್ಯವಾಗಬೇಕು, ಸಮಸ್ಯೆಗಳು ಚರ್ಚಿತವಾಗಬೇಕು. ಎಲ್ಲರೂ ಪಾಲ್ಗೊಳ್ಳಬೇಕು, ಅನಿಸಿಕೆ–ಸಲಹೆಗಳು ಲಭ್ಯವಾಗಬೇಕು. ಎಲ್ಲರೂ ಯೋಚಿಸಬೇಕು–ಯೋಜಿಸಬೇಕು. ಆಗ ಮಾತ್ರ ಶಿಕ್ಷಣ ಮತ್ತು ಮಕ್ಕಳ ಕ್ಷೇತ್ರದ ನಮ್ಮೆಲ್ಲರ ಕನಸು ನನಸಾಗಲು ಸಾಧ್ಯ. ಮಕ್ಕಳು ಸಮಸ್ಯೆಯಿಂದ ಮುಕ್ತರಾಗಲು ಸಾಧ್ಯ.

***

A BRIEF REPORT

# Silver Anniversary Celebration of PADI-Valored

PADI-VALORED had decided during Twenty fifth year of its establishment to organize a programme of Silver Anniversary to facilitate a get-together of all its stakeholders in a meaningful manner with sharing of its experiences of 25 years of glorious service to society. SILVER ANNIVERSARY process plan was discussed by PADI Board members and key staff members. As an effective course of action initially in the month of March 2018 an Organizing Committee was formed consisting of board members Dr. Jayantha H, Mr. Thukarama Ekkaru and Mr. Renni D'Souza, Executive Director & Secretary, Joicy watsaon, Office Manager, Mr. Stevan D'Souza, Advocacy Coordinator, Mr. Chandrasekhar, Documentation Coordinator and Mrs. Supreetha, Finance Manager. The Responsibility of convening the programme of Silver Anniversary and consolidation of Souvenir was given to the Office Manager, Mrs. Joicy Watson. She started the process of communication to the concerned, chalked out the contents for the Souvenir, write up themes, planning to contact the well-wishers, Stakeholders, Department Heads, Ministers, Preparation of concept note, Organisation Profile, the Projects' Mile stones, List of members who have served PADI VALORED, Silver Anniversary Celebration module and its events and presented time to time report to the Organizing committee for their scrutiny and suggestions as well communicated to the team to make understand all about the preliminary works and the process which were created interest in all the members of PADI.

In the month of May 2018 the sub committees viz Welcome Committee, Hall/Stage Arrangement Committee, Printing, Documentation & Media Committee, Cultural Committee, Exhibition Committee And Hospitality Committee were formed and involved all the team members by nominating committee coordinators and assigned the responsibilities which was monitored by Mrs. Joicy Watson, the Convener. It was also decided to associate the Committee coordinators with the Organizing committee. The members of different committees of SILVER ANNIVERSARY and SOUVENIR are as follows:

**ORGANISING COMMITTEE:**

**PADI Board Advisors:**

RENNI D'SOUZA, DR. JAYANTHA H, MR. THUKARAMA EKKARU

**Convenor:** Mrs. Joicy Watson, Office Manager;

**Members:** All Coordinators of Sub Committees.

**THE SUB COMMITTEES :**

**Welcome Committee**: Coordinator- Mrs. Supreetha, Finance Manager; Mr. Nagaraj, Mrs. Asuntha-Childline Team Members, Mrs. Vasanthi, Finance Officer.

**Printing of Souvenir, Media Committee & Reports:** Coordinator Mr. Chandrashekar, Mrs. Rekha Naroor Childline Counseller.

**Hall/Stage Arrangement Committee:** Coordinator : Mr. Steevan D'Souza, Mrs. Joicy Watson, Mr. Deekshith, Childline Coordinator, Keerthesh - Childline Team Member and Mr. Vijay Kumar.

**Exhibition Committee:** Coordinator Mrs. Jayanthi District Coordinator, Mrs. Sunitha, Program Assistant, Mrs. Ashalatha, Childline Team Member.

**Hospitality Committee:** Coordinator Mr. Dinakar**,** Past VALORED Team Member, Mr. Deepak Driver, & Mrs. Jayanthi, Mrs. Revathi, Childline Team Members.

**Cultural Committee:** Coordinator: Mrs. Anna M Fernandes, Program Manager, Taluk Coordinators- Mamatha-Puttur, Jaya Kumari-Sullya, Rajeshwari-Bantwala, Chinthana-Belthangadi, Sushmitha-Karkala and Vivek-Kundapura, Associates of Udupi Districts Anitha and Savitha.

**Masters of Ceremony of Silver Anniversary Programme:** Mrs. Kasthuri, Mrs Jayanthi in association with Pramila Vaz & Jyothi, Past team members of VALORED.

Child rights cultural team practice started under the guidance of taluk coordinators in each cluster. Mr. Steven D'Souza collected the messages from the government department heads, and legislators in time. In the month of July 2018 collection of all the write ups and Messages for Souvenir was started. The Editorial team consisting of Ms. B.M. Rohini, Dr. Jayantha H, Mr. Thukarama Ekkaru and Mr. Renni D'Souza had looked into the write ups, contents and designs and settings of the souvenir. Dr. Jayantha & B.M. Rohini suggested BOLLY as the name for the souvenir, which was accepted by all the Governing Body members and PADI team. The **Committee for Printing of Souvenir, Media & Reports** Coordinator Mr. Chandrashekar took initiation of Printing and coordinated with the Printers, the new emblem on account of 25 years and the Face Sheet of BOLLY was finalized in consultation with the Organising Committee .This process took nearly 2 months time to finalize the Souvenir BOLLY.

All the committees rendered their service in an effective manner with the Direction of Organizing committee. Two consultations were held with the voluntary organizations who were associated with PADI with their full support. Many well wishers came forward to organize this beautiful event in a wonderful manner by giving their support when consulted by the team members.

Finally the day September 1, 2018 fixed for Silver Anniversary had arrived. In the morning all the children of PADI-VALORED beneficiary schools of Sullya, Puttur, Belthangadi and Bantwal from Dakshina Kannada, Kundapura and Karkala of Udupi Districts arrived in the special buses arranged for the children and their parents. The Education Resource Centre Members from all taluks, specially the members who had joined hands to build the Community Resource Centres Mr. Venkatesh Bhat, Mr. D.T. Bhat, Mr. Prakash Nayak, Mr Manju Vitla, the past team members of VALORED also arrived. The crowd belonging to both districts about 750 in numbers, MSW field placement students of Manipal University, Roshni Nilaya, Shree Devi College, Govt MSW Colleges of Thenkanidiyur, Vitla and Mangalore University, M.V. Shetty College and Philomena College Puttur had gathered. Delightful breakfast was arranged by keeping in mind the rural children to enjoy the unique dishes.

The Program began at 10.30 am with the Guests being escorted to the Dias by Mr Renni D'Souza, Executive Director and the Secretary of PADI. Mr Mallanna Gowda, Member Secretary, District Legal Services Authority was the Chief Guest, Mr Ivan D'Souza, Member, Karnataka Legislative Council, Dr Kripa Amar Alva, Former President, Karnataka State Commission for Protection of Child Rights. Dr Shobha Devi M.G., President, PADI, Mangaluru, Mr. Cyprian Monterio, DDPI (Development) & Principal DIET, District Institute of Education & Training Mangaluru, Mrs. Merlyn Martis, Director, DEEDS, Mangaluru, Mrs Sulochana Kodavur, President, Zilla Shikshana Sampanmula Kendra, Udupi, Mrs Premi Fernandes, President, Shikshana Sampanmula Kendragala Okkuta, D.K., Mr Abdul Salaam Chitturu, President, District SDMC Co ordination Committee, Udupi District, Mr Ismail Nellyadi, President, District SDMC Co-ordination Committee, Dakshina Kannada District. All the Governing Body Members of PADI were escorted to the dias.

A Lively and Vibrant presentation of the Aashaya Geethe was sung by the Tiny Tots (Balyadha Aisiri, Belthangady) of our Dakshina Kannada District.

Dr. Jayantha H, former President and member of PADI Governing Body welcomed all the Guests and children of 6 clusters of 2 districts who were exhibiting Skits. He has greeted each and every Luminary and the Dignitary and involved the Governing Body members to present a **"Plantlet of Love & Hope".**

Mr Renni D'Souza spoke on his initial remark stressing the concepts of VALAORED, the growth and the team building process under the guidance of Founder, Dr. Desmond D'Abreo and Mrs. Margaret D'Abreo and they were revered and expressed that their eternal light would always be there as a blessing to the service. Continuing his

initial remarks he has highlighted the later Projects. Now the PADI-VALORED one step forward from Value Oriented Education to Quality Education, Child Rights & Protection. And the process lead to state level building the Network Named PAFRE (People's Alliance for Fundamental Right to Education), here the stock takings of implementation of Right to education is been done to get the overall standard of Government Schools of Karnataka and an advocacy is been done is a major effort. PADI aims at making the both the districts child friendly Districts and for this the support and guidance of the community is sought.

He has also explained the new Initiations Plan for 2020 on account of Glorious 25 years of Services PADI has planned to implement.

The Inauguration of this Anniversary is performed by Mr. Mallanna Gowda and Mr. Ivan D'Souza along with the 2 children each girl & Boy from 6 Taluks with the colourful balloons symbolising the Joyful learning, Child Friendly Atmosphere, freedom, in high spirits participation and so on good values of the growth of child which PADI-VALORED inculcated through its service. Here PADI installed its new 12 small projects on account of 25 years of its Service which have to end by 2020. The New initiations are documented in last cover page.

Mr. Ivan D'Souza, Member of Vidhana Parishath expressed his happiness and promised full support and co operation for the new projects of PADI and in implementing all the government policies and schemes related to Child Rights & Protection with ease. Freedom of life along with Child Rights has to be given to children. Expectation and pressure from school and home has to be monitored and minimized in order to help the child be more productive and cherish an enjoyable childhood.

An appeal to Karnataka Government addressed to Mr. U.T. Khader, Hon'ble Minister for Urban Development & Housing who is from Mangaluru, placed and handed over to the MLC Mr. Ivan D'Souza. It's about requesting Minister's support to the PADI i.e. to organize a Consultation meeting of District Authority with all the concerned department heads and people's representative to transform the 2 districts as CHILD FRIENDLY Districts, secondly the provision of land for the Building for Research and Training Centre which is one of the new Initiation of PADI, Thirdly the request to provide the services of CHILDLINE through ministry of Women & Child Development by extending the units to all the taluks of Udupi and Dakshina Kannada to reach the children who are in distress. Fourthly a Vehicle to CHILDLINE Project to reach the children in time to protect them during emergency situation.

Ms. B.M. Rohini, Editor of Souvenir took leadership of the event of Releasing of Souvenir. She said ***"Silver Anniversary Celebration is not only a time of joyful gathering, but also a time of appreciation, reflection and undertake Concepts new tasks, Celebration is not only a time of recollecting the past achievements, but also a time to build upon those achievements and move beyond, This celebration is a time of "reminiscing the past, reflecting the present and reckoning the future" which is the theme of our celebration forum. In order to create a greater impact in our society, this celebration must become a watershed that PADI could write the coming 100 years with glory and refinement. Containing all these we are ready with the Document A SOUVENIR in title: BOLLY."*** With these words, she has handed over the First pack to the Guest of honor Dr. Kripa Amar Alva to release the same by remembering all the writers to the Souvenir, Donors and well-wishers who have supported whole heartedly. Dr. Kripa A Alva released the BOLLY, gathering gave round of applause for the words of appreciation and encouragement of Dr. Kripa A Alva. Her Highlights ***"Children are our Country's assets, it is our prime duty to protect them from atrocities, abuses, mal nutrition etc., Prompt Case Registrations to be carried out, Legal Implementations to be executed against child offenders, Stern actions have to be taken, immediate FIR's to be Filed".***

The Dignitaries congratulated PADI on its successful and fruitful completion of 25 commendable and flawless years as a Voluntary Organisation. They expressed their proud feeling to be a part of such an Organisation that was totally service oriented especially in taking care of Children's Interests. A Noble Cause Indeed!

Finally Dr. M.G. Shobhadevi, President of PADI in her presidential speech expressed her great feeling and appreciated the words of supports of Guests. Also she spelt that PADI and its concept should spread throughout the country and very specially other districts of Karnataka wherein still we are listening, seeing and experiencing the pains of the children. It's only possible through the understandable, educative persons who are inquisitive to see the difference in children's life in Education field, Protection and so on. Hence the extension of PADI-VALORED services to other districts is more essential.

Mr Tukaram Ekkaru, Treasurer, PADI conveyed the Vote of Thanks to all the Dignitaries, Children and Audience for their precious time and esteemed presence on this special occasion of PADI's 25th Silver Jubilee Celebration. He also thanked the Donors and Sponsors of the Program who have generously contributed to make the event a Grand Success.

The delicious abundant food for lunch was superbly organized and served in discipline manner with the committee leadership and MSW students' Volunteer service.

The Children of various Schools of the different Taluks had presented short skits conveying messages of Child related issues generally experienced by them:

- Belaku Child Right Cultural Team of Kundapur Cluster presented a child friendly atmosphere government school class room depicting a comfortable school life highlighting the free benefits and facilities provided by the Government to them. Another scene was contradictory which projected an episode of Child Labour and Exploitation. A message of Child Rights and Protection was effectively conveyed. A cry for understanding from the Society seeking acceptance of them as children was expressed.
- Kanasu Child Right Cultural Team of Bantwal Cluster presented a skit that showed how getting educated by a SDMC Worker through quality education looked like. The children expressed their requirements and what they dreamt and desired from a school. A school with a good teacher, giving them a happy childhood and decent basic hygienic facilities.
- Balyadha Aisiri Child Right Cultural Team of Belthangady Cluster presented a skit on Child Marriage and Child Labour with a blend of Yakshagana bit included in it.
- The skit conveyed the necessity of a child friendly, happy childhood seeking implementation of Child Rights and Protection for them.
- Makkala Hejje Child Right Cultural Team of Sullia Cluster presented 2 group songs with messages on Child Rights and a skit depicting Child Labour, Child Trafficking, School Dropout and RTE Violation in a dramatic and interesting way which could be understood by the Public in a simple manner.
- Samsara Child Right Cultural Team of Puttur Cluster presented a Drama on Gender Discrimination at home, where the female child is made to slog and deprived of equal food as her sibling brothers. How she is discouraged from going to school and de motivated by the mother.
- Kalasiri Child Right Cultural Team of Karkala Cluster presented a skit on the various types of abuses that children undergo in the home, school and society. Child Rights and fight for right was strongly conveyed using playful techniques.
- Overall it was a very fruitfull day and the Mood of Celebration was enjoyed by each and every person present in the Auditorium. All the Team members had fully involved in making this a day of festivity and gave importance to children, made them feel privileged, loved and happy which is the main aim of the PADI always!

# ಬೆಳ್ಳಿ ಹಬ್ಬದ ಆಚರಣೆಯ ಕ್ಷಣಗಳು



ಆಶಯ ಗೀತೆ



ವೇದಿಕೆಯಲ್ಲಿ ಮಕ್ಕಳ ಸಂಭ್ರಮ



ಪಡಿ-ವೆಲೊರೆಡ್‌ನ ನೂತನ ಯೋಜನೆ (2018-20)ಯ ಉದ್ಘಾಟನೆ



ಸ್ಮರಣ ಸಂಚಿಕೆ 'ಬೊಳ್ಳಿ' ಅನಾವರಣ



ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ
ಸದಸ್ಯ ಕಾರ್ಯದರ್ಶಿ ನ್ಯಾ. ಮಲ್ಲನ ಗೌಡರ ಮಾತು



ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ
ನಿಕಟಪೂರ್ವ ಅಧ್ಯಕ್ಷರಾದ ಡಾ। ಕೃಪಾ ಅಮರ ಆಳ್ವರ ನುಡಿ



ದ.ಕ. ಜಿಲ್ಲೆಯನ್ನು ಮಗುಸ್ನೇಹಿ ಜಿಲ್ಲೆಯಾಗಿ
ಪರಿವರ್ತಿಸಲು ಮನವಿ ಸಲ್ಲಿಕೆ



ಸಭಿಕರು

# ಬೆಳ್ಳಿ ಹಬ್ಬದ ಆಚರಣೆಯ ಕ್ಷಣಗಳು



ಪಡಿ ಅಧ್ಯಕ್ಷರಾದ ಡಾ। ಶೋಭಾದೇವಿಯವರಿಂದ
ಅಧ್ಯಕ್ಷೀಯ ಮಾತು



ಬಿ. ಎಂ. ರೋಹಿಣಿಯವರಿಂದ ಸಂಪಾದಕೀಯ ಮಾತು



ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಾದ
ಸುಂದರ ಪೂಜಾರಿಯವರ ಮಾತು



ಡಯಟ್ ಮಂಗಳೂರಿನ ಪ್ರಾಂಶುಪಾಲರಾದ
ಸಿಪ್ರಿಯನ್ ಮೊಂತೇರೊರವರಿಂದ ನುಡಿ



ಮೌಲ್ಯಗಳು ನಮ್ಮ ವರ್ತನೆಗಳಿಂದ ಮಕ್ಕಳಿಗೆ ವರ್ಗಾವಣೆಯಾಗಬೇಕು:
ಮರ್ಲಿನ್ ಮಾರ್ಟಿಸ್, ನಿರ್ದೇಶಕರು, ಡೀಡ್ಸ್



ನಿರ್ದೇಶಕರ ನುಡಿ: ಮಗುಸ್ನೇಹಿ ಜಿಲ್ಲೆಯಾಗಿ ದ.ಕ. ಜಿಲ್ಲೆ
ರಾಜ್ಯಕ್ಕೆ ಮಾದರಿಯಾಗಲಿ



ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟ (ರಿ.)
ಇದರ ಅಧ್ಯಕ್ಷರಾದ ಶ್ರೀಮತಿ ಪ್ರೇಮಿ ಫೆರ್ನಾಂಡಿಸ್



ಜಿಲ್ಲಾ ಶಿಕ್ಷಣ ಸಂಪನ್ಮೂಲ ಕೇಂದ್ರ (ರಿ.) ಉಡುಪಿ ಇದರ
ಅಧ್ಯಕ್ಷರಾದ ಸುಲೋಚನಾ ಕೊಡವೂರು ಇವರ ಮಾತು

## ಬೆಳ್ಳಿ ಹಬ್ಬದ ಆಚರಣೆಯ ಕ್ಷಣಗಳು



ಜಿಲ್ಲಾ ಎಸ್‌ಡಿಎಮ್‌ಸಿ ಸಮನ್ವಯ ಸಮಿತಿ ದ.ಕ. ಜಿಲ್ಲೆ
ಇದರ ಅಧ್ಯಕ್ಷರಾದ ಇಸ್ಮಾಯಿಲ್ ನೆಲ್ಯಾಡಿ



ಜಿಲ್ಲಾ ಎಸ್‌ಡಿಎಮ್‌ಸಿ ಸಮನ್ವಯ ಸಮಿತಿ ಉಡುಪಿ ಜಿಲ್ಲೆ
ಇದರ ಅಧ್ಯಕ್ಷರಾದ ಅಬ್ದುಲ್ ಸಲಾಂ ಚಿತ್ತೂರು



ನಿಕಟಪೂರ್ವ ಅಧ್ಯಕ್ಷರಾದ ಡಾ। ಜಯಂತ್‌ರವರಿಂದ
ಸ್ವಾಗತ ಮಾತು



ಪಡಿ ಖಜಾಂಚಿಯಾದ ತುಕರಾಮ ಎಕ್ಕಾರುರವರಿಂದ
ಧನ್ಯವಾದ ಸಮರ್ಪಣೆ



ಕಾರ್ಯಕ್ರಮ ನಿರೂಪಣೆ: ಕಸ್ತೂರಿ ಬೊಳುವಾರು
ಹಾಗೂ ಪ್ರಮೀಳಾ ಜೆ. ವಾಜ್



ಸಹಭೋಜನ



ಕಾರ್ಯಕ್ರಮದ ಯಶಸ್ವಿಗೆ ಶ್ರಮಿಸಿದ ಪಡಿ ಕುಟುಂಬ



ಕಾರ್ಯಕ್ರಮದ ಯಶಸ್ವಿಗೆ ನಮ್ಮೊಂದಿಗೆ ಕೈಜೋಡಿಸಿದ ಸ್ವಯಂಸೇವಕರು

## ಮಕ್ಕಳ ಹಕ್ಕುಗಳ ರಂಗ ತಂಡಗಳಿಂದ ಮಕ್ಕಳ ಹಕ್ಕುಗಳ ರಂಗ ಕಲೋತ್ಸವ



## ಪ್ರಮಾಣ ಪತ್ರ ವಿತರಣೆ ಹಾಗೂ ಧನ್ಯತಾ ಸಮರ್ಪಣೆ



# ಪತ್ರಿಕಾ ಪ್ರಕಟಣೆಗಳ ತುಣುಕುಗಳು



Theatre fest to create awareness on child rights and safety

NGO Padi and ERCs join hands for the cause on September 1

PADI: 25 years of education reforms

ನಾಳೆ ಪಡಿ ವೆಲೊರೆಡ್‌ನ ಬೆಳ್ಳಿಹಬ್ಬ ಸಂಭ್ರಮ

ಮಂಗಳೂರು, ಆ.30: ಶಿಕ್ಷಣ ತಜ್ಞ ಡಾ.ಡೆಸ್ಮಂಡ್ ಎಬ್ರಿಯೋರವರ ನೇತೃತ್ವದಲ್ಲಿ 1993ರಲ್ಲಿ ಆರಂಭಗೊಂಡ ಪಡಿ ವೆಲೊರೆಡ್ ಯೋಜನೆ 25ನೇ ವರ್ಷದ ಸಂಭ್ರಮದಲ್ಲಿದ್ದು, ಸೆ.1ರಂದು ಬೆಳಗ್ಗೆ 10 ಗಂಟೆಗೆ ನಗರದ ಡಾನ್ ಬಾಸ್ಕೋ ಸಭಾಂಗಣದಲ್ಲಿ ಬೆಳ್ಳಿಹಬ್ಬ ಕಾರ್ಯಕ್ರಮ ಆಯೋಜಿಸಲಾಗಿದೆ.

ಈ ಸಂಭ್ರಮಾಚರಣೆಯ ಅಂಗವಾಗಿ 'ಮಗುಸ್ನೇಹಿ ಸಮಾಜದತ್ತ ನಮ್ಮ ನೂತನ ಯೋಜನೆ 2018-2020' ಮೂಲಕ ಮಕ್ಕಳಲ್ಲಿ ನಾಯಕತ್ವ ಗುಣವನ್ನು ಬೆಳೆಸಲು ಕಾರ್ಯಕ್ರಮ ನಡೆಸಲು ಉದ್ದೇಶಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಪಡಿ ವೆಲೊರೆಡ್ ಸಂಸ್ಥೆಯ ನಿರ್ದೇಶಕ ರೆನ್ನಿ ಡಿಸೋಜ, ನಗರಾಭಿವೃದ್ಧಿ ಸಚಿವ ಯು.ಟಿ.ಖಾದರ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ನಿಕಟಪೂರ್ವ ಅಧ್ಯಕ್ಷೆ ಕೃಪಾ ಅಮರ್ ಆಳ್ವ ಅವರು ವೆಲೊರೆಡ್ ಯೋಜನೆಯ ಬೆಳ್ಳಿ ಹಬ್ಬದ ಅಂಗವಾಗಿ ಹೊರತರುವ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡುವರು ಎಂದರು.

ಸಭಾ ಕಾರ್ಯಕ್ರಮದ ಬಳಿಕ ದ.ಕ. ಹಾಗೂ ಉಡುಪಿ ಜಿಲ್ಲೆಯ ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಮಕ್ಕಳ ಹಕ್ಕುಗಳ ರಂಗ ತಂಡಗಳಿಂದ ಮಕ್ಕಳ ಹಕ್ಕುಗಳ ರಂಗ ಕಲೋತ್ಸವ ಆಯೋಜಿಸಲಾಗಿದೆ. ಕಲೋತ್ಸವದಲ್ಲಿ ಕುಂದಾಪುರದ ಬೇಳು ತಂಡ, ಕಾರ್ಕಳದ ಕಲಾಸಿರಿ, ಪುತ್ತೂರಿನ ಸಂಸಾರ ತಂಡ, ಬೆಳ್ತಂಗಡಿಯ ಬಾಲ್ಯದ ಐಸಿರಿ, ಬಂಟ್ವಾಳದ ಕನಸು ಮತ್ತು ಸುಳ್ಯದ ಮಕ್ಕಳ ಹೆಜ್ಜೆ ತಂಡಗಳು ಪ್ರದರ್ಶನ ನೀಡಲಿದ್ದಾರೆ ಎಂದವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ವೆಲೊರೆಡ್ ಸಂಸ್ಥೆಯ ನಿಕಟಪೂರ್ವ ಅಧ್ಯಕ್ಷ ಪ್ರೊ.ಜಯಂತ್, ಕಚೇರಿ ಪ್ರಬಂಧಕಿ ಎಸ್.ಎ.ಆಟೂಟಕರ್, ಚೈಲ್ಡ್‌ಲೈನ್ ಕೇಂದ್ರದ ಸಂಯೋಜಕ ದೀಕ್ಷಿತ್ ಅಚ್ಚಪ್ಪಾಡಿ ಉಪಸ್ಥಿತರಿದ್ದರು.

ಸೆ. 1ರಂದು ಮಕ್ಕಳ ಹಕ್ಕುಗಳ ರಂಗ ಕಲೋತ್ಸವ

ಪಡಿ-ವೆಲೋರೆಡ್ ಗೆ ಬೆಳ್ಳಿ ಹಬ್ಬ ಸಂಭ್ರಮ

MANGALORE PRESS CLUB

ಮಂಗಳೂರು ಪ್ರೆಸ್ ಕ್ಲಬ್

mangalorean.com

Need to make DK child-friendly dist stressed

'ಮಕ್ಕಳ ಬಗೆಗಿನ ಚಿಂತನೆ ಅಗತ್ಯ'

ಮಗುಸ್ನೇಹಿ ಮಾದರಿ ದಕ್ಷಿಣ ಕನ್ನಡ ಜಿಲ್ಲೆ

ದ.ಕ. ಜಿಲ್ಲೆಯನ್ನು ಮಾದರಿ ಮಗುಸ್ನೇಹಿಯಾಗಿಸಿ

'ಮಕ್ಕಳ ಹಕ್ಕನ್ನು ರಕ್ಷಿಸುವ ಜವಾಬ್ದಾರಿ ಹೆತ್ತವರದ್ದು'

ಪಡಿ-ವೆಲೋರೆಡ್: ಮಕ್ಕಳ ಹಕ್ಕುಗಳ ರಂಗಕಲೋತ್ಸವ

'ಮಕ್ಕಳ ಹಕ್ಕನ್ನು ರಕ್ಷಿಸುವ ಜವಾಬ್ದಾರಿ ಹೆತ್ತವರದ್ದು'

ದಕ್ಷಿಣ ಕನ್ನಡವನ್ನು 'ಮಾದರಿ ಮಗುಸ್ನೇಹಿ' ಜಿಲ್ಲೆಯನ್ನಾಗಿಸಿ

Ranga Kalothsava today

ಮಕ್ಕಳ ಸ್ನೇಹಿ ಜಿಲ್ಲೆಯ ಪರಿಕಲ್ಪನೆಯತ್ತ ದಕ್ಷಿಣ ಕನ್ನಡ ದಾಪುಗಾಲು

ಪಡಿ-ವೆಲೋರೆಡ್: ಮಕ್ಕಳ ಹಕ್ಕುಗಳ ರಂಗಕಲೋತ್ಸವ

# ಪರಿವಿಡಿ


| | |
|---|---|
| ಸಂಪಾದಕೀಯ..ನಿಮ್ಮೊಂದಿಗೆ.. | 20 |
| ಬೆಳ್ಳಿ ಮೂಡುವ ಮುನ್ನ | 22 |
| ಅಧ್ಯಕ್ಷರ ನುಡಿ | 24 |
| There are many Miles to Walk. . . . | 25 |
| ಪಡಿ ಮಾದರಿಯಾಗಲಿ-ಖಜಾಂಚಿ, ಪಡಿ | 26 |
| ಸಂದೇಶ | 27 |
| Values Oriented by DESMOND | 36 |
| CONGRATULATIONS! | 38 |
| Pleasant Surprise | 39 |
| PADI TEAM 2018 | 40 |
| Pleasant Feelings of Gratitudes from the Bottom of our Heart. . . | 41 |
| Appreciation for the support | 42 |
| PADI Organisation Profile | 43 |
| MILESTONES | 46 |
| ಮಕ್ಕಳ ಹಕ್ಕುಗಳ ಶೈಕ್ಷಣಿಕ ರಂಗ ಅಭಿಯಾನ | 59 |
| ವೆಲೊರೆಡ್ ಪರಿಕಲ್ಪನೆಯಲ್ಲಿ ಸಮುಧಾಯಧಾರಿತ ಸಂಘಟನೆ | 61 |
| ಶಿಕ್ಷಣ ಸಂಪನ್ಮೂಲ ಕೇಂದ್ರಕ್ಕೆ ಆಡಳಿತಾತ್ಮಕ ಸ್ವರೂಪ | 64 |
| ಛಲಗಾತಿ ವೀಣಾಧರಿ | 65 |
| ಶಿಕ್ಷಣ ಭೂಮಿಗೆ ಬಿದ್ದ ಬೀಜ | 67 |
| ಶಾಲೆಗಳಲ್ಲಿ ನೀಡುವ ಮನೆಕೆಲಸದ ಕುರಿತು ಅಧ್ಯಯನ | 70 |
| ಮಗು ಕೇಂದ್ರಿತ ಶಿಕ್ಷಣದ ಪರಿಕಲ್ಪನೆ | 74 |
| ಮಕ್ಕಳ ಸಹಾಯವಾಣಿ1098 . . ಒಂದು ಕವನ | 77 |
| ಬಾಲ್ಯವಿವಾಹ ಕಾನೂನು ಬಾಹಿರ. ಆದರೆ ಕಾನೂನು ಜಾರಿ ಮಾಡಬೇಕು ಯಾರು? | 78 |
| "ಮಕ್ಕಳ ಸಂರಕ್ಷಣೆಯ ಅನುಷ್ಠಾನದಲ್ಲಿ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಸಂಸ್ಥೆ"ಗಳು ವಿಫಲವಾದುವೇ? | 84 |
| ಗ್ರಾಮ ಪಂಚಾಯತ್ (ಸ್ಥಳೀಯ ಸರಕಾರಗಳು) ಮತ್ತು ಶಿಕ್ಷಣ | 91 |
| ಜೀವನವು ಬದಲಾವಣೆಯತ್ತ | 94 |
| ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಕ್ಕಳ ಸಹಾಯವಾಣಿ ಕಾರ್ಯವೈಖರಿ ಮತ್ತು ಎದುರಿಸುತ್ತಿರುವ ಸವಾಲುಗಳು | 96 |
| ಪ್ರತಿಭೆಗೊಂದು ಪ್ರದರ್ಶನದ ಕಾರಂಜಿ | 99 |
| ಶಿಕ್ಷಣ ಎಲ್ಲರಿಗೂ ಸಿಗಲಿ | 100 |
| ಎಸ್.ಎಮ್. ಅಬೂಬಕ್ಕರ್ ವೆಲೊರೆಡ್ ಮೌಲ್ಯಾಧಾರಿತ ಶಿಕ್ಷಣದ ಪ್ರತಿಫಲನ | 102 |
| Functioning of Documentation & Research Unit of PADI | 104 |
| ಪಡಿ ಮತ್ತು ನಾವು ನೆನಪಿನಾಳದಿಂದ. . . . | 107 |
| ಡೆಸ್ಮಂಡರವರ ಆಶಯಗಳ ಬೆನ್ನೇರುತ್ತಾ.... | 108 |
| ಪರಿಣಾಮಕಾರಿ ಶಿಕ್ಷಣಕ್ಕಾಗಿ ವೈಜ್ಞಾನಿಕ ಹಾದಿ | 111 |
| ವೆಲೊರೆಡ್ ನೆನಪುಗಳು | 112 |
| ಪಡಿಯೊಂದಿಗಿನ ಮರೆಯಲಾರದ ನೆನಪುಗಳು | 113 |
| ಪಡಿಯಲ್ಲಿ ಪಡೆದದ್ದು | 114 |
| ಶಿಕ್ಷಣ-ಹಕ್ಕು ಸಮುದಾಯ | 116 |
| ಶಿಕ್ಷಣದೊಳಗೊಂದು ಮಗುಸ್ನೇಹಿ ಕಲ್ಪನೆ ಬಿಚ್ಚಿಟ್ಟ ಪಡಿ | 117 |
| ವೆಲೊರೆಡ್ ಅಂಗಳದಲ್ಲಿ | 119 |
| ನಮ್ಮನಗಲಿದ ನಮ್ಮವರು | 121 |
| Gratitudes | 122 |
| Past Valored Members | 124 |
| ಜಾಹಿರಾತುಗಳು | 125 |



## ಸಂಪಾದಕೀಯ...

### ನಿಮ್ಮೊಂದಿಗೆ..........

ಬಹು ಭಾಷೆ, ಬಹು ಸಂಸ್ಕೃತಿ, ಬಹು ವರ್ಣ, ಬಹು ವರ್ಗಗಳುಳ್ಳ ಜನ ಸಮುದಾಯವೇ ನಮ್ಮ ನಾಡಿನ ವೈಶಿಷ್ಟ್ಯ. ಅದೇ ನಮ್ಮ ಶಕ್ತಿಯೂ ಹೌದು. ಮತ ಪಂಥಗಳು, ಮತ ಗ್ರಂಥಗಳು ಎಷ್ಟೇ ಇರಲಿ, ಭಾರತದ ಲಿಖಿತ ಸಂವಿಧಾನವೇ ನಮಗೆ ಪವಿತ್ರ ಗ್ರಂಥ. ಇದು ನಮಗೆ ಘನತೆಯಿಂದ ಬದುಕುವ ಹಕ್ಕನ್ನು ನೀಡಿದೆ. ಶಿಕ್ಷಣ, ಸೂರು, ಉದ್ಯೋಗ, ಆರೋಗ್ಯ, ಆಹಾರ ಇತ್ಯಾದಿಗಳನ್ನು ನಾಗರಿಕರಿಗೆ ನೀಡುವುದು ಸರಕಾರದ ಕರ್ತವ್ಯ, ಪಡೆಯುವುದು ನಮ್ಮ ಹಕ್ಕು. ಕನಿಷ್ಠ ಮಟ್ಟದ ಶಿಕ್ಷಣದ ಅರಿವಿದ್ದರೆ ಮಾತ್ರ ಹಕ್ಕು ಮತ್ತು ಕರ್ತವ್ಯಗಳು ಅರ್ಥವಾಗುತ್ತದೆ. ನಮ್ಮದು ಪ್ರಜಾಪ್ರಭುತ್ವ ರಾಷ್ಟ್ರ, ಶಿಕ್ಷಣದ ಬಲವಿಲ್ಲದೆ ಪ್ರಜಾಪ್ರಭುತ್ವ ಬಾಳದು, ಬೆಳೆಯದು. ಸ್ವಸ್ಥ ಸಮಾಜ ನಿರ್ಮಾಣಕ್ಕೆ ಮಾನವೀಯತೆಯುಳ್ಳ ನಾಗರಿಕರು ಬೇಕು. ಮಾನವೀಯತೆಯುಳ್ಳ ನಾಗರಿಕರು ಮೌಲಿಕವಾದ ಶಿಕ್ಷಣವನ್ನು ಪಡೆದಿರಬೇಕು. ಈ ಸೂಕ್ಷ್ಮವನ್ನು ಮನಗಂಡ ಡಾ ಡೆಸ್ಮಂಡ್ ಎ.ಡಿ ಅಬ್ರಿಯೋ ಮತ್ತು ಮಾರ್ಗರೆಟ್ ಡೆಸ್ಮಂಡ್ ಎ.ಡಿ ಅಬ್ರಿಯೋ ದಂಪತಿಗಳು 25 ವರ್ಷಗಳ ಹಿಂದೆ ವೆಲೊರೆಡ್ ಸಂಸ್ಥೆಯನ್ನು ಪ್ರಾರಂಭಿಸಿ ಶಿಕ್ಷಣ ಸಂಪನ್ಮೂಲ ಕೇಂದ್ರದ ಸ್ಥಾಪನೆಗೆ ಪ್ರೇರಣೆ ನೀಡಿದರು ಮುಂದೆ ಇದು  ಪಡಿ- ವೆಲೊರೆಡ್ ಆಯಿತು.

ಈ ಪಡಿ-ವೆಲೊರೆಡ್ ಸಂಸ್ಥೆಗೆ ಈಗ ಬೆಳ್ಳಿ ಹಬ್ಬದ ಸಂಭ್ರಮ. ಯಾವ ಉದ್ದೇಶಕ್ಕಾಗಿ ಡೆಸ್ಮಂಡ್ ದಂಪತಿಗಳು  ಈ ಸಂಸ್ಥೆಯನ್ನು ಪ್ರಾರಂಭಿಸಿದರೋ  ಆ ಸಂಸ್ಥೆಯು ನಡೆದು ಬಂದ ದಾರಿಯತ್ತ ಹಿಂದಿರುಗಿ ನೋಡುವುದಕ್ಕೆ ಇದು ಸಕಾಲ. ಸಂಸ್ಥೆಯ ಆಸೆ ಆಕಾಂಕ್ಷೆಗಳು ಈಡೇರಿದ್ದು, ಈಡೇರಲು ವಿಫಲವಾದದ್ದು ಇತ್ಯಾದಿಗಳ ಬಗಗೆ ಆತ್ಮಾವಲೋಕನ ಮಾಡಿ ಕೊಳ್ಳುವ ಸುಸಂದರ್ಭ, ಸಾಗಿ ಬಂದ ದಾರಿಯ ಹಿನ್ನೋಟದೊಂದಿಗೆ ಸಾಗಬೇಕಾದ ದಾರಿಯ ಸ್ಪಷ್ಟ ಕಲ್ಪನೆಯನ್ನು ರೂಪಿಸಿ ಕೊಳ್ಳುವ ನಿರ್ಧಾರ ಕೈಗೊಳ್ಳುವ ಸಮಯ. ಈ 25 ವರ್ಷಗಳ ಸಾಧನೆಯನ್ನು ವಿಮರ್ಶಿಸಿ ಕೊಂಡು ಮುಂದಿನ ದಾರಿಯಲ್ಲಿ ನಿಖರವಾದ ಮತ್ತು ದೃಢವಾದ ಹೆಜ್ಜೆಗಳನ್ನು ಊರುವುದಕ್ಕೆ ಆತ್ಮ ವಿಶ್ವಾಸವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಪಡಿ-ವೆಲೊರೆಡ್ ಸಿದ್ಧವಾಗುತ್ತಿದೆ. ಈ ಶುಭ ಸಂದರ್ಭದಲ್ಲಿ ಈ ಸಂಸ್ಥೆಯ ಹಿತ ಚಿಂತಕರು ಆಪ್ತರು ಮತ್ತು ಇಲ್ಲಿ ಸೇವೆ ಸಲ್ಲಿಸಿದ ಮಹನೀಯರುಗಳು ತಮ್ಮ ನೆನಪಿನ ಬುತ್ತಿಗಳನ್ನು ಹಂಚಿಕೊಂಡು ಸಂಭ್ರಮಿಸಿದ್ದಾರೆ. ಒಂದು ಸಂಸ್ಥೆಯು ಬೆಳ್ಳಿ ಹಬ್ಬವನ್ನು ಆಚರಿಸುವುದೆಂದರೆ ಈ ಕುಟುಂಬದ ಬಂಧು ಮಿತ್ರರನ್ನು ಪ್ರೀತಿಯಿಂದ ಒಟ್ಟು  ಸೇರಿಸಿ ಸಂತೋಷವನ್ನು ಹಂಚಿಕೊಳ್ಳುವ ಖುಷಿಯು ಸೇರಿದೆ. ಈ ವರೆಗಿನ ಹಾದಿಯಲ್ಲಿ ಜೊತೆಯಾದವರನ್ನು ಪ್ರೀತಿಯಿಂದ ನೆನಪಿಸಿ ಗೌರವಿಸಲು ಹಂಬಲಿಸಿ ಹಾತೊರೆಯುವ ಕಾಲವಿದು.

ಈ 25 ವರ್ಷಗಳಲ್ಲಿ ಶಿಕ್ಷಣದ ವ್ಯವಸ್ಥೆಯಲ್ಲಿ ಏನೆಲ್ಲಾ ಬದಲಾವಣೆಗಳಾಗಿವೆ ಎಲ್ಲರೂ ಮಾತಾಡುವ, ಯಾರಿಂದಲೂ ಏನೂ ಮಾಡಲಾಗದ ಸಂಸ್ಥೆಯೆಂದರೆ ಶಿಕ್ಷಣ ಎಂಬ ಭಾವನೆಯಿದೆ, ಏಕ ರೂಪದ ಶಿಕ್ಷಣ ವ್ಯವಸ್ಥೆಯ ಪರವಾಗಿ ಗುಣ ಮಟ್ಟದ ಶಿಕ್ಷಣದ ಪ್ರಚಾರಕ್ಕಾಗಿ ಮಗು ಕೇಂದ್ರಿತ ಶಿಕ್ಷಣ ವ್ಯವಸ್ಥೆಯನ್ನು ಕಾರ್ಯಗತಗೊಳಿಸುವುದಕ್ಕೆ ಪಡಿ ಸಂಸ್ಥೆಯು ನಿರಂತರವಾಗಿ ದುಡಿಯುತ್ತಾ ಬಂದಿದೆ. ಸಮಾಜ, ಹೆತ್ತವರು, ಸರಕಾರ, ಶಿಕ್ಷಕ ಇವರೆಲ್ಲರೂ ಸಮಾನ ಮನಸ್ಕರಾಗಿ ಗುಣಮಟ್ಟದ ಶಿಕ್ಷಣವನ್ನು ನಮ್ಮ ಮಕ್ಕಳಿಗೆ ನೀಡಬೇಕಾಗಿದೆ. ಮಾನವತೆಯ ವಿಕಾಸ, ಜೀವನದ ತರಬೇತಿ, ಸಾಮರಸ್ಯ, ಹೃದಯ ಸಂಸ್ಕಾರವನ್ನು ನೀಡುವುದೇ ಶಿಕ್ಷಣ. ಹೃದಯಾಂತರಾಳದಲ್ಲಿ ಬೆಳಕು ಮೂಡಿಸಬೇಕೇ ವಿನಃ ಶಿಕ್ಷಣವು ಅಂಕಗಳಿಂದ ಅಳೆಯುವಂತದ್ದಲ್ಲ. ಇತ್ತೀಚಿನ ವರ್ಷಗಳಲ್ಲಿ ಉಳ್ಳವರಿಗೊಂದು ಇಲ್ಲದವರಿಗೊಂದು ಶಾಲೆಗಳು, ಬೇರೆ ಬೇರೆ ಜಾತಿಪಂಥಗಳಿಗೊಂದು ಶಾಲೆಗಳು ಸ್ಥಾಪನೆಯಾಗಿ ಮಕ್ಕಳು ದ್ವೀಪದಂತೆ ಪ್ರತ್ಯೇಕವಾಗುತ್ತಿರುವುದು ವಿಷಾದನೀಯ. ಆರ್.ಟಿ.ಐ.ಯ ಮೂಲಕ ದುರ್ಬಲರ ಮಕ್ಕಳು ಖಾಸಗಿ ಶಾಲೆಗಳ ಪ್ರವೇಶಕ್ಕೂ ಸರಕಾರದ ಕಾನೂನುಗಳಿಂದಾಗಿ ಹಿನ್ನೆಡೆಯುಂಟಾದುದು ನಮ್ಮನ್ನು ಮತ್ತಷ್ಟು ಜಾಗೃತರಾಗಿ ಸೇವೆ ಸಲ್ಲಿಸಲು ಪ್ರೇರೇಪಿಸಿದೆ. ಇನ್ನಷ್ಟು ಒಗ್ಗಟ್ಟಿನಿಂದ ಮುನ್ನೆಡೆಯಬೇಕಾದ ಪರಿಸ್ಥಿತಿಯುಂಟಾಗಿದೆ. ಈ ನಿಟ್ಟಿನಲ್ಲಿ ಪಡಿ-ವೆಲೊರೆಡ್‌ಗೆ ಸ್ಫೂರ್ತಿಯನ್ನು ಆತ್ಮವಿಶ್ವಾಸದಿಂದ ಕೆಲಸಮಾಡುವ ಶಕ್ತಿಯನ್ನು ತುಂಬಿದೆ. ಮಕ್ಕಳ ಹಕ್ಕುಗಳನ್ನು ಕಸಿಯದಂತೆ ತಡೆಯುವ ಲೈಂಗಿಕ ದೌರ್ಜನ್ಯಗಳನ್ನು ವಿರೋಧಿಸುವ, ಪ್ರತಿಭಟಿಸುವ ಕೆಚ್ಚು ಮೂಡಿದೆ.

ಪಡಿ-ವೆಲೊರೆಡ್ ಸಂಸ್ಥೆಯು ಬೆಳ್ಳಿ ಹಬ್ಬದ ಈ ಸಂಭ್ರಮವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸುವ ನಿರ್ಧಾರ ಮಾಡಿದೆ. ಮಕ್ಕಳಲ್ಲಿ ಕಲಿಕೆಯ ಚೈತನ್ಯವನ್ನು ರಂಗ ಚಟುವಟಿಕೆಗಳ ಮೂಲಕ ಕೊಡಿಸುವುದು ತುಂಬಾ ಫಲಪ್ರದವಾಗಿದೆ ಎಂಬುದನ್ನು ಅರಿತು ಪ್ರತೀ ತಾಲೂಕಿನ ಶಿಕ್ಷಣ ಸಂಪನ್ಮೂಲ ಕೇಂದ್ರಗಳಲ್ಲಿ ರಂಗ ತರಬೇತಿ ಕೊಡಿಸಿ ಈಗ ಅವರಿಂದಲೇ ನಾಟಕವನ್ನು ಪ್ರದರ್ಶಿಸುವ ಒಂದು ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಹಿಂದೆ ಮಕ್ಕಳ ಮಾಸೋತ್ಸವವನ್ನು ವೈವಿಧ್ಯಮಯವಾದ ರಂಗ ಚಟುವಟಿಕೆ ಮತ್ತು ಬೀದಿ ನಾಟಕಗಳ ಮೂಲಕ ಮಾಡಿಸಿದ್ದು ನಮ್ಮ ಜಿಲ್ಲೆಯಲ್ಲಿ ಒಂದು ಹೊಸ ದಾಖಲೆಯಾಗಿತ್ತು. ಈಗ ಈ ಬೆಳ್ಳಿ ಹಬ್ಬವನ್ನು ರಂಗ ಚಟುವಟಿಕೆಗಳ ಪ್ರದರ್ಶನಗಳ ಮೂಲಕ ಆಚರಿಸುತ್ತಿದ್ದೇವೆ.

ಮಕ್ಕಳೇ ಇಂದು ನಮ್ಮ ರಜತ ಮಹೋತ್ಸವದ ಕೇಂದ್ರ ಬಿಂದುಗಳೆಂದು ಗುರುತಿಸಿ ಗೌರವಿಸುತ್ತಿದ್ದೇವೆ. ಈ ಎಲ್ಲಾ ದಾಖಲೆಗಳ ಸಹಿತ "ಬೊಳ್ಳಿ" ಎಂಬ ಈ ಸ್ಮರಣ ಸಂಚಿಕೆಯೂ ನಮ್ಮ ಸಾಧನೆಗಳ ಒಂದು ಕಿರು ನೋಟವನ್ನು ದಾಖಲಿಸುವ ಕೆಲಸ ಮಾಡುತ್ತಿದೆ. ಈ ಸಂಚಿಕೆಗೆ ಜಾಹೀರಾತುಗಳನ್ನು ನೀಡಿ ಹರಸಿದ ಎಲ್ಲಾ ಮಹನೀಯರನ್ನು ತಮ್ಮ ಅನುಭವಗಳನ್ನು ಹಂಚಿಕೊಂಡ ಲೇಖಕ, ಲೇಖಕಿಯರನ್ನು ಗೌರವಪೂರ್ವಕವಾಗಿ ವಂದಿಸುತ್ತೇವೆ.

**ಬಿ. ಎಂ.ರೋಹಿಣಿ**

# ಬೆಳ್ಳಿ ಮೂಡುವ ಮುನ್ನ....



**ಶ್ರೀ ರೆನ್ನಿ ಡಿ'ಸೋಜ**
**ನಿರ್ದೇಶಕರು ಪಡಿ**

1993, ನನಗಾವಾಗ 28ರ ಹರೆಯ. ನನ್ನ ಬಾಳ ಸಂಗಾತಿಯಾದ ಐಡಾರೊಂದಿಗೆ ವಿವಾಹವಾದ ವರ್ಷವದು. ಮಂಗಳೂರಿನ ರೋಶಿನಿ ನಿಲಯದಲ್ಲಿ ಎಮ್.ಎಸ್.ಡಬ್ಲ್ಯೂ(MSW) ಮಾಡಿ ಒಂದೆರಡು ಸ್ವಯಂ ಸೇವಾ ಸಂಸ್ಥೆಯಲ್ಲಿ ಕೆಲಸ ಮಾಡಿದ್ದೇನಾದರೂ, ವಿವಾಹದ ಆರಂಭದಲ್ಲಿ ನಾವಿಬ್ಬರೂ ಸಮಾಜದ ಅಭಿವೃದ್ಧಿಯಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳಬೇಕೆಂಬ ಯವ್ವನದ ಅಭಿಲಾಷೆಯಿತ್ತು. ಆಗಲೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂಪೂರ್ಣ ಸಾಕ್ಷರತಾ ಆಂದೋಲನದಲ್ಲಿ ಸತತವಾಗಿ ತನ್ನನ್ನು ತಾನು ತೊಡಗಿಸಿಕೊಂಡಿದ್ದ ಐಡಾರವರು ಸರ್ಕಾರದ ಜೊತೆ ಜೊತೆಯಾಗಿ ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಬೇಕೆಂಬ ಹಂಬಲವನ್ನು ಹೊಂದಿದ್ದರು.

ಈ ಸಂದರ್ಭದಲ್ಲಿ ನಮ್ಮ ಮುಂದಿನ ನಡೆಯ ಬಗ್ಗೆ ಈಗಾಗಲೇ ಅಭಿವೃದ್ಧಿ ಕ್ಷೇತ್ರದಲ್ಲಿ ಶ್ರಮಿಸುತ್ತಾ ಸೇವೆ ಸಲ್ಲಿಸುತ್ತಿದ್ದ ಮಾರ್ಗರೆಟ್ ಡಿ' ಅಬ್ರಿಯೋರವರು, ತನ್ನ ಪತಿ ಡಾ. ಡೆಸ್ಮಂಡ್ ಡಿ.ಅಬ್ರಿಯೋರವರು ಪ್ರಾಥಮಿಕ ಶಿಕ್ಷಣದಲ್ಲಿ ಮೌಲಿಕ ಶಿಕ್ಷಣದ ಅವಶ್ಯಕತೆಯ ಚಿಂತನೆ ನಡೆಸುತ್ತಿದ್ದಾರೆ, ನೀವ್ಯಾಕೆ ಡಾ. ಡೆಸ್ಮಂಡ್‌ರವರನ್ನು ಸಂಪರ್ಕಿಸಬಾರದು?' ಎಂಬ ಪ್ರಶ್ನೆಯೇ ಡಾ. ಡೆಸ್ಮಂಡ್‌ರವರನ್ನು ಭೇಟಿ ಮಾಡುವ ಕುತೂಹಲವನ್ನು ಹುಟ್ಟಿಸಿತು.

ವಿದ್ಯಾರ್ಥಿ ಜೀವನದಲ್ಲಿ ಡಾ. ಡೆಸ್ಮಂಡ್‌ರವರು ಬರೆದ 'ಫ್ರಮ್ ಡೆವಲಪ್‌ಮೆಂಟ್ ವರ್ಕರ್ ಟು ಆ್ಯಕ್ಟಿವಿಸ್ಟ್' (From Development worker to Activist) ಪುಸ್ತಕವನ್ನು ಓದಿ ಪ್ರಭಾವಿತರಾದ ನಾವು ಅವರನ್ನು ಭೇಟಿ ಮಾಡಿ, ಅವರ ಚಿಂತನೆಗಳನ್ನು ಅರ್ಥ ಮಾಡಿಕೊಳ್ಳಲು ಅವಕಾಶ ಸಿಕ್ಕಿದ್ದೇ ನನ್ನ ಬದುಕಿನ ತಿರುವು ಎಂದು ಹೇಳಬಹುದು.

ಡಾ. ಡೆಸ್ಮಂಡ್‌ರವರೊಡನೆ ಚರ್ಚೆ ಮಾಡುತ್ತಾ ಶಿಕ್ಷಣ ಕ್ಷೇತ್ರದಲ್ಲಾಗುವ ಹಾಗೂ ಶಿಕ್ಷಣ ಕ್ಷೇತ್ರದಲ್ಲಾಗ ಬೇಕಾಗಿರುವ ವಿಶ್ಲೇಷಣೆಯನ್ನು ನಮ್ಮ ಮುಂದೆ ಇಡುತ್ತಾ, ಅವರ ಮನಸ್ಸಿನಲ್ಲಿರುವ ವೆಲೊರೆಡ್(VALORED) ಎಂಬ ಪರಿಕಲ್ಪನೆಯನ್ನು ಬಿಚ್ಚಿಟ್ಟಿದ್ದರು. ಆವಾಗ ಅವರಿಗೆ ಸರಿಸುಮಾರು 64 ವರ್ಷಗಳು ದಾಟಿದ್ದವು. ಆದರೆ ಮಕ್ಕಳ ಕ್ಷೇತ್ರದಲ್ಲಿ ಜರೂರಾಗಿ ಆಗಬೇಕಾದ ಕೆಲಸದ ಬಗ್ಗೆ ಅವರಲ್ಲಿರುವ ಕಾಳಜಿ ಮತ್ತು ಉತ್ಸಾಹ ನಮ್ಮನ್ನು ಈ ಕ್ಷೇತ್ರದಲ್ಲಿ ಕೆಲಸ ಮಾಡಲು ಹುರಿದುಂಬಿಸಿತ್ತು.

ಮತ್ತೆ ಹಿಂದೆ ನೋಡದ ನಾನು, ವೆಲೊರೆಡ್ ಪರಿಕಲ್ಪನೆಯನ್ನು ಅವರಿಂದ ಅರ್ಥ ಮಾಡುತ್ತಾ ಹೋದಂತೆ, ದಿನದಿಂದ ದಿನಕ್ಕೆ ಅನೇಕ ಮಂದಿ ಸೇರುತ್ತಾ ಇದೀಗ ಬೆಳ್ಳಿ ಹಬ್ಬದ ಹೊಸ್ತಿಲಲ್ಲಿ ಬಂದು ನಿಂತಾಗ ಸಾವಿರಾರು ಸ್ವಯಂ ಪ್ರೇರಿತ ಶಿಕ್ಷಣ ಪ್ರೇಮಿಗಳು ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಮೂಲಕ ಅವಿಭಜಿತ ದ. ಕ. ಜಿಲ್ಲೆಯಲ್ಲಿ ಶಿಕ್ಷಣದ ಚಳುವಳಿಯಲ್ಲಿ ತೊಡಗಲು ವೆಲೊರೆಡ್ ಪರಿಕಲ್ಪನೆಯೇ ಕಾರಣ.

1998ರಲ್ಲಿ ತನ್ನ ಆರೋಗ್ಯದಲ್ಲಿ ಏರುಪೇರಾದ ಸಂದರ್ಭದಲ್ಲಿ, ಡಾ. ಡೆಸ್ಮಂಡ್‌ರವರು ಯೋಜನೆಯನ್ನು ಮುಂದುವರಿಸಲು ಹೊರಗಿನವರನ್ನು ನೇಮಕ ಮಾಡುವ ಬದಲು ಅವರೊಂದಿಗೆ ಈಗಾಗಲೇ ಶ್ರಮಿಸುತ್ತಿರುವ ಸಿಬ್ಬಂದಿ ವರ್ಗದ ತಂಡದವರಿಗೆ ಯೋಜನೆಯನ್ನು ಮುಂದುವರೆಸುವ ಜವಾಬ್ದಾರಿಯನ್ನು ನೀಡಿದರು. ತಂಡಕ್ಕೆ ಇದೊಂದು ದೊಡ್ಡ ಸವಾಲಾಗಿದ್ದರೂ ತಂಡದ ಮೇಲೆ ಇಟ್ಟ ವಿಶ್ವಾಸ ಹಾಗೂ ತಂಡವು ಕುಟುಂಬದ ಸದಸ್ಯರಾಗಿ

ಕೆಲಸಮಾಡುವ ಪರಿಣತಿಯನ್ನು ನಮ್ಮಲ್ಲಿ ಬೆಳೆಸಿದ್ದರಿಂದ ಈ ಸವಾಲನ್ನು ನಿಜವಾಗಿಯೂ ಎದುರಿಸಲು ಸಾಧ್ಯವಾಯಿತು.

2000 ಇಸವಿಯ ಸಮಯದಲ್ಲಿ ಡಾ. ಡೆಸ್ಮಂಡ್ ಡಿ. ಅಬ್ರಿಯೋರವರು ನಿಧನರಾದ ಬಳಿಕ ತಂಡವನ್ನು ಮುಂದುವರೆಸುವ ಜವಾಬ್ದಾರಿ ತನ್ನ ಪಾಲಿಗೆ ಬಂದಿತ್ತಾದರೂ ಡಾ. ಡೆಸ್ಮಂಡ್‌ರವರ ಪತ್ನಿಯಾದ ಮಾರ್ಗರೆಟ್ ಹಾಗೂ ಡೀಡ್ಸ್ ಸಂಸ್ಥೆಯ ಮರ್ಲಿನ್ ಮಾರ್ಟಿಸ್‌ರವರು 'ವೆಲೊರೆಡ್' ಯೋಜನೆಗೆ ಸಾಂಸ್ಥಿಕ ರೂಪವನ್ನು ನೀಡುವಲ್ಲಿ, ಬೆಳೆಸುವಲ್ಲಿ ನೀಡಿದ ಬೆಂಬಲದ ಫಲವಾಗಿ ಪ್ರಸ್ತುತ 'ಪಡಿ' ಸಂಸ್ಥೆಯಾಗಿ ಬೆಳೆದು ನಿಂತಿದೆ.

ದಾನಿ ಸಂಸ್ಥೆಯಾದ 'ಬ್ರೆಡ್ ಫಾರ್ ದ ವರ್ಲ್ಡ್'(BftW) ನೀಡುತ್ತಿರುವ ನಿರಂತರ ಬೆಂಬಲ ಹಾಗೂ ಉನ್ನತ ಮಟ್ಟದ ಆಡಳಿತಾತ್ಮಕ ಕೌಶಲ್ಯಗಳ ಪರಿಣತಿಯನ್ನು ಹೆಚ್ಚಿಸುವಲ್ಲಿ ನೀಡಿದ ಮಾರ್ಗದರ್ಶನ 'ವೆಲೊರೆಡ್' ಪರಿಕಲ್ಪನೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲು ಸಾಧ್ಯವಾಗಿದೆ ಎಂದರೆ ತಪ್ಪಾಗಲಾರದು. ವೆಲೊರೆಡ್ ಪರಿಕಲ್ಪನೆಯ ಜೊತೆಗೆ ಪಡಿ ಆಡಳಿತ ಮಂಡಳಿಯ ಸದಸ್ಯರು ಸುಸ್ಥಿರ ಮತ್ತು ಪಾರದರ್ಶಕ ಆಡಳಿತಕ್ಕೆ ನೀಡಿದ ಅನುಭವವು ಸಂಸ್ಥೆಯನ್ನು ಮಾದರಿ ಸ್ವಯಂ ಸೇವಾ ಸಂಸ್ಥೆಯಾಗಿ ಬೆಳೆಸಲು ಸಾಧ್ಯವಾಗಿದೆ.

ಬಹಳ ಮುಖ್ಯವಾಗಿ ನಿಕಟಪೂರ್ವ ಅಧ್ಯಕ್ಷರಾದ ಪ್ರೊಫೆಸರ್ ಡಾ. ಜಯಂತ ಎಚ್.ರವರು ಹಾಗೂ ಹಾಲಿ ಅಧ್ಯಕ್ಷರಾದ ಡಾ. ಶೋಭಾದೇವಿಯವರು ತೋರುವ ಕಾಳಜಿ ಹಾಗೂ ಜಾಗೃತಿ ಆಶಾದಾಯಕ ಅಂಶವಾಗಿದೆ. ಅಲ್ಲದೆ ಪ್ರಸ್ತುತ ಖಜಾಂಚಿಯಾಗಿ ಕಾರ್ಯನಿರ್ವಹಿಸುತ್ತಿರುವ ತುಕರಾಮ್ ಎಕ್ಕಾರು ಇವರ ಆಡಳಿತಾತ್ಮಕವಾಗಿ ಪಾಲ್ಗೊಳ್ಳುವಿಕೆ ಮಹತ್ತರವಾದುದು ಹಾಗೂ ಮೋಹನ್‌ಚಂದ್ರರವರ ಆರಂಭದಿಂದಲೂ ನೀಡುತ್ತಿರುವ ಸಲಹೆ, ಮಾರ್ಗದರ್ಶನಗಳು ಸ್ಫೂರ್ತಿದಾಯಕವಾಗಿದ್ದುದನ್ನು ನೆನಪಿಸುತ್ತೇನೆ.

ಬೆಳ್ಳಿ ಹಬ್ಬದ ಹೊಸ್ತಿಲಿನ ಈ ಪಯಣದಲ್ಲಿ ಇಲಾಖೆಗಳು, ಶಿಕ್ಷಕರು, ಪೋಷಕರು, ಸಂಘಸಂಸ್ಥೆಗಳು, ಪ್ರತಿನಿಧಿಗಳು, ಶಿಕ್ಷಣಾಸಕ್ತರು, ಮಕ್ಕಳ ಹಕ್ಕುಗಳ ಹೋರಾಟಗಾರರು ನಾಗರಿಕ ಸಮಾಜದ ಹಿರಿಯರು, ಮಾಧ್ಯಮದವರು ನಮ್ಮ ಜೊತೆ ಸಹಕರಿಸುತ್ತಾರೆ.

ಶಿಕ್ಷಣ ಸಂಪನ್ಮೂಲ ಕೇಂದ್ರದ ಸದಸ್ಯರು ವೆಲೊರೆಡ್ ಪರಿಕಲ್ಪನೆಯೊಂದಿಗೆ ತಳಮಟ್ಟಕ್ಕೆ ತಲುಪುತ್ತಿದ್ದಾರೆ. ಅವರ ನಿಸ್ವಾರ್ಥ ಸ್ವಯಂ ಪ್ರೇರಿತ ಕೆಲಸ ನಮಗೆಲ್ಲಾ ಪ್ರೇರಣೆ.

ಪಡಿ ಸಿಬ್ಬಂದಿ ವರ್ಗ ಹಗಲಿರುಳು ಸಂಸ್ಥೆಯೊಂದಿಗೆ ಸಲ್ಲಿಸುತ್ತಿರುವ ವೃತ್ತಿ ನಿರತ ಸೇವೆಗೆ ಬೆಲೆ ಕಟ್ಟಲಾಗದು. ಕಾರ್ಯಕ್ಷೇತ್ರದಲ್ಲಿ ನಮಗೆ ನಿರೀಕ್ಷಿತ ಫಲಿತಾಂಶ ಪಡೆಯುವಲ್ಲಿ ಅವರ ಕುಟುಂಬದ ಸದಸ್ಯರು ನೀಡಿರುವ ಸಹಕಾರ ಅವಿಸ್ಮರಣೀಯ.

'ಬೊಳ್ಳಿ' ಸ್ಮರಣ ಸಂಚಿಕೆಯ ಸಂಚಾಲಕತ್ವದ ಜವಾಬ್ದಾರಿಯನ್ನು ಬಹಳ ಕಾಳಜಿಯಿಂದ ಹಾಗೂ ತಾಳ್ಮೆಯಿಂದ ನಿರ್ವಹಿಸಿರುವ ಪಡಿ ಆಡಳಿತ ಮಂಡಳಿಯ ಸದಸ್ಯರಾದ ಬಿ.ಎಮ್.ರೋಹಿಣಿಯವರಿಗೆ ಹಾಗೂ ಸಂಪಾದಕೀಯ ಮಂಡಳಿಗೆ ಚಿರಋಣಿಯಾಗಿರುತ್ತೇನೆ.

'ಬೊಳ್ಳಿ' ಸ್ಮರಣ ಸಂಚಿಕೆಯನ್ನು ಹೊರತರಲು ಸಹಕರಿಸಿದ ಲೇಖಕರ ಹಾಗೂ ದಾನಿಗಳ ಸ್ಪಂದನೆಗೆ ನಾವು ಸದಾ ಚಿರಋಣಿಯಾಗಿದ್ದೇವೆ. ಅಂತಿಮವಾಗಿ ಮಕ್ಕಳ ಅಭಿವೃದ್ಧಿ ಬಯಸುವ ಓದುಗರಾದ ತಾವು ನಿಜವಾದ ಬೊಳ್ಳಿಯ ಬೆಳಕಾಗಿದ್ದೀರಿ ನಮಗೆ.

ವಂದನೆಗಳು ನಿಮಗೆ.

# ಅಧ್ಯಕ್ಷರ ನುಡಿ...



ಡಾ. ಶೋಭಾದೇವಿ ಎಮ್.ಜಿ

'ಭಾರತದ ಭವಿಷ್ಯ ತರಗತಿಗಳಲ್ಲಿ ರೂಪುಗೊಳ್ಳುತ್ತದೆ' ಎಂಬ ಹೇಳಿಕೆ ಇದೆ. ಇದು ಬರೀ ಹೇಳಿಕೆ ಮಾತ್ರವಲ್ಲ. ಆಶಯವೂ ಕೂಡಾ. ಮಾನವ ಸಂಪನ್ಮೂಲ ಅಭಿವೃದ್ಧಿಯ ಮೂಲ ಬಂಡವಾಳ ಎಂದೆನಿಸಿಕೊಳ್ಳುವ ಶಿಕ್ಷಣ ಹೇಗಿರಬೇಕೆಂಬ ಸ್ಪಷ್ಟ ಸಂದೇಶವೂ ಆಗಿದೆ. ವಿಷಯಾಧಾರಿತವಾಗಿ, ಕೌಶಲಭರಿತವಾಗಿ, ಮೌಲ್ಯಯುತವಾಗಿ ಪ್ರತಿಯೊಬ್ಬರೂ ಅಭಿವೃದ್ಧಿಗೊಂಡಾಗ ಮಾತ್ರ ವ್ಯಕ್ತಿ, ಸಮುದಾಯ, ಸಮಾಜ, ದೇಶ ಬೆಳೆಯಲು ಸಾಧ್ಯ. ಪ್ರತಿಯೊಬ್ಬರ ನೆಮ್ಮದಿಯ, ಘನತೆಯ ಬದುಕು ಸಾಧ್ಯ. ಸಂವಿಧಾನಬದ್ಧ ಆಶಯದಂತೆ ಪ್ರತಿಯೊಬ್ಬರಿಗೂ ನೆಮ್ಮದಿಯ ಘನತೆಯ ಬದುಕು ಲಭ್ಯವಾಗಬೇಕಾದ ಇಲ್ಲಿಯ ಪ್ರತಿಯೊಬ್ಬರೂ ಸಂವಿಧಾನದ ಆಶಯಗಳನ್ನು, ಸಾಂವಿಧಾನಿಕ ಮೌಲ್ಯಗಳನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಶಿಕ್ಷಣಕ್ಕೆ ಅದು ಕೊಡಲು ಸಾಧ್ಯವಿದೆ. ಆದರೆ ಅಂತಹ ಶಿಕ್ಷಣ ಎಲ್ಲರಿಗೂ ಲಭ್ಯಗೊಳ್ಳುತ್ತಿದೆಯೇ ಎಂಬುದು ಪ್ರಶ್ನೆ?

ಭಾರತದ ಸಂವಿಧಾನ ಜಾರಿಗೆ ಬಂದಾಗ, ಸಂವಿಧಾನ ಜಾರಿಗೊಂಡ 10 ವರ್ಷಗಳಲ್ಲಿ ಭಾರತದ ಎಲ್ಲಾ 14 ವರ್ಷದೊಳಗಿನ ಮಕ್ಕಳಿಗೆ ಶಿಕ್ಷಣ ಲಭ್ಯಗೊಳಿಸುವ ಭರವಸೆ ನೀಡಲಾಗಿತ್ತು. ಆ ಮೂಲಕ, ಆ ಕಾಲಘಟ್ಟದಲ್ಲಿ ಕೆಲವೇ ಕೆಲವು ಮಂದಿಗೆ ಸಿಗುತ್ತಿದ್ದ ಶಿಕ್ಷಣ ಎಲ್ಲರಿಗೂ ಲಭ್ಯವಾಗಬಹುದೆಂಬ ಆಶಯ ಒಡ ಮೂಡಿತ್ತು. ಆದರೆ ಹತ್ತು ವರ್ಷಗಳ ಅವಧಿ ಮುಗಿದರೂ ಸಂವಿಧಾನದ ಭರವಸೆಯ ಹತ್ತಿರಕ್ಕೂ ಬರಲಾಗಲಿಲ್ಲ ಎನ್ನುವುದು ಕಟು ವಾಸ್ತವ. ಗ್ರಾಮೀಣ ಮತ್ತು ಬಡ ಸಮುದಾಯದ ಮಕ್ಕಳು ಶಾಲಾ ಸಂದರ್ಭದಿಂದ ಬಹುಸಂಖ್ಯೆಯಲ್ಲಿ ಹೊರಗುಳಿದಿದ್ದರು.

ಆ ನಂತರ ಈ ನಿಟ್ಟಿನಲ್ಲಿ ಶಿಕ್ಷಣ ವ್ಯವಸ್ಥೆ ಎಚ್ಚೆತ್ತು ಕೊಂಡಿತು. 'ಶಿಕ್ಷಣ ಸಾರ್ವತ್ರೀಕರಣ'ದ ಮೂಲಕ ಎಲ್ಲಾ ಮಕ್ಕಳಿಗೂ ಶಿಕ್ಷಣ ಲಭ್ಯಗೊಳಿಸುವ ಕಾರ್ಯ ವಿಸ್ತಾರ ಸ್ವರೂಪ ಪಡಕೊಂಡಿತು. ಕರಿಹಲಗೆ ಯೋಜನೆ, ಡಿಪಿಇಪಿ, ಸರ್ವಶಿಕ್ಷಣ ಅಭಿಯಾನ ಹೀಗೆ ಹಲವು ಕಾರ್ಯಕ್ರಮಗಳ ಮೂಲಕ ಇದನ್ನು ಸಾಧಿಸಲು ಪ್ರಯತ್ನಿಸಲಾಯಿತು. ಅದಕ್ಕೆ ಇತ್ತೀಚೆಗಿನ ಮಕ್ಕಳ ಶಿಕ್ಷಣದ ಹಕ್ಕು ಕಾಯ್ದೆ ಎಲ್ಲಾ ಮಕ್ಕಳಿಗೂ ಶಿಕ್ಷಣ ಲಭ್ಯಗೊಳಿಸುವ ಕಾರ್ಯಕ್ಕೆ ಒತ್ತಾಸೆಯಾಗಿ ನಿಂತಿದೆ. ಇವೆಲ್ಲವೂ ಇವೆ. ಆದರೆ ಎಲ್ಲರಿಗೂ ಶಿಕ್ಷಣ ಅದೂ ಗುಣಮಟ್ಟದ ಶಿಕ್ಷಣ ಲಭ್ಯಗೊಳಿಸುವುದು ಅಷ್ಟು ಸರಳ ವಿಷಯವೇ? ಇಲಾಖೆಯೊಂದೇ ಇಂತಹ ಕಾರ್ಯದಲ್ಲಿ ತೊಡಗಿಕೊಂಡರೆ ನಿರೀಕ್ಷಿತ ಫಲಿತ ಸಾಧ್ಯವೇ? ಮುಂತಾದ ಪ್ರಶ್ನೆಗಳು ನಮ್ಮೆದುರಿಗಿವೆ. ಆದರೆ ಸಮುದಾಯ, ವ್ಯವಸ್ಥೆಯ ಹೊರಗಿರುವ ಕಾಳಜಿಯುಕ್ತ ಮನಸ್ಸುಗಳು ಒಂದಾಗಿ ಕಾರ್ಯಪ್ರವೃತ್ತರಾಗದೆ ಈ ಕಾರ್ಯ ಸುಲಭವಲ್ಲ. ಸಮುದಾಯದ ಭಾಗವಹಿಸುವಿಕೆ ಮತ್ತು ಪೋಷಕರ ಮಾಲೀಕತ್ವವನ್ನು ಖಾತರಿಪಡಿಸುವ ನಿಟ್ಟಿನಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಜಾರಿಗೆ ಬಂತು. ಆದರೆ ಶಿಕ್ಷಣದ ನಿಜವಾದ ಆಶಯವನ್ನು, ಸಮುದಾಯವನ್ನು ಭಾಗವಹಿಸುವಿಕೆಯನ್ನು ಪ್ರೇರೇಪಿಸುವ ವ್ಯವಸ್ಥೆಯೊಂದು ಇಲ್ಲದೆ ಇಂತಹ ಕಾರ್ಯ ಸಾಧ್ಯವಾಗದು. ಈ ನಿಟ್ಟಿನಲ್ಲಿ ಶಿಕ್ಷಣ ವ್ಯವಸ್ಥೆಯನ್ನು ಸಶಕ್ತಗೊಳಿಸುವ, ಸಮುದಾಯದ ಭಾಗವಹಿಸುವಿಕೆಯನ್ನು ಪ್ರೇರೇಪಿಸುವ ಮತ್ತು ಮಗುಸ್ನೇಹಿ ಕಲಿಕಾ ವಾತಾವರಣವನ್ನು ಅಭಿವೃದ್ಧಿಪಡಿಸುವಲ್ಲಿ ಇಲಾಖೆಯ ಜೊತೆಗೆ ನಿಂತಿದ್ದು ವೆಲೊರೆಡ್(ಪಡಿ) ಸಂಸ್ಥೆ. ಡೆಸ್ಮಂಡ್ ಡಿ ಆಬ್ರಿಯೋ ಅವರ ಸಾಮಾಜಿಕ ಕಳಕಳಿ ಮತ್ತು ಸ್ಪಷ್ಟ ಶೈಕ್ಷಣಿಕ ದೃಷ್ಟಿಕೋನದ ಪ್ರತೀಕವಾಗಿ ಹುಟ್ಟಿಕೊಂಡ ಈ ಸಂಸ್ಥೆ ಸಾರ್ವಜನಿಕ ಶಿಕ್ಷಣ ಸಂದರ್ಭದಲ್ಲಿ ಹೊಸತೊಂದು ಆಶಾವಾದವನ್ನು ಹುಟ್ಟಿ ಹಾಕಿದ್ದು ಸುಳ್ಳಲ್ಲ. ಆ ಆಶಾವಾದವನ್ನು ಕಳೆದ 25 ವರ್ಷಕ್ಕಿಂತಲು ಹೆಚ್ಚಿನ ಅವಧಿಯಲ್ಲಿ ನನಸಾಗಿಸುವ ನಿಟ್ಟಿನಲ್ಲಿ ಸತತ ಪ್ರಯತ್ನ ಮಾಡುತ್ತಿದೆ.

ವೆಲೊರೆಡ್‌ನ ಆರಂಭಿಕ ಸಂದರ್ಭದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಸಂಸ್ಥೆಗಳು ಕಡಿಮೆ. ಅದೂ ಒಂದೋ ಪರ್ಯಾಯ ಬೋಧನಾ ವ್ಯವಸ್ಥೆ ಅಥವಾ ರಾತ್ರಿ ಶಾಲೆಗಳಂತಹ ಕಾರ್ಯಕ್ರಮಗಳಲ್ಲಿ ತೊಡಗಿಕೊಂಡದ್ದೇ ಹೆಚ್ಚು. ಇಂತಹ ಸಂದರ್ಭದಲ್ಲಿ ಸಾರ್ವಜನಿಕ ಶಿಕ್ಷಣದ ಜೊತೆಗೆ ಕೆಲಸ ಮಾಡುವ ಮೂಲಕ ಡೆಸ್ಮಂಡ್ ಅವರ ನಿಲುವು ಭಿನ್ನವಾಗಿತ್ತು. ಇದು ಸರಕಾರಿ ಶಾಲಾ ಕಲಿಕಾ ವ್ಯವಸ್ಥೆಯನ್ನು ಸುದೃಢಗೊಳಿಸುವ ಆಶಯ ಸಾರ್ವಜನಿಕ ಶಿಕ್ಷಣವನ್ನು ಉಳಿಸುವ ಜವಾಬ್ದಾರಿಯಾಗಿಯೇ ಗೋಚರಿಸಿತು. ಶಿಕ್ಷಣ ಖಾಸಗೀಕರಣದ ಸಂದರ್ಭದಲ್ಲಿ ಇದು ಹೆಚ್ಚು ತುರ್ತಿನದ್ದೂ ಹೌದು. ಖಾಸಗಿ ಶಿಕ್ಷಣ ವ್ಯವಸ್ಥೆ ತನ್ನ ಛಾಪನ್ನು ವಿಸ್ತರಿಸುತ್ತಾ ಹೋದಂತೆ ಅದರ ನೇರ ಅಪಾಯ ಎದುರಾಗುವುದು ಸಾರ್ವಜನಿಕ ಶಿಕ್ಷಣ ವಲಯಕ್ಕೆ. ಸರಕಾರಿ ಶಿಕ್ಷಣದಿಂದ ಖಾಸಗಿ ಶಿಕ್ಷಣ ವ್ಯವಸ್ಥೆ ಕಡೆಗೆ ಮಕ್ಕಳ ವಲಸೆ ಹೋಗುವ ಮೂಲಕ ಸರಕಾರಿ ಶಾಲೆಗಳು ಮುಚ್ಚುವ ಭೀತಿಯನ್ನು ಎದುರಿಸುತ್ತಿದೆ. ಕಡೆಗಣಿಸಲ್ಪಟ್ಟ ಮತ್ತು ಗ್ರಾಮೀಣ ಸಮುದಾಯದ ಶಿಕ್ಷಣದ ಕನಸು ಇಂದಿಗೂ ಸಾರ್ವಜನಿಕ(ಸರಕಾರಿ) ಶಿಕ್ಷಣ ವ್ಯವಸ್ಥೆಯ ಮೇಲೆಯೇ ಅವಲಂಬಿಸಿದೆ. ಸರಕಾರಿ ಶಾಲೆಗಳ ಕುಸಿತ ಶಿಕ್ಷಣವನ್ನು ಕೊಂಡುಕೊಳ್ಳಲು ಸಾಧ್ಯವಾಗುವವರ ಸ್ವತ್ತಾಗಿ ಮಾತ್ರ ಉಳಿಯಬಹುದು. ಆಗ ಬಡ ಸಮುದಾಯದ ಮಕ್ಕಳನ್ನು ಶಿಕ್ಷಣದಿಂದ ವಂಚಿತಗೊಳಿಸಲಿದೆ. ಇದು ಶಿಕ್ಷಣ ಸಾರ್ವತ್ರೀಕರಣದ ಆಶಯಕ್ಕೆ ಧಕ್ಕೆ ತರಬಹುದು. ಈ ಜವಾಬ್ದಾರಿಯನ್ನು ಅರಿತು ಸರಕಾರಿ ಶಿಕ್ಷಣ ವ್ಯವಸ್ಥೆಯನ್ನು ಸಶಕ್ತಗೊಳಿಸಲು ಶ್ರಮಿಸುತ್ತಿರುವ ವೆಲೊರೆಡ್ ಸಂಸ್ಥೆ ಅಭಿನಂದಾರ್ಹ.

**Project intervened Twenty-four schools and has effective functioning child right clubs and model SDMC. Panchayath in D.K and Udupi have become more sensitive towards children needs. A Resource Person Team above a count of hundred on subjects like RTE, Gender HIV, Domestic Violence exists. This team is recognized throughout the district and State and avail their services. Manuals on RTE Act, Gender, Domestic Violence Act, JJ Act and POCSO are developed and are widely circulated among the various Government departments and General public. State level stock taking on RTE has resulted in advocating for bringing positive transformation. Computerized library inventory exists. PADI Website is fully furnished with updated information. Federation and its eight ERC's are functioning independently as per the bylaw. Internal complaint committee is set up to address the grievances of women at work place.**

## SPECIAL EDUCATION IMPLEMENTATION AT DAKSHINA KANNADA – COLLABORATION EDUCATION DEPARTMENT – D.K.

### JULY 2010 TO JUNE 2014

This Project is mainly to provide the services with Teachers who are trained under Special Education. This Project jurisdiction is Mangalore, Bantwal, Belthangadi, Puttur and Sullya. 15 Teachers were supervised by the Organisation and the special children were given good services and availed the Government supports and implemented the plan effectively. This Project is been continuously served for the betterment of Special Children even in the remote places of all taluks. Total 5 years this Project is served with 15 qualified Teachers. The financial support received by the Education Department as Remuneration. Total 4000 children were given attention during this period who are having disabilities with special talents. They are the children with disabilities on low vision, total blind, hearing impaired, speech impediment, autism, mental retardation, multidisability, locomotor/ orthoimpairement and learning disability.

## THE PROJECT UNDER "ESCAPE CHILDREN FROM CHILD MARRIAGE" FUNDED BY TERRE DES HOMMES, GERMANY 2012-2016

***Worked in North Karnataka with the specific objective to "Reduce the Child Marriages And Rights of Children particularly Girls through CACL-K"***

***Jurisidiction of Project*:** Districts of North Karnataka i.e. Belgaum, Bidar, Gulbarga, Bijapur, Muddebihal, Bagalakote, Haveri, Dharwad, Davanagere, Raichur, Koppal, Bellary, Chikkamagaluru, Tumakur, Gadag, Mysore, Chamarajanagara and Bengaluru.

**In the First year Project worked to spread the** Awareness **under the following activities to Eradicate Child marriages:**

- Children, Youths and Adolescent girl's participation enhanced to protect their rights.
- Women and Men's groups are strengthened and they are participating in the protection of child rights.
- Child marriage is taking place in the mass marriages significantly reduced and civil society groups and community based organizations are sensitized on the issue of child Marriages and their rights.
- Convergence of Government departments, to effectively enforce mechanism to end child marriage practices strengthened.
- Strengthened campaign and strong network at district levels to end child marriages

**In the 2nd year CACL-K Anti Child Marriage** campaign activities were conducted throughout the North Karnataka by holding the, Workshop with Religious leaders. Religious leaders gained the knowledge on the effects of child marriage, A strong desire was shown by the religious leaders

to prevent child marriage, 222 religious leaders were sensitized on effect of child marriage.

Workshop with Police & line departments wherein we are able to reach 216 members who are sensitized on child marriage and its effects, A good rapport developed with CWC, JJB, and other government departments, Awareness , Goals & objectives of CACL-K widely spreaden, District Child Protection systems were strengthened to meet such issues, Knowledge on child rights increased among the participants.

In this year CACL-K sent integrated recommendations in related to CHILD LABOUR IN KARNATAKA & INDIA and Advocated with Government that the children Below 18 have to be difined as Children during the amendment in Bills. There is a contribution of this Project too in amendment in the Child Labour Prohibition bill 2014 "excepting an age limitation of 14 years on Article 24 none of the other articles place an age limitation and hence since India has ratified the UN Convention on the Rights of Children in 1992 whereby all persons below 18 years of age are defined as children it is legally sound that all persons below 18 years are protected by the Indian Constitution against employment, economic exploitation, bonded labour, etc. and instead guarantees the enjoyment of equality, freedom, life and liberty. Government of India has acceded to the United Nations Convention on the Rights of Children and hence being bound by all Articles of the Convention all governments in India are obligated to make policies, laws programmes and budgets recognising the first call for children and all such decisions must be in the best interests of the child"

The Recommendations of Justice Dr. Shivraj Patil Committee is strongly advocated in consultation with 40 representatives from various Districts and Networks in collaboration with KSCPCR mainly on Child Marriages**.**

**In 3rd year a Federation formed " Balya Nakshathra State Level Children's Federation"** which is nothing but a federation 'Karnataka State Federation of child rights' wherein the representatives of 20 Districts child Rights Associations. This is sustenance of the Project, children were trained and they themselves raise the voices for their rights.

**A forum was initiated with the Objectives of** make people raise their voices together joining with various network in one place with regard to the effective implementation of RTE that means though Right to Education Act released in Karnataka, there are many loopholes in the proper implementation of the Act. The Act that stresses a lot in getting back the children to school will definitely stop child marriage if it is implemented effectively. Hence to pressurize the govt. for the proper implementation of RTE we have collected the Current RTE statistics of state. To implement this formed **PAFRE-People Alliance for Fundamental Right to Education**. PAFRE is a network of 120 likeminded individuals and NGO's, working towards bringing change in Education System and children Right. Through this network the project is been able to bring many networks together bring change and voice out for protection of children, constitutional Rights & Right to education. The continuous discussions with the expertise and members,

District level Units of RTE Forums were formed. Media has taken the initiative to publish articles on "**The Present RTE situation"** in Karnataka, which helped to spread the intensity of RTE. The common people too are able to know the "drawbacks in RTE Implementation due to lack of knowledge". **Key demands emerged** in the First State level PAFRE Convention as following

- It should be understood that reservation of 25% seats for children belonging to weaker and other deprived section as just one part of RTE Act and then comprehensively and completely implement the Act.
- The government should take measures to provide necessary help and support to the poor families so as to help them in getting their children equal quality education at least from pre-primary to 10th standard.
- Pressurizing the state government to enact stringent laws against private schools those are involved and in commercialization of education causing social injustice in the society.
- Pressurizing the state government to take appropriate initiative to strengthen KSCPCR, enabling it to monitor RTE Act in the state more effectively and comprehensively.
- The Commission (KSCPCR) within its limits should use its power and take suo-motto action on cases relating to exploitation by private educational institutions, initiate enquiry and recommend the government to initiate suitable action.
- Expedite the legal process for effective implementation of RTE Act, by clearing all the legal hurdles implicated by the private schools.
- In order to derive a common school system based on principles of equality and social justice and as per the constitutional directives, the government should take measures to form an expert committee to formulate the common school policy.
- As first step towards common education system, government should direct all government employees and elected representatives to enroll their children compulsorily in government schools.
- Take-up advocacy along with local government representatives and media with respect to RTE Act.
- Organizing consultations and dialogues with the active participation and involvement of local people on regular basis on RTE Act, helping to develop and put in place suitable local monitoring mechanism for the effective implementation of the Act.

General Awareness materials printed under the Project are Poster, Stickers, Books, Handbills, Panchayath and Education, News Letters which played major role in spreading the awareness Child Rights and Protection as well the Isues of Child Marriages and its Effects, mode of Eradication Camps. Thus the Project is successfully implemented in the years and handed over to the Other Organisation of North Karnataka to continue the same with the passion.

# CHILDLINE –1098 MANGALURU

## 2012 onwards CONTINUING PROJECT

**CHILDLINE 1098 IS A PROJECT OF THE MINISTRY OF WOMEN AND CHILD DEVELOPMENT (GOVT OF INDIA) IN PARTNERSHIP WITH STATE GOVERNMENT, NGO's AND CORPORATE SECTOR)**

**CHILDLINE-1098 Mangaluru** is a Vibrant Hub of Social Service oriented activities providing 24/7 assistance to Children under the age of 18 years. A dedicated team of 7 members, a Director, a Centre Co-coordinator, a Volunteer and a Child Counsellor are always on the move attending the cry for help and rescue the children who are in need of rehabilitation, repatriation, counselling, financial help and guidance.

The **CHILDLINE** Portfolio includes a hoard of activities creating awareness in the Society among all cadres of life with regard to children, their rights, their respect and their responsibilities as true citizens. The awareness is depicted through Open House Programs, Night Outreaches, Setting up CHILDLINE Counters at Public events, Distribution of materials related to information on **CHILDLINE** Services and Accessibility to help.

**CHILDLINE Mangaluru** Team is led by a Dynamic, Calm, Selfless and a Completely Dedicated Executive Director Mr Renni D'Souza. His vast experience in this field is the core strength of the Team. Under his able guidance, the operations are executed smoothly and the turbulences less felt.

Some of the events carried out during the last 5 years may be highlighted below

- **School awareness programs** conducted were above 800 (as of 2017)
- Total Cases handled 2124 (2012-2018)
- Grass root level **Outreach with Children** and Concerned levels who do not have access to this service otherwise. Direct association with the Community helped in knowing about various problems being faced by them and making them aware of **CHILDLINE** Services which is just a free call away.
- **Open House Programs were conducted in various locations of the city in and around and participation was active by the concerned local authorities like the Youth Club Members, District Child Protection Unit officials, Community Based Organisations and Non Government Organizations**

1. It is a medium through which the particular problems pertaining to the concerned area where the Open House was conducted were referred and advocated to the concerned authorities.

2. **Capacity Building Training Programs** were organized for CHILDLINE Team Members which were professional in nature covering topics like Child Protection Policy, Child sexual abuse issues and also guidance was given on how to handle cases more effectively, efficiently and smoothly.
3. In 2015, Mr. Sampath Katti, the Centre Co-coordinator of CHILDLINE Centre was awarded the **SUPER GURU 2015** by 92.7 Big FM for the sincere, prompt and dedicated services rendered in protecting the needy children through **CHILDLINE Mangaluru.**
4. Another major yearly event that takes place successfully every year is the **"CHILDLINE SE DOSTI WEEK"** held in the month of November from 14th to 20th whereby **CHILDLINE** reaches out to all Citizens from all walks of life irrespective of age, caste and gender. Various activities are organized at different prime locations where movement of public is maximum and the main aim of which is to create awareness of child protection from social menaces like Drugs, Alcohol, Smoking, Sexual Abuse, Physical Abuse, Child Labour, Illiteracy etc. Gazetted Officers, Politicians, Popular Personalities from the district are invited as Chief Guests who impart their views and opinions and guide the Citizens in leading a disciplined and dignified life keeping in mind the Norms framed by the government for a productive and quality life.
5. Programs are conducted on May 17th every year which is observed as **International Child Helpline Day.**
6. St. Agnes College of Mangalore actively participates in all public awareness programs conducted by **CHILDLINE** at various parts of the City on Child Abuse, Child Beggary and Swaccha Bharath.
7. The District Police force was trained by **CHILDLINE** Team on **POCSO Act.**

**Conclusion:**

Ultimately the goal of **CHILDLINE** is to provide a secure, peaceful, confident and healthy life for the budding citizens of our Country in order to progress as times move on. To equip our children to be in Sync with the rest of the World. To ignite the innovative young minds to contribute to the Society's growth.

This is a **TIRELESS MISSION** taken up by the **CHILDLINE** which will be carried out through dedicated members who are passionate about their work. They put their heart and soul in bringing out the best in Children.

To obtain quality results **CHILDLINE 1098** has planned for the following projects which needs support from the community:

1. **"REACHING CHILDREN"**: A four wheel vehicle of its own to reach out to the spot on time especially during emergency rescue at night and far off places to save time, energy and money.

2. **"SUPPORT A CHILD":** Many families and children have been identified who are really in feeble condition who requires personal, psychological, financial and medical support. For this noble and humanitarian cause the Organisation seeks support for this Project through local donors.

## CERTIFICATE TRAINING TO DEVELOPMENT WORK STUDENTS/LAW STUDENTS

Organisation broaden its service through giving training to prepare and mould the Development workers and channelize them as an asset to bring change in the community/ country. This is mainly a proper, well designed with content, learning objectives and mode. This is mainly for the MSW/BSW Students now its extended to short term law students too since the organization has its Project which is identified for its expert personnel in Systems.

**Main Objectives:**

- **To provide continuous learning cum Experience**
- **To acquire Field knowledge and professional Field skills to practice Social work**
- **To learn and exhibit appropriate Professional Behavior, ethics and values**
- **To develop Self-awareness necessary for professional Performance**
- **To carry out any assignment, Independent Work, Research/ Documentation etc, useful to the Trainee/student**
- **To develop the overall capacity of the student/trainee in Social Development skills**

The mode of training is through associating the PADI team they have to take leadership in the assignments. They are supervised by the PADI team under 2 Parts:

**PART A consists** Development workshop; Conceptual clarity/VIVA; Case work; Group work; RTI; Documentation; Reporting; Understanding organization.

**PART B (Optional) consists with the subjects** Writing skills; Presentation/uses of equipments; Administration; contribution Utilizing talents; Survey; Campaign; Innovative initiative; Camps; Fund raising; Development theatre.

PADI encourages the students to take an active role in all the Project Activities to experience all the above subjects and wherein team gauges and guides them to shape them up to the mark. The **371** trainees undergone Trainings in development work.



### ಮಕ್ಕಳಿಗಾಗಿ, ಮಕ್ಕಳಿಗೋಸ್ಕರ, ಮಕ್ಕಳಿಂದಲೇ ಸಮುದಾಯಕ್ಕೆ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಜನಜಾಗೃತಿಗಾಗಿ

# ಮಕ್ಕಳ ಹಕ್ಕುಗಳ ಶೈಕ್ಷಣಿಕ ರಂಗ ಅಭಿಯಾನ

**ಕಸ್ತೂರಿ ಬೊಳುವಾರು,**
ತರಬೇತಿ ಸಂಯೋಜಕಿ, ಪಡಿ–ಮಂಗಳೂರು

ಪ್ರಾಥಮಿಕ ಶಾಲಾ ಶಿಕ್ಷಣದಲ್ಲಿ ಗುಣಾತ್ಮಕ ಕಲಿಕೆಯನ್ನು ಖಾತರಿಗೊಳಿಸುವ ಅಂಶಗಳನ್ನು ಹಲವಾರು ಆಯಾಮಗಳಲ್ಲಿ ನೋಡಬೇಕಾಗುತ್ತದೆ. ಶಾಲಾ ಹಂತದಲ್ಲಿ ಮಗುವಿನ ಶಿಕ್ಷಣ ಹಾಗು ಕಲಿಕೆಯು ಮಕ್ಕಳ ಸರ್ವಾಂಗೀಣ ಅಭಿವೃದ್ಧಿಯ ಚಟುವಟಿಕೆಗಳಾಗಿ ನಡೆಯುವುದರಿಂದ ಮಕ್ಕಳಲ್ಲಿ ಕ್ರಿಯಾಶೀಲತೆಯನ್ನು ಹೆಚ್ಚಿಸಲು ಅನುಕೂಲಕರ ವಾತಾವರಣವು ಅತೀ ಅವಶ್ಯಕವಾದುದು. ಗುಣಾತ್ಮಕ ಶಿಕ್ಷಣ ಎಂದಾಗ ಮಕ್ಕಳು, ಶಿಕ್ಷಕರು ಹಾಗು ಎಸ್.ಡಿ.ಎಂ.ಸಿ ಗಳು ಮಾತ್ರವಲ್ಲದೆ ಶಾಲಾ ಹಂತದಲ್ಲಿ ಇಡೀ ಸಮುದಾಯ ಅಂದರೆ ಪೋಷಕರ, ಸ್ಥಳೀಯ ಸರಕಾರಗಳ, ಸಂಘಸಂಸ್ಥೆಗಳ ಸಕ್ರಿಯ ಪಾಲ್ಗೊಳ್ಳುವಿಕೆಯು ಗುಣಾತ್ಮಕ ಶಿಕ್ಷಣದ ಸೂಚ್ಯಂಕಗಳಾಗಿವೆ, ಯಾಕೆಂದರೆ ಸಮುದಾಯವು ಕೂಡಾ ಶಿಕ್ಷಣ ಎಂದರೇನು? ಮಕ್ಕಳಿಗೆ ಎಂತಹ ಶಿಕ್ಷಣ ಬೇಕು? ಹಾಗು ಸರಕಾರಿ ಇಲಾಖೆ, ಪೋಷಕರು, ಸಮುದಾಯವನ್ನು ಶಾಲಾಭಿವೃದ್ಧಿಗಾಗಿ ಯಾಕೆ ಹತ್ತಿರ ತರಬೇಕು? ಹಾಗೂ ಎಸ್.ಡಿ.ಎಂ.ಸಿ. ಶಿಕ್ಷಕರು, ಮಕ್ಕಳು ಹಾಗೂ ಸಮುದಾಯದ ಭಾಗವಹಿಸುವಿಕೆಯ ಮೂಲಕ ಮಕ್ಕಳ ಹಕ್ಕುಗಳನ್ನು ಖಾತರಿಗೊಳಿಸುವ ಅಗತ್ಯವಿದೆಯೆ? ಎಂಬುದನ್ನು ಅರ್ಥಮಾಡಿಕೊಳ್ಳದ ಹೊರತು ಶಾಲಾಭಿವೃದ್ಧಿಯಲ್ಲಿ ಸರ್ವರ ಭಾಗವಹಿಸುವಿಕೆಯನ್ನು ಖಾತರಿಗೊಳಿಸಲು ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಪಡಿ ಸಂಸ್ಥೆಯು ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಸಹಕಾರ ಮತ್ತು ಸಹಭಾಗಿತ್ವದಲ್ಲಿ ಮಕ್ಕಳ ರಂಗ ತಂಡವನ್ನು ರಚಿಸಿ ಈ ಮೂಲಕ ಸಮುದಾಯದಲ್ಲಿ ಶೈಕ್ಷಣಿಕ ಜಾಗೃತಿ ಮೂಡಿಸುವ ಈ ಪ್ರಯತ್ನವು ಹೊಸ ಹೆಜ್ಜೆಯಾಗಿದೆ, ಈ ರಂಗ ತಂಡವು ದ.ಕ ಜಿಲ್ಲೆಯ ಸುಳ್ಯ, ಪುತ್ತೂರು, ಬಂಟ್ವಾಳ ಹಾಗು ಬೆಳ್ತಂಗಡಿ ಹಾಗು ಉಡುಪಿ ಜಿಲ್ಲೆಯ ಕುಂದಾಪುರ ಮತ್ತು ಕಾರ್ಕಳ ತಾಲೂಕಿನಲ್ಲಿ ರಚನೆಗೊಂಡು ನುರಿತ ರಂಗ ಕರ್ಮಿಗಳಿಂದ ತರಬೇತಿಯನ್ನು ಪಡೆದು ಅಸ್ತಿತ್ವಕ್ಕೆ ಬಂದಿರುತ್ತದೆ. ಈ ತಂಡಗಳ ಮೇಲ್ವಿಚಾರಣೆಯನ್ನು ಆಯಾಯ ತಾಲೂಕಿನ ತಾಲೂಕು ಶಿಕ್ಷಣ ಸಂಪನ್ಮೂಲ ಕೇಂದ್ರಗಳು ವಹಿಸಿ ಕೊಳ್ಳುತ್ತಿವೆ. ಈ ಶೈಕ್ಷಣಿಕ ರಂಗ ತಂಡವು ಆಯಾಯ ತಾಲೂಕಿನಲ್ಲಿ ಸಮುದಾಯದಲ್ಲಿ ಶೈಕ್ಷಣಿಕ ಜಾಗೃತಿಗಾಗಿ ಹಾಗು ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಜಾಗೃತಿ ಮೂಡಿಸುವ ಸಲುವಾಗಿ ಪ್ರಥಮ ಬಾರಿಗೆ ಸುಮಾರು 300 ಮಕ್ಕಳ 6 ತಂಡಗಳು ಕಾರ್ಯಾಚರಿಸುತ್ತಿವೆ. ಹಾಗೂ ನಿರಂತರವಾಗಿ ತಾಲೂಕು ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಮೂಲಕ ಉಭಯ ಜಿಲ್ಲೆಗಳಲ್ಲಿ ನಡೆಯುವ ಅಭಿಯಾನಕ್ಕೆ ಸಮುದಾಯದ ಸರ್ವರ ಸಹಕಾರ ಮತ್ತು ಬೆಂಬಲವು ಕೂಡಾ ಅತ್ಯಂತ ಅಗತ್ಯವಾಗಿದೆ.

**ಯಾಕೆ ಶೈಕ್ಷಣಿಕ ರಂಗ ತಂಡ:**

ಶಾಲಾ ಶಿಕ್ಷಣದಲ್ಲಿ ಸಾಂವಿಧಾನಿಕ ಮೌಲ್ಯಗಳ ಅನುಷ್ಠಾನದ ಮೂಲಕ ಮಗುಸ್ನೇಹಿ ಶಾಲೆ ಮತ್ತು ಸಮಾಜದ

ನಿರ್ಮಾಣ ಮಾಡುವುದರ ಮೂಲಕ

- ಶಾಲೆಗಳಲ್ಲಿ ರಂಗ ಶಿಕ್ಷಣದ ಮೂಲಕ ಎಲ್ಲಾ ಮಕ್ಕಳ ಕಲಿಕೆಯನ್ನು ಉತ್ತಮಗೊಳಿಸುವುದು ಮತ್ತು ವೃದ್ಧಿಸುವುದು.
- ಸಮುದಾಯಕ್ಕೆ ಶಾಲೆ ನಮ್ಮದು ಎನ್ನುವ ಸಂಬಂಧವನ್ನು ಬೆಳೆಸುವುದು.
- ಸಮುದಾಯಕ್ಕೆ ಮಕ್ಕಳ ಹಕ್ಕು ಮತ್ತು ಮಕ್ಕಳ ಹಕ್ಕುಗಳ ಅನುಷ್ಠಾನದ ವಿವಿಧ ವ್ಯವಸ್ಥೆಗಳ ಕರ್ತವ್ಯದ ಬಗ್ಗೆ ಜಾಗೃತಿ ಮೂಡಿಸುವುದು.
- ಮಕ್ಕಳು ಮತ್ತು ಸಮುದಾಯದಲ್ಲಿ ಸಾಮಾಜಿಕ ಜವಾಬ್ದಾರಿ ಹಾಗು ಮೌಲ್ಯಗಳನ್ನು ಬೆಳೆಸುವುದು.
- ಮಕ್ಕಳು ಮತ್ತು ಸಮುದಾಯದಲ್ಲಿ ವೈಚಾರಿಕ ಚಿಂತನೆಯನ್ನು ಬೆಳೆಸುವುದು

**ಶೈಕ್ಷಣಿಕ ರಂಗ ತಂಡದ ರಚನೆ**

1. ದ.ಕ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ 6 ಕ್ಲಸ್ಟರ್ ಹಂತದಲ್ಲಿ ತಂಡವನ್ನು ರಚಿಸಲಾಗಿದೆ
2. ಪ್ರತಿ ಶಿಕ್ಷಣ ರಂಗ ತಂಡದಲ್ಲಿ 20 ರಿಂದ 25 ಮಕ್ಕಳು ಭಾಗವಹಿಸುತ್ತಾರೆ.
3. ಲಿಂಗ ಸಮಾನತೆಯನ್ನು ಕಾಯ್ದುಕೊಳ್ಳಲಾಗಿದೆ.
4. ಪ್ರತಿ ಶಿಕ್ಷಣ ರಂಗ ತಂಡದಲ್ಲಿ ತಂಡದ ಸದಸ್ಯರನ್ನು ಆಯ್ಕೆ ಮಾಡುವಾಗ ಮಕ್ಕಳ ಪೋಷಕರ ಒಪ್ಪಿಗೆ ಪಡೆದುಕೊಳ್ಳಲಾಗಿದೆ.
5. ಆಯಾಯ ತಾಲೂಕಿನ ತಾಲೂಕು ಶಿಕ್ಷಣ ಸಂಪನ್ಮೂಲ ಕೇಂದ್ರಗಳು ಶಿಕ್ಷಣ ರಂಗ ತಂಡದ ಜವಾಬ್ದಾರಿಗಳನ್ನು ನೋಡಿಕೊಳ್ಳುವರು.

**ಎಲ್ಲೆಲ್ಲಿ ಶೈಕ್ಷಣಿಕ ರಂಗ ತಂಡದ ಬಳಕೆ:**

ಮಗುಸ್ನೇಹಿ ಶಾಲೆ ಕಾರ್ಯಚಟುವಟಿಕೆಗೆ ಆಯ್ಕೆ ಮಾಡಲಾದ ಸರಕಾರಿ ಶಾಲೆಗಳು, ಈ ಶಾಲಾ ವ್ಯಾಪ್ತಿಯ ಜನ ಸಮುದಾಯ ಕ್ಷೇತ್ರ, ಮಕ್ಕಳ ಹಕ್ಕುಗಳ ಗ್ರಾಮ ಸಭೆಗಳು, ಪಂಚಾಯತ್‌ನ ವಿವಿಧ ಗ್ರಾಮ ಸಭೆಗಳು, ಶಾಲಾ ವಾರ್ಷಿಕೋತ್ಸವಗಳಲ್ಲಿ, ಇನ್ನಿತರ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಬಳಕೆ ಮಾಡಬಹುದಾಗಿದೆ. ಅಲ್ಲದೆ, ಈ ರಂಗ ತಂಡದ ಪ್ರಯೋಜನವನ್ನು ವಿಸ್ತಾರವಾಗಿ ಸಮುದಾಯಕ್ಕೆ ತಲುಪಿಸುವಲ್ಲಿ ಸರಕಾರದ ವಿವಿಧ ಇಲಾಖೆಗಳಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನೆಹರು ಯುವ ಕೇಂದ್ರ, ವಯಸ್ಕರ ಶಿಕ್ಷಣ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗು ವಿವಿಧ ಸ್ವಯಂಸೇವಾ ಸಂಸ್ಥೆಗಳ ಸಹಕಾರ ಹಾಗೂ ಸಹಭಾಗಿತ್ವವನ್ನು ನೀಡಬಹುದಾಗಿದೆ.



# ವೆಲೊರೆಡ್ ಪರಿಕಲ್ಪನೆಯಲ್ಲಿ ಸಮುದಾಯಾಧಾರಿತ ಸಂಘಟನೆ 'ಶಿಕ್ಷಣ ಸಂಪನ್ಮೂಲ ಕೇಂದ್ರಗಳು'

ಸಮುದಾಯದ ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರ ಅತೀ ಅಗತ್ಯವಾದುದು. ಅದರಲ್ಲೂ ಪ್ರಾಥಮಿಕ ಶಿಕ್ಷಣವು ಪ್ರತಿಯೊಬ್ಬರ ಪರಿಪಕ್ವ ಜೀವನದ ಬುನಾದಿಯೂ ಹೌದು. ಆದರೆ ಸ್ವಾತಂತ್ರ್ಯಾ ನಂತರದಲ್ಲಿ ಎಲ್ಲಾ ವರ್ಗದ ಮಕ್ಕಳಿಗೆ ಸಿಗಬೇಕಾದ ಶಿಕ್ಷಣವು ಕೆಲವೊಂದು ವರ್ಗಕ್ಕೆ ಮಾತ್ರ ಸೀಮಿತವಾಗಿರುವುದನ್ನು ಇಂದಿಗೂ ನಾವು ಕಾಣುತ್ತಿದ್ದೇವೆ. ಗುಣಮಟ್ಟದ ಶಿಕ್ಷಣದ ಪ್ರಕ್ರಿಯೆಯಲ್ಲಿ ಸಮುದಾಯದ ಭಾಗವಹಿಸುವಿಕೆ ಪ್ರತೀ ಹಂತದಲ್ಲೂ ನಡೆದಾಗ ಒಟ್ಟು ಸಮುದಾಯವೇ ಜಾಗೃತಗೊಂಡು ಗುಣಮಟ್ಟದ ಶಿಕ್ಷಣದ ಬಗ್ಗೆ ಚಿಂತಿಸಿ ಕಾರ್ಯೋನ್ಮುಖರಾಗಲು ಸಾಧ್ಯ.

ಪ್ರತಿಯೊಂದು ಮಗುವನ್ನು ಭಾವನಾತ್ಮಕ, ಬೌದ್ಧಿಕ, ಸಾಂಸ್ಕೃತಿಕವಾಗಿ ಅಭಿವೃದ್ಧಿ ಪಡಿಸಿ ಸಮತೋಲನ ಬದುಕಿಗೆ ತಯಾರು ಮಾಡುವಂತಹ ಶಿಕ್ಷಣ ಮಕ್ಕಳಿಗೆ ದೊರೆಯ ಬೇಕಿದೆ. ತಾರತಮ್ಯ ರಹಿತವಾಗಿ ಪ್ರತಿಯೊಂದು ಮಗುವಿನಲ್ಲಿ ಆತ್ಮವಿಶ್ವಾಸ ಹೆಚ್ಚಿಸುವ ಶಿಕ್ಷಣ ರೂಪುಗೊಳ್ಳಬೇಕಾಗಿದೆ. ನಮ್ಮ ಶಾಲೆಗಳಲ್ಲಿ ಮಕ್ಕಳು ಒಬ್ಬರನ್ನೊಬ್ಬರು ಅರಿತುಕೊಂಡು, ಹಂಚಿಕೊಂಡು, ಸಹಕಾರ ಹಾಗೂ ಸರಳತೆಯ ಬದುಕಿಗೆ ಪೂರಕವಾದ ವಾತಾವರಣ ನಿರ್ಮಾಣವಾಗುವ ಅವಶ್ಯಕತೆ ಇದೆ. ಸದ್ಯ ಪ್ರಚಲಿತದಲ್ಲಿರುವ ಕೆಲವು ಜೀವ ವಿರೋಧಿ ಮೌಲ್ಯಗಳು ಆತಂಕ ಹುಟ್ಟಿಸುತ್ತಿವೆ. ಉತ್ತಮ ಮೌಲ್ಯಗಳು, ಮಗುಸ್ನೇಹಿ, ಮಗು ಕೇಂದ್ರಿತ ವಾತಾವರಣವು ಸಂವಿಧಾನದ ಆಶಯಗಳಿಗೆ ಪೂರಕವಾಗಿ ಸಮುದಾಯ ಹಾಗೂ ಮಕ್ಕಳಿಗೆ ಶಿಕ್ಷಣದ ಮೂಲಕ ಸಿಗಬೇಕಾಗಿದೆ. ಎಲ್ಲಿಯವರೆಗೆ ಸಮುದಾಯ ಶಿಕ್ಷಣದ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಗುಣಮಟ್ಟದ ಶಿಕ್ಷಣಕ್ಕೆ ನಿಜವಾದ ಅರ್ಥ ಸಿಗಲಾರದು.

ಈ ಅಗತ್ಯದ ಪರಿಸ್ಥಿತಿಯಲ್ಲಿ ಸುಮಾರು 25 ವರ್ಷಗಳ ಹಿಂದೆ ಶಿಕ್ಷಣ ತಜ್ಞ ಡಾ। ಡೆಸ್ಮಂಡ್ ಡಿ. ಅಬ್ರಿಯೋ ಅವರ ನೇತೃತ್ವದಲ್ಲಿ ಪ್ರಾರಂಭವಾದ ಪರಿಕಲ್ಪನೆಯೆ ವೆಲೊರೆಡ್ (ಮೌಲ್ಯಾಧಾರಿತ ಶಿಕ್ಷಣ). ಪಡಿ ಸಂಸ್ಥೆಯು ಹಲವಾರು ವರ್ಷಗಳಿಂದ ವೆಲೊರೆಡ್ ಪರಿಕಲ್ಪನೆಯಲ್ಲಿ ಸಮುದಾಯದೊಂದಿಗೆ ಹಲವಾರು ಶೈಕ್ಷಣಿಕ ಯೋಜನೆಗಳನ್ನು ಅನುಷ್ಠಾನ ಮಾಡುತ್ತಾ ಬಂದಿದ್ದು, ಇದೀಗ ಮಗು ಸ್ನೇಹಿ ಶಾಲೆ, ಮಗು ಸ್ನೇಹಿ ಪಂಚಾಯತ್ ಪರಿಕಲ್ಪನೆಯಲ್ಲಿ ಶಿಕ್ಷಣ ಇಲಾಖೆಯ ಸಹಭಾಗಿತ್ವದೊಂದಿಗೆ ಕಾರ್ಯ ಯೋಜನೆಯನ್ನು ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಜಿಲ್ಲಾ ಒಕ್ಕೂಟ ಹಾಗೂ ತಾಲೂಕು ಘಟಕಗಳ ಮೂಲಕ ದ.ಕ. ಮತ್ತು ಉಡುಪಿ ಜಿಲ್ಲೆಯಲ್ಲಿ ಅನುಷ್ಠಾನ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿದೆ.

**ಗುಣಮಟ್ಟದ ಶಿಕ್ಷಣಕ್ಕಾಗಿ ಸಂಪನ್ಮೂಲ ಕೇಂದ್ರಗಳ ಮೂಲಕ ಸಮುದಾಯದ ಸಬಲೀಕರಣ.**

ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿ ಸುಮಾರು 20 ವರ್ಷಗಳ ಹಿಂದೆ ಪ್ರಾರಂಭವಾದ ವೆಲೊರೆಡ್ ಯೋಜನೆಯು ಪ್ರಾರಂಭದ ಚಟುವಟಿಕೆಗಳನ್ನು ಆರಂಭಿಸಿದ್ದು ಶಿಕ್ಷಣಕ್ಕಾಗಿ ಸಮುದಾಯವನ್ನು ತಯಾರುಗೊಳಿಸುವುದು. ಆ ಸಂದರ್ಭದಲ್ಲಿ ಸಮುದಾಯದ ಭಾಗವಾಗಿ ಶಿಕ್ಷಕರನ್ನು ಗುರುತಿಸಿಕೊಂಡಿರುವುದು ಮಾತ್ರವಲ್ಲ ಆಗಿನ ಮಕ್ಕಳ ಕಲಿಕೆಯ ಭಾಗವಾಗಿದ್ದ ಓದುವ ಆಟ ಪುಸ್ತಕದ ವಿಮರ್ಶೆ ಮತ್ತು ಚಟುವಟಿಕೆಗಳ ಮೂಲಕ. ಪ್ರಾಥಮಿಕ ಶಾಲಾ ಶಿಕ್ಷಕರೊಂದಿಗೆ ಪ್ರಾರಂಭವಾದ ಈ ಚಿಂತನೆ ಮುಂದೆ ಶಿಕ್ಷಕರಿಗಾಗಿ ಹಲವಾರು ತರಬೇತಿಗಳು, ಕಲಿಕಾ ಉಪಕರಣಗಳ ತಯಾರಿ, ಪ್ರದರ್ಶನ, ಶಾಲಾ ಹಂತದಲ್ಲಿ ಮಕ್ಕಳಿಗಾಗಿ ಹಲವಾರು ಕ್ರಿಯಾಶೀಲ ಚಟುವಟಿಕೆಗಳು

ಹೀಗೆ ಈ ಕಾರ್ಯಕ್ರಮಗಳ ಮೂಲಕ ಶಿಕ್ಷಕರನ್ನು ಶಿಕ್ಷಣದ ಕಲಿಕೆಯ ವಾಸ್ತವತೆಗೆ ಪ್ರೇರೇಪಿಸುವ ಪ್ರಯತ್ನಗಳನ್ನು ನಡೆಸಲಾಯಿತು.

ಇದರೊಂದಿಗೆ ಗುಣಾತ್ಮಕ ಶಿಕ್ಷಣದ ಪ್ರಕ್ರಿಯೆಯಲ್ಲಿ ಸಮುದಾಯವನ್ನು ಸಜ್ಜುಗೊಳಿಸುವುದು ಮತ್ತು ಗ್ರಾಮೀಣ ಪ್ರದೇಶದಲ್ಲಿ ಸಮುದಾಯ ಆಧಾರಿತ ಸಂಘಟನೆಗಳು ಹಾಗೂ ಸ್ಥಳೀಯ ಆಡಳಿತವಾದ ಗ್ರಾಮ ಪಂಚಾಯತನ್ನು ಕೂಡಾ ಶಿಕ್ಷಣದ ಸಹಭಾಗಿಗಳಾಗಿ ಶ್ರಮಿಸುವಂತೆ ಜಾಗೃತಗೊಳಿಸುವುದು ಅತ್ಯಂತ ಗಮನೀಯವಾಗಿದ್ದರೂ ಅದು ಒಂದು ಸವಾಲೇ ಆಗಿತ್ತು. ಈ ಎಲ್ಲಾ ಅಂಶಗಳನ್ನು ಗಮನಿಸಿಕೊಂಡು ಶಿಕ್ಷಣದ ಪ್ರಗತಿಗೆ ಹೆಚ್ಚಿನ ಪಾಲುದಾರರು, ಕಾರಣಕರ್ತರು ಆಗಿರುವ ಪೋಷಕರು, ಶಿಕ್ಷಕರು, ಶಿಕ್ಷಣ ಸಂಸ್ಥೆಗಳನ್ನು ಒಂದೆಡೆ ಸೇರಿಸಿ ಚರ್ಚೆ ಹಾಗೂ ಸಮಾಲೋಚನೆಯೊಂದಿಗೆ ಪ್ರಾರಂಭವಾದ ಸಮುದಾಯ ಆಧಾರಿತ ವೇದಿಕೆಯೆ ಶಿಕ್ಷಣ ಸಂಪನ್ಮೂಲ ಕೇಂದ್ರ.

ಪ್ರಾರಂಭದಲ್ಲಿ ದ.ಕ. ಜಿಲ್ಲೆಯ ಮಂಗಳೂರು ಹಾಗೂ ಉಡುಪಿ ಜಿಲ್ಲೆಯಲ್ಲಿ ಆರಂಭವಾದ ತಾಲೂಕು ಶಿಕ್ಷಣ ಸಂಪನ್ಮೂಲ ಕೇಂದ್ರ ತನ್ನ ಆಲೋಚನೆಗಳನ್ನು ವಿಸ್ತರಿಸುತ್ತಾ ಪ್ರಸ್ತುತ 2 ಜಿಲ್ಲೆಯ ಎಂಟು ತಾಲೂಕುಗಳಲ್ಲಿ ಘಟಕಗಳನ್ನು ಹೊಂದಿದೆ. ಅಲ್ಲದೆ ಸಂಘಟನಾತ್ಮಕ ಕಾರ್ಯ ಯೋಜನೆಗಳ ಆಶಯಗಳ ಈಡೇರಿಕೆಗಾಗಿ ದ.ಕ. ಜಿಲ್ಲಾ ಮಟ್ಟದಲ್ಲಿ ಕರ್ನಾಟಕ ರಾಜ್ಯ ಸೊಸೈಟಿ ನೋಂದಾವಣೆ ನಿಯಮದಂತೆ ಇದು ಒಂದು ನೋಂದಾಯಿತ ವೇದಿಕೆಯಾಗಿ ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟ (ರಿ.) ದ.ಕ. 2007-08ರಿಂದ ದ.ಕ. ಜಿಲ್ಲೆಯಲ್ಲಿ ಕಾರ್ಯಾಚರಿಸುತ್ತಿದೆ ಹಾಗೂ 2008-09ರಿಂದ ಉಡುಪಿ ಜಿಲ್ಲೆಯಲ್ಲಿ ಜಿಲ್ಲಾ ಶಿಕ್ಷಣ ಸಂಪನ್ಮೂಲ ಕೇಂದ್ರ (ರಿ.) ಉಡುಪಿ ಜಿಲ್ಲೆ ಹೆಸರಲ್ಲಿ ಕಾರ್ಯಾಚರಿಸುತ್ತಿದೆ.

**ಒಕ್ಕೂಟದ ಧ್ಯೇಯ ಮತ್ತು ಉದ್ದೇಶ ಶಿಕ್ಷಣ ಸಂಪನ್ಮೂಲ ಕೇಂದ್ರದ ಗುರಿ**

ಶಿಕ್ಷಣ ಸಂಪನ್ಮೂಲ ಕೇಂದ್ರವು ಸಾಂವಿಧಾನಿಕವಾಗಿ ಪ್ರತಿಪಾದಿತ ತತ್ವಗಳಾದ ಪ್ರಜಾಪ್ರಭುತ್ವ, ಸಮಾನತೆ, ಜಾತ್ಯಾತೀತ ಮತ್ತು ಸಮಾಜವಾದಿ ಮೌಲ್ಯಗಳನ್ನು ಶಿಕ್ಷಣದ ರೂಪದಲ್ಲಿ ಒದಗಿಸುವ ಮೂಲಕ ಮೌಲ್ಯಾಧಾರಿತ ಸಮಾಜವನ್ನಾಗಿಸುವಲ್ಲಿ ಶ್ರಮಿಸುವುದು.

**ಉದ್ದೇಶ**

ಪ್ರಾಥಮಿಕ ಶಿಕ್ಷಣದಲ್ಲಿ ಲಿಂಗ, ಜಾತಿ, ಮತ, ವರ್ಗ ಭೇದವಿಲ್ಲದೆ ಸಮಾನತೆಯ ಮೌಲ್ಯಗಳನ್ನು ಪರಿಣಾಮಕಾರಿಯಾಗಿ ಅಳವಡಿಸಲು ಪ್ರೇರೇಪಿಸುವುದು.

ಪ್ರಾಥಮಿಕ ಶಾಲೆಗಳಲ್ಲಿ ಎಲ್ಲಾ ಮಕ್ಕಳಿಗೆ ಗುಣಮಟ್ಟದ ಶಿಕ್ಷಣಕ್ಕಾಗಿ ಗ್ರಾಮ ಶಿಕ್ಷಣ ಸಮಿತಿಗಳನ್ನು ಸದೃಢಗೊಳಿಸಿ ಗ್ರಾಮ ಮಟ್ಟದಿಂದಲೆ ಶಿಕ್ಷಣವನ್ನು ಖಾತ್ರಿಗೊಳಿಸುವುದು.

ಶೈಕ್ಷಣಿಕ ಕ್ಷೇತ್ರದ ಕಾಲಕಾಲದ ಬೇಡಿಕೆಗಳಿಗೆ ಅನುಗುಣವಾಗಿ ಸೂಕ್ತ ತಜ್ಞರನ್ನು ಒಳಗೊಂಡ ಸಮಾನಾಸಕ್ತರ ಜಾಲನ್ನು ರೂಪಿಸುವುದು. ಈ ಮೂಲಕ ಶೈಕ್ಷಣಿಕ ಆಂದೋಲನವನ್ನು ಹಮ್ಮಿಕೊಳ್ಳುವುದು.

ಮೌಲ್ಯಾಧಾರಿತ ಶಿಕ್ಷಣ ಅನುಷ್ಠಾನಗೊಳಿಸುವಲ್ಲಿ ಶಿಕ್ಷಣ ಇಲಾಖೆಯೊಂದಿಗೆ ಸಹಭಾಗಿತ್ವ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳಿಗುಣವಾಗಿ ಒತ್ತಾಯಿಸುವುದು.

ಗುಣಮಟ್ಟದ ಶಿಕ್ಷಣಕ್ಕಾಗಿ ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟ ಮತ್ತು ತಾಲೂಕು ಘಟಕಗಳಲ್ಲಿ ಕಳೆದ ಒಂದು ದಶಕದಿಂದ ವೆಲೊರೆಡ್ ಪರಿಕಲ್ಪನೆಯೊಂದಿಗೆ ಎರಡು ಜಿಲ್ಲೆಗಳಲ್ಲಿ ಸಮುದಾಯ ಜಾಗೃತಿಗೊಳಿಸಲು ಈ ಕೆಳಗಿನ ಕಾರ್ಯತಂತ್ರಗಳನ್ನು ಹಾಗೂ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತದೆ.

1. ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟ ಹಾಗೂ ತಾಲೂಕು ಘಟಕಗಳು ಸಮುದಾಯ ಮಾಹಿತಿ ಕೇಂದ್ರವಾಗಿ ಕಾರ್ಯ ನಿರ್ವಹಣೆ
2. ಸಾರ್ವಜನಿಕ ಶಿಕ್ಷಣ ಇಲಾಖಾ ಸಹಭಾಗಿತ್ವದಲ್ಲಿ ಎಸ್.ಡಿ.ಎಂ.ಸಿ. ತರಬೇತಿಗಳು ಮತ್ತು ತಾಲೂಕು ಮಟ್ಟದ ಸಮಾವೇಶಗಳು

3. ವಿಷಯವಾರು ಸಂಪನ್ಮೂಲ ವ್ಯಕ್ತಿಗಳ ತಂಡದ ಮೂಲಕ ಶಿಕ್ಷಣ ಹಕ್ಕು ಕಾಯಿದೆ, ಮಕ್ಕಳ ಹಕ್ಕು, ಬಾಲನ್ಯಾಯ ಕಾಯಿದೆ, ಲಿಂಗತ್ವ ಪರಿಕಲ್ಪನೆ, ಹದಿಹರೆಯದ ಶಿಕ್ಷಣ, ಪೋಕ್ಸೋ ಕಾಯಿದೆ, ಮಕ್ಕಳ ಹಕ್ಕುಗಳ ಕುರಿತು ಸಮುದಾಯದ ವಿವಿಧ ವರ್ಗಗಳಿಗೆ ಮಾಹಿತಿ ಮತ್ತು ಜಾಗೃತಿ
4. ಮಕ್ಕಳ ಭಾಗವಹಿಸುವಿಕೆಯ ಹಕ್ಕಿನ ಭಾಗವಾಗಿ ಶಾಸಕರೊಂದಿಗೆ ಮಕ್ಕಳು ಸಂವಾದ ಕಾರ್ಯಕ್ರಮ
5. ಶಿಕ್ಷಣ ಜಾಗೃತಿಗಾಗಿ ಬೀದಿ ನಾಟಕಗಳು
6. ಮಕ್ಕಳ ಹಕ್ಕುಗಳ ಬಗ್ಗೆ ಸಮುದಾಯ ಜಾಗೃತಿ– ಮಕ್ಕಳ ಮಾಸೋತ್ಸವ
7. ಶಿಕ್ಷಕರು ಮತ್ತು ಶೈಕ್ಷಣಿಕ ಸವಾಲುಗಳು–ಶಿಕ್ಷಕ ಶಿಕ್ಷಣ ಸಪ್ತಾಹ
8. ಶೈಕ್ಷಣಿಕ ಸಮೀಕ್ಷೆಗಳು, ಅಂಕಿ ಅಂಶಗಳ ಸಂಗ್ರಹ (ಅಸರ್ ಸಮೀಕ್ಷೆ)
9. ಹೆಣ್ಣು ಮಕ್ಕಳ ಶಿಕ್ಷಣ ಜಾಗೃತಿ ಜಾಥಾ
10. ಮಗುಸ್ನೇಹಿ ಶಾಲಾ ಅನುಷ್ಠಾನಕ್ಕಾಗಿ ಶಿಕ್ಷಣ ಇಲಾಖೆಯೊಂದಿಗೆ ಸಂವಾದ ಮತ್ತು ಸಹಭಾಗಿತ್ವ ಕಾರ್ಯಕ್ರಮಗಳು
11. ಮಕ್ಕಳ ಹಕ್ಕುಗಳ ವಿಶೇಷ ಗ್ರಾಮ ಸಭೆ ಅನುಷ್ಠಾನ ಕುರಿತು ಮಾಹಿತಿ
12. ಶಿಕ್ಷಣ ಹಕ್ಕು ಕಾಯಿದೆಯ ನಿಯಮಾವಳಿ ಜಾರಿಗಾಗಿ ಸರಕಾರಕ್ಕೆ ಹಕ್ಕೊತ್ತಾಯ
13. ವಿಧಾನ ಸಭಾ ಮತ್ತು ಲೋಕಸಭಾ ಚುನಾವಣಾ ಸಂದರ್ಭಗಳಲ್ಲಿ ವಿವಿಧ ರಾಜಕೀಯ ಪಕ್ಷದ ಪ್ರತಿನಿಧಿಗಳೊಂದಿಗೆ ಶೈಕ್ಷಣಿಕ ಮತ್ತು ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದ ವಿಚಾರಗಳನ್ನು ತಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ಸೇರಿಸಿಕೊಳ್ಳುವಂತೆ ಮನವಿ.
14. ಶಾಲಾ ಶಿಕ್ಷಣದಲ್ಲಿ ಸಮನ್ವಯತೆಗಾಗಿ ಸರಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಹಾಗೂ ಎಸ್.ಡಿ.ಎಂ.ಸಿ. ಸಮನ್ವಯ ಸಮಿತಿ ರಚನೆ ಮತ್ತು ಕಾರ್ಯಕ್ರಮಗಳಿಗೆ ಸಹಕಾರ.
15. ಉತ್ತಮ ಎಸ್.ಡಿ.ಎಂ.ಸಿ. ಸ್ವಸಹಾಯ ಸಂಘಗಳು ಮತ್ತು ಶಿಕ್ಷಣ, ಮಗು ಸ್ನೇಹಿ ಶಿಕ್ಷಕರು ಮತ್ತು ಶಾಲೆ, ಶಾಲೆಯಲ್ಲಿ ಲಿಂಗ ಸಮಾನತೆ ಮೊದಲಾದ ವಿಷಯಗಳಲ್ಲಿ ಪರಿಶೀಲನಾ ಪಟ್ಟಿಯನ್ನು ಮುದ್ರಿಸಿ ಸಮುದಾಯದ ವಿವಿಧ ವ್ಯವಸ್ಥೆಗಳಿಗೆ ತಲುಪಿಸುವ ಪ್ರಯತ್ನ.
16. "ವಿಧಾನ ಸೌಧ'ದಲ್ಲಿ ಮಕ್ಕಳು"– ಮುಖ್ಯಮಂತ್ರಿಗಳೊಂದಿಗೆ ಮಕ್ಕಳ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಿಕೆ.

ಈ ಮೇಲಿನ ಕಾರ್ಯಕ್ರಮಗಳ ಮೂಲಕ ಎಲ್ಲಾ ಸ್ತರಗಳಲ್ಲಿ ಗುಣಮಟ್ಟದ ಶಿಕ್ಷಣಕ್ಕಾಗಿ ಸಮುದಾಯದಲ್ಲಿ ಜಾಗೃತಿ ಮೂಡಿಸುತ್ತಾ ಶಿಕ್ಷಕರ, ಮಕ್ಕಳ, ಸಮುದಾಯ ಹಾಗೂ ಜನಪ್ರತಿನಿಧಿಗಳನ್ನು ಜಾಗೃತಿಗೊಳಿಸುವ ಪ್ರಯತ್ನ ನಡೆಸುತ್ತಲೇ ಇದೆ. ಈ ಸಂಸ್ಥೆಯ ಕಾರ್ಯಚಟುವಟಿಕೆಗಳು ಇನ್ನಷ್ಟು ಜನರನ್ನು ತಲುಪಿ ಸಮಾಜದ ಕಟ್ಟಕಡೆಯ ಪ್ರತಿಯೊಂದು ಮಗುವಿಗೂ ಗುಣಮಟ್ಟದ ಶಿಕ್ಷಣ ಸಿಗುವಂತೆ ಮಾಡುವತ್ತ ಸಾಗಬೇಕಾಗಿದೆ. ಅಲ್ಲದೆ ಸಮುದಾಯದ ಎಲ್ಲಾ ವರ್ಗದ ಜನರ ಕೂಡುವಿಕೆಯಲ್ಲಿ ಗುಣಮಟ್ಟದ ಶಿಕ್ಷಣದ ಹೊಸ ಚರ್ಚೆಗಳು ನಡೆಯಬೇಕಾಗಿದೆ. ಒಟ್ಟು ಸಮುದಾಯವನ್ನು ಸಶಕ್ತಗೊಳಿಸುತ್ತ ತಮ್ಮ ಮಕ್ಕಳ ಉತ್ತಮ ಬದುಕಿನ ಸರಿ ದಾರಿಯತ್ತ ಸಾಗಬೇಕಾಗಿದ್ದು ಅದು ಶಿಕ್ಷಣದಿಂದ ಮಾತ್ರ ಸಾಧ್ಯ ಎನ್ನುವ ದೂರದೃಷ್ಟಿಯುಳ್ಳ ಚಿಂತನೆಯಲ್ಲಿ, ವೆಲೊರೆಡ್ ಪರಿಕಲ್ಪನೆಯಲ್ಲಿ ಮುನ್ನಡೆಯುತ್ತಿರುವ ಈ ಸಮುದಾಯಾಧಾರಿತ ಶೈಕ್ಷಣಿಕ ಸಂಸ್ಥೆಗೆ ಪ್ರತಿಯೊಬ್ಬ ನಾಗರೀಕರ ಬೆಂಬಲ, ಸಹಕಾರ ಅತೀ ಅಗತ್ಯವಾಗಿದೆ.

**–ಕಸ್ತೂರಿ ಬೊಳುವಾರು**

ತರಬೇತಿ ಸಂಯೋಜಕಿ, ಪಡಿ ಮಂಗಳೂರು

***

# ಶಿಕ್ಷಣ ಸಂಪನ್ಮೂಲ ಕೇಂದ್ರಕ್ಕೆ ಆಡಳಿತಾತ್ಮಕ ಸ್ವರೂಪ
## -ಶ್ರೀ ಬಿ.ಎಂ. ಕೃಷ್ಣಪ್ಪರವರ ಕೊಡುಗೆ

ದಿವಂಗತ ಶ್ರೀ ಬಿ.ಎಂ. ಕೃಷ್ಣಪ್ಪನವರದು ಮರೆಯಲಾಗದ ವ್ಯಕ್ತಿತ್ವ. ಸುಮಾರು ಒಂದು ದಶಕದಿಂದ ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ವೆಲೊರೆಡ್ (VALORED) (ಮೌಲ್ಯಾಧಾರಿತ ಶಿಕ್ಷಣ)ನ ಪರಿಕಲ್ಪನೆಯಲ್ಲಿ ಸಮುದಾಯಾಧಾರಿತ ಸಂಸ್ಥೆಯಾಗಿ ಕಟ್ಟಿ ಬೆಳೆಸುವುದಕ್ಕೆ ಶ್ರಮಿಸಿದವರು. ಈ ಸಂಸ್ಥೆಯು ಶೈಕ್ಷಣಿಕ ಬದಲಾವಣೆ ಮತ್ತು ಹೊಸ ಚಿಂತನೆಯನ್ನು ಮೂಡಿಸುತ್ತಿರುವ ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟ (ರಿ.) ಇದರ ಸಾಂಸ್ಥಿಕ ಅಡಿಪಾಯವನ್ನು ರೂಪುಗೊಳಿಸಿದವರು ದಿ। ಬಿ. ಎಂ. ಕೃಷ್ಣಪ್ಪನವರು.

ಶ್ರೀ ಬಿ. ಎಂ. ಕೃಷ್ಣಪ್ಪರವರು ಕೇರಳ ರಾಜ್ಯದಲ್ಲಿ ಶಿಕ್ಷಕರಾಗಿ ಕಾರ್ಯನಿರ್ವಹಿಸಿದ್ದು, ನಂತರದಲ್ಲಿ ಕರ್ನಾಟಕ ರಾಜ್ಯದಲ್ಲಿ ಶಿಕ್ಷಣ ಇಲಾಖೆಯಲ್ಲಿ ಹಲವು ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸಿರುತ್ತಾರೆ. ಅಲ್ಲದೆ ದ.ಕ. ಜಿಲ್ಲಾ ಪಂಚಾಯತ್‌ನ ಉಪಾಧ್ಯಕ್ಷರ ಆಪ್ತ ಸಹಾಯಕರಾಗಿ ಸೇವೆ ಸಲ್ಲಿಸಿ, ಸ್ವಇಚ್ಛೆಯಿಂದ ನಿವೃತ್ತಿ ಪಡೆದವರು. ತಾನು ತನ್ನ ಸೇವಾವಧಿಯಲ್ಲಿ, ಆರ್ಥಿಕ ಸಂಹಿತೆ ಹಾಗೂ ಇತರ ನಿಯಮಾವಳಿಗಳನ್ನು ಮತ್ತು ಆಗಿಂದಾಗ್ಗೆ ಸರಕಾರದಿಂದ ಜಾರಿಯಾಗುತ್ತಿರುವ ಸರಕಾರಿ ಆದೇಶಗಳನ್ನು ಆಳವಾಗಿ ಅಭ್ಯಸಿಸಿ ಇಲಾಖಾ ಪರೀಕ್ಷೆಗಳಿಗಾಗಿ ತರಬೇತಿಗಳನ್ನು ನಡೆಸುತ್ತಾ ಬಂದಿರುವವರು. ತನ್ನ ನಿವೃತ್ತಿ ಬಳಿಕ ಸಮಾಜ ಸೇವಕಿ ಹಾಗೂ ವೆಲೊರೆಡ್‌ನ ಸಿಬ್ಬಂದಿ ವೀಣಾಧರಿಯವರ ಆತ್ಮೀಯ ಕೋರಿಕೆಯಂತೆ ಹಾಗೂ ವೆಲೊರೆಡ್‌ನ ನಿರ್ದೇಶಕ ರೆನ್ನಿ ಡಿ'ಸೋಜಾರವರ ಪ್ರೋತ್ಸಾಹದಿಂದ ಆಗಿನ್ನೂ ಅಂದರೆ ಸುಮಾರು 20 ವರ್ಷಗಳ ಹಿಂದೆ ಪ್ರಾರಂಭವಾಗಿದ್ದ ಮಂಗಳೂರು ತಾಲೂಕು ಶಿಕ್ಷಣ ಸಂಪನ್ಮೂಲ ಕೇಂದ್ರದಲ್ಲಿ ಸದಸ್ಯರಾಗಿ ಸೇರಿ ಕೊಂಡವರು. ವೆಲೊರೆಡ್ ಯೋಜನೆಯ ಪ್ರಾರಂಭಿಕ ಹಂತದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಕಲಿಕಾ ಅನುಭವಗಳ ಹಂಚಿಕೆಯ ವೇದಿಕೆಯಾಗಿ ಬೆಳೆದ ಮಂಗಳೂರು ತಾಲೂಕು ಪ್ರಾಥಮಿಕ ಶಾಲಾ ಆಸಕ್ತ ಶಿಕ್ಷಕರ ಜಾಲ ಕ್ರಮೇಣ ಸಮುದಾಯದ ಎಲ್ಲಾ ವರ್ಗಗಳ ಜನರ ಭಾಗವಹಿಸುವಿಕೆಯ ಶಿಕ್ಷಣ ಸಂಪನ್ಮೂಲ ಕೇಂದ್ರವಾಗಿ ಮಂಗಳೂರು ತಾಲೂಕಿನಲ್ಲಿ ಮೊದಲ ಬಾರಿಗೆ ರೂಪುಗೊಂಡಿತು. ವೆಲೊರೆಡ್‌ನ ಇಂತಹ ಪರಿಕಲ್ಪನೆಯಲ್ಲಿ ತೊಡಗಿಕೊಂಡ ಹಲವಾರು ಶಿಕ್ಷಕರ ಕೂಟದಲ್ಲಿ ಜೊತೆಯಾದವರು ಬಿ. ಎಂ. ಕೃಷ್ಣಪ್ಪನವರು. ಈ ಸಂದರ್ಭದಲ್ಲಿ ಶಿಕ್ಷಣದ ಗುಣಮಟ್ಟದ ಸುಧಾರಣೆಯಲ್ಲಿ ಸರಕಾರದ ಆಡಳಿತ ವ್ಯವಸ್ಥೆ ಮತ್ತು ಶಿಕ್ಷಣ ಇಲಾಖೆಯೊಂದಿಗೆ ಸಾರ್ವಜನಿಕ ಕ್ಷೇತ್ರವೂ ಜೊತೆಗೂಡಬೇಕಾಗಿದೆ. ಸಂವಿಧಾನದ ಆಶಯಗಳನ್ನು ಜನಸಾಮಾನ್ಯರಲ್ಲಿ ಹಾಗೂ ಸಮುದಾಯದ ವಿವಿಧ ವರ್ಗದ ಜನರಲ್ಲಿ ಮೂಡಿಸಬೇಕಾಗಿದೆ ಎನ್ನುವ ಚರ್ಚೆಗಳು ಆಗ ಪ್ರಾರಂಭವಾದವು.

ಈ ಚಿಂತನೆ ದ.ಕ. ಜಿಲ್ಲೆಯ ಐದು ತಾಲೂಕುಗಳಿಗೆ ವಿಸ್ತರಿಸುತ್ತಿರುವಾಗ ಹೊಸದೊಂದು ಆಲೋಚನೆ ಹುಟ್ಟಿಕೊಂಡದ್ದು ಏನೆಂದರೆ ಯಾಕೆ ಈ ವೇದಿಕೆಯನ್ನು ಕಾನೂನು ಚೌಕಟ್ಟಿನಲ್ಲಿ ಹಾಗೂ ವೆಲೊರೆಡ್ ಪರಿಕಲ್ಪನೆಯಲ್ಲಿ ಸಮುದಾಯದ ಮಾಲಕತ್ವದಲ್ಲಿ ಮುನ್ನಡೆಸಬಾರದು ಎಂದು. ಈ ಆಲೋಚನೆಗೆ ಒಂದು ನಿರ್ದಿಷ್ಟ ರೂಪ ಕೊಟ್ಟವರು ದಿ। ಶ್ರೀ. ಬಿ. ಎಂ. ಕೃಷ್ಣಪ್ಪನವರು. ಪ್ರಸ್ತುತ ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟ (ರಿ.) ದ.ಕ. ಹಾಗೂ ಉಡುಪಿ ಜಿಲ್ಲಾ ಶಿಕ್ಷಣ ಸಂಪನ್ಮೂಲ ಕೇಂದ್ರ ಈ ಎರಡು ಸಂಸ್ಥೆಗಳು ನೋಂದಾಯಿತ ಶೈಕ್ಷಣಿಕ ಸಂಸ್ಥೆಯಾಗಿ ದ.ಕ. ಜಿಲ್ಲೆಯ ಐದು ತಾಲೂಕು ಹಾಗು ಉಡುಪಿ ಜಿಲ್ಲೆಯ ಮೂರು ತಾಲೂಕುಗಳಲ್ಲಿ ಕಾರ್ಯಾಚರಿಸುತ್ತಿದೆ. ಈ ಸಂಸ್ಥೆಯನ್ನು ಸರಕಾರಿ ನಿಯಮದಂತೆ ನೋಂದಾವಣೆಗೊಳಿಸಲು ಸುಮಾರು 2006-07ರ ಸಾಲಿನಿಂದ ಹಿಡಿದು 2007-08ರ ವರೆಗೆ ಸುಮಾರು ಎರಡು ವರ್ಷಗಳ ಕಾಲ ಬೈಲಾ ಸಿದ್ಧಪಡಿಸಲು ಅವಿರತ ಶ್ರಮ ವಹಿಸಿದವರು ಶ್ರೀ ಬಿ. ಎಂ. ಕೃಷ್ಣಪ್ಪನವರು. ಈ ಶ್ರಮದ ಫಲವಾಗಿ ಇಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೈಕ್ಷಣಿಕ ಜಾಗೃತಿ ಮತ್ತು ಗುಣಮಟ್ಟದ ಶಿಕ್ಷಣಕ್ಕಾಗಿ ಕಾರ್ಯಾಚರಿಸುತ್ತಿರುವ ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟವು ಒಂಭತ್ತು ವರ್ಷಗಳನ್ನು ಪೂರೈಸಿ ಹತ್ತನೇ ವರ್ಷಕ್ಕೆ ಸಾಗುತ್ತಿದೆ. ಸಂವಿಧಾನದ ಮೂಲ ತತ್ವ ಹಾಗೂ ಆಶಯಗಳಡಿಯಲ್ಲಿ ಸಮುದಾಯಾಧಾರಿತ ಶೈಕ್ಷಣಿಕ ಸಂಸ್ಥೆಯಾಗಿ ಕಾರ್ಯಾಚರಿಸುತ್ತಿದೆ. ಈ ಪ್ರಗತಿ ಪರ ಚಿಂತನೆಯಲ್ಲಿ ತೊಡಗಿಸಿಕೊಂಡ ದಿವ್ಯ ಚೇತನಕ್ಕೆ ನಮ್ಮ ನುಡಿ ನಮನಗಳು.

**ಜಾಯ್ಸ್ ವಾಟ್ಸನ್,** ಪಡಿ ವೃಂದದ ಪರವಾಗಿ



# ಛಲಗಾತಿ ವೀಣಾಧರಿ

## ಸಾವಿರದ ಕೊನೆಯಲ್ಲಿ, ಸಾವಿರದ ಕ್ಷಣಗಳನ್ನು ನಾವು ಸ್ಮರಿಸಬೇಕು, ಸಾವಿರದ ಕಾಲಕ್ಕೂ ನೋವಿರದ ದಿನಗಳನ್ನು ನಾವು ಬಯಸಬೇಕು...



✍ **ಪ್ರಮೀಳಾ ಜೆ. ವಾಜ್**
ಎಮ್.ಎಸ್.ಡಬ್ಲ್ಯು, ಎಂ.ಫಿಲ್.

ಸಹಸ್ರಮಾನದ ಆರಂಭದ ಸಂದರ್ಭದಲ್ಲಿ ನನ್ನ ಆತ್ಮೀಯ ಸ್ನೇಹಿತೆ "ವೀಣಾಧರಿ" ಕಳಿಸಿದ ಸಂದೇಶವಿದು. ಅಯ್ಯೋ ಭಯಾನಕ ಏಡ್ಸ್ ಎಂಬ ಸಾವಿನ ದವಡೆಯಲ್ಲಿದ್ದು ಈ ಸಂದೇಶ ಕಳುಹಿಸುತ್ತಿದ್ದಾರಲ್ಲಾ ಅಂತ ಮರುಕ ಪಟ್ಟಿದ್ದೆ ನಾನು. ಎಚ್.ಐ.ವಿ ಎಂದರೆ ಏಡ್ಸ್. ಏಡ್ಸ್ ಎಂದರೆ ಸಾವು ಎಂಬ ತಪ್ಪು ಕಲ್ಪನೆಯ ಕಾಲಘಟ್ಟವದು. ಎಚ್.ಐ.ವಿ ಪಾಸಿಟಿವ್ ಆಗಿರುವುದು ಕರ್ಮದ ಅಥವಾ ಪಾಪದ ಫಲವೆಂದು ನಂಬಿ ಸೋಂಕಿತರೊಂದಿಗೆ ಬದುಕುವುದೆಂದರೆ ಸಾವಿಗೆ ಆಹ್ವಾನ ನೀಡಿದಂತೆ ಎಂದೇ ಸಮಾಜ ಗ್ರಹಿಸಿದ್ದ ಆ ದಿನಗಳಲ್ಲಿ " ನಾನೊಬ್ಬ ಪಾಸಿಟಿವ್" ಎಂದು ಅಚಲ ಸ್ಥೈರ್ಯದಿಂದ ಎದ್ದು ನಿಂತ ದಿಟ್ಟ ಮಹಿಳೆ ವೀಣಾಧರಿ ನೇಪಥ್ಯಕ್ಕೆ ಸರಿದು ಇಂದಿಗೆ ಹತ್ತು ವರ್ಷಗಳಾದವು. ನವೆಂಬರ್ 2 2007, ವೀಣಾಧರಿ ಕಾಲನ ಕರೆಗೆ ಓಗೊಡುವ ಅನಿವಾರ್ಯತೆಗೆ ಬಿದ್ದರು, ಹೊರಟೇ ಬಿಟ್ಟರು.

ವೀಣಾ ಈಗ ಬರೀ ನೆನಪು... ವೀಣಾಧರಿಯ ಸಹೋದ್ಯೋಗಿಯಾಗಿದ್ದ ನನಗೆ ಒಂದು ದಿನ ರಕ್ತ ತಪಾಸಣೆಯ ವರದಿ ತೋರಿಸುತ್ತಾ, ತುಂಬಿದ ಕಣ್ಣುಗಳಿಂದ "ನನಗೆ ಏಡ್ಸ್ ಅಂತೆ", ಇನ್ನು ನಾನು ಹೆಚ್ಚು ದಿನ ಬದುಕಲ್ಲ, ಎಂದು ಮೊದಲ ಬಾರಿಗೆ ಗುಟ್ಟಿನಲ್ಲಿ ವೀಣಾ ಹೇಳಿದಾಗ ಮರಕಟ್ಟಿ ಹೋಗಿದ್ದೆವು. ಆದರೆ ಮರು ಕ್ಷಣವೆ ನಮಗನ್ನಿಸಿದ್ದು ನಮಗೆ 'ವೀಣಾ' ಮುಖ್ಯ. ಆಕೆಯ ಕಾಯಿಲೆ ಅಲ್ಲ ಅಂತ. ಆಶ್ಚರ್ಯವೆಂದರೆ ವೀಣಾ ಕುಗ್ಗಿ ಕುಸಿಯಲಿಲ್ಲ. ಎಂದಿನ ಕ್ರಿಯಾತ್ಮಕ ಚಿಂತನೆಗಳೊಂದಿಗೆ ಎದ್ದು ನಿಂತ ವೀಣಾಧರಿ, ಬಂದದ್ದನ್ನು ಬಂದಂತೆ ಸ್ವೀಕರಿಸಿದ ರೀತಿ ಎಲ್ಲರಿಗೂ ಮಾದರಿ. ಕಂಪ್ಯೂಟರ್ ಇಂಟರ್‌ನೆಟ್‌ಗಳ ಬಗ್ಗೆ ಇದ್ದ ಕನಿಷ್ಠ ಜ್ಞಾನವನ್ನೇ ಬಂಡವಾಳವಾಗಿಸಿ, 'ಏಡ್ಸ್' ಗೆ ಸವಾಲೆಸೆದವರು ವೀಣಾ. ವಿಸ್ತೃತ ಕುಟುಂಬದ ಸಹಕಾರ ಅವರಿಗೆ ಬಲ ನೀಡಿತ್ತು. ಆಯುರ್ವೇದ, ಯುನಾನಿ, ಹೋಮಿಯೋಪತಿಯ ಅಧ್ಯಯನಕ್ಕೆ ಇಳಿದ ವೀಣಾ ಹೊಸ ಕಲಿಕೆಗಳನ್ನು ಸ್ವಂತ ತಾನು ಅನುಸರಿಸಿ, ಫಲಿತಾಂಶ ಕಂಡ ಮೇಲೆ ಅದನ್ನು ತನ್ನ ಸಹಚರಿಗಳಿಗೆ ತಿಳಿಸುತ್ತಿದ್ದರು. ಒಬ್ಬ ಸರಳ ಸಾಮಾನ್ಯ ವ್ಯಕ್ತಿಯಾಗಿ ಸಾಂಪ್ರದಾಯಿಕ, "ಪತ್ನಿ" ಹಾಗೂ ತಾಯಿಯ ಪಾತ್ರದಿಂದ ಏಕಾಏಕಿ ಸಾಮಾಜಿಕ ವ್ಯಕ್ತಿಯಾಗಿ ರೂಪುಗೊಂಡದ್ದು ಮಾತ್ರ ಅನುಕರಣೀಯ. ಅಲೋವೆರಾ (ಲೋಳೇಸರ), ಬೆಳ್ಳುಳ್ಳಿಗಳಲ್ಲಿನ ರೋಗ ನಿರೋಧಕ ಶಕ್ತಿಯ ಬಗ್ಗೆ ಅಂತರ್ಜಾಲ ಜಾಲಾಡಿ ಕಂಡುಕೊಂಡ ವೀಣಾಧರಿ ತನ್ನ ಹೊಸ ಜ್ಞಾನವನ್ನು ಸಮಾನ ಮನಸ್ಕರಲ್ಲಿ ಹಂಚಿಕೊಳ್ಳುತ್ತಿದ್ದರು.

ವೀಣಾಧರಿ ತನ್ನ ಆರೋಗ್ಯ ಸ್ಥಿತಿ ಸಹಜಗೊಳಿಸಲು ಮಾಡುತ್ತಿದ್ದ ಪ್ರಯತ್ನಗಳಿಗೆ ಎಲ್ಲರ ಸಹಕಾರವಿತ್ತು. ಆದರೆ ಏಡ್ಸ್ (Acquired Immune Deficiency)ನ ಪರಿಕಲ್ಪನೆ ಬಗ್ಗೆ ತಿಳಿದುಕೊಳ್ಳಲು ಆಕೆ ತಜ್ಞ ವ್ಯಕ್ತಿಗಳೊಂದಿಗೆ ನಿರಂತರ ಚರ್ಚಿಸಿ ಎಚ್.ಐ.ವಿ (Human Immuno Virus) ಎಂದರೆ ಮನುಷ್ಯರು ಪಡೆದುಕೊಳ್ಳುವ ವೈರಸ್, ರೋಗಾಣು. ಇದು ರಕ್ತಕಣದೊಳಗೆ ಸೇರಿಕೊಂಡು ಬಿಳಿರಕ್ತ ಕಣಗಳನ್ನು ಸಂಪೂರ್ಣವಾಗಿ ನಾಶಗೊಳಿಸುತ್ತದೆ. ಬಿಳಿರಕ್ತ ಕಣದ ಮೇಲೆ ಆಗುವ ಈ ದಾಳಿಯಿಂದಾಗಿ ದೇಹ ತನ್ನ ರೋಗ ನಿರೋಧಕ ಶಕ್ತಿಯನ್ನು ಸಂಪೂರ್ಣವಾಗಿ ಕಳೆದುಕೊಂಡಾಗ ಅವಕಾಶವಾದಿ ರೋಗಾಣುಗಳು ಸುಲಭವಾಗಿ ದೇಹ ಪ್ರವೇಶ ಮಾಡಿ ಸ್ವಾಸ್ಥ್ಯ ಕೆಡಿಸಿ ಇನ್ನು ಯಾವ ಚಿಕಿತ್ಸೆಗೂ

ಸಿಗಲಾರದಷ್ಟು ಆಳಕ್ಕೆ ಹೋಗುತ್ತದೆ. ದೇಹದ ಈ ಸ್ಥಿತಿಗೆ 'ಏಡ್ಸ್' ಸ್ಥಿತಿ ಎನ್ನುತ್ತಾರೆ ಎಂಬ ವಿವರಣೆಯನ್ನು ಸುಲಭ ಸರಳವಾಗಿ ಸಾಮಾನ್ಯ ವ್ಯಕ್ತಿಗಳಿಗೂ ಅರ್ಥವಾಗುವ ರೀತಿಯಲ್ಲಿ ತಿಳಿಸುತ್ತಿದ್ದ ವೀಣಾ ಎಚ್.ಐ.ವಿ ಪಾಸಿಟಿವ್ ಹೇಗಾದೆ? ಯಾರು ಕಾರಣರು? ಎನ್ನುವ ಕುರಿತು ಹೆಚ್ಚು ತಲೆಕೆಡಿಸಿಕೊಳ್ಳಲಿಲ್ಲ, ಬದಲಿಗೆ ಅಧ್ಯಯನಗಳನ್ನು ಕೈಗೊಂಡು ವಿವಿಧ ವ್ಯಕ್ತಿ ಹಾಗೂ ಸಂಘಟನೆಗಳ ಸಹಯೋಗ ಪಡೆದು ವಿಶೇಷ ಆರೋಗ್ಯ ಶಿಬಿರಗಳನ್ನು ನಡೆಸಿ ಸರಳ ಚಿಕಿತ್ಸಾ ವಿಧಾನಗಳನ್ನು ಎಚ್.ಐ.ವಿಯೊಂದಿಗೆ ಬದುಕುವ ಜನರಿಗೆ ಪರಿಚಯಿಸುತ್ತಿದ್ದ ರೀತಿ ಮಾತ್ರ ಮರೆಯಲಾರದ್ದು. ಕುಂದಾಪುರದ "ಜನಪ್ರತಿನಿಧಿ" ವಾರಪತ್ರಿಕೆ ಮೊದಲ ಬಾರಿಗೆ ವೀಣಾಧರಿಯನ್ನು ಸಮಾಜಕ್ಕೆ ಪರಿಚಯ ಮಾಡಿಸಿತು. ವೆಲೊರೆಡ್ ಮಂಗಳೂರು, ಗಜನಿ ಫೌಂಡೇಶನ್ ಚಿತ್ರಾಪು ಮುಲ್ಕಿ, ಸ್ಫೂರ್ತಿ ಗ್ರಾ.ಅ. ಮತ್ತು ತ. ಸಂ. ಕೋಟೇಶ್ವರದಂತಹ ಸಮಾನ ಮನಸ್ಕ ಸಂಘಟನೆಗಳ ಸಹಯೋಗದಲ್ಲಿ ಆಯೋಜಿಸಿದರು. ಜನರನ್ನು ಅಸತ್ಯದಿಂದ ಸತ್ಯದ ಕಡೆಗೆ, ಭಯದಿಂದ ಆತ್ಮಸ್ಥೈರ್ಯದೆಡೆಗೆ, ಆತಂಕದಿಂದ ವಿಶ್ವಾಸದ ಬದುಕಿನೆಡೆಗೆ ಕೈಹಿಡಿದು ನಡೆಸಿದರು ವೀಣಾಧರಿ. ಯಾರನ್ನೂ ಅವಲಂಬಿಸದೆ ಯಾರ ಹಿಂದೆ ನಡೆಯದೆ ತನ್ನದೇ ಆದ ದಾರಿ ಕಂಡು ಹಿಡಿದರು, ಇತರ ನೊಂದವರನ್ನು ತನ್ನ ಜೊತೆಗೆ ಮುನ್ನಡೆಸಿದರು. ವೀಣಾಧರಿಯ ಕಾಳಜಿಯನ್ನು ಸಮಾಜಕ್ಕೆ ಆಳವಾಗಿ ಪರಿಚಯಿಸಿದ ಕೀರ್ತಿ ಭಾವನಾ ಬೆಳಗೆರೆಯವರಿಗೆ ಸಲ್ಲುತ್ತದೆ.

ತಾನು ಎಚ್.ಐ.ವಿ ಬಾಧಿತೆ ಎಂದು ಗೊತ್ತಾದ ದಿನದಿಂದ ವೀಣಾ ವಿರಮಿಸಲಿಲ್ಲ. ಹುಟ್ಟು ಸಾಯುವುದಕ್ಕಲ್ಲ ಸಾಧಿಸುವುದಕ್ಕೆ ಎಂಬ ನುಡಿಯಂತೆ ಆಕೆ ದೇಶ ವಿದೇಶಗಳಲ್ಲಿ ಸಂಚರಿಸಿ ಜ್ಞಾನದ ವಿಸ್ತಾರ ಹಾಗೂ ಆಳಕ್ಕೆ ಇಳಿದು ಅಸಾಮಾನ್ಯರೆನಿಸಿಕೊಂಡರು.

ತಾನು ವಾಸವಾಗಿದ್ದ ಚಿಕ್ಕ ಮನೆಯೆದುರು ಕೈತೋಟವೊಂದನ್ನು ಮಾಡಿ ನೂರಾರು ಔಷಧೀಯ ಗಿಡಗಳನ್ನು, ಬಳ್ಳಿಗಳನ್ನು ಬೆಳೆದರು. ಅದರ ಉಪಯೋಗ ಹಾಗೂ ಬಳಸುವ ವಿಧಾನವನ್ನು ಪಸರಿಸಿದರು. ಗಿಡಮೂಲಿಕೆಗಳ ಅದಮ್ಯ ಜ್ಞಾನ ತನ್ನದಾಗಿಸಿಕೊಂಡರು. ಸಮಾಜದ ಟೀಕೆ ಟಿಪ್ಪಣಿಗಳಿಗೆ ಯಾವತ್ತೂ ಬೆಲೆಕೊಡಲಿಲ್ಲ. ಬದಲಿಗೆ ಸ್ವ-ಮೌಲ್ಯಮಾಪನಕ್ಕೆ ಅದನ್ನು ಮೀಸಲಿಟ್ಟರು. "ವೀಣಾಧರಿ" ಬದುಕು ಹೂವಿನ ಹಾಸಿಗೆ ಆಗಿರಲಿಲ್ಲ ಎಚ್.ಐ.ವಿ ಯೊಂದಿಗೆ ಬದುಕುತ್ತಿದ್ದ ದಿನಗಳಂತೂ ಕಲ್ಲು ಮುಳ್ಳುಗಳಿಂದಲೇ ತುಂಬಿತ್ತು. ಪ್ರತಿರೋಧಗಳ ನಡುವೆಯೇ ಅಲೋಪತಿ ಔಷಧಿ ವಿಧಾನದ ನ್ಯೂನತೆಗಳನ್ನು ತಿಳಿದುಕೊಂಡರು, ಎಚ್.ಐ.ವಿಯೊಂದಿಗೆ ಬದುಕುವವರ ನೋವು ನಲಿವುಗಳಲ್ಲಿ ಭಾಗಿಯಾದರು. ರೋಗಕ್ಕೆ ಚಿಕಿತ್ಸೆ ಎಂಬ ದಾರಿಗಿಂತ ಭಿನ್ನವಾಗಿ ಒಟ್ಟು ಆರೋಗ್ಯ ವೃದ್ಧಿಯಿಂದ ಹೇಗೆ ಎಚ್.ಐ.ವಿಯಂತಹಾ ಸೋಂಕನ್ನು ಮೆಟ್ಟಿ ನಿಲ್ಲಬಹುದು ಎಂಬ ನಿಖರ ಮಾಹಿತಿಯನ್ನು ಮಾಧ್ಯಮಗಳ ಮೂಲಕ ಬಿತ್ತರಿಸಿದರು. ಏಡ್ಸ್ ತಡೆಗಟ್ಟಲು ಮತ್ತು ನಿಯಂತ್ರಿಸಲು ಸ್ಥಾಪಿತವಾದ ಪ್ರಾಧಿಕಾರಗಳ ವಿಧಾನಗಳು ಜನ ಸ್ನೇಹಿಯಲ್ಲದ, ಸರಕಾರಿ ವ್ಯವಸ್ಥೆ ನೀಡುವ ಎ.ಆರ್.ಟಿಯಂತಹಾ ಔಷಧಿಗಳು ಸರಿಯಾದ ವಿಧಾನದಲ್ಲಿ ತೆಗೆದುಕೊಳ್ಳದಿದ್ದರೆ ಅದು ಉಂಟು ಮಾಡುವ ದುಷ್ಪರಿಣಾಮಗಳ ಬಗ್ಗೆ ವೀಣಾಧರಿಗೆ ಅಪಾರ ಕಾಳಜಿ ಇತ್ತು.

ಮಾನವ ಹಕ್ಕುಗಳ ಹಿನ್ನೆಲೆಯಲ್ಲಿ ಸಾಗುವ ವೀಣಾಧರಿಯವರ ಚಿಂತನೆ "ಏಡ್ಸ್"ನ ಹೆಸರಿನಲ್ಲಿ ವ್ಯಾಪಾರ ಹೆಚ್ಚಿಸಿಕೊಂಡ ಔಷಧ ಕಂಪನಿಗಳಿಗೆ ಮುಳುವಾಯ್ತು. ಅವರ ಕೆಂಗಣ್ಣು ಎದುರಿಸಬೇಕಾಯ್ತು ವೀಣಾಧರಿ. ಯಾವ ಕಾಯಿಲೆಗೂ ಇಲ್ಲದ ಕುಣಿಕೆಯ ಚಿಹ್ನೆಯನ್ನು ಏಡ್ಸ್‌ಗೆ ಕೊಟ್ಟಾಗ ಸಿಡಿದೆದ್ದ ವೀಣಾ ಸಾರಾ ಸಗಟಾಗಿ ಅದನ್ನು ವಿರೋಧಿಸಿದರು. ಸವಾಲುಗಳ ಮೇಲೆ ಸವಾಲುಗಳನ್ನು ಎದುರಿಸಬೇಕಾದಾಗಲೂ ಎದೆಗುಂದಲಿಲ್ಲ ವೀಣಾಧರಿ. ಮಾಡಿದ್ದು ಬಹಳ ಕಡಿಮೆ ಮಾಡೋದು ಬಹಳಷ್ಟು ಇದೆ ಎನ್ನುತ್ತಾ ಎಚ್.ಐ.ವಿಯೊಂದಿಗೆ ಬದುಕುವ ಯುವಕರು, ಮಕ್ಕಳು ಹಾಗೂ ಮಹಿಳೆಯರ ಆಶಾದೀಪ ಕೊನೆಗೂ ಸೋಲೊಪ್ಪಿತು. ಆದರೆ ಆ ದಿವ್ಯಾತ್ಮ ಹಚ್ಚಿದ ಆತ್ಮವಿಶ್ವಾಸದ ಹಣತೆ ಇನ್ನೂ ನಂದಾದೀಪವಾಗಿ ವಂಚಿತರ ಕತ್ತಲೆಗೆ ಬೆಳಕಾಗಿದೆ. ವೀಣಾಧರಿಯ ಚಿಂತನೆಗಳನ್ನು ನೆನಪಿಸುತ್ತಾ ಅದನ್ನು ಮುಂದುವರಿಸಿಕೊಂಡು ಹೋಗುತ್ತಿರುವ ಬೆರಳೆಣಿಕೆಯ ವ್ಯಕ್ತಿಗಳಿಗೆ ಬೆಂಬಲಿಸೋಣ. ಹೋರಾಟದ ರಥ ನಿಲ್ಲದೆ ಮುನ್ನಡೆಯಲು ಕೈ ಜೋಡಿಸೋಣ.

"ಮತ್ತೆ ಹುಟ್ಟಿಬಾ ಗೆಳತಿ"

***



# ಶಿಕ್ಷಣ- 'ಭೂಮಿಗೆ ಬಿದ್ದ ಬೀಜ'



ಲೇಖಕರು: **ಬಿ.ಎಂ. ರೋಹಿಣಿ**
ನಿವೃತ್ತ ಶಿಕ್ಷಕಿ ಹಾಗೂ
ಪಡಿ ಆಡಳಿತ ಮಂಡಳಿ ಸದಸ್ಯೆ

"ಸ್ತ್ರೀಯರಿಗೆ ವಿಧಿ ಪೂರ್ವಕವಾದ ವಿವಾಹವೇ ಸಂಸಾರ, ಪತಿ ಸೇವೆಯೇ ಗುರುಕುಲವಾಸ, ಗೃಹಕೃತ್ಯವೇ ಅಗ್ನಿ ಕಾರ್ಯವಿದ್ದಂತೆ, ಆದುದರಿಂದ ಆಕೆಗೆ ಬೇರೆ ಶಿಕ್ಷಣದ ಅವಶ್ಯಕತೆಯಿಲ್ಲ" ಈ ಮಾತು ಮನುಸ್ಮೃತಿಯಲ್ಲಿದೆ. ಸ್ಮೃತಿ ಗ್ರಂಥಗಳೇ ಭಾರತದಲ್ಲಿ ಶಾಸನವಾಗಿದ್ದ ಕಾಲದಲ್ಲಿ ಸ್ತ್ರೀ ಶಿಕ್ಷಣವನ್ನು ಕನವರಿಸುವುದೂ ಸಾಧ್ಯವಿರಲಿಲ್ಲ. ಸ್ತ್ರೀಯರು ಮಾತ್ರವಲ್ಲ, ಶೂದ್ರರು, ದಲಿತರೂ ಕೂಡ ಶಿಕ್ಷಣದಿಂದ ಬಹಿಷ್ಕೃತರು. ತಮ್ಮ ಆಡಳಿತದಲ್ಲಿ ಸೇವಕರ ಅವಶ್ಯಕತೆ ಇದ್ದುದರಿಂದ 19ನೆಯ ಶತಮಾನದಲ್ಲೇ ಇಂಗ್ಲೀಷರು ಸಾರ್ವಜನಿಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು. ಮಿಶನರಿಗಳು ಶಿಕ್ಷಣ ಪ್ರಸಾರ ಮಾಡುವುದಕ್ಕೆ ಅನುಮತಿಯನ್ನು ನೀಡಿದರು. ಹಾಗಿದ್ದರೂ ಶಿಕ್ಷಣವು ಉಳ್ಳವರ ಸೊತ್ತಾಗಿತ್ತು. ಶ್ರೀ ಸಾಮಾನ್ಯನಾದ ಭಾರತೀಯನಿಗೆ ಶಿಕ್ಷಣದ ಮಹತ್ವ ತಿಳಿದಿರಲಿಲ್ಲ. ಅಂಧಶ್ರದ್ಧೆ, ಬಡತನವನ್ನೇ ಹಾಸಿ, ಹೊದ್ದು ಬದುಕುತ್ತಿದ್ದ ಆ ಕಾಲದಲ್ಲಿ ಶಿಕ್ಷಣವು ಒಂದು ಲಕ್ಷುರಿಯು, ವೈಭೋಗದ ವಿಷಯವಾಗಿತ್ತು. ಪುರುಷರು ಶಿಕ್ಷಣಕ್ಕೆ ತೆರೆದುಕೊಂಡು ಶತಮಾನಗಳೇ ಉರುಳಿದ್ದರೂ ಸ್ತ್ರೀಯರು ಅಕ್ಷರ ಸಂಸ್ಕೃತಿಗೆ ಪ್ರವೇಶ ಪಡೆದದ್ದು ಕೇವಲ ಎರಡು ಶತಮಾನಗಳಿಂದೀಚೆಗೆ ಮಾತ್ರ.

ಸ್ತ್ರೀ, ಶೂದ್ರ, ದಲಿತರ ಬಗ್ಗೆ ಒಂದು ರೀತಿಯ ಅಸ್ಪೃಶ್ಯತಾ ಮನೋಭಾವದಿಂದ ನಡೆಸಿಕೊಳ್ಳುತ್ತಿದ್ದ ಭಾರತೀಯ ಸಮುದಾಯದಲ್ಲಿ ಶಿಕ್ಷಣ ಪಡೆಯುವುದೇ ಮಹಾಪಾಪವೆಂಬ ಭಾವನೆ ಗಟ್ಟಿಯಾಗಿ ಬೇರೂರಿತ್ತು.

ಹಾಗಾದರೆ ಪ್ರಾಚೀನ ಭಾರತದಲ್ಲಿ ಸ್ತ್ರೀಯರು ಯಾರು ಶಿಕ್ಷಣ ಪಡೆಯಲಿಲ್ಲವೇ? ಎಂದರೆ ಇತ್ತು ಎಂಬ ಉತ್ತರ ಸಿಗುತ್ತದೆ ವೈದಿಕ ಯುಗದಲ್ಲಿ ಸ್ತ್ರೀಯರು ಬ್ರಹ್ಮವಾದಿನಿಯರಾಗಿ, ಮಂತ್ರ ದೃಷ್ಟಾರರಾಗಿದ್ದರು ಎಂಬುದಕ್ಕೆ ಗಾರ್ಗಿ, ಮೈತ್ರೇಯ ಮುಂತಾದವರ ಉದಾಹರಣೆಗಳಿವೆ. ಸ್ತ್ರೀ ಶಿಕ್ಷಣಕ್ಕೆ ಪ್ರೋತ್ಸಾಹವಿದ್ದ ಕಾಲವೊಂದು ಭಾರತದಲ್ಲಿ ಇತ್ತು ಎಂಬುದೇ ವಿಸ್ಮೃತಿಗೊಳಗಾದ ಸಾಮಾಜಿಕ ಪರಿಸ್ಥಿತಿಯೊಂದು ಮಧ್ಯಕಾಲೀನ ಯುಗದಲ್ಲಿ ಉಂಟಾಯಿತು. ರಾಜ ಮನೆತನದ ಹೆಣ್ಣು ಮಕ್ಕಳು, ಸಾಮಂತರು ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸಿದ ದಾಖಲೆಗಳಿವೆ. 12ನೇ ಶತಮಾನದಲ್ಲಿ ಬಸವಣ್ಣನ ಕ್ರಾಂತಿಯಿಂದಾಗಿ ಎಲ್ಲಾ ಸಮುದಾಯದ ಹೆಣ್ಣು ಮಕ್ಕಳೂ ಅನುಭವ ಮಂಟಪದ ಪ್ರವೇಶ ಪಡೆದುದರಿಂದ ಗುರು ಮನೆಗಳಲ್ಲಿ ಅವರಿಗೆ ಓದುವ, ಅಭ್ಯಾಸ ಮಾಡಿಸುವ ವ್ಯವಸ್ಥೆ ಇದ್ದಿರಬೇಕು. ಇಲ್ಲವಾದರೆ ಅಕ್ಕ ಮಹಾದೇವಿ ಎಂಬ ಕವಯತ್ರಿಯಲ್ಲದೆ 37ಕ್ಕೂ ಹೆಚ್ಚು ಮಂದಿ ವಚನಕಾರ್ತಿಯರು ಹುಟ್ಟಿಕೊಳ್ಳುವುದು ಸಾಧ್ಯವಿರಲಿಲ್ಲ. ಇದಕ್ಕೂ ಹಿಂದೆ ಅಂದರೆ ಕ್ರಿಸ್ತಪೂರ್ವದ ಜನ, ಬುದ್ಧರ ಕಾಲದಲ್ಲೇ ಬಸದಿ ಮತ್ತು ವಿಹಾರಗಳಲ್ಲಿ ಸ್ತ್ರೀಯರಿಗೆ ಶಿಕ್ಷಣ ಕೊಡಿಸುವ ವ್ಯವಸ್ಥೆ ಇತ್ತು ಎಂಬುದಕ್ಕೆ ಆ ಕಾಲದ ಸ್ತ್ರೀಯರು ಬರೆದ ಥೇರಿಗಾಥಾ ಎಂಬ ಕಾವ್ಯ ಮತ್ತು ಕಾವ್ಯ ಗ್ರಂಥಗಳು ಸಾಕ್ಷಿಯಾಗಿವೆ. ಈ ಎಲ್ಲಾ ಹಿನ್ನೆಲೆ ಇದ್ದರೂ ಕೂಡ 17-18ನೇ ಶತಮಾನಕ್ಕಾಗುವಾಗ ಎಲ್ಲಾ ವರ್ಗ ಮತ್ತು ವರ್ಣಗಳ ಸ್ತ್ರೀಯರೂ ಶಿಕ್ಷಣದಿಂದ ವಂಚಿತರಾಗಿದ್ದರು ಎನ್ನುವುದು ವಾಸ್ತವ. ಸ್ತ್ರೀಯರ ಶಿಕ್ಷಣಕ್ಕೆ

ಮತ್ತೆ ಉತ್ತೇಜನ ಲಭಿಸಿದ್ದು ಬ್ರಿಟಿಷರ ಕಾಲದಲ್ಲಿ. ಹಾಗೆಂದು ಪಾಶ್ಚಾತ್ಯರು ಬಹಳ ಸುಲಭವಾಗಿ ಸ್ತ್ರೀಯರನ್ನು ಸ್ವಾಗತಿಸಿದರು ಎಂದು ತಿಳಿಸಬೇಕಾಗಿಲ್ಲ. ಶಿಕ್ಷಣ ಪಡೆದ ಸ್ತ್ರೀ ವಿಧೇಯಳಾಗಿ ಇರಲಾರಳು. ಗಣಿತ ಮುಂತಾದ ಕಠಿಣ ಶಾಸ್ತ್ರಗಳನ್ನು ಅಭ್ಯಾಸ ಮಾಡಿದರೆ ಅವಳಿಗೆ ಮಕ್ಕಳಾಗದು ಎಂದು ಆಕಾಲದ ವಿಜ್ಞಾನಿಗಳೇ ಸಂಶೋಧನೆ ಮಾಡಿದ್ದರಂತೆ. ಈ ಬೆದರಿಕೆಯ ತಂತ್ರದಿಂದಾಗಿ ಪಾಶ್ಚಾತ್ಯ ರಾಷ್ಟ್ರಗಳಲ್ಲೂ ಸ್ತ್ರೀಯರು ಶಿಕ್ಷಣಕ್ಕೆ ಪುರುಷರಷ್ಟೇ ವೇಗದಲ್ಲಿ ತೆರೆದುಕೊಳ್ಳಲಿಲ್ಲವೆಂಬ ಸತ್ಯ ನಮ್ಮ ಕಣ್ಣ ಮುಂದಿದೆ.

19ನೇ ಶತಮಾನದಲ್ಲಿ ಭಾರತದಲ್ಲಿ ಸಾಮಾಜಿಕ ಸುಧಾರಣೆಯು ಬಲಗೊಂಡ ಕಾಲ. ಬಾಲ್ಯವಿವಾಹ, ಸತೀ ಸಹಗಮನ. ವಿಧವಾ ವಿವಾಹ ನಿಷೇಧ, ಬಹುಪತ್ನಿತ್ವ ಮುಂತಾದ ದುಷ್ಟ ಪದ್ಧತಿಗಳು ವಿಜೃಂಬಿಸುತ್ತಿದ್ದುದರಿಂದ ರಾಜಾರಾವ್ ಮೋಹನ್‌ರಾಯ್, ಈಶ್ವರಚಂದ್ರ ವಿದ್ಯಾಸಾಗರ, ಜ್ಯೋತಿ ಬಾ ಫುಲೆ ಮುಂತಾದವರು ಸ್ತ್ರೀಯರ ಉದ್ಧಾರಕ್ಕೆ ಶಿಕ್ಷಣವೊಂದೇ ಪರಿಹಾರವೆಂದು ನಂಬಿ ಕಾರ್ಯಪ್ರವೃತ್ತರಾದರು. 1819ರಲ್ಲಿಯೇ ಕೊಲ್ಕತ್ತಾದಲ್ಲಿ ಅಮೆರಿಕನ್ ಮಿಶನ್ನಿನವರು ಮಹಿಳೆಯರಿಗಾಗಿಯೇ ಶಾಲೆ ತೆರೆದಿದ್ದರು. 1848ರಲ್ಲಿ ಪೂನದಲ್ಲಿ ಜ್ಯೋತಿ ಬಾ ಫುಲೆಯವರು ಹೆಣ್ಣು ಮಕ್ಕಳಿಗೆ ಶಾಲೆ ತೆರೆದರು.

1823ರಲ್ಲಿ ಧಾರವಾಡದಲ್ಲಿ 1836ರಲ್ಲಿ ದ.ಕ ಜಿಲ್ಲೆಯಲ್ಲಿ ಬಾಸೆಲ್ ಮಿಶನ್ನಿನವರು ಶಾಲೆಗಳನ್ನು ತೆರೆದರು. ಆ ಕಾಲದಲ್ಲಿ ಸಾವಿತ್ರಿ ಬಾಯಿ ಫುಲೆ ಭಾರತದ ಮೊದಲ ಶಿಕ್ಷಕಿಯಾಗಿ ಸಮಾಜದಲ್ಲಿ ಸೇವೆ ಸಲ್ಲಿಸಲು ಎದುರಿಸಿದ ಸವಾಲುಗಳು, ಹಿಂಸೆ, ಅವಮಾನ, ನಿಂದೆಗಳು ನಮ್ಮನ್ನು ಬೆರಗುಗೊಳಿಸುತ್ತದೆ, ದಲಿತರು, ಹಿಂದುಳಿದವರು ಕಲಿಯುತ್ತಿದ್ದ ಮಿಶನರಿಗಳ ಶಾಲೆಗಳಿಗೆ ಮೇಲ್ವರ್ಗದ ಹೆಣ್ಣು ಮಕ್ಕಳನ್ನು ಹೆತ್ತವರು ಕಳಿಸುತ್ತಿರಲಿಲ್ಲ. ಮಂಗಳೂರಿನಲ್ಲಿ 1855ರಲ್ಲಿ ಬ್ರಾಹ್ಮಣರ ಹೆಣ್ಣು ಮಕ್ಕಳಿಗಾಗಿಯೇ ಮಿಶನರಿಗಳು ಬೇರೆಯೇ ಶಾಲೆ ಸ್ಥಾಪನೆ ಮಾಡಿದ ದಾಖಲೆ ಇದೆ.

ಬಾಸೆಲ್ ಮಿಶನ್ ಮಂಗಳೂರಿನ ದಾಖಲೆಯಂತಹ 1881ರಲ್ಲಿ 70 ಮಂದಿ 1901ರಲ್ಲಿ 160 ಮಂದಿ ಹೆಣ್ಣು ಮಕ್ಕಳು ಕಲಿಯುತ್ತಿದ್ದರು. ಈ ಸಂಖ್ಯೆಯು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಾ ಹೋದುದು ಶ್ಲಾಘನೀಯ. ಮಿಶನರಿಗಳ ಶಾಲೆಯಲ್ಲಿ ಕಲಿತ ಹೆಣ್ಣು ಮಕ್ಕಳಲ್ಲಿ ಹೆಚ್ಚಿನವರು ಹಿಂದುಳಿದ ವರ್ಗದವರು ಎನ್ನುವುದೂ ಕೂಡ ಗಮನಾರ್ಹವಾಗಿದೆ.

20ನೇ ಶತಮಾನದಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ಗಾಂಧೀಜಿಯ ಪ್ರಚೋದನೆಯಿಂದ ಹೆಣ್ಣು ಮಕ್ಕಳು ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಿದ್ದರಿಂದ ಹೊಸ್ತಿಲಿಂದೀಚೆಗೆ ಬಂದ ಹೆಣ್ಣಿಗೆ ಶಿಕ್ಷಣಕ್ಕೆ ಇರುವ ಮಾಂತ್ರಿಕ ಶಕ್ತಿಯ ಅರಿವಾಯಿತು. ಗಾಂಧೀಜಿಯವರು ಕೈಗೊಂಡ ರಚನಾತ್ಮಕ ಕಾರ್ಯಕ್ರಮಗಳಲ್ಲಿ ವಯಸ್ಕರ ಶಿಕ್ಷಣ ಮತ್ತು ಸ್ತ್ರೀ ಶಿಕ್ಷಣಕ್ಕೆ ವಿಶೇಷ ಮಹತ್ವವನ್ನು ನೀಡಲಾಗಿತ್ತು. ಇಷ್ಟಾಗಿಯೂ ಸ್ತ್ರೀ ಶಿಕ್ಷಣವು ಸುಲಭವಾಗಿ ಸಲೀಸಾಗಿ ದಕ್ಕುವ ವಿಷಯವಾಗಿರಲಿಲ್ಲ. ಮನೆಗೆ ಸಮೀಪದಲ್ಲಿ ಶಾಲೆಗಳಿಲ್ಲದಿರುವುದು, ಒಬ್ಬಳನ್ನೆ ದೂರ ಕಳಿಸಲು ಹಿಂಜರಿಯುವುದು ಪ್ರಾಯಕ್ಕೆ ಬಂದ ಮೇಲೆ ಶಿಕ್ಷಣ ಅನಗತ್ಯವೆಂಬ ಭಾವ ಗಟ್ಟಿಗೊಂಡುದು ಮುಂತಾದವುಗಳು ಸ್ತ್ರೀ ಶಿಕ್ಷಣಕ್ಕೆ ಹಿನ್ನಡೆಯನ್ನು ತಂದವು. ನನ್ನ ಕಾಲದ ಉದಾಹರಣೆಯನ್ನೇ ನೀಡುವುದಾದರೆ 1940ರ ದಶಕದಲ್ಲಿ ಹೆಣ್ಣು ಮಕ್ಕಳಿಗೆಂದೇ ಅಲ್ಲಲ್ಲಿ ಶಾಲೆಗಳು ತೆರೆಯಲ್ಪಟ್ಟವು. ಎಲ್ಲ ವರ್ಗ, ವರ್ಣದ ಹೆಣ್ಮಕ್ಕಳೂ ಶಾಲೆಯನ್ನು ಪ್ರವೇಶಿಸಿದರು. ಖಾಸಗಿ ಸಂಸ್ಥೆಗಳು, ಜಿಲ್ಲಾ ಬೋರ್ಡ್‌ಗಳು, ನಗರ ಸಭೆಗಳು, ಸರಕಾರಿ ಶಾಲೆಗಳು ಅಲ್ಲಲ್ಲಿ ಹುಟ್ಟಿಕೊಂಡವು. ಆದರೂ ಎಲ್ಲಾ ಹೆಣ್ಮಕ್ಕಳು ಶಾಲೆಯ ಮೆಟ್ಟಿಲನ್ನು ಹತ್ತಲಾಗಲಿಲ್ಲ ಎಂಬ ಸತ್ಯ ನಮ್ಮ ಕಣ್ಣ ಮುಂದಿದೆ. ಹೆಚ್ಚಿನವರು ನಾಲ್ಕನೇ ತರಗತಿಗೆ, ತಪ್ಪಿದರೆ ಏಳನೇ ತರಗತಿಗೆ ವಿದಾಯ ಹೇಳುತ್ತಿದ್ದರು. 1960ರಲ್ಲಿ ನನ್ನ ಸೇಕ್ರೆಡ್ ಹಾರ್ಟ್ಸ್ ಶಾಲೆಯಲ್ಲಿ ಎಸ್. ಎಸ್.ಎಲ್.ಸಿಯಲ್ಲಿ 37 ಮಂದಿ ಕ್ರೈಸ್ತ ಹೆಣ್ಣು ಮಕ್ಕಳಿದ್ದರು ನಾನೊಬ್ಬಳೇ ಹಿಂದು ಹುಡುಗಿಯಾಗಿದ್ದೆ ಎಂಬುದು ನಮ್ಮ ಸಮುದಾಯದವರು ಸ್ತ್ರೀ ಶಿಕ್ಷಣದ ಬಗ್ಗೆ ತಮ್ಮ ಮನೋಭಾವವನ್ನು ಬದಲಿಸಲಿಲ್ಲ ಎಂಬುದಕ್ಕೆ ಸಾಕ್ಷಿಯಲ್ಲವೇ? ಗಂಡು, ಹೆಣ್ಣು ಜೊತೆಯಾಗಿ

ಕಲಿಯುವುದಕ್ಕೆ ನಮ್ಮ ಮಡಿವಂತ ಮನಸ್ಸುಗಳು ಆಗ ಒಪ್ಪುತ್ತಿರಲಿಲ್ಲ. ಒಲೆ ಬೂದಿ ಬಳಿಯುವುದಕ್ಕೆ ಶಿಕ್ಷಣ ಅನಗತ್ಯವೆಂಬ ಭಾವವೇ ಗಟ್ಟಿಯಾಗಿತ್ತು. ಇನ್ನೊಂದು ಕುಟುಂಬದ ಆಸ್ತಿಯಾಗುವವಳಿಗೆ ಶಿಕ್ಷಣಕ್ಕಾಗಿ ಖರ್ಚುಮಾಡುವುದು ದುಂದು ವೆಚ್ಚವೆಂದೇ ಸಮಾಜ ನಂಬಿತ್ತು. ಸ್ತ್ರೀ ಶಿಕ್ಷಣದ ಬಗ್ಗೆ ಸಮಾಜವು ಕೀಳಂದಾಜು ಮಾಡಿ ಪರದೆಯ ಹಿಂದೆ ಸರಿಸಿಬಿಟ್ಟಿತ್ತು. ಮುಖ ಪರದೆ ಹಾಕುವ ಸಂಪ್ರದಾಯವು ಹಿಂದುಗಳಲ್ಲೂ ಇತ್ತು ಎಂದರೆ ಆಧುನಿಕರು ನಂಬಲಾರರು. ಒಂದು ಕಾಲದಲ್ಲಿ ಉತ್ತರ ಭಾರತ ಮಾತ್ರವಲ್ಲ ಕರ್ನಾಟಕದ ಉತ್ತರ ಭಾಗಗಳಲ್ಲಿ ಸ್ತ್ರೀಯರು ಮುಖ ಪರದೆ ಎಂದರೆ ತಲೆಯನ್ನು ಸೆರಗಿನಿಂದ ಮುಚ್ಚಲೇ ಬೇಕಾದ ಸಂಪ್ರದಾಯವಿತ್ತು ಮುಸ್ಲಿಂ ಸಮುದಾಯದಂತೆ ಘೋಷಾ ಪದ್ಧತಿಯಲ್ಲದಿದ್ದರೂ ಹೆಣ್ಣು ಮಕ್ಕಳು ಈಗಿನಂತೆ ರಸ್ತೆಯಲ್ಲಿ ನಡೆಯವುದು ನಿಷಿದ್ಧವಾಗಿದ್ದ ಕಾಲದಲ್ಲಿ ಸ್ತ್ರೀ ಶಿಕ್ಷಣವನ್ನು ನಿರೀಕ್ಷಿಸುವುದು ಸಾಧ್ಯವಿರಲಿಲ್ಲ. ಅಡುಗೆ ಕೋಣೆ ಮತ್ತು ಹೆರಿಗೆ ಕೋಣೆಗಷ್ಟೇ ಸೀಮಿತವಾಗಿದ್ದ ಸ್ತ್ರೀಯ ಬದುಕಿನಲ್ಲಿ ಶಿಕ್ಷಣವು ಇಣುಕುವುದು ಸಾಧ್ಯವಿರಲಿಲ್ಲ. ಹಿಂದೂಗಳಲ್ಲೂ ಮುಖ ಪರದೆ ಇಲ್ಲದೆ ಹೆಣ್ಣು ಹೊರಗೆ ಕಾಣುವುದು ಮಹಾಪರಾಧ. ಬಾಲ್ಯವಿವಾಹ ಕಡ್ಡಾಯವಾಗಿದ್ದ ಕಾಲದಲ್ಲಿ ಒಂದನೇ, ಎರಡನೇ ತರಗತಿಗೆ ಅವಳ ಶಿಕ್ಷಣ ಮುಕ್ತಾಯ. ಈ ಎಲ್ಲಾ ಅಡ್ಡಿ ಆತಂಕಗಳನ್ನು ದಾಟಿಯೂ ಈ ಶತಮಾನದಲ್ಲಿ ಹೆಣ್ಣು ಶಿಕ್ಷಣ ಪಡೆದದ್ದು ಒಂದು ಪವಾಡವಾಗಿ ಕಾಣಿಸುತ್ತಿದೆ.

ಆಗ ಈಗಿನಂತೆ ಗಂಡು ಹೆಣ್ಣು ಮಕ್ಕಳಿಗೆ ಒಂದೇ ಸಿಲೆಬಸ್ ಇರಲಿಲ್ಲ. ಹೆಣ್ಣಿಗೆ ಗೃಹ ವಿಜ್ಞಾನವೇ ಪ್ರಧಾನವಾಗಿತ್ತು. ಹೌದು ಅಂದು ಸ್ತ್ರೀಯೊಂದು ಕಲಿತರೆ ಶಾಲೆಯೊಂದು ತೆರೆದಂತೆ ಹೆಣ್ಣು ಮಗು ಕಲಿತರೆ ಇಡೀ ಕುಟುಂಬವೇ ಸುಶಿಕ್ಷಿತವಾದಂತೆ ಎಂಬ ವಾಕ್ಯಗಳನ್ನು ನಮ್ಮ ನಾಯಕರು ಪದೇ ಪದೇ ಹೇಳುತ್ತಿದ್ದರು. ದುರಂತವೇನು ಗೊತ್ತೇ? ಇವತ್ತಿಗೂ ಈ ವಾಕ್ಯವನ್ನು ಪುನರುಚ್ಚರಿಸುತ್ತಾರೆ. ಯಾಕೆಂದರೆ ಈಗಲೂ ಸ್ತ್ರೀಯರಲ್ಲಿ ಅನಕ್ಷರಸ್ಥರು ಇನ್ನೂ ಇದ್ದಾರೆ. ಪುರುಷರು 80% ಸಾಕ್ಷರರಾದರೆ ಮಹಿಳೆಯರು 60% ತಲಪಿದ್ದಾರೆಂದು ಸಮಾಧಾನ ಮಾಡಿಕೊಳ್ಳ ಬಹುದು ಅಷ್ಟೇ. ನಗರ ಪಟ್ಟಣಗಳ ಸ್ತ್ರೀಯರನ್ನು ಹಳ್ಳಿಗಾಡಿನ ಮಹಿಳೆಯರೊಂದಿಗೆ ಹೋಲಿಸಲಾಗದು. ಶಿಕ್ಷಣ ಸೌಲಭ್ಯಗಳು ಇನ್ನೂ ತಲುಪದ ಪ್ರದೇಶಗಳಿವೆ. ಅಲ್ಲಿ ಸಾಕ್ಷರತೆಗಷ್ಟೇ ಎಂದರೆ ತನ್ನ ದಸ್ಕತು ಹಾಕುವ ಅರಿವಷ್ಟೇ ದಕ್ಕಿಸಿಕೊಂಡವರೂ ಇದ್ದಾರೆ, ಆ ಪ್ರದೇಶಗಳ ಹೆಣ್ಣು ಮಕ್ಕಳು ವಿದ್ಯಾವಂತರಾಗದೆ ಉಳಿದಿರುವುದು ನಂಬಲಾಗದ ಸತ್ಯ.

ಸ್ತ್ರೀ ಶಿಕ್ಷಣದ ಮಹತ್ವವನ್ನು ಅರಿತವರು ಉತ್ತೇಜನ ನೀಡಿದರು. ನಮ್ಮ ಅಜ್ಜಿಯಂದಿರ ಕಾಲದಲ್ಲಿ ಪ್ರಾರಂಭವಾದ ಈ ಉತ್ತೇಜನ ಈಗ ಉನ್ನತ ಶಿಕ್ಷಣಕ್ಕೆ ಬಂದು ಮುಟ್ಟಿದೆ. ಕಳೆದ ಶತಮಾನದಲ್ಲಿ ಉದ್ಯೋಗ ನಿಮಿತ್ತ ಪುರುಷರು ವಲಸೆ ಹೋದರು. ಆಗ ಅವರೊಂದಿಗೆ ಸಂಪರ್ಕಿಸಲು ಪತ್ರ ಬರೆಯಲು, ಓದಲು ಶಿಕ್ಷಣ ಬೇಕು. ಕಲಿತ ಹೆಣ್ಣು ಮನೆ ನಿಭಾಯಿಸಲಾರಳು ಎಂದಿದ್ದ ಸಮಾಜದಲ್ಲಿ ಸ್ವಲ್ಪ ಮಟ್ಟಿನ ಪರಿವರ್ತನೆ ಉಂಟಾಯಿತು. ಕಲಿತ ಹೆಣ್ಣು ಮಕ್ಕಳಿಗೆ ಮದುವೆ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಿದ್ದರಿಂದ ಅದಕ್ಕಾಗಿಯೇ ಹೆಣ್ಣು ಮಕ್ಕಳನ್ನು ಓದಿಸಿದವರಿದ್ದರು. ಉದ್ಯೋಗ್ಯಸ್ಥ ಹೆಣ್ಣು ನಾಲಾಯಕ್ಕು ಎಂದಿದ್ದ ಕಾಲ ಹೋಗಿ ಉದ್ಯೋಗಸ್ಥೆಗೆ ಪ್ರಾಮುಖ್ಯತೆ ಸಿಕ್ಕಿತು. ಪಂಚವಾರ್ಷಿಕ ಯೋಜನೆಗಳಲ್ಲಿ ಕಡ್ಡಾಯ ಶಿಕ್ಷಣ ಜಾರಿಯಾದ ಮೇಲೆ ಹೆಣ್ಮಕ್ಕಳಿಗೆ ಉಚಿತ ಶಿಕ್ಷಣ ಸವಲತ್ತುಗಳನ್ನು ಸರಕಾರ ನೀಡಿದ ಮೇಲೆ ಹೆಣ್ಮಕ್ಕಳ ಸಾಧನೆ ಶ್ಲಾಘನೀಯ ಹೆಣ್ಣು ಮಕ್ಕಳಿಗೆ ಬುದ್ಧಿ ಮೊಣಕಾಲ ಕೆಳಗೆ ಎಂದು ಹಂಗಿಸಿದವರು ಇಂದು ಮೂಗಿನ ಮೇಲೆ ಬೆರಳಿಟ್ಟು ಬೆರಗಾಗಿದ್ದಾರೆ. ಸ್ತ್ರೀ ಶಿಕ್ಷಣವು ಯಾವ್ಯಾವುದೋ ಹಳ್ಳ, ದಿನ್ನೆ, ಕೊರಕಲುಗಳನ್ನು ದಾಟಿ ಬಂದಿದೆ. ಖ್ಯಾತ ಸಾಹಿತಿ ದೇವನೂರು ಮಹಾದೇವರು "ಭೂಮಿಗೆ ಬಿದ್ದ ಬೀಜ ಎದೆಗೆ ಬಿದ್ದ ಅಕ್ಷರ ಇಂದಲ್ಲ ನಾಳೆ ಫಲ ಕೊಡುವುದು" ಎಂದು ಹೇಳಿದ ಮಾತು ಸ್ತ್ರೀ ಶಿಕ್ಷಣಕ್ಕೆ ಸಂಪೂರ್ಣವಾಗಿ ಅನ್ವಯವಾಗುತ್ತದೆ. ಶಿಕ್ಷಣವು ನಮ್ಮ ಬದುಕಿಗೆ ಗಾಳಿ, ನೀರು, ಅನ್ನ, ಬೆಳಕಿನಷ್ಟೇ ಅಗತ್ಯದ ವಸ್ತುವೆಂಬ ಭಾವನೆ ಮೂಡಬೇಕು. ಆಗ ಶಿಕ್ಷಣವೆಂಬ ಮಹಾ ವೃಕ್ಷವು ಸಮೃದ್ಧವಾದ ಫಸಲನ್ನು ನೀಡಬಹುದು. ಹಾಗಾಗಲಿ ಎಂದು ನನ್ನ ಹಾರೈಕೆ.

***




# ಶಾಲೆಗಳಲ್ಲಿ ನೀಡುವ ಮನೆಕೆಲಸ (HOMEWORK)ದ ಕುರಿತು ಅಧ್ಯಯನ
## – ಒಂದು ಲೇಖನ



ಡಾ। ಎನ್. ಸುಕುಮಾರ ಗೌಡ

ಶಿಕ್ಷಣ ಸಿದ್ಧಾಂತ ಮತ್ತು ಸಂಶೋಧನಾಧಾರಿತವಾಗಿ ನೋಡುವುದಿದ್ದರೆ ಮಗು ತನ್ನ ಶಿಕ್ಷಣದಲ್ಲಿ ಅರ್ಥವನ್ನು ಕಾಣಬೇಕು. ಅನೇಕ ಶಿಕ್ಷಣ ಶಾಸ್ತ್ರಜ್ಞರು ಈ ಕುರಿತು ಪದೇ–ಪದೇ ಹೇಳುತ್ತಾ ಬಂದಿರುವರು. ಉದಾ: ಮೊಂಟೆಸರಿಯವರ ಪ್ರಕಾರ "ಮಕ್ಕಳ ಸಂತಸವೇ ಮಕ್ಕಳ ಶಿಕ್ಷಣ ವ್ಯವಸ್ಥೆಯ ಯಶಸ್ಸಿನ ಮುಖ್ಯ ಲಕ್ಷಣ". ಮಕ್ಕಳಿಗೆ ಕೊಡುವ ಹೋಂವರ್ಕ್‌ನ ಕುರುತಾಗಿ ಎ. ಎಸ್. ನೀಲ್‌ನ ಪ್ರಕಾರ "ಮಕ್ಕಳಿಗೆ ಹೋಂವರ್ಕ್ ನೀಡುವುದು ಅಪಮಾನಕರ". ಹಾಗೆಯೇ, 'ಹೊರೆ ರಹಿತ ಕಲಿಕೆ'ಯ ಸಮಿತಿಯ ಅಧ್ಯಕ್ಷ ಪ್ರೊಫೆಸರ್ ಯಶ್‌ಪಾಲ ಕೂಡ ಹೇಳುವುದು ಇದನ್ನೇ: "ಮಕ್ಕಳು ಮನೆಗಳಲ್ಲಿ ಮಾಡುವ ಅನ್ವೇಷಣಾ ಚಟುವಟಿಕೆಗಳನ್ನು ಹೊರತುಪಡಿಸಿ ಪ್ರಾಥಮಿಕ ತರಗತಿಗಳ ವಿದ್ಯಾರ್ಥಿಗಳಿಗೆ ಯಾವುದೇ ಹೋಂವರ್ಕ್‌ಗಳನ್ನು ನೀಡಬಾರದು" ಎಂದು ಖಚಿತವಾಗಿ ಹೇಳಿರುವರು (ಯಶ್‌ಪಾಲ್ ಸಮಿತಿ, 1993, ಪು:26). ಮಾತ್ರವಲ್ಲದೆ, ಖಾಸಗಿ ಸಂಸ್ಥೆಗಳು, ವಾರ್ತಾ ಮಾಧ್ಯಮಗಳು, ಹೋಂವರ್ಕ್ ಮತ್ತು ಪದೇ ಪದೇ ನಡೆಯುತ್ತಿರುವ ಪರೀಕ್ಷೆಗಳಿಂದಾಗಿ ಮಕ್ಕಳು ಕಳವಳ ಒತ್ತಡಕ್ಕೊಳಗಾಗಿ, ನಿಜವಾದ ಅರ್ಥದಲ್ಲಿ ಅವರಿಗೆ ಬಾಲ್ಯಾವಸ್ಥೆಯೇ ಇಲ್ಲದಂತಾಗಿರುವುದು ಎಂದು ಹೇಳುತ್ತಾ ಬಂದಿರುವುವು.

ಸುಮಾರು 10–12 ವರ್ಷಗಳ ಹಿಂದೆ ಕರ್ನಾಟಕ ಸರಕಾರ ಹೋಂವರ್ಕ್ ಪದ್ಧತಿಯನ್ನು ರದ್ದು ಮಾಡಬೇಕೆಂದು ನಿರ್ಧರಿಸಿತ್ತು. ಇದಕ್ಕನುಕೂಲಕರವಾಗಿ ಹೆಚ್ಚಿನ ಮಕ್ಕಳ ಪಾಲಕರ ಪ್ರತಿಕ್ರಿಯೆಯೂ ದೊರಕಿತ್ತು. ಆದರೂ ಈ ಪದ್ಧತಿ ಮುಂದುವರಿಯುತ್ತಲೇ ಇದೆ. ಈ ಪರಿಸ್ಥಿತಿಯಲ್ಲಿ ಮಕ್ಕಳಿಗೆ ನೀಡುವ ಹೋಂವರ್ಕ್‌ನ ಕುರಿತಾಗಿ ಸತ್ಯಾಂಶವನ್ನು ಅರಿಯುವ ಉದ್ದೇಶಕ್ಕಾಗಿ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಈ ಅಧ್ಯಯನಕ್ಕೆ ಬೇಕಾದ ದತ್ತಾಂಶವನ್ನು ದಕ್ಷಿಣ ಕನ್ನಡ ಜಿಲ್ಲೆಯ ಒಟ್ಟು ನೂರು ಶಾಲೆಗಳ 6, 7 ಮತ್ತು 8ನೇ ತರಗತಿಯ ವಿದ್ಯಾರ್ಥಿಗಳಿಂದ ಪಡೆಯಲಾಯಿತು.

**ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ:**

ದಕ್ಷಿಣ ಕನ್ನಡ ಜಿಲ್ಲೆಯ ಆಯ್ದ ನೂರು ಶಾಲೆಗಳಲ್ಲಿ 51 ಸರಕಾರಿ, 22 ಅನುದಾನಿತ ಹಾಗೂ 27 ಖಾಸಗಿ ಪ್ರಾಥಮಿಕ ಶಾಲೆಗಳನ್ನು ಈ ಅಧ್ಯಯನಕ್ಕೆ ಬಳಸಲಾಯಿತು. ಅಂದರೆ ಒಟ್ಟು 605 ವಿದ್ಯಾರ್ಥಿಗಳಿಂದ, ವಿದ್ಯಾರ್ಥಿಗಳ ಪಾಲಕರಿಂದ ಹಾಗೂ ವಿದ್ಯಾರ್ಥಿಗಳ ಶಾಲಾ ಶಿಕ್ಷಕರಿಂದ ಮಾಹಿತಿ ಸಂಗ್ರಹಿಸಲಾಯಿತು. ಅಧ್ಯಯನಕ್ಕೆ Survey ಪದ್ಧತಿಯನ್ನು ಬಳಸಲಾಯಿತು. ವಿದ್ಯಾರ್ಥಿಗಳನ್ನು ಅವರ ಮನೆಯಲ್ಲಿ ಭೇಟಿಯಾಗಿ ಅವರಿಂದ ಮತ್ತು ಅವರ ಪಾಲಕರಿಂದ ಮಾಹಿತಿಯನ್ನು ಕ್ಷೇತ್ರ ಅಧ್ಯಯನ

ಕಾರ್ಯಕರ್ತರು ಪಡೆದುದಾದರೆ, ಶಾಲೆಗಳ ಶಿಕ್ಷಕರಿಂದ ಸಿದ್ಧ ಪಡಿಸಲಾದ ಪ್ರಶ್ನಾವಳಿಯ ಮೂಲಕ ಮಾಹಿತಿ ಸಂಗ್ರಹಿಸಲಾಯಿತು.

**ಫಲಿತ — ಚರ್ಚೆ :**

ಈ ಅಧ್ಯಯನದಲ್ಲಿ ಕಂಡುಬಂದಂತೆ ಹೆಚ್ಚಿನ ಪಾಲಕರು ತಮ್ಮ ಮಕ್ಕಳು ಶಾಲೆಯಿಂದ ಮನೆಗೆ ಬಂದ ಕೂಡಲೇ ಆಟವಾಡುವುದಕ್ಕೆ ಸಮ್ಮತಿಸಲಾರರು. ಅವರ ಪ್ರಕಾರ ಮಗು ಮೊದಲು ಹೋಂವರ್ಕ್ ಮಾಡಿ ಮುಗಿಸಬೇಕು ಎಂಬ ಅಭಿಪ್ರಾಯವುಳ್ಳವರಾಗಿದ್ದಾರೆ. ಇದು ಸರಿಯೇ? ದಿನವಿಡೀ ಶಾಲೆಯಲ್ಲಿ ಕುಳಿತು ಪಾಠ ಕೇಳಿದ ಮಗು ತನ್ನ ಮನೆಗೆ ಬಂದಾಕ್ಷಣ ಲಂಗು ಲಗಾಮಿಲ್ಲದೇ ಸ್ವತಂತ್ರ್ಯವಾಗಿ ಆಟವಾಡಿದಲ್ಲಿ ತನ್ನೊಳಗೆ ಬಂಧಿತವಾದ ಭಾವೋದ್ವೇಗವನ್ನು ಹೊರಗೆಡಹಿ (purge out) ಚೈತನ್ಯ ಮರು ಹುಟ್ಟಲಾರದೇ? ಶಿಕ್ಷಣ ಸಿದ್ಧಾಂತಿಗಳ ಅಭಿಪ್ರಾಯದಂತೆ ಬಾಲ್ಯಾವಸ್ಥೆಯಲ್ಲಿ ಮಗು ಆಟವಾಡಲು ಬಯಸುವುದು ಸಹಜ ಪ್ರವೃತ್ತಿಯಾಗಿದೆ. ಆದರೆ ಈ ಅಧ್ಯಯನದಲ್ಲಿ ದೊರಕಿದ ಮಾಹಿತಿಯಂತೆ ಮಕ್ಕಳು ಯಾಕೆ ಈ ರೀತಿ ಉತ್ತರಿಸಿರುವರು ಎಂದು ಹೇಳಲು ಅಸಾಧ್ಯವಾಗಿದೆ. ಬಹುಷಃ ಹಿರಿಯರ(ಪಾಲಕರು ಮತ್ತು ಶಿಕ್ಷಕರು) ಪ್ರೀತ್ಯರ್ಥವಾಗಿಯೋ ಅಥವಾ ರೂಢಿಗತ ನಂಬುಗೆಯಿಂದಾಗಿಯೋ ಎಂದು ನಿಖರವಾಗಿ ಹೇಳಲು ಬಾರದು. ಏನಿದ್ದರೂ ಬಾಲ್ಯಾವಸ್ಥೆಯಲ್ಲಿ ಮಕ್ಕಳು ಆಟವಾಡಲು ಬಯಸದಿರುವುದು ಒಂದು ಅಸಹಜ ಸಂಗತಿಯೇ ಆಗಿದೆ.

ಹೋಂ ವರ್ಕ್‌ನ ಭಾಗವಾಗಿ **"ಯೋಜನಾ ಕಾರ್ಯ** (ಪ್ರೊಜೆಕ್ಟ್‌ವರ್ಕ್)ಗಳನ್ನು ನೀಡುತ್ತಾರೆಯೇ?"ಎಂಬ ಪ್ರಶ್ನೆಗೆ ಉತ್ತರವಾಗಿ **"ಹೌದು"** ಎಂಬ ಉತ್ತರ ಎಲ್ಲಾ ಮಕ್ಕಳಿಂದ ದೊರಕಿದೆ. ಇದಕ್ಕೆ ವಿವರಣೆ ಇಲ್ಲಿ ಪ್ರಸ್ತುತ ಎಂದೆನಿಸುವುದು. **ಏನಿದು ಪ್ರೋಜೆಕ್ಟ್‌ವರ್ಕ್**? ಸೈದ್ಧಾಂತಿಕವಾಗಿ ಇದಕ್ಕೆ ಮೂಲಾಧಾರ ಬಹಳ ಹಿಂದಿನಿಂದಲೇ ಇದ್ದರೂ, ಕೊಲಂಬಿಯಾ ವಿಶ್ವವಿದ್ಯಾನಿಲಯದ ಕಿಲ್‌ಪ್ಯಾಟ್ರಿಕ್(1918) ಎಂಬವನ ಕೊಡುಗೆಯೆಂದು ಪರಿಗಣಿಸಲಾಗಿದೆ. ಅವನ ಪ್ರಕಾರ project work ಎಂದರೆ "A problematic act carried to completion in its natural setting". ಅಂದರೆ ವಿದ್ಯಾರ್ಥಿಯೋರ್ವನಿಗೆ ಕಲಿಕೆಯಲ್ಲಿ ಸಮಸ್ಯೆ (problem) ಯೊಂದು ಎದುರಾಗುವುದು. ಅಂತಹ ಸಮಸ್ಯೆ ಅದರ ಸಹಜ ಸನ್ನಿವೇಶದಲ್ಲಿರತಕ್ಕದ್ದು(natural setting). ಆ ಸಮಸ್ಯೆಯನ್ನು ವಿದ್ಯಾರ್ಥಿಯು ಕ್ರಿಯಾರೂಪದಲ್ಲಿ (act) ಬಗೆಹರಿಸತಕ್ಕದ್ದು, ಹೊರತು ಬಾಯಿಪಾಠ ಮಾಡಿಯಾಗಲಿ ಯಾ ಇತರರ ಸಲಹೆ ಸೂಚನೆಗೆ ಅನುಸಾರವಾಗಿರ ಕೂಡದು. ಯಾಕೆಂದರೆ ಪ್ರೋಜೆಕ್ಟ್ ಅನ್ನುವುದೇ ಮೂಲತಃ ವಿದ್ಯಾರ್ಥಿ ಕೈಗೊಂಡ ಕ್ರಿಯಾ ಚಟುವಟಿಕೆಯಾಗಿದೆ ಹೊರತು ಶಿಕ್ಷಕರು ವಿಧಿಸಿರುವ ಯೋಜನೆಯಲ್ಲ.

ಇದಕ್ಕೆ ಪೂರಕವಾಗಿ ಇನ್ನೂ ಆಶ್ಚರ್ಯಕರವಾದ ಸಂಗತಿಯೇನೆಂದರೆ ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಪ್ರಮುಖ ಪುಸ್ತಕದ ಅಂಗಡಿಗಳಲ್ಲಿ ರೆಡಿಮೇಡ್ ಪ್ರೋಜೆಕ್ಟ್ ಸಾಮಗ್ರಿಗಳೂ ಧಾರಳವಾಗಿ ಸಿಗುತ್ತವೆ. ಉದಾಹರಣೆಗೆ:

1. "Cut and Paste" 74 ವಿವಿಧ ಶೀರ್ಷಿಕೆಯುಳ್ಳ ಚಿತ್ರಗಳು (ನವನೀತ್)
2. Picture Chart with information-575 types
3. Paper folding (ವಾಸನ್, ನವನೀತ್, ಜೀವನ್‌ದೀಪ್, ವಿಕಾಸ್)
4. Model Essays (Kannada, English, Hindi)
5. Project Books (Science, Maths, Electronics)
6. Guidebooks/ sample question papers- ಮಾದರಿ ಪ್ರಶ್ನೆ ಪತ್ರಿಕೆಗಳು.

ಈ ರೀತಿಯ ಯೋಜನಾ ಕಾರ್ಯ(ಪ್ರೋಜೆಕ್ಟ್)ದ ಕುರಿತು ಹೇಳುವುದಿದ್ದರೆ ಬಹಳ ಬಡ ಕುಟುಂಬದವರಿಗೆ ಆರ್ಥಿಕವಾಗಿ ಹೊರೆಯೆಂದು ಹೆಚ್ಚಿನ ಪಾಲಕರು ಅಭಿಪ್ರಾಯ ಪಡುತ್ತಾರೆ. 4, 6ನೇ ತರಗತಿಯ ವಿದ್ಯಾರ್ಥಿಗಳಿಗೆ ಅದರಲ್ಲೂ ಹೆಣ್ಣು ಮಕ್ಕಳಿಗೆ ಮಾಹಿತಿ ಸಂಗ್ರಹಕ್ಕಾಗಿ ಇಂಟರ್‌ನೆಟ್ ಬಳಸಲು ಗ್ರಾಮೀಣ ಪ್ರದೇಶದಲ್ಲಿ ಬಲು ದೂರ ಹೋಗುವುದು ಪ್ರಯಾಸಕರ.

ಪ್ರಾಥಮಿಕ ಶಾಲಾ ವಿದ್ಯಾರ್ಥಿಯ ದೃಷ್ಟಿಯಿಂದ ನೋಡಿದರೆ ಈ "ಪ್ರೊಜೆಕ್ಟ್" ಅನ್ನುವುದು ಒಂದು ಆಭಾಸ ಯಾ ಅಪಹಾಸ್ಯವಾಗಿ ತೋರುವುದರಲ್ಲಿ ಆಶ್ಚರ್ಯವೇನಿಲ್ಲ.

ತರಗತಿಯ ಮಕ್ಕಳು ಬರೆದು ಒಪ್ಪಿಸಿದ ಹೋಂವರ್ಕ್‌ನ್ನು ಪರಿಶೀಲಿಸಲು ಶಿಕ್ಷಕರಿಗೆ ದಿನವೊಂದಕ್ಕೆ 1 ರಿಂದ 2 ತಾಸು ತಗಲುವುದೆಂದು ತಿಳಿದುಬಂತು.

ಹೆಚ್ಚಿನ ವಿದ್ಯಾರ್ಥಿಗಳು ತಂತಮ್ಮ ಶಿಕ್ಷಕರು ಹೋಂವರ್ಕ್ ಪರಿಶೀಲಿಸುವಾಗ ತಪ್ಪುಗಳನ್ನು ಮಾತ್ರ ಸೂಚಿಸುತ್ತಾರೆ ಎಂದು ಉತ್ತರಿಸಿರುವರು, ಶೈಕ್ಷಣಿಕವಾಗಿ ಇದು ಸಾಧುವಲ್ಲ. ಮೌಲ್ಯಾಂಕವನ್ನು ನೀಡುವುದರಿಂದ ವಿದ್ಯಾರ್ಥಿ ವಿದ್ಯಾರ್ಥಿಗಳೊಳಗಿನ ಅಂತರ ಕಾಣುವುದು. ಇಲ್ಲಿ ಒಂದು ವಿಚಾರವನ್ನು ಅಗತ್ಯ ಗಮನಿಸಲೇಬೇಕು. ಅದೇನೆಂದರೆ, ವಿದ್ಯಾರ್ಥಿಗಳ ಹೋಂವರ್ಕ್‌ಗೆ ಗ್ರೇಡನ್ನು (ಸಂಖ್ಯಾ ರೂಪದಲ್ಲಿಯಾಗಲೀ, letter ಗ್ರೇಡ್ ಆಗಲೀ) ಕೊಟ್ಟದ್ದೇ ಆದರೆ ಅದರಲ್ಲಿ ಶೈಕ್ಷಣಿಕ ಮಹತ್ವ ಕಮ್ಮಿಯೆಂದೇ ಹೇಳಬೇಕು. ಅದುದರಿಂದ, ಶಿಕ್ಷಕರ ಈ ಮಾಹಿತಿ ವಿವರಣಾತ್ಮಕವಾಗಿರಬೇಕು (descriptive) ಮತ್ತು ಸಮಾಲೋಚನೆಗೆ ಎಡೆಮಾಡುವಂತಿರಬೇಕು ಎಂಬುದು ಆಧುನಿಕ ಮನೋವಿಜ್ಞಾನ ಆಧಾರಿತ ಶೈಕ್ಷಣಿಕ ಚಿಂತನೆ ಆಗಿರುತ್ತದೆ. ಹೆಚ್ಚಾಗಿ ಖಾಸಗಿ ಮತ್ತು ಆಂಗ್ಲ ಮಾಧ್ಯಮ ಶಾಲೆಗಳ ಮಕ್ಕಳ ಪಾಲಕರು ಹೋಂವರ್ಕ್ ಬೇಕು ಎಂದು ಒತ್ತಾಯಿಸಿರುವುದು ಕಂಡು ಬಂತು.

"ವಿದ್ಯಾರ್ಥಿ ಹೋಂವರ್ಕ್‌ನ್ನು ಸಕಾಲದಲ್ಲಿ ಮಾಡಿ ಒಪ್ಪಿಸದಿದ್ದರೆ ಶಿಕ್ಷಕರು ಏನು ಮಾಡುವರು?" ಎಂಬ ಪ್ರಶ್ನೆಗೆ ಸರ್ವೇ ಸಾಮಾನ್ಯವಾಗಿ ಸರಕಾರಿ, ಅನುದಾನಿತ ಮತ್ತು ಖಾಸಗಿ ಶಾಲೆಗಳಲ್ಲಿ ಶಿಕ್ಷಕರು ಮಕ್ಕಳನ್ನು ಬಯ್ಯುವುದು, ದೈಹಿಕವಾಗಿ ದಂಡಿಸುವುದು, ತರಗತಿಯಿಂದ ಹೊರಗೆ ಇರಿಸುವುದು, ಎಲ್ಲಾ ಮಕ್ಕಳ ಮುಂದೆ ಅವಮಾನಿಸುವುದು, ಪುನರಪಿ 10/20 ಬಾರಿ ಬರೆಯಿಸುವುದು, ಇತ್ಯಾದಿಯಾಗಿ ಶಿಕ್ಷೆ ವಿಧಿಸುವ ಕ್ರಮ ಮಕ್ಕಳ ಹೇಳಿಕೆಯಲ್ಲಿ ಕಂಡು ಬಂತು.

ಯಾವುದೇ ತರಗತಿ ಇರಲಿ ಅದರಲ್ಲಿ ಚುರುಕು ಬುದ್ಧಿಯವರು, ಕಲಿಕೆಯಲ್ಲಿ ಮಂದ ಬುದ್ಧಿಯವರು ಹಾಗೂ ನಿಧಾನಗತಿಯವರು ಇರುವುದು ಸರ್ವಸಾಮಾನ್ಯ ಸಂಗತಿ. ಹಾಗಿರುತ್ತಾ ಓರ್ವ ಸಾಮಾನ್ಯ(Average) ವಿದ್ಯಾರ್ಥಿಯ ಗತಿ, ಮತಿ, ಸಾಮರ್ಥ್ಯವನ್ನು ಗಮನದಲ್ಲಿರಿಸಿ ಭಿನ್ನ, ಆಸಕ್ತಿ ಮತ್ತು ಸಾಮರ್ಥ್ಯದ ವಿದ್ಯಾರ್ಥಿಗಳಿಗೆ ಏಕರೂಪದ ಹೋಂವರ್ಕ್‌ನ್ನು ನೀಡುವುದು ಸರಿಯಾದುದಲ್ಲ ಎಂದು ಹೇಳಬೇಕಾಗುತ್ತದೆ. ಮಂದ ಬುದ್ಧಿಯವರಿಗೂ, ನಿಧಾನ ಗತಿಯವರಿಗೂ ಆ ರೀತಿಯ ಹೋಂವರ್ಕ್ ಕಷ್ಟ ಸಾಧ್ಯವಾಗಬಹುದು. ಚುರುಕು ಬುದ್ಧಿಯವರು ಈ ಕೆಲಸದಲ್ಲಿ ಆಸಕ್ತಿ ಇಲ್ಲದೆ ಇರುವವರಾಗುವರು. ಆದುದರಿಂದ ವಿದ್ಯಾರ್ಥಿಗಳ ಗತಿ, ಮತಿ, ಸಾಮರ್ಥ್ಯಕ್ಕನುಗುಣವಾಗಿ ನೀಡುವ ಹೋಂವರ್ಕ್ ವೈವಿಧ್ಯತೆಯುಳ್ಳದಾಗಿರಬೇಕು. ಸಾಧ್ಯವಾದಷ್ಟು ಮಟ್ಟಿಗೆ, ಕೊಡತಕ್ಕ ಹೋಂವರ್ಕ್‌ನ್ನು ವೈಯಕ್ತೀಕರಿಸಿದರೆ ಶೈಕ್ಷಣಿಕವಾಗಿ ಹೆಚ್ಚು ಫಲಪ್ರದವಾಗ ಬಹುದು.

ಮಾತ್ರವಲ್ಲ ಶಿಕ್ಷಣ ಶಾಸ್ತ್ರದ ಪ್ರಕಾರ ಹೋಂವರ್ಕ್ ಎರಡು ರೀತಿಯದ್ದಾಗಿರುವುದು.ಒಂದು ಅನ್ವೇಷಣಾ (discovery) ರೀತಿಯದ್ದು. ಇನ್ನೊಂದು ಪುನರ್ಬಲನ (reinforcement) ರೀತಿಯದ್ದು. ಒಟ್ಟಿನಲ್ಲಿ ಈ ಅಧ್ಯಯನದ ಪ್ರಕಾರ ಎಲ್ಲಾ ಶಾಲೆಗಳಲ್ಲಿ ಶಿಕ್ಷಕರು ಪುನರ್ಬಲನ ರೀತಿಯ ಹೋಂವರ್ಕ್ ಕೊಡುತ್ತಿರುವುದು ತೋರಿಬಂತು. ಅನ್ವೇಷಣಾ ರೀತಿಯ ಹೋಂವರ್ಕ್‌ಗೆ ಅವಕಾಶವಿಲ್ಲದಿರುವುದು ತೋರಿಬಂತು. ಬಹುಷಃ ನಮ್ಮ ಪ್ರಚಲಿತ ಪಠ್ಯಕ್ರಮದಲ್ಲಿ ಇದಕ್ಕೆ ಎಡೆಯಿಲ್ಲದಿರುವುದೇ ಕಾರಣವೆಂದು ಊಹಿಸಬಹುದು. ಹಾಗೂ ಶಿಕ್ಷಕರ ಅಸಡ್ಡೆಯೇ ಕಾರಣವಿರಬಹುದು.

ಉದ್ದೇಶಗಳಿಗನುಸಾರವಾಗಿ ಹೋಂವರ್ಕ್‌ನ್ನು ಮೂರು ವಿಧಗಳಾಗಿ ನೋಡಬಹುದು:

1. ಪುನರಪಿ ಮಾಡುವ ಅಭ್ಯಾಸ(practice )ದಿಂದ ಪುನರ್ಬಲನ,
2. ಮುಂದಿನ ಪಾಠಕ್ಕೆ ತಯಾರಿ(preparation)
3. ಜ್ಞಾನ ವಿಸ್ತರಣೆ( extension).

ಈ ಅಧ್ಯಯನದಲ್ಲಿ ದೊರಕಿದ ಮಾಹಿತಿ ಪ್ರಕಾರ ಹೇಳುವುದಾದರೆ, practice ಮಾದರಿಯೊಂದೇ ಅಂದರೆ ಮುಂಬರುವ ಪರೀಕ್ಷೆಯನ್ನು ಎದುರಿಸಿ ಅಂಕ ಗಳಿಸುವುದೊಂದೇ ಉದ್ದೇಶವೆನ್ನಬಹುದು.

ಇದಕ್ಕೆ ಸಂಬಂಧಿಸಿಯೇ ನೋಡಿದ್ದಲ್ಲಿ, ವಿದ್ಯಾರ್ಥಿಗಳು (ಶೇಕಡಾ100) ಹೇಳಿದ ಪ್ರಕಾರ ಅವರಿಗೆ ಹೋಂವರ್ಕ್ ಚಟುವಟಿಕೆಗಳನ್ನು ಆಯ್ಕೆ ಮಾಡುವ ಸ್ವಾತಂತ್ರ್ಯವೇ ಇಲ್ಲವಾಗಿದೆ. ವಿದ್ಯಾರ್ಥಿಗಳ ಆಯ್ಕೆಗೆ ಅವಕಾಶವಿರುತ್ತಿದ್ದರೆ ಅವರ ಕೆಲಸದಲ್ಲಿ ಹೆಚ್ಚಿನ ಆಸಕ್ತಿ, ಆನಂದ ಮತ್ತು ಮುತುವರ್ಜಿ ಇರಲು ಸಾಧ್ಯವಿದೆ. ಹೆಚ್ಚಿನ ಪಾಲಕರ ಅಭಿಪ್ರಾಯದಂತೆ ಮಕ್ಕಳ ಸಾಮರ್ಥ್ಯಕ್ಕನುಗುಣವಾಗಿ ಹೋಂವರ್ಕ್‌ನ್ನು ನೀಡುವುದು ಒಳಿತು ಎಂದು. ಮಕ್ಕಳು ಹೇಳುವುದೇನೆಂದರೆ, ಅವರಿಗೆ ಹೋಂವರ್ಕ್‌ನ್ನು ಆಯ್ಕೆ ಮಾಡುವ ಸ್ವಾತಂತ್ರ್ಯವಿಲ್ಲವೆಂದು. ಆದರೆ ಶಿಕ್ಷಕರು ಹಾಗೆ ಮಾಡುತ್ತಿಲ್ಲ ಕಾರಣವೇನಿರಬಹುದು? ಮಕ್ಕಳು ಬರೆಯುವ ಉತ್ತರದಲ್ಲಾಗಲೀ, ಯಾ ಇತರ ಚಟುವಟಿಕೆಗಳಲ್ಲಾಗಲಿ, ಏಕರೂಪತೆಯನ್ನು ಶಿಕ್ಷಕರು ಬಯಸುವುದು ಸರ್ವಸಾಮಾನ್ಯವಾಗಿದೆ. ಬಹುಷಃ ನಿರ್ವಹಣೆಯ ದೃಷ್ಟಿಯಿಂದ ಶಿಕ್ಷಕರಿಗೆ ಈ ಕ್ರಮ ಪ್ರಯೋಜನಕಾರಿಯಾಗಿರಬಹುದು. ಇದರಿಂದ ಹೋಂವರ್ಕ್‌ನ ವಿಚಾರದಲ್ಲಿಯೇ ಒಂದು ಗೊಂದಲಮಯ ಪರಿಸ್ಥಿತಿ ಎದ್ದು ಕಾಣುವುದು. ಒಟ್ಟಿನಲ್ಲಿ, ವಿದ್ಯಾರ್ಥಿಯ ಕಲಿಕಾ ಪ್ರಗತಿಗೆ ಹೋಂವರ್ಕ್ ಎಷ್ಟು ಸಹಕಾರಿಯಾಗಿದೆ ಅನ್ನುವುದಕ್ಕಿಂತಲೂ, ಪರೀಕ್ಷೆಯಲ್ಲಿ ಅಂಕಗಳಿಸುವುದಕ್ಕೆ ಹೋಂವರ್ಕ್ ಮುಖ್ಯ ಸಾಧನವಾಗಿದೆ ಎಂಬುದೇ ಈ ಅಧ್ಯಯನದಲ್ಲಿ ಕಂಡು ಬಂದ ಮುಖ್ಯ ಅಂಶವಾಗಿದೆ.

**ಸಲಹೆಗಳು:**

ಹೋಂವರ್ಕ್ ಅರ್ಥಪೂರ್ಣವಾಗ ಬೇಕಾದರೆ, ವಿದ್ಯಾರ್ಥಿಗಳು ತಾವು ತಾವಾಗಿಯೇ ತಮ್ಮ ಅಭಿವ್ಯಕ್ತಿ, ಆಸಕ್ತಿಗಳಿಗನುಗುಣವಾಗಿ ಚಟುವಟಿಕೆಗಳನ್ನು ಆಯ್ಕೆ ಮಾಡುವಂತಿರಬೇಕು. ಉದಾಹರಣೆಗೆ ಸ್ಟಾಂಪ್, ಪಕ್ಷಿಗಳ ಗರಿಗಳು, ಭಾಷಣ ತಯಾರಿ, ನುಡಿಮುತ್ತುಗಳು, ಗಾದೆ ಮಾತುಗಳು ಇವುಗಳ ಸಂಗ್ರಹ, ಅಡುಗೆ ಮನೆಯಲ್ಲಿರುವ ಸಾಮಗ್ರಿಗಳ ಪಟ್ಟಿ, ಮನೆಯ ತೋಟದಲ್ಲಿರುವ ಹೂವು, ತರಕಾರಿಗಳ ಪಟ್ಟಿ, ತನ್ನ ಕುಟುಂಬದ ಬಗ್ಗೆ ಮನೆಯಲ್ಲಿರುವ ಸಾಕು ಪ್ರಾಣಿಗಳು, ಇತ್ಯಾದಿಗಳ ಬಗ್ಗೆ ಪ್ರಬಂಧ ಬರೆಯುವುದು. ಮಾತ್ರವಲ್ಲದೇ ತನ್ನ ಮನೆಯಲ್ಲಿರುವ ಯಾವುದಾದರೂ ವಿನೂತನ ವಸ್ತುವನ್ನು ತರಗತಿಗೆ ತಂದು ಅದರ ಕುರಿತಾಗಿ ಮಾತನಾಡುವ (Show and tell) ಕಾರ್ಯಕ್ರಮವನ್ನು ಹೋಂವರ್ಕ್ ಎಂದು ಪರಿಗಣಿಸಬಹುದು. ಸಾಧ್ಯವಾದಷ್ಟು ಮಟ್ಟಿಗೆ ವ್ಯಾಪಾರೀ ಮನೋಭಾವದಿಂದ ಸಿದ್ಧಮಾಡಿದ ವಸ್ತು ಸಾಮಗ್ರಿಗಳ ಬಳಸುವಿಕೆಯನ್ನು ಕಡಿಮೆ ಮಾಡಬೇಕು.

ಮಕ್ಕಳ ಅಭಿಪ್ರಾಯದಂತೆ ಕೋಪಿ ಬರೆಯುವ ಕೆಲಸವನ್ನು ಹೋಂವರ್ಕ್ ಆಗಿ ಕೊಡುವುದು ಸರಿಯಲ್ಲ ಎಂದು ತೋರಿ ಬಂದಿದೆ. ಯಾಕೆಂದರೆ ಶಾಲೆಯಲ್ಲೂ ಅವರು ಅದೇ ಕೆಲಸವನ್ನು ಮಾಡುವುದರಿಂದ ಮನೆಯಲ್ಲಿಯೂ ಬರೆಯುವುದೆಂದರೆ ಅವರಿಗೆ ಹಿಡಿಸದು. ಅದುದರಿಂದ ಮಕ್ಕಳಿಗೆ ಸಾಧ್ಯವಾದಷ್ಟು ಸ್ವಪ್ರಚೋದಿತ ಅನ್ವೇಷಣಾ ಚಟುವಟಿಕೆಯನ್ನು ನೀಡುವುದು ಒಳಿತು.

ವಿಷಯವಾರು ಶಿಕ್ಷಕರು ಹೋಂವರ್ಕ್ ನೀಡುವ ಮೊದಲು ತಮ್ಮೊಳಗೆ ಸಮಾಲೋಚಿಸಿ ಹೋಂವರ್ಕ್ ನೀಡುವುದು ಉಚಿತ. ಒಂದೊಂದು ದಿನ ಒಂದೊಂದು ವಿಷಯಕ್ಕೆ ಮೀಸಲಾಗಿಡಬಹುದು. ವಾರದಲ್ಲಿ 5 ದಿನ ಮಾತ್ರ ಹೋಂವರ್ಕ್ ಇದ್ದರೆ ಸಾಕು. ಏನೆಂದರೂ ದಿನ ಒಂದಕ್ಕೆ 1/2 ತಾಸಿನಿಂದ 1 ತಾಸಿನಷ್ಟು pactice, preparation, extension ಉದ್ದೇಶಗಳನ್ನೊಳಗೊಂಡ ಹೋಂವರ್ಕ್ ನೀಡಬಹುದು. ಅದರಲ್ಲೂ preparation, extension ಉದ್ದೇಶ ಸಾಧನೆಗೆ ಆದ್ಯತೆ ಕೊಡಬೇಕು. ಶಾಲೆಯಲ್ಲಿ ಪಾಠ ಮಾಡಿ ಮುಗಿಸಲಾಗದುದನ್ನು ಹೋಂವರ್ಕ್ ಆಗಿ ಕೊಡುವುದು ಒಳ್ಳೆಯದಲ್ಲ ಹೋಂವರ್ಕ್ ಅನ್ನು ಶಿಕ್ಷೆಯಾಗಿ ಎಂದೆಂದೂ ಕೊಡಬಾರದು.

ಒಟ್ಟಿನಲ್ಲಿ ಹೇಳುವುದಾದರೆ, ಹೋಂವರ್ಕ್‌ನ ಕುರಿತಾಗಿ ಶಿಕ್ಷಣ ಇಲಾಖೆಯು ನಿರ್ದಿಷ್ಟ ನೀತಿ ನಿಯಮಗಳನ್ನು ಜಾರಿಗೊಳಿಸಬೇಕು. ತಜ್ಞರ ಸಮಿತಿಯಲ್ಲಿ ಸಮಾಲೋಚಿಸಿ ನೀತಿ ನಿಯಮಗಳನ್ನು ಜಾರಿಗೊಳಿಸಬೇಕಾಗಿದೆ. ಇಲ್ಲವಾದರೆ ಮಕ್ಕಳ ಶಾಲಾ ಶಿಕ್ಷಣ "ಶಿಶು ಸ್ನೇಹಿ", ಆನಂದದಾಯಕ, ಅರ್ಥಪೂರ್ಣ ಶಿಕ್ಷಣವಾಗದು.

***

# ಮಗು ಕೇಂದ್ರಿತ ಶಿಕ್ಷಣದ ಪರಿಕಲ್ಪನೆ



✍ ಸಿ. ಎಚ್. ಕೃಷ್ಣಶಾಸ್ತ್ರಿ ಬಾಳಿಲ




ಈ ತ್ರಿಕೋನ ಸೂಚಿಸುವ ಶಿಕ್ಷಣ ಪದ್ಧತಿಯ ಮೂಲ ಅಥವಾ ಕಾಲ ಮತ್ತು ಯಾವಾಗ ಎಂದು ನಿರ್ಧರಿಸುವುದು ಕಷ್ಟ. ಜ್ಞಾನ ಎಂದರೆ ಇದು (ಗ್ರಂಥಗಳಲ್ಲಿ ಹೇಳಿದ್ದು ಅಥವಾ ಹಿರಿಯರು ಹೇಳಿದ್ದು ಅಥವಾ ನಂಬಿದ್ದು). ಅದನ್ನು ಶಿಕ್ಷಕನು ಬೋಧಿಸುತ್ತಾನೆ. ಮಗು ಅದನ್ನು ಕಲಿಯಬೇಕು. ಹೀಗೆ ಸಿದ್ಧವಾಗಿದ್ದ ಜ್ಞಾನವನ್ನು, ಶಿಕ್ಷಕನ ಮುಖೇನ ಸಂಪಾದಿಸುವುದೇ ಮಗುವಿನ ಪಾಲಿಗೆ ವಿದ್ಯೆ ಎಂಬ ಭಾವನೆ ಒಂದು ಕಾಲದಲ್ಲಿ ರೂಢಿಯಲ್ಲಿತ್ತು. ಮಗುವಿಗೆ ಅದುವೇ 'ಮಹಾ ಪ್ರಸಾದ'ವಾಗಿತ್ತು. ಮಗು ಏನನ್ನು ಕಲಿಯಬೇಕು, ಎಷ್ಟು ಕಲಿಯಬೇಕು, ಯಾವಾಗ ಕಲಿಯಬೇಕು ಎಂಬುದನ್ನೆಲ್ಲ ಹಿರಿಯರೇ ನಿರ್ಧರಿಸುತ್ತಿದ್ದರು. ಕಲಿಯುವ ವಿಷಯಕ್ಕೆ ಮೊದಲ ಸ್ಥಾನ. ಬೋಧಕನಿಗೆ ಎರಡನೇ ಸ್ಥಾನ. ಕಲಿಯುವ ಮಗುವಿಗೆ ಕೊನೆಯ ಸ್ಥಾನ. ಮಗುವಿನ ಅಗತ್ಯಗಳು, ಆಸಕ್ತಿಗಳು, ಅವಶ್ಯಕತೆಗಳು, ಅಭಿರುಚಿಗಳು ಎಲ್ಲವೂ ನಗಣ್ಯವಾಗಿದ್ದುವು. 'ಇದು ಜ್ಞಾನ; ಇದು ವಿದ್ಯೆ; ಇದನ್ನು ನೀನು ಕಲಿ' ಎಂಬ ವಿಷಯ ಕೇಂದ್ರಿತ ಬೋಧನೆಯೇ ಶಿಕ್ಷಣದ ನೆಲೆಯಾಗಿತ್ತು; ಅದುವೇ ವಿದ್ಯೆಯ ಮೂಲಮಂತ್ರವಾಗಿತ್ತು. ಶಿಕ್ಷಣವೆಂಬುದು ಮುಖ್ಯವಾಗಿ ಹಿರಿಯರ ನಿರೀಕ್ಷೆ, ಗುರಿ, ಉದ್ದೇಶ, ಮನೋದೃಷ್ಟಿಗಳಿಗೆ ಅನುಗುಣವಾಗಿ ಮಗುವನ್ನು ಮುಂದಿನ ಬದುಕಿಗೆ ಸಿದ್ಧಗೊಳಿಸುವ ಕ್ರಿಯೆಯಾಗಿತ್ತು.




ಅಂದು ವಿಷಯ ಕೇಂದ್ರಿತವಾಗಿದ್ದ ಶಿಕ್ಷಣ ಪದ್ಧತಿ ಕ್ರಮ ಕ್ರಮೇಣ ಶಿಕ್ಷಕ ಕೇಂದ್ರಿತ ಪದ್ಧತಿಯಾಗಿ ರೂಢಿಗೆ ಬಂತು. ಇಲ್ಲಿ ಬೋಧಕನೇ ಮುಖ್ಯ. ಮಗುವಿಗೆ ಏನನ್ನು ಕಲಿಸಬೇಕು. ಹೇಗೆ ಕಲಿಸಬೇಕು, ಎಷ್ಟು ಕಲಿಸಬೇಕು ಎಂಬ ನಿರ್ಣಯವೂ ಆತನದೆ. ಪಠ್ಯವಸ್ತು [curriculum] ಬೋಧಕನ ವಿಧಾನ, ಬೋಧನಾ ತಂತ್ರ ಇತ್ಯಾದಿಗಳು ಮುಖ್ಯವಾಗಿ, ಅವು ಶಿಕ್ಷಣದಲ್ಲಿ ಹೆಚ್ಚು ಒತ್ತು ಮತ್ತು ಮಹತ್ವ ಪಡೆದವು. ಬೋಧಕನ ವೈಯಕ್ತಿಕ ವರ್ತನೆ, ಬದುಕಿನ ವಿಧಾನ, ರೀತಿ ನೀತಿ ಮೊದಲಾದವುಗಳು ಮಗುವಿನ ಬದುಕನ್ನು ನಿಯಂತ್ರಿಸುತ್ತವೆ, ಅವನ ಭವಿಷ್ಯವನ್ನು ರೂಪಿಸುತ್ತವೆ ಎಂಬ ನಂಬಿಕೆ ಬೆಳೆದು, ಒಟ್ಟು ಶಿಕ್ಷಕನೇ ಶಿಕ್ಷಣದ ಕೇಂದ್ರ ಬಿಂದುವಾಗಿ ಉಳ್ಳ ಪದ್ಧತಿ ರೂಢಿಗೆ ಬಂತು. ಇಲ್ಲಿ ಶಿಕ್ಷಕನಿಗೆ ಮೊದಲ ಸ್ಥಾನ. ಕಲಿಯುವ ವಿಷಯಕ್ಕೆ ಎರಡನೇ ಸ್ಥಾನ. ಮಗುವಿಗೆ ಈ ಹಿಂದಿನಂತೆ ಕೊನೆಯ ಸ್ಥಾನ. ಕಲಿಯುವ ವಿಷಯಕ್ಕೆ ಎರಡನೇ ಸ್ಥಾನ. ಮಗುವಿಗೆ ಈ ಹಿಂದಿನಂತೆ ಕೊನೆಯ ಸ್ಥಾನ ಇದ್ದು, ಮಗುವಿನ ಎಲ್ಲ ವೈಯಕ್ತಿಕ ಹಿತಾಸಕ್ತಿಗಳನ್ನು, ಅಶೋತ್ತರಗಳನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿತ್ತು. ಒಟ್ಟು ಶಿಕ್ಷಣ ಪ್ರಕ್ರಿಯೆಯಲ್ಲೇ ಮಗುವಿನ ಧ್ವನಿಯನ್ನು ತೀರಾ ನಿರ್ಲಕ್ಷಿಸಲಾಗಿತ್ತು. ಶಿಕ್ಷಕನೇ ಮಗುವಿನ ಭವಿಷ್ಯದ ರೂವಾರಿಯಾಗಿದ್ದ. ಆತನೇ ಮಗುವನ್ನು ಎರಕ [mould] ಹೊಯ್ಯುತ್ತಿದ್ದ. 'ಗುರುವಿನ ಗುಲಾಮನಾಗುವ ತನಕ...' ಎಂಬ ದಾಸವಾಣಿ ಈ ಪದ್ಧತಿಗೆ ತುಂಬ ಹೊಂದಿಕೊಳ್ಳುವಂತಹದು.



ಸದ್ಯದ ದಿನಗಳಲ್ಲಿ ನಾವು ಬಹಳವಾಗಿ ಕೇಳುತ್ತಿರುವ, ವ್ಯಾಪಕವಾಗಿ ಚರ್ಚಿಸುತ್ತಿರುವ, ಶಿಕ್ಷಣ ವಲಯದಲ್ಲಿ ಬಹು ಮಹತ್ವ ಪಡೆಯುತ್ತಿರುವ ಶಿಶು ಕೇಂದ್ರಿತ ಶಿಕ್ಷಣದ ಪರಿಕಲ್ಪನೆಯೇ ಈಗ ಕೆಲವು ದಶಕಗಳಿಂದ ಈಚೆಗಷ್ಟೇ ಹುಟ್ಟಿಕೊಂಡಂತಹದು. ಇದು ಹುಟ್ಟಿಕೊಂಡದು ಕೂಡಾ ನಮ್ಮ ದೇಶದಲ್ಲಲ್ಲ. ಪಾಶ್ಚಿಮಾತ್ಯ ಶಿಕ್ಷಣವೇತ್ತರಾದ ರೂಸೊ, ಪೆಸ್ಟಲಾಟ್ಸಿ, [Pestalozzi] ಪ್ರೊಬೆಲ್, ಜೋನ್ ಡ್ಯುಯಿ, ಪಿಯಾಜೆ, ಮಾಂಟೆಸೋರಿ ಮೊದಲಾದವರ ಅನುಭವ ಜನ್ಯವಾದ ಕೊಡುಗೆ ಇದು. ಈ ಪರಿಕಲ್ಪನೆಯ ಒಟ್ಟು ಆಶಯವನ್ನು ಅರ್ಥ ಮಾಡಿಕೊಂಡು, ಭಾರತದಲ್ಲಿ ಇದಕ್ಕೊಂದು ಪ್ರಾಯೋಗಿಕ ನೆಲೆಯನ್ನು ಒದಗಿಸಲು ಪ್ರಯತ್ನಿಸಿದವರು ರವೀಂದ್ರನಾಥ ಠಾಗೋರ್ ಮತ್ತು ಮಹಾತ್ಮಗಾಂಧಿ, ಠಾಗೋರರ ಶಾಂತಿನಿಕೇತನ ಹಾಗೂ ಗಾಂಧೀಜಿಯವರ ವಾರ್ಧಾ ಶಿಕ್ಷಣ ಕ್ರಮ ಇವೆಲ್ಲವೂ ಶಿಶು ಕೇಂದ್ರಿತ ಶಿಕ್ಷಣದ ಮೂಲ ಆಶಯವನ್ನು ಹೊಂದಿದ್ದುವು. "ನಾ ಒಳಗಿನ ಗಿಣಿಯನ್ನು ಮರೆತು ಅಥವಾ ಅಲಕ್ಷಿಸಿ, ಹೊರಗಿನ ಪಂಜರವನ್ನು ಶೃಂಗರಿಸುವುದರಲ್ಲಿ ಮಾತ್ರ ತೊಡಗಿದ್ದೇವೆ" ಎನ್ನುವ ಠಾಗೋರರ ಮಾತು, ಹಾಗೂ "ಮಗುವಿನಲ್ಲಿ ಈಗಾಗಲೇ ಅಂತರ್ಗತವಾಗಿರುವ ಸತ್ವವನ್ನು ಹೊರಗೆಳೆದು ಅರಳಿಸುವುದೇ ಶಿಕ್ಷಣದ ಉದ್ದೇಶ" ಎನ್ನುವ ಗಾಂಧೀಜಿಯವರ ಮಾತು ಇದಕ್ಕೆ ಸಾಕ್ಷಿ.

**ಶಿಶು ಕೇಂದ್ರಿತ ಶಿಕ್ಷಣದ ಕೆಲವು ಪರಿಕಲ್ಪನೆಗಳು**

ಮಗುವಿಗೆ ಎಂದೂ, ಏನನ್ನೂ ಕಲಿಸಬೇಡ. ಸೂಕ್ತ ಸನ್ನಿವೇಶ, ಅವಕಾಶಗಳು ದೊರೆತಾಗ ಮಗುವೇ ತನ್ನ ಆಸಕ್ತಿ, ಅಭಿರುಚಿ, ಅಗತ್ಯ, ಸಾಮರ್ಥ್ಯಗಳಿಗನುಗುಣವಾಗಿ, ತನಗೆ ಬೇಕಾದ್ದನ್ನು ತಾನೇ ಹುಡುಕಿ [discover] ಕಂಡುಕೊಳ್ಳುತ್ತದೆ. ಮಗುವಿಗೆ ಈ ಕುತೂಹಲದ ಅನ್ವೇಷಣೆಯಲ್ಲಿ ತೊಡಗಿಕೊಳ್ಳಲು ಮನೋಲ್ಲಾಸದ ಚಟುವಟಿಕೆಗಳು, ಆಟಗಳು ಬೇಕು. ಇದಕ್ಕಿಂತಲೂ ಹೆಚ್ಚು ಮುಖ್ಯವಾಗಿ ಕಲಿಕೆಯ, ಆಯ್ಕೆಯ ಸ್ವಾತಂತ್ರ್ಯಬೇಕು. ಮಗುವಿನ ಪಾಲಿಗೆ ಕಲಿಕೆ ಎಂಬುದು ಯಾವಾಗಲೂ ಸ್ವಯಂಸ್ಫೂರ್ತಿಯಿಂದ ಮತ್ತು ಸ್ವಯಂಪ್ರೇರಣೆಯಿಂದ ಕೂಡಿರುವಂಥಾದ್ದು. ಶಿಕ್ಷಣವೆಂಬುದು ಎಂದೂ ಮಗುವಿನ ಬದುಕಿನಿಂದ ಬೇರೆಯದ್ದಲ್ಲ. ಅದು ಬದುಕಿನಿಂದ ಹೊರಗಿದ್ದು ಅಥವಾ ದೂರವಿದ್ದು ಪಡೆಯುವಂಥಾದ್ದಲ್ಲ. ಬದುಕೇ ಶಿಕ್ಷಣ [education is life itself].ಅದು ಬದುಕುತ್ತಾ ಪಡೆಯಬೇಕಾದ್ದು. ಈ ಪ್ರಕ್ರಿಯೆಯಲ್ಲೇ ಮಗುವಿನ ಬದುಕು, ಸ್ವಭಾವ, ಆಸಕ್ತಿಗಳು ತೆರೆಯುತ್ತಾ, ಅರಳುತ್ತಾ ಹೋಗಬೇಕು. ಕಲಿಕೆ ಎಂಬುದು ಸದಾಕಾಲವೂ ಮಗುವಿನ ಸೀದಾ, ನೇರ ಅನುಭವಕ್ಕೆ ಬರುವಂಥಾದ್ದು. ಅನುಭವದಿಂದ ಹುಟ್ಟಿಕೊಳ್ಳದ, ಅದರಿಂದ ಹೊರಗಾದ ಕಲಿಕೆ ಎಂದೂ ನಿಜ ಅರ್ಥದಲ್ಲಿ ಕಲಿಕೆಯಲ್ಲ. ಅದು ಸೋಗಿನ ಕಲಿಕೆ [pseudo learning], ತೋರಿಕೆಯ ಕಲಿಕೆ. ಈ ಅನುಭವಜನ್ಯ ಕಲಿಕೆಯಲ್ಲಿ ಮಗುವಿನ ಅವಶ್ಯಕತೆಗಳು ಮತ್ತು ಆಸಕ್ತಿಗಳೇ ಮುಖ್ಯ ಪಾತ್ರವಹಿಸುತ್ತವೆ; ಮತ್ತು ಇವೆಲ್ಲವೂ ಸ್ವಯಂ ನಿರ್ಧಾರಿತವಾಗಿರುತ್ತವೆ. ಇಲ್ಲಿ ಮಗುವಿನ ಕಲಿಕೆ ಸ್ವಯಂ ನಿರ್ದೇಶಿತವಾಗಿರುತ್ತದೆ ಹೊರತು ಹೊರಗಿನಿಂದ ಮಗುವಿನ ಮೇಲೆ ಬಲಾತ್ಕಾರದಿಂದ ಹೇರಲ್ಪಟ್ಟವುಗಳಾಗಿರುವುದಿಲ್ಲ; ಅಥವಾ ಬಾಹ್ಯ ನಿರ್ದೇಶಿತವಾಗಿರುವುದಿಲ್ಲ. ಎಲ್ಲ ರೀತಿಯ ಕಲಿಕೆಯೂ ಮಗುವಿನ ನೇರ ಅನುಭವಕ್ಕೆ ದಕ್ಕುವಂತಹದು. ಅನುಭವವೇ ಮಗುವಿನ ಮಾರ್ಗದರ್ಶಿ.

ಇಂತಹ ಶಿಕ್ಷಣ ಪ್ರಕ್ರಿಯೆಯಲ್ಲಿ ಮಗುವಿಗೆ ತನ್ನ ಭವಿಷ್ಯದ ಕುರಿತು ಯಾವುದೇ ನಿರ್ದಿಷ್ಟ, ಪೂರ್ವ ನಿಶ್ಚಿತ ನಿರೀಕ್ಷೆಗಳಿರುವುದಿಲ್ಲ. ಇಲ್ಲಿ ಸಿದ್ಧ ಜ್ಞಾನವಿರುವುದಿಲ್ಲ. ಇಲ್ಲಿಯ ಕಲಿಕೆ ಮುಂದಿನ ಬದುಕಿನ ತಯಾರಿಯಲ್ಲ. ಇದು ಫಲಾಧಾರಿತವಲ್ಲ. ಇಲ್ಲಿ ಬೋಧನೆಗೆ ಮೊದಲ ಮಣೆ ಇಲ್ಲ. ಇವುಗಳ ಬದಲಾಗಿ ಇಲ್ಲಿರುವುದು ಸ್ವಯಂ ನಿರ್ದೇಶನ; ಸ್ವಯಂ ಪ್ರೇರಣೆ; ಜ್ಞಾನಾನ್ವೇಷಣೆ; ಆಸಕ್ತಿಗನುಗುಣವಾದ ಕಲಿಕೆ, ಪ್ರಕ್ರಿಯಾಧಾರಿತ ಕಲಿಕೆ; ಇಲ್ಲಿ ಸ್ವಕಲಿಕೆಯೇ ಮುಖ್ಯವಾಗಿದ್ದು, ಎಲ್ಲಕ್ಕೂ ಕಲಿವಾತನೇ ಕೇಂದ್ರ.

ಇಂತಹ ಒಂದು ಶಿಕ್ಷಣದ ವಿಧಾನದಲ್ಲಿ ಕಲಿಕೆಗೆ ನೆರವಾಗುವ ಬಹುಮುಖ್ಯ ಅಂಶಗಳಾದ ಮಗುವಿನ ವೈಯಕ್ತಿಕ ಘನತೆಗೆ [Self dignity] ಮನ್ನಣೆ ಇದೆ. ಸ್ವಯಂ ಮೌಲ್ಯಕ್ಕೆ [Self worth] ಗೌರವವಿದೆ; ಕಲಿಕೆಯ ಆಯ್ಕೆಗೆ, ಸ್ವಾತಂತ್ರ್ಯಕ್ಕೆ ಬಹು ಮಹತ್ವದ ಸ್ಥಾನವಿದೆ.

ನಿಜ ಅರ್ಥದಲ್ಲಿ ಶಿಕ್ಷಣ ಎಂದರೇನು? ಅದು ಎಂದೂ ಫಲವನ್ನೇ, ಯಶಸ್ಸನ್ನೇ, ಫಲಿತಾಂಶವನ್ನೇ ಆಧಾರಿತವಾಗಿರುವಂತಹದಲ್ಲ. ಬದಲಾಗಿ ಅದು ಫಲವನ್ನು ಪಡೆಯಲು, ಯಶಸ್ಸನ್ನು ಕಾಣಲು, ಫಲಿತಾಂಶವನ್ನು ಹೊಂದಲು ಸಾಗುವ ದಾರಿಗೆ ಸಂಬಂಧಿಸಿದ್ದು. ಸರಳವಾಗಿ ಹೇಳುವುದಾದರೆ ಅದು ಪ್ರಕ್ರಿಯಾಧಾರಿತವಾದದ್ದು [process oriented]. ಅದು ಮಗುವಿಗೆ ಒಂದು ವಿಷಯವನ್ನು ಬೋಧಿಸುವುದು [teaching the subject] ಅಲ್ಲ ಅದು ಮಗುವಿಗೇ ಬೋಧಿಸುವುದು [teaching the person] ಅದು ಮಗುವಿನ ಬದುಕಿನ ಭಾಗವಾಗಿ ಇರುವಂತಹದು. ಈ ದೃಷ್ಟಿಯಲ್ಲಿ ನೋಡಿದಾಗ ಮಗುವಿನ ಶಿಕ್ಷಣ ಮತ್ತು ಜೀವನ ಇವನ್ನು ಪ್ರತ್ಯೇಕಿಸಿ ಎಂದೂ  ಬಿಡಿಬಿಡಿಯಾಗಿ ನೋಡಲು ಸಾಧ್ಯವಿಲ್ಲ.

ಶಿಶುಕೇಂದ್ರಿತ ಶಿಕ್ಷಣದ ಬಹುಮುಖ್ಯ ಉದ್ದೇಶಗಳಲ್ಲಿ ಒಂದು, ಮಗುವನ್ನು ಎಲ್ಲ ಬಂಧನಗಳಿಂದ – ಸಾಮಾಜಿಕ ಕಟ್ಟುಪಾಡು, ತಲೆತಲಾಂತರದಿಂದ ಬಂದ ರೂಢಿಗತ ಅಭ್ಯಾಸಗಳು, ಕಂದಾಚಾರಗಳು, ಇತ್ಯಾದಿಗಳಿಂದ ಬಿಡುಗಡೆಗೊಳಿಸುವುದು. [liberation] ಇದನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಮಗುವಿನಲ್ಲಿ ತೆರೆದ ಮನಸ್ಸನ್ನು, ಮುಕ್ತಚಿಂತನೆಗಳನ್ನು ಉದ್ದೀಪನ–ಗೊಳಿಸುವುದು.

ಇಂದು ಶಿಕ್ಷಣದ ಪಠ್ಯ, ವಸ್ತು, ವಿಷಯ, ಅದರ ಮಟ್ಟ, ಪರೀಕ್ಷಾ ವಿಧಾನ, ಮಗುವಿನ ಸಾಧನೆ ಇವೆಲ್ಲವನ್ನೂ ತೂಗಿ ನಿರ್ಧರಿಸುವವರು ಹಿರಿಯರು, so called ವಿದ್ಯಾವಂತರು; ಅರ್ಥಾತ್ ಬಾಹ್ಯ ಅಂಗಗಳು ಅಥವಾ ವ್ಯಕ್ತಿಗಳು. ಇದರ ಬದಲಾಗಿ ಶಿಶು ಕೇಂದ್ರಿತ ಶಿಕ್ಷಣದ ಕಲ್ಪನೆಯೇ ತೀರಾ ಭಿನ್ನವಾದದ್ದು. ಇಲ್ಲಿ ಮಗುವಿಗೆ ಏನನ್ನು ಕಲಿಯಬೇಕು, ಹೇಗೆ ಕಲಿಯಬೇಕು ಎಂಬ ವಿಚಾರದಲ್ಲಿ ಆಯ್ಕೆಯ ಸ್ವಾತಂತ್ರ್ಯವಿದೆ. ಇಲ್ಲಿ ಕಲಿಕೆಗೆ ಮಗು ತಾನೇ ಜವಾಬ್ದಾರಿ [self responsible] ಅದಕ್ಕೆ ಅದುವೇ ಹೊಣೆ. ಮಗು ಕಲಿಕೆಯಲ್ಲಿ ತಾನೇ ಆಸಕ್ತಿ ತಾಳಿ, ತಾನಾಗಿಯೇ ಮುನ್ನುಗ್ಗುತ್ತದೆ [initiative] ಕಲಿಕಾ ಚಟುವಟಿಕೆಗಳಲ್ಲಿ ತನ್ನ ಸಾಮರ್ಥ್ಯಕ್ಕನುಗುಣವಾಗಿ ತಾನೇ ತೊಡಗಿಕೊಳ್ಳುತ್ತದೆ. ಇಲ್ಲಿ ಬಾಹ್ಯ ಒತ್ತಡಗಳಿಲ್ಲ. ಯಾರೂ push ಮಾಡುವುದಿಲ್ಲ. ತನ್ನ ಕಲಿಕೆಗೆ ತಾನೇ ಹೊಣೆ ಎಂಬ ಅರಿವಿನೊಂದಿಗೆ ಮಗು ಮುನ್ನಡೆಯುತ್ತದೆ. ತನ್ನ ಅಗತ್ಯಗಳ ಪೂರೈಕೆಗೆ ಬೇಕಾದ್ದನ್ನೇ, ಬೇಕಾದಷ್ಟನ್ನೇ ಕಲಿಯುತ್ತದೆ. ಕಲಿಕೆಯಲ್ಲಾಗುವ ತಪ್ಪುಗಳನ್ನು ತಾನೇ ಕಂಡುಕೊಂಡು ಅದನ್ನು ಸರಿಪಡಿಸುತ್ತಾ [self correction] ತನ್ನನ್ನು ತಾನೇ ತಿದ್ದಿಕೊಳ್ಳುತ್ತಾ ಮುಂದುವರಿಯುತ್ತದೆ.

ಈ ಪ್ರಕ್ರಿಯೆಯಲ್ಲಿ ಮಗು ತನ್ನನ್ನು ತಾನೇ ಪ್ರಶ್ನಿಸಿಕೊಳ್ಳುತ್ತದೆ, ವಿಮರ್ಶಿಸಿಕೊಳ್ಳುತ್ತದೆ. ಸ್ವಾಧ್ಯಾಯ ಸ್ವವಿಮರ್ಶೆ, ಸ್ವಸಮೀಕ್ಷೆ, ಸ್ವಮಾಪನ, ಸ್ವಾವಲಂಬನೆ ಇವೇ ಇಲ್ಲಿಯ watch words ಈ ಎಲ್ಲ ಸ್ವಯಂಗಳ ಮೂಲಕ ನೇರ ಬೋಧನೆಯಿಲ್ಲದೆ, ಸ್ವತಂತ್ರವಾಗಿ ಕಲಿಯುವುದು ಹೇಗೆ ಎಂಬುದನ್ನು ಮಗು ಕಲಿತುಕೊಳ್ಳುತ್ತದೆ [learning to learn]. ಇಲ್ಲಿ ಹೇಗೆ ಕಲಿಕೆ, ಎಷ್ಟು ಕಲಿಕೆ, ಏನು ಕಲಿಕೆ ಎಂಬುದನ್ನೆಲ್ಲ ಮಗು ತಾನೇ ತಾನಾಗಿ ಯೋಜಿಸುತ್ತದೆ, ನಿರ್ಧರಿಸುತ್ತದೆ. ತಾನು ಏನನ್ನು ಕಲಿಯುತ್ತಿದ್ದೇನೆ, ಎಷ್ಟು ಕಲಿಯುತ್ತಿದ್ದೇನೆ, ಎಷ್ಟು ಚೆನ್ನಾಗಿ ಕಲಿಯುತ್ತಿದ್ದೇನೆ, ಹೇಗೆ ಕಲಿಯುತ್ತಿದ್ದೇನೆ ಎಂಬ ಅಂಶಗಳನ್ನು ಸ್ವಮಾಪನದ [self assessment] ಮೂಲಕ ಮಗುವೇ ಸ್ವತಃ ಅರಿತುಕೊಳ್ಳುತ್ತದೆ.

ಹಾಗಾದರೆ ಈ ವಿಧಾನದಲ್ಲಿ ಶಿಕ್ಷಕನಿಗೆ ಯಾವ ಸ್ಥಾನವೂ ಇಲ್ಲವೇ? ಆತನ ಪಾತ್ರ ಬರಿಯ ಶೂನ್ಯವೇ? ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ಆತನಿಗೆ, ಸಂದೇಹಾತೀತವಾಗಿ ಸ್ಥಾನವಿದೆ, ಸಹಾಯಕನ ಪಾತ್ರವೂ ಇದೆ. ಆದರೆ ಇದು ನಮ್ಮ ಸಾಂಪ್ರದಾಯಿಕ, ರೂಢಿಬದ್ಧ ರೀತಿಯದ್ದಲ್ಲ. ಮಗುವಿನ ಕಲಿಕಾ ಚಟುವಟಿಕೆಗಳಲ್ಲಿ ಮಗು ಅಪೇಕ್ಷಿಸಿದಾಗ ನೆರವಾಗುವುದು ಅಷ್ಟೆ. ತನಗೆ ಅವಶ್ಯವೆಂದು ಕಂಡುಬಂದಾಗ ಮುಂದಿನ ತಿಳಿವಿಗಾಗಿ, ಅನ್ವೇಷಣೆಗಾಗಿ, ಸಂದೇಹ ನಿವಾರಣೆಗಾಗಿ ಮಗುವೇ ಶಿಕ್ಷಕನನ್ನು

ಸಮೀಪಿಸಿದಾಗ ಆತನ ಕಲಿಕೆಗೆ ಅನುಕೂಲಿಸುವುದು ಅಷ್ಟೇ. ಇಲ್ಲಿ ಶಿಕ್ಷಕ ಬೋಧಕನಲ್ಲ, ಕೇವಲ ಸಹಾಯಕ [facilitator] ಇಲ್ಲಿ ಮಕ್ಕಳಿಗೆ ಶಾಲೆ ಎಂದರೆ ಹಲವು ಬಂಧನಗಳಿಂದ ಕೂಡಿದ ಒಂದು ಜೈಲು ಅಲ್ಲ. ಅದು ಮಕ್ಕಳ ಕಲಿಕೆಯ ಸಂಪನ್ಮೂಲಗಳ ಕೇಂದ್ರ.

ಇಂತಹ ಒಂದು ಶಿಕ್ಷಣ ಕ್ರಮ ನಮ್ಮ ಸಾಂಪ್ರದಾಯಿಕ ಶಾಲೆಗಳಲ್ಲಿ, ಪರಂಪರಾಗತ ವ್ಯವಸ್ಥೆಯಲ್ಲಿ ಸಾಧ್ಯವೇ? ಇನ್ನೂ ಬೇಕಾದಂತೆ ಕೈ ಬೆರಳುಗಳನ್ನು ಆಡಿಸುವ, ತಿರುಗಿಸುವ ಕೌಶಲಗಳೇ ಬೆಳೆಯದ ಮೂರು ವರ್ಷದ ಹಸುಳೆಗಳನ್ನು ಠಾಕುಠೀಕಾದ ಯೂನಿಫಾರ್ಮ್ ತೊಡಿಸಿ ಎಲ್‌ಕೆಜಿ, ಯುಕೆಜಿಗಳೆಂಬ ಹಿಂಸಾಲಯುಕ್ಕೆ, ಬಂಧೀಖಾನೆಗೆ ತಳ್ಳಿ, ಇಂಗ್ಲೀಷ್ ವರ್ಣಮಾಲೆಯನ್ನು ಅಭ್ಯಾಸ ಮಾಡಿ, ಒಂದೆರಡು ಇಂಗ್ಲೀಷ್ ಶಬ್ದಗಳನ್ನು ಪಟಪಟನೆ ಉದುರಿಸುವುದೇ ಶಿಕ್ಷಣವೆಂದು ತಿಳಿದ ಸದ್ಯದ ವ್ಯವಸ್ಥೆಯಲ್ಲಿ ಮಕ್ಕಳ ಗೋಳಿಗೆ ಕೊನೆಯೆಲ್ಲಿ?

ನಮ್ಮಲ್ಲಿ ಇಂದು ಎಷ್ಟು ಮಂದಿಗೆ ಕಿಂಡರ್ ಗಾರ್ಟನ್ (ಮಕ್ಕಳ ಹೂದೋಟ) ಸ್ಕೂಲ್‌ಗಳ ನಿಜವಾದ ಕಲ್ಪನೆಯ ಅರಿವಿದೆ? ಯಶಸ್ಸನ್ನೇ ಬೆನ್ನಟ್ಟಿ, ರ್‍ಯಾಂಕ್ ಗಳಿಕೆಯ ಸ್ಪರ್ಧೆಯಲ್ಲಿ ಮಗುವಿನ ಎಲ್ಲ ಸಹಜ ಆನಂದಗಳನ್ನೂ ಚಿವುಟಿ ಹಾಕುವ, ಗೆಲ್ಲುವುದನ್ನೇ ಪರಮ ಮೌಲ್ಯವೆಂದು ನಂಬಿರುವ ಸದ್ಯದ ವ್ಯವಸ್ಥೆಯಲ್ಲಿ ಶಿಶು ಕೇಂದ್ರಿತ ಶಿಕ್ಷಣ ಎಲ್ಲಿಂದ, ಯಾರಿಂದ, ಹೇಗೆ ಆರಂಭವಾಗಬೇಕು? ಇದನ್ನೆಲ್ಲ ಯೋಚಿಸುವ ವ್ಯವಧಾನವಿಲ್ಲದ್ದರಿಂದಲೇ ಮಕ್ಕಳಿಂದ ಶಿಕ್ಷಣವಂತರಾಗದೆ, ಜ್ಞಾನದಿಂದ ವಂಚಿತರಾಗಿ, ಮಾಹಿತಿಗಳನ್ನು ಹೊತ್ತ ಕತ್ತೆಗಳಾಗುತ್ತಿದ್ದಾರೆ. ಈ ಕುರಿತು ಏನನ್ನಾದರೂ ಮಾಡುವ ಹಂಬಲ ನಮಗಿದ್ದರೆ, ಈಗಿಂದೀಗಲೇ ಶಿಕ್ಷಣ ಶಾಸ್ತ್ರಜ್ಞರ ಮಾತುಗಳನ್ನು ಎಚ್ಚರದಿಂದ ಗಮನಿಸಬೇಕು; ಗಮನಿಸಿ ಎಚ್ಚರಗೊಳ್ಳಬೇಕು.

(ದಿ। ಎಚ್ ಕೃಷ್ಣಶಾಸ್ತ್ರಿ ಬಾಳಿಲರವರು ನಿಧನರಾಗುವ ಮೊದಲೇ ಕಳುಹಿಸಿಕೊಟ್ಟ ಲೇಖನವನ್ನು ಅವರ ನೆನಪಿಗಾಗಿ ಪ್ರಕಟಿಸುತ್ತಿದ್ದೇವೆ.)

---




ಒಂದು.. ಸೊನ್ನೆ, ಒಂಭತ್ತು.. ಎಂಟು,
ಮಕ್ಕಳ.. ಸಹಾಯವಾಣಿ...
ಒಂದು.. ಸೊನ್ನೆ, ಒಂಭತ್ತು.. ಎಂಟು,
ಶೋಷಿತ.. ಮಕ್ಕಳವಾಣಿ... ॥2॥

ಶಾಲೆಯ ತೊರೆದು, ಕೆಲಸಕ್ಕೆ ಹೋದರೆ,
ಭಿಕ್ಷೆಯ ಬೇಡಲು, ಚಿಣ್ಣರು ಬಂದರೆ,
ಮುಸುರೆ ತಿಕ್ಕುವ, ಕಿಶೋರಿಯ ಕಂಡರೆ,
ಮಾಡಿರೀ ಒಂದೇ, ಒಂದು, ಕರೆಯನ್ನು ॥ಪ॥

ಮಾದಕ ವ್ಯಸನಿ, ಬಾಲರ ಕಂಡರೆ,
ಚಿಂದಿಯಾ ಆಯಲು, ಬೀದಿಗೆ ಬಂದರೆ,
ಆಶ್ರಯ ಇಲ್ಲದ, ಕಂದನ ತೊಂದರೆ,
ಜೀತ – ದುಡಿತ, ಮಕ್ಕಳ ಕಂಡರೆ,
ಮಾಡಿರೀ ಒಂದೇ, ಒಂದು, ಕರೆಯನ್ನು ॥ಪ॥

ಆಡುವ ಬಾಲರು, ಲಗ್ನಕೆ ನಿಂತರೆ,
ಹಿಂಸೆಯ ಉಂಡ, ಮಕ್ಕಳು ಬಂದರೆ,
ವಿಕಲರ ಮನಕ್ಕೆ, ನೋವನ್ನು ತಂದರೆ,
ನ್ಯಾಯ ವಂಚಿತ, ಮಕ್ಕಳ ಕಂಡರೆ,
ಮಾಡಿರೀ ಒಂದೇ, ಒಂದು, ಕರೆಯನ್ನು ॥ಪ॥

ಬೆಳೆಯುವ ಕುಡಿಯ, ತುಳಿಯಲು ಬೇಡಿ,
ಕೋಪ–ತಾಪ, ರೋಗದಿ ನರಳುವ,
ಅಬಲರ ಬಾಳಿಗೆ, ನೆರವನು ನೀಡಿ,
ಮಕ್ಕಳ ಹಕ್ಕು ರಕ್ಷಣೆಗಾಗಿ,
ಕಂಕಣ ಬದ್ಧ ಯೋಧರಾಗಿ,
ಮಾಡಿರೀ ಒಂದೇ, ಒಂದು, ಕರೆಯನ್ನು ॥ಪ॥

**ಕವನ ರಚನೆ : ನಾಗರಾಜ್ ಪಣಕಜೆ,**
ತಂಡ ಸದಸ್ಯರು, ಪಡಿ–ಚೈಲ್ಡ್‌ಲೈನ್, ಮಂಗಳೂರು.
ಫೋನ್ :9901190669.



ಎನ್.ವಿ.ವಾಸುದೇವ ಶರ್ಮಾ
ಕಾರ್ಯಕಾರಿ ನಿರ್ದೇಶಕ, ಚೈಲ್ಡ್ ರೈಟ್ಸ್ ಟ್ರಸ್ಟ್
ರಾಜ್ಯ ಸಂಯೋಜಕ,
ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರ



# ಬಾಲ್ಯವಿವಾಹ ಕಾನೂನು ಬಾಹಿರ... ಆದರೆ, ಕಾನೂನು ಜಾರಿ ಮಾಡಬೇಕು ಯಾರು?

ಕರ್ನಾಟಕ ರಾಜ್ಯದಲ್ಲಿ ಈಗಲೂ ಶೇ. 23 ಬಾಲ್ಯ ವಿವಾಹಗಳಾಗುತ್ತಿವೆ. ಬಾಲ್ಯವಿವಾಹಗಳನ್ನು ನಿಷೇಧಿಸಿ ಕಾನೂನು ಇದೆ. ಇಲಾಖಾ ವ್ಯವಸ್ಥೆ ಇದೆ. ನೂರಾರು ಸ್ವಯಂಸೇವಾ ಸಂಘಟನೆಗಳು ತಳಮಟ್ಟದಲ್ಲಿ ಕೆಲಸ ಮಾಡುತ್ತಿವೆ. ಮಿಗಿಲಾಗಿ, ಮಕ್ಕಳ ಹಕ್ಕುಗಳ ರಕ್ಷಣೆ ಆಗುತ್ತಿರುವುದನ್ನು ಪರಿಶೀಲಿಸಲು ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಉನ್ನತ ಮಟ್ಟದ ಉಸ್ತುವಾರಿ ವ್ಯವಸ್ಥೆ ಇದೆ. ಆದರೂ, ಬಾಲ್ಯವಿವಾಹಗಳು ಆಗುತ್ತಲೇ ಇವೆ. ಈ ಬಾಲ್ಯವಿವಾಹಗಳಿಗೆ ನಗರ ಗ್ರಾಮೀಣ ಎನ್ನುವ ಅಥವಾ ಬಡವರು, ಶ್ರೀಮಂತರು ಮತ್ತು ಕಲಿತವರು, ಕಲಿಯದವರು ಎನ್ನುವ ಯಾವುದೇ ತಾರತಮ್ಯವಿಲ್ಲ!

ಬಾಲ್ಯವಿವಾಹ ಸ್ಪಷ್ಟವಾಗಿ ಮಕ್ಕಳ ಹಕ್ಕುಗಳ ಉಲ್ಲಂಘನೆ ಎಂಬುದನ್ನು ಈ ಸಮಸ್ಯೆಯನ್ನು ಹತ್ತಿರದಿಂದ ಕಂಡವರೆಲ್ಲರೂ ಗುರುತಿಸುತ್ತಾರೆ. ಮಕ್ಕಳ ಬದುಕುವ ಹಕ್ಕು (ಚಿಕ್ಕ ವಯಸ್ಸಿನಲ್ಲೇ ಗರ್ಭಿಣಿಯಾಗುವುದು), ರಕ್ಷಣೆ (ದೈಹಿಕ ಮತ್ತು ಮಾನಸಿಕ ಶೋಷಣೆ, ಲೈಂಗಿಕ ಶೋಷಣೆ, ಹೆರಿಗೆಯಲ್ಲಿ ಸಾಯುವ ಅಪಾಯ), ಅಭಿವೃದ್ಧಿ (ಶಿಕ್ಷಣದ ಅವಕಾಶಗಳು ಮುಚ್ಚಿಹೋಗುವುದು) ಮತ್ತು ತನ್ನ ಅಭಿಪ್ರಾಯಗಳನ್ನು ಹೇಳುವ, ಭಾಗವಹಿಸುವ ಹಕ್ಕುಗಳೆಲ್ಲವನ್ನು ಬಾಲ್ಯವಿವಾಹಕ್ಕೀಡಾದ ಹೆಣ್ಣುಮಕ್ಕಳಿಂದ ಕಸಿದುಕೊಳ್ಳಲಾಗುತ್ತದೆ.

ಬಾಲ್ಯವಿವಾಹಗಳನ್ನು ಕುರಿತು ಸಾಮಾಜಿಕ ಚಳವಳಿಗಳಾಗಿ, ವಾಸ್ತವಾಂಶಗಳನ್ನು ಆಧರಿಸಿ ಸ್ವಯಂಸೇವಾ ಸಂಘಟನೆಗಳು ಮತ್ತು ಆಂದೋಲನಗಳು ಸರ್ಕಾರದ ಮೇಲೆ ಒತ್ತಡ ಹಾಕಿ, ಶಾಸನ ಸಭೆಗಳ ಒಳಗೆ ಹೊರಗೆ ಎಲ್ಲೆಡೆ ವಕೀಲಿ ನಡೆಸಿ, ನ್ಯಾಯಾಲಯಕ್ಕೆ ಮೊರೆ ಹೋದ ಪರಿಣಾಮವಾಗಿ ಸರ್ಕಾರ ಎಚ್ಚೆತ್ತುಕೊಂಡು ಕಾನೂನುಗಳಲ್ಲಿ ಇನ್ನಷ್ಟು ಬಿಗಿ ಮಾಡಿದೆ, ನ್ಯಾಯಾಲಯದ ನಿರ್ದೇಶನದಂತೆ ಸಮಿತಿ ರಚಿಸಿ ಅದರ ಸಲಹೆಗಳನ್ನು ಜಾರಿ ಮಾಡಲು ಹೊರಟಿದ್ದು ಸದ್ಯಕ್ಕೆ ಚರಿತ್ರೆ. ಸರ್ಕಾರದ ವಿರೋಧ, ಪೊಲೀಸರ ಒತ್ತಡ, ಸ್ಥಳೀಯ ಅಧಿಕಾರಿಗಳ ಅಸಹಕಾರ, ಸಮುದಾಯಗಳು ಅದರಲ್ಲೂ ರಾಜಕಾರಣಿಗಳು ಮತ್ತು ಧಾರ್ಮಿಕ ಸಂಘಟನೆಗಳ ಭಯಂಕರ ವಿರೋಧ, ಬೆದರಿಕೆ, ದೈಹಿಕ ಹಲ್ಲೆಗಳೆಲ್ಲದರ ಎದುರು ಪ್ರತಿಭಟಿಸಿ ನಿಂತುಕೊಂಡಿವೆ. ಮಕ್ಕಳ ಹಕ್ಕುಗಳನ್ನು ರಕ್ಷಿಸಲು ಬಾಲ್ಯವಿವಾಹಗಳನ್ನು ವಿರೋಧಿಸಲು ಮುಂದಾದ ಸ್ವಯಂಸೇವಾ ಸಂಘಟನೆಗಳ ಪಾತ್ರ ಇಲ್ಲಿ ಬಹಳ ದೊಡ್ಡದಾಗಿದೆ ಎಂದು ಹೇಳಲು ನಾವು ಹೆಮ್ಮೆ ಪಡಲೇಬೇಕು.

### ಸದ್ಯದ ಪರಿಸ್ಥಿತಿಯಲ್ಲಿ ಕಾನೂನು ಮತ್ತು ಜಾರಿ

ಬಾಲ್ಯವಿವಾಹಗಳನ್ನು ತಡೆಗಟ್ಟುವುದು ಮತ್ತು ಮಕ್ಕಳ ರಕ್ಷಣೆ ಮಾಡುವ ದಿಶೆಯಲ್ಲಿ ಸದ್ಯದಲ್ಲಿ ಹಲವು ಧನಾತ್ಮಕ ಬೆಳವಣಿಗೆಗಳು ನಡೆದಿವೆ. ಜೊತೆಯಲ್ಲಿ ಅಷ್ಟೇ ಪ್ರಮಾಣದಲ್ಲಿ ಪ್ರಶ್ನೆಗಳು, ಸಂದೇಹಗಳು, ಗೊಂದಲಗಳು ಇರುವುದು ಸುಳ್ಳಲ್ಲ.

ಈ ಮೊದಲು ಬಾಲ್ಯವಿವಾಹ ನಿಲ್ಲಿಸಲು ಕೇವಲ ಬಾಲ್ಯವಿವಾಹ ನಿಷೇಧ ಕಾಯಿದೆ 2006ನ್ನು ಮಾತ್ರ ಉಲ್ಲೇಖಿಸಲಾಗುತ್ತಿತ್ತು. ಅದರ ಜಾರಿಯಲ್ಲಿನ ಕಷ್ಟನಷ್ಟಗಳನ್ನು ಸಂಬಂಧಿತ ಇಲಾಖೆಗಳು ಮತ್ತು ಆ ಕಾಯಿದೆಯನ್ನು ಬಳಸಲೆತ್ನಿಸುತ್ತಿದ್ದವರು ಮಾತ್ರ ಎದುರಿಸಬೇಕಿತ್ತು. ಈಗ ಒಂದಷ್ಟು ಬದಲಾವಣೆಗಳನ್ನು ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಮತ್ತು ನ್ಯಾಯಾಲಯಗಳು ಸೂಚಿಸಿದ್ದು ಅವುಗಳ ಜಾರಿಗೆ ವಿವಿಧ ಇಲಾಖೆಗಳು ಒಟ್ಟಾಗಿ ಕೆಲಸ ಮಾಡಬೇಕಿದೆ.

1. ಪೋಕ್ಸೋ ಕಾಯಿದೆ 2012 (ಲೈಂಗಿಕ ಅಪರಾಧಗಳ ವಿರುದ್ಧ ಮಕ್ಕಳ ರಕ್ಷಣೆ 2012)ರಂತೆ, 18 ವರ್ಷಗಳ ಒಳಗಿನ ಮಕ್ಕಳ ಮೇಲೆ ವಿವಿಧ ರೀತಿಯ ಲೈಂಗಿಕ ಶೋಷಣೆ, ಅಪರಾಧಗಳನ್ನು ನಡೆಸುವವರು, ಅದಕ್ಕೆ ನೆರವಾಗುವವರು ಮತ್ತು ಇಂತಹ ಅಪರಾಧ ಆಗಿದೆ ಎಂದು ತಿಳಿದೂ ಪೊಲೀಸ್ ದೂರು ಕೊಡದವರೆಲ್ಲರಿಗೂ ಶಿಕ್ಷೆ ಇದೆ.

2. ಧಾರವಾಡದ ಸರ್ಕೀಟ್ ಬೆಂಚ್ ನ್ಯಾಯಾಲಯವು ಬಾಲ್ಯವಿವಾಹ ನಿಷೇಧ ಕಾಯಿದೆ 2006 ದೇಶದ ಎಲ್ಲರಿಗೂ ಅನ್ವಯಿಸುತ್ತದೆ ಎಂದು ಸ್ಪಷ್ಟಪಡಿಸಿ ಧಾರ್ಮಿಕ ವೈಯುಕ್ತಿಕ ಕಾಯಿದೆಗಳನ್ನು ಎದುರಿಟ್ಟು ಬಾಲ್ಯವಿವಾಹಗಳನ್ನು ನಡೆಸಲಾಗದು ಎಂದು ನಿರ್ದೇಶಿಸಿದೆ (2013)

3. ಮಕ್ಕಳ ನ್ಯಾಯ (ಮಕ್ಕಳ ರಕ್ಷಣೆ ಮತ್ತು ಪೋಷಣೆ) ಕಾಯಿದೆ 2015, ಸೆ. 2 (14)(XI)ರಂತೆ, 18 ವರ್ಷ ಪೂರೈಸುವುದರ ಒಳಗೆ ಮದುವೆಗೆ ಗುರಿಯಾಗುವ ಆತಂಕವಿದ್ದು, ಆ ಮಗುವಿನ ಪೋಷಕರು, ಕುಟುಂಬದ ಸದಸ್ಯರು, ಪಾಲಕರು ಮತ್ತು ಯಾವುದೇ ಇತರ ವ್ಯಕ್ತಿಗಳಿಂದ ಅಂತಹ ಮದುವೆ ಆಗಿಬಿಡುವ ಸಾಧ್ಯತೆಯಿದೆಯೋ ಅಂತಹ ಮಕ್ಕಳು ಪೋಷಣೆ ಮತ್ತು ರಕ್ಷಣೆ ಅವಶ್ಯಕತೆ ಇರುವ ಮಕ್ಕಳು ಎಂದು ವ್ಯಾಖ್ಯಾನಿಸಲಾಗಿದೆ.

4. ಅಪ್ರಾಪ್ತ ವಯಸ್ಕ ಹೆಂಡತಿಯೊಡನೆ (18 ವರ್ಷದೊಳಗಿನ ಬಾಲಕಿಯೊಡನೆ) ವೈವಾಹಿಕ ಸಂಬಂಧದಲ್ಲಿ ಲೈಂಗಿಕ ಸಂಪರ್ಕ ಇಟ್ಟುಕೊಂಡರೆ ಅದನ್ನು 'ಅತ್ಯಾಚಾರ'ದ ಅಪರಾಧ ಎಂದು ಪರಿಗಣಿಸಲು ಸರ್ವೋಚ್ಚ ನ್ಯಾಯಾಲಯ 2017ರ ಅಕ್ಟೋಬರ್‌ನಲ್ಲಿ ಹೊರಡಿಸಿದ ತೀರ್ಪಿನಲ್ಲಿ ಘೋಷಿಸಲಾಗಿದೆ (ಭಾರತೀಯ ದಂಡ ಸಂಹಿತೆ ಸೆ. 375). ಬಾಲ್ಯವಿವಾಹಕ್ಕೆ ಗುರಿಯಾದ ಎಲ್ಲ ಬಾಲಕಿಯರು ಈ ತೀರ್ಮಾನದಡಿ ಸಂತ್ರಸ್ತರೆಂದೇ ಪರಿಗಣಿಸಬೇಕಿದ್ದು, 18 ವರ್ಷದೊಳಗಿನವರನ್ನು ಮದುವೆಯಾಗಿ ಒಂದೇ ಸೂರಿನಡಿ ವಾಸ ಮಾಡುತ್ತಿದ್ದರೆ, ಗಂಡನನ್ನು ಅತ್ಯಾಚಾರಿಯೆಂದೂ, ಅವರ ಸಂಬಂಧಿಗಳನ್ನು ಅತ್ಯಾಚಾರಕ್ಕೆ ನೆರವಾದವರೆಂಬ ಆಪಾದನೆಗೆ ಗುರಿ ಮಾಡಬೇಕಿದೆ.

5. ನ್ಯಾಯಮೂರ್ತಿ ಶಿವರಾಜ್ ಪಾಟೀಲ್ ಸಮಿತಿಯು ನೀಡಿರುವ ಸಲಹೆಗಳ ಆಧಾರದಲ್ಲಿ ಕರ್ನಾಟಕ ಸರ್ಕಾರ ಬಾಲ್ಯವಿವಾಹ ನಿಷೇಧ' ಕಾಯಿದೆ 2006ಕ್ಕೆ ತಿದ್ದುಪಡಿಗಳನ್ನು 2016ರಲ್ಲೇ ಸೂಚಿಸಿತ್ತು. ಅವುಗಳನ್ನು ಕೇಂದ್ರ ಸರ್ಕಾರವು ಮಾನ್ಯ ಮಾಡಿದೆ. ಆ ತಿದ್ದುಪಡಿಗಳು (ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿ) ಇದೇ ಏಪ್ರಿಲ್ 2018ರಿಂದ ಜಾರಿಯಲ್ಲಿದೆ. ಅವು ಈ ಮುಂದಿನಂತಿದೆ:

1. ಸೆ. 3ರಲ್ಲಿ ಬದಲಾವಣೆ: ಈ ಕಾಯಿದೆ ತಿದ್ದುಪಡಿ ಜಾರಿಯಾದಂದಿನಿಂದ ಎಲ್ಲ ಬಾಲ್ಯವಿವಾಹಗಳು ಅಸಿಂಧು (ಆರಂಭದಿಂದಲೇ ವಿವಾಹ ಆಗಿಲ್ಲವೆಂದೇ ಪರಿಗಣಿಸಬೇಕು)

2. ಸೆ. 9, 10, 11, 13ರಲ್ಲಿ ಈ ಮೊದಲಿದ್ದುದರ ಬದಲಿಗೆ, ಶಿಕ್ಷೆಯನ್ನು 'ಕನಿಷ್ಠ ಒಂದು ವರ್ಷದಿಂದ ಎರಡು ವರ್ಷಗಳವರೆಗೆ ವಿಧಿಸಬೇಕು' ಎಂಬ ಬದಲಾವಣೆ

3. ಸೆ. 15 ಎ ಸೇರ್ಪಡೆ. ಪ್ರತಿ ಪೊಲೀಸ್ ಅಧಿಕಾರಿಯು ಬಾಲ್ಯವಿವಾಹ ನಿಷೇಧ ಕಾಯಿದೆ 2006ರಡಿಯಲ್ಲಿ ಘಟಿಸುವ ಅಪರಾಧಗಳನ್ನು ಸ್ವಯಂ ಆಗಿ ಗಮನಕ್ಕೆ ತೆಗೆದುಕೊಂಡು (ಯಾರೂ ದೂರು ಕೊಡದಿದ್ದರೂ ಪರಿಗಣಿಸಿ) ಕ್ರಮ ಕೈಗೊಳ್ಳಬೇಕು

6. ಮಾರ್ಚ್ 2018ರಲ್ಲಿ ಚೆನ್ನೈನ ಉಚ್ಚ ನ್ಯಾಯಾಲಯದ ನಿರ್ದೇಶನದಂತೆ, ಬಾಲ್ಯವಿವಾಹಕ್ಕೆ ಸಂಬಂಧಿಸಿದ ಎಲ್ಲ

ಪ್ರಕರಣಗಳನ್ನು ಮಕ್ಕಳ ವಿಶೇಷ ನ್ಯಾಯಾಲಯದಲ್ಲಿ ಮಾತ್ರ ವಿಚಾರಣೆ ಮಾಡಬೇಕು

7. ಕರ್ನಾಟಕ ಸರ್ಕಾರ ಸುತ್ತೋಲೆ ಹೊರಡಿಸಿ (ಗ್ರಾಮ ಪಂಚಾಯತಿ ಮಟ್ಟದಿಂದ ರಾಜ್ಯ ಮಟ್ಟದವರೆಗೆ) ಸುಮಾರು 41ಕ್ಕೂ ಹೆಚ್ಚು ಹುದ್ದೆಗಳಲ್ಲಿರುವ 23,000ಕ್ಕೂ ಹೆಚ್ಚು ಅಧಿಕಾರಿಗಳನ್ನು ಬಾಲ್ಯವಿವಾಹ ನಿಷೇಧ ಅಧಿಕಾರಿಗಳೆಂದು ಘೋಷಿಸಿದೆ. ಈ ಎಲ್ಲರೂ ಸ್ವಯಂ ಆಗಿ ಕ್ರಮ ಕೈಗೊಂಡು ಬಾಲ್ಯವಿವಾಹಗಳನ್ನು ನಿಲ್ಲಿಸಲು ಸ್ಥಳೀಯ ನ್ಯಾಯಾಲಯಗಳನ್ನು ಸಂಪರ್ಕಿಸಿ 'ಬಾಲ್ಯವಿವಾಹ ತಡೆ ಆಜ್ಞೆ'ಯನ್ನು ಪಡೆಯಬಹುದು

8. ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ 'ಬಾಲ್ಯವಿವಾಹ ನಿಷೇಧ ಕೋಶ'ವನ್ನು ಸ್ಥಾಪಿಸಲಾಗಿದ್ದು, ಅದರಲ್ಲಿ ಜಂಟಿ ನಿರ್ದೇಶಕರ ಹುದ್ದೆಯ ಅಧಿಕಾರಿಯನ್ನು ನೇಮಿಸಲಾಗಿದೆ

9. ಎಲ್ಲ ಶೈಕ್ಷಣಿಕ ಜಿಲ್ಲೆಗಳಲ್ಲಿ 'ಹಾಜರಾತಿ ಪ್ರಾಧಿಕಾರ'ಗಳನ್ನು ಗುರುತಿಸಲಾಗಿದ್ದು, ಮಕ್ಕಳು, ಅದರಲ್ಲೂ ಹೆಣ್ಣುಮಕ್ಕಳು ಶಾಲೆಗೆ ಹಾಜರಾಗದಿದ್ದಲ್ಲಿ ಬಾಲ್ಯವಿವಾಹ ಮತ್ತು ಸಾಗಣೆಯ ಅಪಾಯವನ್ನು ಎದುರಿಟ್ಟುಕೊಂಡು ಸಂಬಂಧಿಸಿದ ಶಿಕ್ಷಕರು ಮತ್ತು ಹಾಜರಾತಿ ಪ್ರಾಧಿಕಾರದವರು ತಕ್ಷಣ ಕ್ರಮ ಕೈಗೊಳ್ಳಬೇಕು.

10. ಮಕ್ಕಳ ಮೇಲೆ ಆಗುವ ಲೈಂಗಿಕ ಶೋಷಣೆಗಳನ್ನು ತಡೆಗಟ್ಟುವ ದಿಶೆಯಲ್ಲಿ ವಿವಿಧ ಕಾಯಿದೆಗಳ ವಿಶ್ಲೇಷಣೆ ವಿವರಣೆಗಳಲ್ಲಿ ಸೂಚಿಸಿರುವಂತೆ, ಬಾಲ್ಯವಿವಾಹವೂ ಹೆಣ್ಣುಮಕ್ಕಳನ್ನು ಸಾಗಿಸುವ ಮತ್ತು ಮಾರುವ ಅಪರಾಧಕ್ಕೆ ದಾರಿ ಮಾಡಿಕೊಡುತ್ತದೆ

11. ಪ್ರತಿ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಮಕ್ಕಳ ರಕ್ಷಣಾ ಸಮಿತಿಗಳನ್ನು ರಚಿಸಲು ಸುತ್ತೋಲೆ ಮತ್ತು ಸ್ಪಷ್ಟ ಸೂಚನೆಗಳಿವೆ.

12. ರಾಜ್ಯದ ಎಲ್ಲ ಗ್ರಾಮಪಂಚಾಯತಿಗಳು ಪ್ರತಿ ನವೆಂಬರ್ ತಿಂಗಳಲ್ಲಿ 'ಮಕ್ಕಳ ಹಕ್ಕುಗಳ ಗ್ರಾಮಸಭೆ' ನಡೆಸಿ ಮಕ್ಕಳ ಸಮಸ್ಯೆಗಳನ್ನು ಚರ್ಚಿಸಬೇಕು. ಇದರಲ್ಲಿ ಬಾಲ್ಯವಿವಾಹ ತಡೆ ಕುರಿತೂ ಗಮನ ಹರಿಸಬೇಕಿದೆ.

ಇತ್ತೀಚಿನವರೆಗೂ ಬಾಲ್ಯವಿವಾಹಗಳನ್ನು ಕುರಿತು ನಡೆದಿರುವ ಎಲ್ಲ ಅಧ್ಯಯನಗಳು ಬೊಟ್ಟು ಮಾಡಿ ತೋರುತ್ತಿರುವುದು: ಬಾಲ್ಯವಿವಾಹ ತಡೆಯಲು ಸ್ಪಷ್ಟವಾದ ರಾಜಕೀಯ ನಿರ್ಧಾರಗಳು ಇಲ್ಲದಿರುವುದು, ಬಾಲ್ಯವಿವಾಹಗಳನ್ನು ಆಡಳಿತ ಬಹಳ ಹಗುರವಾಗಿ ಪರಿಗಣಿಸಿರುವುದು, ವಯಸ್ಸಿನ ದಾಖಲೆಗಳನ್ನು ಕುರಿತು ಯಾವುದೇ ಕಟ್ಟುನಿಟ್ಟಾದ ಕ್ರಮ ಕೈಗೊಳ್ಳದಿರುವುದು, ಗ್ರಾಮೀಣ ಪ್ರದೇಶಗಳಲ್ಲಿ ಪ್ರೌಢಶಾಲೆಗಳಿಲ್ಲದಿರುವುದು ಮತ್ತು ಎಲ್ಲ ಮಕ್ಕಳಿಗೂ ವಿದ್ಯಾರ್ಥಿ ನಿಲಯಗಳು ಸಿಗದಿರುವುದು ಮತ್ತು ಸಮಾಜವೂ ವಿವಾಹವಾಗಿಬಿಟ್ಟರೆ ಸಾಕು, ಹೆಣ್ಣು ಮಕ್ಕಳಿಗೆ ರಕ್ಷಣೆ ಸಿಗುತ್ತದೆ ಎನ್ನುವಂತೆ ಸುಳ್ಳು ಮಾಹಿತಿಗಳು, ಕಣ್ಕಟ್ಟುಗಳನ್ನು ಮಾಡಿ ಬಾಲಕಿಯರಿಗೆ ಮದುವೆ ಮಾಡಿಬಿಡುವುದು, ಸ್ಥಳೀಯ ರಾಜಕಾರಣಿಗಳು, ಜನಪ್ರತಿನಿಧಿಗಳು, ನಾಯಕರು, ಧಾರ್ಮಿಕ ಮುಖ್ಯಸ್ಥರು ಇತ್ಯಾದಿ ತಾವು ವಿವಾಹ ತಡೆಯುವ ಪ್ರಯತ್ನ ಮಾಡಿದರೆ ಎಲ್ಲಿ ತಮ್ಮ ಜನಪ್ರಿಯತೆಗೆ ಧಕ್ಕೆ ಬರುತ್ತದೋ ಎಂದು ಹೆದರುವುದು, ಧಾರ್ಮಿಕ ಕಟ್ಟುಪಾಡುಗಳನ್ನು ಅಥವಾ ವೈಯಕ್ತಿಕ ಕಾಯಿದೆಗಳಿಗೆ ಪೆಟ್ಟು ಬೀಳುತ್ತದೋ ಎಂದು ಹಿಂಜರಿಯುವುದು, ಪೊಲೀಸರು ಬಾಲ್ಯವಿವಾಹಗಳನ್ನು ಸಂಜ್ಞೇಯ ಅಪರಾಧ ಎಂದು ಪರಿಗಣಿಸದಿರುವುದು, ನ್ಯಾಯಾಲಯಗಳಲ್ಲಿ ಪ್ರಕರಣಗಳು ಬಹಳ ಕಾಲ ತೆಗೆದುಕೊಳ್ಳುತ್ತದೆ ಮತ್ತು ಮಕ್ಕಳಿಗೆ ನೆರವಾಗುತ್ತಿಲ್ಲ, ಇತ್ಯಾದಿ. ಈ ಎಲ್ಲರೂ ಬಾಲ್ಯವಿವಾಹಕ್ಕೆ ಕುಮ್ಮಕ್ಕು ನೀಡುವವರೇ ಎಂದು ಪರಿಗಣಿಸಿ ಅವರ ಮೇಲೆ ಕಾನೂನು ಕ್ರಮ ಕೈಗೊಳ್ಳಲೇಬೇಕಿದೆ. ಹೀಗಾಗಿ, ಬಾಲ್ಯವಿವಾಹ ನಿಷೇಧ ಕಾಯಿದೆ, ಬಾಲ್ಯವಿವಾಹಗಳಿಂದಾಗಿ ಆಗುತ್ತಿರುವ ಅನರ್ಥಗಳು, ಮಕ್ಕಳ ಹಕ್ಕುಗಳ ಉಲ್ಲಂಘನೆ ಕುರಿತು ಸರ್ಕಾರವೇ ಮುಂದಾಗಿ ಈ ಎಲ್ಲರಲ್ಲೂ ಜಾಗೃತಿ ಮೂಡಿಸಬೇಕಿದೆ.

ಈ ಮೇಲಿನ ವಿಚಾರಗಳನ್ನು ಈಗ ಪರಿಗಣನೆಗೆ ತೆಗೆದುಕೊಂಡಾಗ ಒಂದಷ್ಟು ಧನಾತ್ಮಕವಾದ ವಿಚಾರಗಳು

ಸಹಾಯಕವಾಗಿದೆ ಎಂದು ಕಂಡು ಬಂದರೂ, ಹೊಸ ಕಾನೂನುಗಳು, ತಿದ್ದುಪಡಿಗಳು, ನಿಯಮ, ನ್ಯಾಯಾಲಯದ ನಿರ್ದೇಶನಗಳೇ ಮೊದಲಾದವು ಒಂದಷ್ಟು ಜಾರಿ ತೊಡಕುಗಳನ್ನು ನಮ್ಮೆದುರು ಇಟ್ಟಿದೆ:

- ❖ ಬಾಲ್ಯವಿವಾಹಗಳು ಅಸಿಂಧು ಎನ್ನುವ ಮೂಲಕ ಬಾಲಕಿಗೆ ಸ್ವಾತಂತ್ರ್ಯವನ್ನು ಕೊಟ್ಟರೂ, ಬೇರಾವುದೋ ಕಾರಣಕ್ಕೆ (ವರದಕ್ಷಿಣೆ, ವೈವಾಹಿಕ ಅಸಮತೋಲನ, ಎರಡನೇ ಮದುವೆ, ಗಂಡ ನಿಧನನಾದಲ್ಲಿ, ಇತ್ಯಾದಿ) ವಿವಾಹ ಅಸಿಂಧು ಎಂದು ಗಂಡನ ಮನೆಯವರು ಹೇಳಿದರೆ ಏನು ಕ್ರಮ ಕೈಗೊಳ್ಳಬೇಕು,
- ❖ ಅಸಿಂಧು ಎಂಬ ಸಂದರ್ಭದಲ್ಲಿ ಬಾಲಕಿ ಗರ್ಭಿಣಿಯಾದಲ್ಲಿ ಅಥವಾ ಮಗುವನ್ನು ಹೆತ್ತಿದ್ದಲ್ಲಿ ಅಸಿಂಧು ಎನ್ನುವ ವಿಚಾರವನ್ನು ಹೇಗೆ ಪರಿಗಣಿಸಬೇಕು,
- ❖ ಬಾಲಕಿಯೇ ಮದುವೆಯಿಂದ ಹೊರಬಂದರೆ ಅಥವಾ ಸರ್ಕಾರದ ಪ್ರತಿನಿಧಿಗಳು ಕ್ರಮ ಕೈಗೊಂಡು ವಿವಾಹ ಅಸಿಂಧು ಎಂದು ಬಾಲಕಿಯನ್ನು ಹೊರತಂದರೆ (ಇಲ್ಲಿ ನ್ಯಾಯಾಲಯದ ಮಧ್ಯ ಪ್ರವೇಶದ ಪ್ರಶ್ನೆಯೇ ಬರುವುದಿಲ್ಲ) ಅಂತಹ ಬಾಲಕಿಯರನ್ನು (ಅವಳ ನಿಜ ಪೋಷಕರು ತಿರಸ್ಕರಿಸಿದರೆ) ಎಲ್ಲಿ ಇರಿಸಬೇಕು.
- ❖ ಮದುವೆಯಿಂದ ಹೊರಬಂದ ಬಾಲಕಿಯರಿಗೆ ಪೋಷಣೆ ಮತ್ತು ರಕ್ಷಣೆಯ ಕ್ರಮ ಯಾರು ಕೈಗೊಳ್ಳಬೇಕು, ಸರ್ಕಾರದ ಯಾವ ಕಾರ್ಯಕ್ರಮದಲ್ಲಿ ಅವರಿಗೆ ನೆರವು ನೀಡಬೇಕು,
- ❖ ಬಾಲ್ಯವಿವಾಹಗಳನ್ನು ತಡೆಯಲು, ವಿವಾಹಿತ ಬಾಲಕಿಯನ್ನು ಕಾನೂನು ನೆರವಿನಿಂದ ಹೊರತರಲು, ಅಂತಹ ಬಾಲಕಿಯರಿಗೆ ಪುನರ್ವಸತಿ, ಆಪ್ತಸಮಾಲೋಚನೆ, ವೈದ್ಯಕೀಯ ನೆರವು, ಆರ್ಥಿಕ ಮತ್ತು ಶೈಕ್ಷಣಿಕ ನೆರವು ನೀಡುವಲ್ಲಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಹಾಗೂ ಜಿಲ್ಲಾ ಮಕ್ಕಳ ಸಂರಕ್ಷಣಾ ಘಟಕಗಳು ಹೇಗೆ ಕಾರ್ಯ ನಿರ್ವಹಿಸಬೇಕು,
- ❖ ಎಷ್ಟು ಕಾಲ ಅಂತಹ ಬಾಲಕಿಯರನ್ನು (18 ವರ್ಷ ಕಳೆದ ಮೇಲೂ) ಸರ್ಕಾರ ಪೋಷಿಸಬೇಕು, ಇದರಲ್ಲಿ ಬಾಲಕಿಯರ ಪೋಷಕರ ಪಾತ್ರವೇನು ಎಂಬುದಕ್ಕೆ ಮಾರ್ಗದರ್ಶನಗಳು ಬೇಕಿವೆ,
- ❖ ಬಾಲ್ಯವಿವಾಹಕ್ಕೆ ಗುರಿಯಾದ ಅಥವಾ ಬಾಲ್ಯವಿವಾಹದಿಂದ ಶೋಷಣೆಗೆ ಗುರಿಯಾದ ಅಥವಾ ಬಾಲ್ಯವಿವಾಹದಿಂದ ಹೊರಬರಲು ಅಪೇಕ್ಷಿಸುವ ಅಥವಾ ಬಾಲ್ಯವಿವಾಹದಿಂದ ಹೊರಬಂದ ಬಾಲಕಿಯರಿಗೆ ಜಿಲ್ಲಾ/ರಾಜ್ಯ ಕಾನೂನು ಸೇವಾ ಪ್ರಾಧಿಕಾರದಿಂದ ನೆರವನ್ನು ಒದಗಿಸುವುದು ಹೇಗೆ.

ಬಾಲ್ಯವಿವಾಹಗಳು ಆಗುವ ಕುರಿತು ಚೈಲ್ಡ್‌ಲೈನ್ 1098ಕ್ಕೆ ರಾಜ್ಯದಾದ್ಯಂತ ಪ್ರತಿದಿನ ದೂರುಗಳು ಬರುತ್ತಲೇ ಇರುತ್ತವೆ. ಅದು ವಿವಾಹ ನಿಶ್ಚಿತಾರ್ಥವಾಗುವುದು, ಲಗ್ನಪತ್ರಿಕೆಗಳ ವಿತರಣೆ, ಬಾಲಕಿಯರು ಪ್ರೇಮಿಗಳೊಡನೆ ಕಣ್ಮರೆಯಾಗಿ ವಿವಾಹವಾಗಿ ಹಿಂದಿರುಗುವುದು ಅಥವಾ ಪೋಷಕರು ಪತ್ತೆ ಮಾಡಿ ತರುವುದು, ವಿವಾಹದ ದಿನ ಅಥವಾ ಅದಕ್ಕೆ ಒಂದೆರೆಡು ದಿನ ಮೊದಲು ದೂರು/ಸುದ್ದಿ ತಲುಪಿಸಿ ಈಗ ಬಂದು ಬಾಲ್ಯವಿವಾಹ ನಿಲ್ಲಿಸಿ ಎಂಬ ಕೋರಿಕೆಗಳೇ ಬರುತ್ತವೆ. ಅಂತಹ ಸಂದರ್ಭದಲ್ಲಿ ಚೈಲ್ಡ್‌ಲೈನ್ 1098 ಸ್ಥಳೀಯ ಬಾಲ್ಯ ವಿವಾಹ ನಿಷೇಧ ಅಧಿಕಾರಿಗಳನ್ನು ಸಂಪರ್ಕಿಸಿ ವಿಷಯ ತಿಳಿಸಿ ನೆರವಿಗೆ ಅಪೇಕ್ಷಿಸುತ್ತದೆ (ಬಾಲ್ಯವಿವಾಹ ನಿಷೇಧ ಅಧಿಕಾರಿಗಳು, ಉದಾ: ಸ್ಥಳೀಯ ಪೊಲೀಸ್ ಅಧಿಕಾರಿ; ಶಾಲಾ ಮುಖ್ಯೋಪಾಧ್ಯಾಯರು; ತಹಶೀಲ್ದಾರರು; ಪಿ.ಡಿ.ಒ; ಡಿ.ಸಿ.ಪಿ.ಒ; ಸಿ.ಡಿ.ಪಿ.ಒ; ಜಿಲ್ಲಾಧಿಕಾರಿ; ಜಿಲ್ಲಾಪಂಚಾಯತ್‌ನ ಸಿ.ಇ.ಒ, ಇತ್ಯಾದಿ). ಆದರೆ, ಎಲ್ಲೋ ಒಂದಷ್ಟು ಪ್ರಕರಣಗಳನ್ನು ಹೊರತುಪಡಿಸಿ ಬಹಳಷ್ಟು ಬಾರಿ ಈ ಅಧಿಕಾರಿಗಳಿಂದ ನೆರವು ಬಹಳ ತಡವಾಗಿ ಬರುತ್ತದೆ ಅಥವಾ ಸಿಗುವುದೇ ಇಲ್ಲ. ಚಲನಚಿತ್ರಗಳಲ್ಲಿ ಕಂಡುಬರುವಂತೆ, ತಾಳಿ ಕಟ್ಟುವ ಸಮಯದಲ್ಲಿ ಅಥವ ತಾಳಿ ಕಟ್ಟಿದ ಮೇಲೆ ಪೊಲೀಸರು, ಅಧಿಕಾರಿಗಳು ಮದುವೆ ಮಾಡುವ ಸ್ಥಳಕ್ಕೆ ಹೋದಲ್ಲಿ ಬಹುತೇಕ ಸಂದರ್ಭಗಳಲ್ಲಿ ವಿವಾಹ ನಿಲ್ಲಿಸಲು ಸಾಧ್ಯವಾಗುವುದೇ ಇಲ್ಲ.

ಬಹುತೇಕ ಬಾಲ್ಯವಿವಾಹ ಪ್ರಕರಣಗಳನ್ನು ತಡೆಗಟ್ಟಲು ಮೊದಲು ಮುಂದಾಗುತ್ತಿರುವುದು ಸ್ವಯಂಸೇವಾ ಸಂಘಟನೆಗಳೇ ಎಂದರೆ ಅತಿಶಯೋಕ್ತಿ ಅಲ್ಲವೇ ಅಲ್ಲ. ಅದರಲ್ಲೂ ಸ್ವಯಂಸೇವಾ ಸಂಘಟನೆಗಳ ತಳಮಟ್ಟದ ಕ್ಷೇತ್ರ ಕಾರ್ಯಕರ್ತರೇ ಮುಂಚೂಣಿಯಲ್ಲಿರುತ್ತಾರೆ. ಹೀಗಾಗಿ ಅವರಿಗೇ ಬಾಲ್ಯವಿವಾಹ ತಡೆಗಟ್ಟುವಲ್ಲಿನ ತೊಂದರೆಗಳು, ಅಪಾಯ, ಬಿಸಿ ತಟ್ಟುವುದು. (ಹೀಗಾಗಿ ಅವರಿಗೆ ಬಾಲ್ಯವಿವಾಹ ನಿಷೇಧದ ಹಿನ್ನೆಲೆಯಲ್ಲಿರುವ ಎಲ್ಲ ಕಾನೂನುಗಳು, ನಿಯಮಗಳು, ನ್ಯಾಯಾಲಯಗಳ ತೀರ್ಪು ನಿರ್ದೇಶನಗಳು, ಸರ್ಕಾರದ ವಿವಿಧ ಸುತ್ತೋಲೆಗಳು ಇತ್ಯಾದಿ ಕುರಿತು ಮೇಲಿಂದ ಮೇಲೆ ತರಬೇತಿ, ಮಾಹಿತಿ ಹಂಚಿಕೆಯಾಗುತ್ತಿರಲೇಬೇಕು. ಸ್ವಯಂಸೇವಾ ಸಂಘಟನೆಗಳ ಜಾಲ ಸಂಸ್ಥೆಗಳು, ಸಂಪನ್ಮೂಲ ಸಂಸ್ಥೆಗಳಿಗೆ ಈ ಜವಾಬ್ದಾರಿ ಇದೆ). ಸದ್ಯ ಈ ಮೇಲೆ ವಿವರಿಸಲಾಗಿರುವ ಬಾಲ್ಯವಿವಾಹದ ಸಂದರ್ಭದಲ್ಲಿನ ಅಪರಾಧಗಳನ್ನು ಹತ್ತಿರದಿಂದ ನೋಡುತ್ತಿರುವವರೂ ಸ್ವಯಂಸೇವಾ ಸಂಘಟನೆಗಳ ಸದಸ್ಯರೇ ಆಗಿದ್ದಾರೆ. ಉದಾಹರಣೆಗೆ, ಬಾಲ್ಯವಿವಾಹವಾಗಿದ್ದು ಗಂಡನ ಮನೆಯಲ್ಲಿ ವಾಸಿಸುತ್ತಿರುವ ಬಾಲಕಿಯರ ಬಗ್ಗೆ ಸ್ವಯಂಸೇವಾ ಸಂಘಟನೆಯವರಿಗೆ ತಿಳಿದಿರುತ್ತದೆ. ಅಷ್ಟೇ ಏಕೆ, ಅಂತಹ ವಿವಾಹಿತ ಬಾಲಕಿಯರು (18 ವರ್ಷದೊಳಗಿನವರು) ಗರ್ಭಿಣಿಯರಾಗಿದ್ದಲ್ಲಿ ಸ್ಥಳೀಯ ಅಂಗನವಾಡಿ ಕಾರ್ಯಕರ್ತೆ, ಆಶಾ ಕಾರ್ಯಕರ್ತೆ, ಆರೋಗ್ಯ ಸಹಾಯಕಿ (ಎ.ಎನ್.ಎಂ), ಸ್ಥಳೀಯ ವೈದ್ಯರು ಈ ಎಲ್ಲರಿಗೂ ತಿಳಿದಿರುತ್ತದೆ. ಆದರೆ, ಇವರಾರೂ ಪೊಲೀಸರಿಗೆ ದೂರು ಕೊಡುವುದಿಲ್ಲ. ಅದಿರಲಿ, ತಮ್ಮ ದಾಖಲೆಗಳಲ್ಲಿ ಆ ಗರ್ಭಿಣಿ (ಬಾಲಕಿ)ಯ ವಯಸ್ಸನ್ನು 19 ಎಂದೋ 20 ಎಂದೋ ಅಥವಾ ಸಂದರ್ಭಕ್ಕೆ ತಕ್ಕಂತೆ 21, ಅದಕ್ಕೂ ಹೆಚ್ಚು ಎಂದು ದಾಖಲಿಸಿಬಿಡುತ್ತಾರೆ. ತಾಯಿ ಕಾರ್ಡ್ ಹಾಗೂ ಮುಂದೆ ಮಗುವಿನ ರೋಗ ನಿರೋಧಕ ಕಾರ್ಡ್ ಎರಡರಲ್ಲೂ ಆಕೆ 18 ವರ್ಷ ದಾಟಿದವಳೇ ಆಗಿರುತ್ತಾಳೆ. ತಾಯಿ ಮತ್ತು ಮಕ್ಕಳಿಗೆ ಕೊಡಬೇಕಾದ ಸೌಕರ್ಯಗಳು, ಸವಲತ್ತುಗಳು ಕೊಡುವುದಾದರೆ ಕೊಟ್ಟುಬಿಡುತ್ತಾರೆ. ಏನೇ ತೊಂದರೆಯಾಗಿ ಅವಳೇನಾದರೂ ಹೆರಿಗೆಯ ಸಮಯದಲ್ಲಿ ಸತ್ತರೆ 18 ವರ್ಷ ದಾಟಿದವರು ಸತ್ತರೆಂದೇ ದಾಖಲಾಗುತ್ತದೆ (18ರೊಳಗಿನವಳು ಹೆರಿಗೆಯಲ್ಲಿ ಸತ್ತಳು ಎಂದಿದ್ದರೆ ಜಿಲ್ಲಾ ಮಟ್ಟದ ವೈದ್ಯಾಧಿಕಾರಿಗಳ ತಲೆ ಉರುಳುತ್ತದೆ. ವಿಧಾನಸೌಧದಲ್ಲಿ ಚರ್ಚೆ ಆಗುತ್ತದೆ!).

ಆದರೆ, 18 ಆಗದ ಬಾಲಕಿಯೊಡನೆ ಲೈಂಗಿಕ ಸಂಪರ್ಕ ಮಾಡಿದವರು ಮತ್ತು ಈ ಬಗ್ಗೆ ಸ್ಪಷ್ಟವಾಗಿ ತಿಳಿದಿರುವ ಈ ಮೇಲೆ ಪಟ್ಟಿ ಮಾಡಿದವರೆಲ್ಲರನ್ನೂ ಪೋಕ್ಸೋ ಕಾಯಿದೆಯ ಸೆ.21ರಂತೆ ಶಿಕ್ಷಾರ್ಹ ಅಪರಾಧ ಮಾಡಿರುವವರೆಂದೇ ಪರಿಗಣಿಸಬೇಕಲ್ಲವೆ? ಈಗ ಪ್ರಶ್ನೆ, ಕಾಯಿದೆಯ ಈ ನಿರ್ದಿಷ್ಟ ಸೂಚನೆಯನ್ನು ಪಾಲಿಸುವುದು ಹೇಗೆ?

ಬಹುತೇಕ ಕಾಯಿದೆಗಳಲ್ಲಿ 'ಹಿತದೃಷ್ಟಿಯಿಂದ ತೆಗೆದುಕೊಂಡ ಕ್ರಮಗಳಿಗೆ ರಕ್ಷಣೆ' ಎಂಬ ಒಂದು ಉಲ್ಲೇಖವಿರುತ್ತದೆ. ಅವುಗಳ ಪಠ್ಯ'... ಜಾರಿ ಮಾಡುವ ಸಂದರ್ಭದಲ್ಲಿ ರಾಜ್ಯ ಅಥವಾ ಕೇಂದ್ರ ಸರ್ಕಾರ, ಅಥವ ಇವುಗಳ ನಿರ್ದೇಶನದಲ್ಲಿ ಕ್ರಮ ಕೈಗೊಂಡ ವ್ಯಕ್ತಿಯ ಮೇಲೆ ಯಾವುದೇ ರೀತಿಯ ಕಾನೂನು ಕ್ರಮಗಳು ಅಥವಾ ಮೊಕದ್ದಮೆಯನ್ನು ಹೂಡುವಂತಿಲ್ಲ' ಎಂದು ರಕ್ಷಣೆ ನೀಡುತ್ತದೆ (ಉದಾ. ಮಕ್ಕಳ ನ್ಯಾಯ ಕಾಯಿದೆ 2015 ಸೆ. 100). ಇದು ಸರ್ಕಾರದ ಅಧಿಕಾರಿಗಳಿಗೆ ಮಾತ್ರವೋ, ಅಥವ ಮಕ್ಕಳ ಕಲ್ಯಾಣ ಸಮಿತಿ, ಮಕ್ಕಳ ರಕ್ಷಣಾ ಆಯೋಗ, ಚೈಲ್ಡ್‌ಲೈನ್ 1098 ಮತ್ತು ಮಕ್ಕಳನ್ನು ರಕ್ಷಿಸಲು ಮುಂದಾಗುವ ಸ್ವಯಂಸೇವಾ ಸಂಘಟನೆಗಳು ಅದರ ಸಿಬ್ಬಂದಿ ಮತ್ತು ಸಾರ್ವಜನಿಕರಿಗೂ ಅನ್ವಯಿಸುತ್ತದೋ ಇಲ್ಲವೋ ಎಂಬ ಕುರಿತು ಸ್ಪಷ್ಟತೆ ಇಲ್ಲವಾಗಿದೆ.

**ಕಾನೂನು ಜಾರಿ ಯಾರ ಜವಾಬ್ದಾರಿ?**

ಈ ಮೇಲಿನ ಎಲ್ಲ ಚರ್ಚೆಗಳ ಅಂಶಗಳು, ಕಾನೂನು, ನ್ಯಾಯಾಲಯದ ತೀರ್ಪು/ನಿರ್ದೇಶನಗಳು, ಸುತ್ತೋಲೆಗಳ ಜಾರಿ ಒಂದು ರೀತಿಯಲ್ಲಿ ನೆನೆಗುದಿಗೆ ಬಿದ್ದಿದೆ. ಜವಾಬ್ದಾರಿ ಅಧಿಕಾರ ಇರುವವರು, ಒಬ್ಬರಿಗೊಬ್ಬರು ಕೊಕ್ ಕೊಡುವ ಆಟ ಆಡುತ್ತಾರೆ, ಇಲ್ಲವೇ ಬಾಲ್ಯವಿವಾಹ ಪ್ರಕರಣ ವರದಿಯಾಗುವ ಸಂದರ್ಭದಲ್ಲಿ ಅಧಿಕಾರಿಗಳು ಇರುವುದಿಲ್ಲ, ಅವರ ಮೊಬೈಲ್ ಸಂಪರ್ಕಕ್ಕೆ ಸಿಗುವುದಿಲ್ಲ, ಇಲ್ಲವೇ ದೂರು

ಕೊಡುವ ದಾಖಲೆಗೆ ತಮ್ಮ ಹೆಸರು ಸಹಿ ಹಾಕುವ ಬದಲು, ಬೇರಾರೋ ಕೆಳಗಿನ ಅಧಿಕಾರಿಗಳಿಗೆ ವಹಿಸುವುದು, ಚೈಲ್ಡ್‌ಲೈನ್ ತರಹದ ಸ್ವಯಂಸೇವಾ ಸಂಘಟನೆಗಳ ಸಿಬ್ಬಂದಿಗೆ ಎಫ್.ಐ.ಆರ್. ದಾಖಲಿಸಿ ಎಂದು ಜಬರದಸ್ತು ಮಾಡುವುದು ಆಗುತ್ತದೆ. ಈ ಹಿಂದೆ ಆಗಿರುವ ಪ್ರಸಂಗಗಳನ್ನು ಉಲ್ಲೇಖಿಸುವುದಾದರೆ, ಬಾಲಕಾರ್ಮಿಕರನ್ನು ರಕ್ಷಿಸಲು ತೆರಳಿದ ತಂಡಗಳ ಮೇಲೆ 'ಆವರಣದೊಳಕ್ಕೆ ಕಾನೂನು ಬಾಹಿರ ಪ್ರವೇಶ ಆಪಾದನೆ'; ದೇವದಾಸಿಯನ್ನಾಗಿಸಿದವರ ಮೇಲೆ ದೂರು ಕೊಟ್ಟಿದ್ದಕ್ಕೆ ಸುಳ್ಳು ಪ್ರಕರಣ ದಾಖಲಿಸಿದ್ದೆಂದು ಸರ್ಕಾರದಿಂದಲೇ ಸರ್ಕಾರದ ಅಧಿಕಾರಿಗಳು, ಶಾಸನಾತ್ಮಕವಾಗಿ ನೇಮಿಸಿದ ವ್ಯಕ್ತಿಗಳು, ಸ್ವಯಂಸೇವಕರ ಮೇಲೆ ಮೊಕದ್ದಮೆ ಹೂಡುವುದು; ಬಾಲಕಾರ್ಮಿಕರೆಂಬ ಅನುಮಾನದ ಮೇಲೆ ಮಗುವನ್ನು ರಾಜ್ಯದ ರಕ್ಷಣೆಯಲ್ಲಿರಿಸಿದ್ದನ್ನೇ ಕಾನೂನು ಬಾಹಿರ ಬಂಧನದಲ್ಲಿರಿಸಿದ ಆಪಾದನೆ ಮಾಡಿ ಮಕ್ಕಳ ಕಲ್ಯಾಣ ಸಮಿತಿಗೇ ನ್ಯಾಯಾಲಯದ ಮೂಲಕ ಅಕ್ರಮವಾಗಿ ದಂಡಿಸಿದ್ದು; ಸರ್ಕಾರವೇ ಕಾನೂನುಬಾಹಿರವಾಗಿ 18ರೊಳಗಿನ ಮಕ್ಕಳನ್ನು ರಾಜ್ಯ ಬಂಧೀಖಾನೆಯಲ್ಲಿರಿಸಿದ್ದ ಪ್ರಕರಣ ಬೆಳಕಿಗೆ ತಂದರೆ, ನ್ಯಾಯಾಲಯವೇ ಆ ಆಪಾದನೆಯಲ್ಲಿ ಹುರುಳಿಲ್ಲ ಎಂದು ಹೇಳಿ, ದೂರು ಕೊಟ್ಟವರನ್ನೇ ಅನುಮಾನಿಸಿದ್ದು; ಅತ್ಯಾಚಾರಕ್ಕೆ ಒಳಗಾದ ಮಗುವಿಗೆ ಕಾನೂನಿನಂತೆ ಗರ್ಭಪಾತ ಮಾಡಿಸಲು ನೀಡಿದ ಸೂಚನೆ ಪಾಲಿಸದೆ, ಇಲ್ಲದ ಉಸಾಬರಿ ನಿಮಗೇಕೆ ಎಂದು ಕಾನೂನು ನಿರ್ದೇಶಕರನ್ನೇ ಪ್ರಶ್ನೆ ಮಾಡುವ ಸರ್ಕಾರದ ಧೋರಣೆ ನೋಡಿದರೆ, ಇರುವ ಕಾನೂನುಗಳನ್ನು ಜಾರಿ ಮಾಡಿ ಎಂದು ಸರ್ಕಾರವನ್ನು ಕೇಳುವುದಾಗಲಿ, ಜಾರಿ ವ್ಯವಸ್ಥೆಗಳಿಗೆ ದೂರು ಕೊಡುವುದಾಗಲೀ, ಮಾಡಲು ಯಾರಾದರೂ ಸರಿ ಹಿಂದೆ ಮುಂದೆ ನೋಡುವಂತಾಗುತ್ತದೆ.

ತೀರಾ ಇತ್ತೀಚೆಗೆ (ಮಾರ್ಚ್ 2018) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ತನ್ನ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸುತ್ತೋಲೆಯ ಮೂಲಕ ಒಂದು ನಿರ್ದೇಶನ ನೀಡಿದೆ. 'ಬಾಲ್ಯವಿವಾಹ ನಡೆಸುವುದಿಲ್ಲ ಎಂದು ಮುಚ್ಚಳಿಕೆ ಬರೆದುಕೊಟ್ಟ ಪೋಷಕರು ಅದನ್ನು ಉಲ್ಲಂಘಿಸಿದಲ್ಲಿ ಅಂತಹವರ ಮೇಲೆ ಎಫ್.ಐ.ಆರ್ ದಾಖಲಿಸಿ'. ಆದರೆ, ಯಾವ ಮಟ್ಟದ ಅಧಿಕಾರಿಗಳು ಎಫ್.ಐ.ಆರ್. ದಾಖಲಿಸಬೇಕು ಎಂಬ ಸ್ಪಷ್ಟನೆ ಇದರಲ್ಲಿ ಇಲ್ಲ. ಸೂಚನೆ ಉತ್ತಮವಾಗಿದ್ದರೂ, ಎಫ್.ಐ.ಆರ್. ದಾಖಲಿಸಲು ಜೂಟಾಟ ಆರಂಭವಾಗುವುದಂತೂ ಸತ್ಯ.

ಇವುಗಳಿಗೆ ಪರಿಹಾರ ಸಿಗಬೇಕೆಂದರೆ, ಸರ್ಕಾರದ ಮೇಲ್ಮಟ್ಟದ ಅಧಿಕಾರಿಗಳು (ಕಾನೂನು ಇಲಾಖೆ, ಕಾನೂನು ಸೇವಾ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ; ಪೊಲೀಸ್; ಆರೋಗ್ಯ ಇಲಾಖೆ; ಶಿಕ್ಷಣ ಇಲಾಖೆ; ಮುಜರಾಯಿ ಮತ್ತು ದತ್ತಿ ಇಲಾಖೆ; ವಕ್ಫ್ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಕಂದಾಯ ಇಲಾಖೆ, ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆ, ಕಾರ್ಮಿಕ ಇಲಾಖೆ, ನಗರಾಭಿವೃದ್ಧಿ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳು) ಮತ್ತು ಈ ಸಾಮಾಜಿಕ ಪಿಡುಗುಗಳನ್ನು ಕುರಿತು ಹೋರಾಟ ನಡೆಸಿರುವ ಸ್ವಯಂಸೇವಾ ಸಂಘಟನೆಗಳು ಒಟ್ಟಾಗಿ ಕುಳಿತ ಸಮಚಿತ್ತ ಸಮಭಾವದಿಂದ ಚರ್ಚೆ ನಡೆಸಿ ಸ್ಪಷ್ಟ ಸೂಚನೆಗಳು, ಜಾರಿ ವಿಧಿವಿಧಾನಗಳನ್ನು ಯಾವುದೇ ಅನುಮಾನಗಳಿಗೆ ಎಡೆ ಮಾಡದಂತೆ ಮತ್ತು ಯಾವುದೇ ಅಧಿಕಾರಿಗಳು ಬದಲಾದರೂ, ಯಾವುದೇ ಜನಪ್ರತಿನಿಧಿಗಳು ಬಂದರೂ ಮಕ್ಕಳ ಹಕ್ಕುಗಳ ಹಿತದೃಷ್ಟಿಯಿಂದ ಕಾಯಿದೆ ಜಾರಿ ಕುರಿತು ಅಡೆತಡೆಗಳುಂಟಾಗದಂತೆ ಮಾಡಬೇಕಿದೆ.

ಬಹಳ ಮುಖ್ಯವಾಗಿ 'ಬಾಲ್ಯವಿವಾಹಗಳಾಗುತ್ತಲೇ ಇಲ್ಲ, ಹದಿವಯಸ್ಕ ಗರ್ಭಿಣಿಯರೇ ಇಲ್ಲ, 18ರೊಳಗಿನವರು ಮಕ್ಕಳನ್ನು ಹೆರುತ್ತಲೇ ಇಲ್ಲ' ಎನ್ನುವ ನಿರಾಕರಣಾ ಸ್ವಭಾವದಿಂದ ಸರ್ಕಾರ ಹೊರಬಂದು, ತಳಮಟ್ಟದ ಅಧಿಕಾರಿಗಳಿಂದ ಸತ್ಯ ಮರೆಮಾಚುವ ವರದಿಗಳನ್ನು ಪಡೆಯುವುದನ್ನು ನಿಲ್ಲಿಸಬೇಕು. ಬದಲಿಗೆ ತಾನೇ ಮಾಡಿರುವ ಕಾನೂನುಗಳ ಸಮರ್ಪಕ ಜಾರಿಗೆ ಮುಂದಾಗಬೇಕು. ಆಗ ಸ್ವಯಂಸೇವಾ ಸಂಘಟನೆಗಳು ಮತ್ತು ಸಮಾಜವೂ ಸರ್ಕಾರದೊಡನೆ ಅಭಿವೃದ್ಧಿಯ ಪಥದಲ್ಲಿ ಹೆಜ್ಜೆ ಹಾಕಲು ಜೊತೆಯಾಗುವುದರಲ್ಲಿ ಅನುಮಾನವೇ ಇಲ್ಲ.

***

# "ಮಕ್ಕಳ ಸಂರಕ್ಷಣೆ"ಯ ಅನುಷ್ಠಾನದಲ್ಲಿ 'ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಸಂಸ್ಥೆ' ಗಳು ವಿಫಲವಾದುವೇ..?

("ಮಕ್ಕಳ ಸಂರಕ್ಷಣೆ" ಕುರಿತು ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನ ಮಾಡಬೇಕಾದ ಕೆಲವು ಆಯ್ದ ಸುತ್ತೋಲೆಗಳ ಮಾಹಿತಿ.)

**ಕೊಣಿಲ ರಾಘವೇಂದ್ರ ಭಟ್,**
ಪ್ರಾದೇಶಿಕ ಸಂಯೋಜಕರು,
ಯುನಿಸೆಫ್ ಮಕ್ಕಳ ಸಂರಕ್ಷಣಾ ಯೋಜನೆ ಕೊಪ್ಪಳ



'ಇಂದಿನ ಮಕ್ಕಳು ಮುಂದಿನ ಪ್ರಜೆಗಳು'. ಮಕ್ಕಳು ಸಂರಕ್ಷಣೆಯ ವಸ್ತುಗಳಲ್ಲ. ಸರ್ಕಾರ ಸಮಾಜದ ಎಲ್ಲಾ ಮಕ್ಕಳ ಕಾನೂನಾತ್ಮಕ ಪೋಷಕ. ಮಕ್ಕಳ ಸಂರಕ್ಷಣೆಯ ಅನುಷ್ಠಾನದಲ್ಲಿನ ನಿರ್ಲಕ್ಷ್ಯಕ್ಕೆ ಯಾರಿಂದಲೂ ಕ್ಷಮೆ ಇಲ್ಲ. ಮೂಲ ಜನನ ಪ್ರಮಾಣ ಪತ್ರ ಹೊಂದಿ ಕುಟುಂಬದೊಂದಿಗೆ, ಘನತೆಯ ಬದುಕನ್ನು ಹೊಂದುವುದು ಎಲ್ಲಾ ಮಕ್ಕಳ ಪ್ರಪ್ರಥಮ ಹಕ್ಕು. ಮಕ್ಕಳ ಅಭಿವೃದ್ಧಿ ದೇಶ ಮತ್ತು ಮಾನವ ಅಭಿವೃದ್ಧಿಯ ಪ್ರಮುಖ ಅಡಿಪಾಯ ಮತ್ತು ಮೈಲಿಗಲ್ಲು. ಸಮಾಜದ ಹೆಚ್ಚಿನ ಮಕ್ಕಳು ಜೂನ್ ತಿಂಗಳಲ್ಲಿಯೇ ಹುಟ್ಟಿದ್ದಾರೆ !!!! ಯಾಕೆಂದರೆ ಹುಟ್ಟಿದ ಎಲ್ಲಾ ಮಕ್ಕಳ 100% ಜನನ ನೋಂದಣಿ ಹಾಗೂ 100% ಎಲ್ಲಾ ಮಕ್ಕಳಿಗೆ ಮೂಲ ಜನನ ಪ್ರಮಾಣ ಪತ್ರ ವಿತರಣೆಯಲ್ಲಿ ವ್ಯವಸ್ಥೆ ವಿಫಲವಾಗಿದೆ. ಅಂಗನವಾಡಿಯಲ್ಲಿ, 100% ಶುದ್ಧ ಕುಡಿಯುವ ನೀರು, ಶೌಚಾಲಯ, ಕೈತೊಳೆಯುವ ಪ್ರಕ್ರಿಯೆ ಇದ್ದಲ್ಲಿ ನಮ್ಮ ಎಲ್ಲಾ ಶಾಲೆಗಳಲ್ಲಿ 100% ಕುಡಿಯುವ ನೀರು ಮತ್ತು ಶೌಚಾಲಯ ಹಾಗೂ ಸೋಪಿನೊಂದಿಗೆ ಕೈತೊಳೆಯುವ ವ್ಯವಸ್ಥೆ 100% ಇರುತ್ತಿತ್ತು. 100% 0–3 ವಯಸ್ಸಿನ ಎಲ್ಲಾ ಮಕ್ಕಳು ಕುಟುಂಬದ ಆರೈಕೆಯೊಂದಿಗೆ, 100% 3–6 ವಯಸ್ಸಿನ ಎಲ್ಲಾ ಮಕ್ಕಳು ಅಂಗನವಾಡಿಯಲ್ಲಿ ಅಥವಾ ಪೂರ್ವ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯಲ್ಲಿ, 100% 6–18 ವಯಸ್ಸಿನ ಎಲ್ಲಾ ಮಕ್ಕಳು ಶಾಲಾ ಶಿಕ್ಷಣ ಮತ್ತು ಪದವಿ ಪೂರ್ವ ಶಿಕ್ಷಣದ ಕಲಿಕೆಯ ಪ್ರಕ್ರಿಯೆಯಲ್ಲಿ ಇರುತ್ತಿದ್ದರೆ ನಮ್ಮ ಸಮಾಜದಲ್ಲಿ ಬಾಲಕಾರ್ಮಿಕತೆ, ಬಾಲ್ಯವಿವಾಹ, ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ಹಾಗೂ ಮಾರಾಟದ ಪ್ರಮಾಣವು ಅತ್ಯಂತ ಕಡಿಮೆ ಇರುತ್ತಿತ್ತು.

ಈ ಮೇಲಿನ ಅಂಶ ಮತ್ತು ಹೇಳಿಕೆಗಳನ್ನು ನಂಬಿ, ಒಪ್ಪುವುದಾದರೆ ಮುಂದಿನ ಕೆಲವು ಯೋಜನೆ ಮತ್ತು ಸುತ್ತೋಲೆಗಳನ್ನು ಓದಿ ಅನುಷ್ಠಾನಕ್ಕೆ ತನ್ನಿ. ನಂಬಲು ಕಷ್ಟವಾದರೆ ಮತ್ತೆ ಅದೇ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಕ್ಕೇ ನೀವು ಸಾಕ್ಷಿಗಳಾಗುತ್ತೀರಿ. ಪ್ರಾಮಾಣಿಕವಾಗಿ ಒಪ್ಪಿ ಅನುಷ್ಠಾನ ಮಾಡಿದರೆ ಅಭಿವೃದ್ಧಿ ಹೊಂದಿದ ರಾಷ್ಟ್ರಕ್ಕೆ ನೀವು ಸಾಕ್ಷಿಗಳಾಗುತ್ತೀರಿ ಹಾಗೂ ಅದಕ್ಕೆ ಕಾರಣರಾಗುತ್ತೀರಿ.

**ಮಕ್ಕಳು:**

'ಮಕ್ಕಳು', 'ಮಗು' ಎಂದಾಗ ನಮ್ಮ ಕಣ್ಣ ಮುಂದೆ ಬರುವ ಉತ್ತರ ಚಿಕ್ಕವರು ಅಥವಾ ಸಣ್ಣವರು ಎಂದು. ಇನ್ನೂ ಸ್ವಲ್ಪ ಯೋಚಿಸಿದಾಗ ಅವರು ಮುಗ್ದರು, ಕುತೂಹಲಿಗಳು, ಕ್ರಿಯಾಶೀಲರು, 'ಪಾಪ' ಅವಲಂಬಿತರು ಹೀಗೆ..... ಆದರೆ ಮಗುವಿಗೆ ಒಂದು ಪರಿಭಾಷೆ ಇದೆ. ಒಂದು ನಿರ್ದಿಷ್ಟ ವಯಸ್ಸಿಗೆ, ಅರ್ಥೈಸಬಹುದಾದರೆ 'ಮಗು' ಎಂದಾಗ, ಅದು 6, 14 ಹೆಚ್ಚೆಂದರೆ 16 ವರ್ಷ ವಯಸ್ಸಿನ ಒಳಗಿರುವವರ ಬಗ್ಗೆ ಚರ್ಚೆ ನಡೆಯುತ್ತವೆ, ಇಂದಿಗೂ ನಡೆಯುತ್ತಲೇ ಇದೆ. ಆದರೆ ಇಂದಿನ ಈ ಯುಗದಲ್ಲಿ, 'ಮನುಷ್ಯನ' ಬೌದ್ಧಿಕ, ಮಾನಸಿಕ, ದೈಹಿಕ, ಸಾಮಾಜಿಕ, ಭಾಷಾ ಸಾಮರ್ಥ್ಯದ ಬೆಳವಣಿಗೆಯನ್ನು ವೈಜ್ಞಾನಿಕವಾಗಿ ಶೋಧಿಸಿ, ದೇಹ ರಚನೆಯ ಬೆಳವಣಿಗೆ ಆಧಾರದಲ್ಲಿ, ಒಂದು ಸ್ಪಷ್ಟ ವಯಸ್ಸಿನ ಆಧಾರದಲ್ಲಿ, 'ಮಗು'ವಿಗೆ ಅಥವಾ ಮಕ್ಕಳು ಎಂದರೆ ಯಾರು ಎಂಬುದಕ್ಕೆ ಒಂದು ಅರ್ಥವನ್ನು ನೀಡಲಾಯಿತು. ಎಲ್ಲಾ ಬೆಳವಣಿಗೆ ಹಂತಗಳನ್ನು ತಲುಪುವುದು '18' ವಯಸ್ಸಿಗೆ ಎಂಬುದನ್ನು ಘೋಷಿಸಲಾಯಿತು. ಅದಕ್ಕೆ ಅಂತಾರಾಷ್ಟ್ರೀಯ ಮನ್ನಣೆ, ಕಾನೂನಿನ ಮುದ್ರೆ ದೊರೆತು, ವಿಶ್ವ ಪ್ರಚಲಿತವಾಯಿತು. 1989 ನವೆಂಬರ್ 20 ರಂದು ವಿಶ್ವಸಂಸ್ಥೆ, ಅಂತಾರಾಷ್ಟ್ರೀಯ ಮಟ್ಟದಲ್ಲಿ 'ಮಕ್ಕಳ ಹಕ್ಕುಗಳ ಒಡಂಬಡಿಕೆ' ಎಂಬ ಒಪ್ಪಂದ ಮಾಡಿಕೊಂಡು ಅಂಗೀಕಾರ ಮಾಡಿತು. 2014ರ ಹೊತ್ತಿಗೆ 196 ರಾಷ್ಟ್ರಗಳು ಇದನ್ನು ಅಂಗೀಕರಿಸಿವೆ. ಭಾರತ ಸರ್ಕಾರ 1992 ಡಿಸೆಂಬರ್ 11 ರಂದು ಈ ಒಡಂಬಡಿಕೆಯನ್ನು ಶಾಸನಬದ್ಧವಾಗಿ ಅಂಗೀಕರಿಸಿ, ಸಹಿ ಮಾಡಿದೆ. 'ಮಕ್ಕಳು ಎಂದರೆ, 18 ವರ್ಷದೊಳಗಿನ ಎಲ್ಲಾ ಮಾನವರು'. 10 ಅಧ್ಯಾಯದ ಕ್ರೋಡೀಕರಿಸಿದ 4 ಪ್ರಮುಖ ಹಕ್ಕುಗಳೆಂದರೆ, 1. ಬದುಕುವ ಹಕ್ಕು. 2. ರಕ್ಷಣೆಯ ಹಕ್ಕು 3. ಅವಕಾಶ ಮತ್ತು ವಿಕಾಸ ಹೊಂದುವ ಹಕ್ಕು. 4. ಭಾಗವಹಿಸುವ ಹಕ್ಕು.

**ಮಕ್ಕಳ ಸಂರಕ್ಷಣೆ ಎಂದರೇನು?** : 18 ವರ್ಷದೊಳಗಿನ ಮಕ್ಕಳನ್ನು ಯಾವುದೇ ರೀತಿಯ ನಿರ್ಲಕ್ಷ್ಯ, ಹಿಂಸೆ, ಶೋಷಣೆ, ಮತ್ತು

ಅನಗತ್ಯವಾಗಿ ಕುಟುಂಬದಿಂದ ದೂರ ಮಾಡುವುದರಿಂದ ರಕ್ಷಿಸುವುದನ್ನು 'ಮಕ್ಕಳ ಸಂರಕ್ಷಣೆ' ಎಂದು ಕರೆಯುತ್ತೇವೆ. ಇದರಲ್ಲಿ ಪ್ರಮುಖವಾಗಿ ಮಕ್ಕಳು ಯಾವುದೇ ರೀತಿಯ ಅಪಾಯಕ್ಕೆ ಹೋಗದಂತೆ ಹಾಗೂ ಅಪಾಯಗಳಿಂದ ರಕ್ಷಿಸಿ ಅವರ ಬಾಲ್ಯವನ್ನು ಮತ್ತು ಹಕ್ಕುಗಳನ್ನು ಅನುಭವಿಸುವಂತೆ ಮಾಡಿ ಮಕ್ಕಳು ದುರ್ಬಲರಾಗುವುದನ್ನು ತಪ್ಪಿಸುವುದೇ 'ಮಕ್ಕಳ ಸಂರಕ್ಷಣೆ' ಎಂದು ರಾಷ್ಟ್ರೀಯ ಸಮಗ್ರ ಮಕ್ಕಳ ಸಂರಕ್ಷಣಾ ಯೋಜನೆಯ ಮಾರ್ಗದರ್ಶಿ ಸೂಚನೆಯಲ್ಲಿ ಹೇಳಲಾಗಿದೆ (ಹೊಸ ಮಾರ್ಗಸೂಚಿ 2016)

ಮಕ್ಕಳು ಅತ್ಯಂತ ಹೆಚ್ಚು ನಿರ್ಲಕ್ಷ್ಯ ಹಿಂಸೆ, ಶೋಷಣೆ, ಮತ್ತು ಕುಟುಂಬದಿಂದ ದೂರವಾಗುವ ಸ್ಥಿತಿ ಅಥವಾ ಪದ್ಧತಿ ಇರುವುದು ಹಾಗೂ ಜೀವನದಲ್ಲಿ ಅಪಾಯಕ್ಕೆ ಒಳಗಾಗುವ ಸ್ಥಿತಿ ಬಾಲಕಾರ್ಮಿಕತೆ, ಬಾಲ್ಯವಿವಾಹ ಮತ್ತು ಮಕ್ಕಳ ಸಾಗಾಣಿಕೆ ಮತ್ತು ಮಾರಾಟ ಸ್ಥಿತಿಯಲ್ಲಿ ಕಾಣುತ್ತದೆ. ಅದರಂತೆ ಮಕ್ಕಳ ಸಂರಕ್ಷಣೆಯ ಇನ್ನೊಂದು ಅರ್ಥ, 'ಬಾಲಕಾರ್ಮಿಕ ಪದ್ಧತಿ, ಬಾಲ್ಯವಿವಾಹ ಹಾಗೂ ಮಕ್ಕಳ ಸಾಗಾಣಿಕೆ ಮತ್ತು ಮಾರಾಟವನ್ನು ಸಂಪೂರ್ಣ ತಡೆಗಟ್ಟಿ ನಿರ್ಮೂಲನೆ ಮಾಡುವುದು ಹಾಗೂ ಯಾವುದೇ ಮಕ್ಕಳು ಈ ಪದ್ಧತಿಗೆ ಒಳಗಾಗದಂತೆ ನೋಡುವುದು, ತಡೆಯುವುದು ಎಂದು ಕರೆಯುತ್ತಾರೆ. ಮತ್ತು ಈ ಕ್ರೂರ ವ್ಯವಸ್ಥೆಯಿಂದ ದೂರ ಇಡುವುದು ಮತ್ತು ಸಂರಕ್ಷಿಸುವುದೇ ಮಕ್ಕಳ ಸಂರಕ್ಷಣೆ'.

**1. ಪಂಚಾಯತ್‌ರಾಜ್ ಸಂಸ್ಥೆಗಳು:–**

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ಅಧಿನಿಯಮ –1993, (2015 ರ ತಿದ್ದುಪಡಿಯಂತೆ) ರಂತೆ ನಮ್ಮಲ್ಲಿ 3 ಹಂತದ ವ್ಯವಸ್ಥೆ ಇದೆ. ಅವುಗಳ್ಯಾವುವೆಂದರೆ ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್, ಮತ್ತು ಗ್ರಾಮ ಪಂಚಾಯತ್. ಮೂರು ಹಂತದ ವ್ಯವಸ್ಥೆಯೇ ನಮ್ಮ ಇಡೀ 'ಪ್ರಜಾಪ್ರಭುತ್ವದ ವ್ಯವಸ್ಥೆ' ಯ ಅಡಿಪಾಯ ಹಾಗೂ ಸಂವಿಧಾನದ ತಿರುಳು. ಜನಪ್ರತಿನಿಧಿಗಳೆಲ್ಲಾ ಸೇರಿ 'ಮಾನವ ಅಭಿವೃದ್ಧಿ'ಗೆ ಪೂರಕವಾದ ಅಭಿವೃದ್ಧಿಯನ್ನು ಮಾಡುವುದಾಗಿದೆ. ಮೇಲ್ನೋಟಕ್ಕೆ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಮೂಲ ಸೌಕರ್ಯ ಒದಗಿಸುವ ಕೆಲಸವೇ ದೊಡ್ಡದು ಎಂದು ಕಾಣುತ್ತದೆ. ಅದನ್ನು ಅವರು ಮಾಡುತ್ತಲೂ ಬಂದಿದ್ದಾರೆ. ಆದರೆ, 'ಅಭಿವೃದ್ಧಿ'ಯ ಅಳತೆಗೋಲು ಬಂದಾಗ ಸಾಧನೆ ಅಷ್ಟಕ್ಕಷ್ಟೇ. ಕಾರಣಗಳೇನು? ಉದಾ: ಗ್ರಾಮಗಳಿಗೆ ರಸ್ತೆ, ಕುಡಿಯುವ ನೀರು, ಆಸ್ಪತ್ರೆ, ಶಾಲೆ, ಶೌಚಾಲಯ ನಿರ್ಮಿಸಲಾಗಿದೆ ಎಂದು ಹೇಳಬಹುದು. ಇದು ಒಂದು ಸೂಚ್ಯಂಕದ ಪರಿಧಿಯೊಳಗೆ ಬರುತ್ತದೆ. ಆದರೆ 21ನೇ ಶತಮಾನದ 'ಅಭಿವೃದ್ಧಿಯ' ಸೂಚ್ಯಂಕ, 'ಮಾನವ ಅಭಿವೃದ್ಧಿ'ಯ ಮೇಲೆ ಆಧಾರಿತವಾದ್ದರಿಂದ ಎಷ್ಟೇ ಮೂಲಭೂತ ಸೌಕರ್ಯ ಒದಗಿಸಿದರೂ, ಅದನ್ನು ಉಳಿಸಿ, ಬೆಳೆಸಿ, ಉಪಯೋಗಿಸಿ, ಅನುಭವಿಸುವ, ಪಡೆಯುವ, ಕಾಪಾಡುವ, ಮಾನವ ಸೂಚ್ಯಂಕ ಅಳತೆಗೋಲಾದ 'ಹಕ್ಕುಗಳ' ಆಧಾರಿತ ಅಭಿವೃದ್ಧಿಗೆ ಪ್ರಾಧಾನ್ಯತೆ ನೀಡದಿದ್ದರೆ 'ಅಭಿವೃದ್ಧಿ'ಯ ಸೂಚ್ಯಂಕಗಳು ವಿಫಲವಾಗುವ ಸಾಧ್ಯತೆ ಹೆಚ್ಚು. ಉದಾ: 'ಜನನ ಪ್ರಮಾಣ ಪತ್ರ', ಹುಟ್ಟಿದ ಪ್ರತಿ ಮಗುವಿಗೂ ಬೇಕಾಗುತ್ತದೆ. ಚುಚ್ಚುಮದ್ದು ಜನಿಸಿದ ಪ್ರತಿ ಮಗುವಿಗೂ ಬೇಕಾಗುತ್ತದೆ. 'ರಸ್ತೆಗಳು' ಪ್ರತಿಯೊಬ್ಬರಿಗೂ ಇದೆ, ಮಗುವಿಗೆ ಪ್ರತ್ಯೇಕ ರಸ್ತೆ ಬೇಡ. ಗುಣಮಟ್ಟವುಳ್ಳ, ಸುಭದ್ರವಾದ ಒಂದೇ ರಸ್ತೆ ಸಾಕು. ಇದೇ ರೀತಿ, ಉತ್ತಮ ನೀರಿನ ಟ್ಯಾಂಕ್, ಉತ್ತಮ ಸಮುದಾಯ ಭವನ ಕಲ್ಪಿಸಿ, ಕೇವಲ 78% ಜನನ ಪ್ರಮಾಣ ಪತ್ರ, 71.7% ಮಹಿಳೆಯರ ಸಾಕ್ಷರತೆ, 62.6% ಚುಚ್ಚುಮದ್ದು ಮಾತ್ರ ಸಾಧಿಸಿದರೆ, (NFHS, 2015–16) ಒಟ್ಟು 'ದೇಶದ ಅಭಿವೃದ್ಧಿ' ಸೂಚ್ಯಂಕ ಕುಸಿಯುತ್ತದೆ. ಇದನ್ನು ಸೂಕ್ಷ್ಮವಾಗಿ ಗಮನಿಸಬೇಕು. ಪಂಚಾಯತ್‌ರಾಜ್ ಸಂಸ್ಥೆಗಳು ಮಾಡಬೇಕಾದ್ದು ಇದನ್ನೇ. ಈ ನಿಟ್ಟಿನಲ್ಲಿ ನೋಡಿದಾಗ ಪಂಚಾಯತ್‌ರಾಜ್ ಸಂಸ್ಥೆಗಳಿಗೆ 'ಮಾನವ ಅಭಿವೃದ್ಧಿ' ಮತ್ತು 'ಮಕ್ಕಳ ಹಕ್ಕುಗಳ' ಅನುಷ್ಠಾನದ ಜವಾಬ್ದಾರಿಗಳು ಹಲವಾರು ಇವೆ.

**2. ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ಮತ್ತು ತಾಲೂಕು ಪಂಚಾಯತಿಯ ಕಾರ್ಯನಿರ್ವಹಣಾಧಿಕಾರಿಗಳನ್ನು ಬಾಲ ಕಾರ್ಮಿಕ ಪದ್ಧತಿ ತಡೆಗಟ್ಟಲು, "ನಿರೀಕ್ಷಕರಾಗಿ" ನೇಮಕ:–**

ಸರ್ಕಾರದ ಅಧೀನ ಕಾರ್ಯದರ್ಶಿ, ಕಾರ್ಮಿಕ ಇಲಾಖೆ ಇವರು ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ ಹೊರಡಿಸಿದ 'ಅಧಿಸೂಚನೆ' ಸಂಖ್ಯೆ ಕಾಇ316 ಎಲ್.ಇ.ಟಿ.2010(1) ದಿನಾಂಕ 30–11–2010 ರಂತೆ, 'ಗ್ರಾಮೀಣ ಪ್ರದೇಶದಲ್ಲಿ 14 ವರ್ಷದೊಳಗಿನ ಎಲ್ಲಾ ಮಕ್ಕಳು ಶಾಲೆಯಲ್ಲಿರುವಂತೆ, ಹಾಗೂ 15ರಿಂದ 18 ವರ್ಷದೊಳಗಿನ ಯಾವುದೇ ಮಕ್ಕಳು ಅಪಾಯಕಾರಿ ಕ್ಷೇತ್ರದಲ್ಲಿ ದುಡಿಮೆಗೆ ಒಳಗಾಗದಂತೆ ನೋಡುವ ಜವಾಬ್ದಾರಿ ಗ್ರಾಮ ಪಂಚಾಯತ್‌ನದ್ದಾಗಿದೆ. ಶಾಲಾ ಶಿಕ್ಷಣ ಪೂರೈಸಲು, ಯಾವುದೇ ಮಾಲೀಕರು 14 ವರ್ಷದೊಳಗಿನ ಮಕ್ಕಳನ್ನು 'ದುಡಿಮೆ'ಗೆ ಹೋಗದಂತೆ ಕ್ರಮ ಕೈಗೊಳ್ಳಲು, 25 ಅಧಿಕಾರಿಗಳನ್ನು ಬಾಲ್ಯಾವಸ್ಥೆ ಮತ್ತು ಕಿಶೋರಾವಸ್ಥೆ ಕಾರ್ಮಿಕ

ಪದ್ಧತಿ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986, (2016ರ ತಿದ್ದುಪಡಿಯಂತೆ) (ಕೇಂದ್ರ ಕಾಯ್ದೆ 61–1986) ಕಲಂ–17ರ ಅಡಿಯಲ್ಲಿ ಮಹತ್ತರವಾದ ಅಧಿಕಾರವನ್ನು ಚಲಾಯಿಸಲು 'ನಿರೀಕ್ಷಕರನ್ನಾಗಿ' ತಕ್ಷಣದಿಂದ ಜಾರಿಗೆ ಬರುವಂತೆ ನೇಮಕ ಮಾಡಿ ಆದೇಶ ಹೊರಡಿಸಿದೆ. ಅದರಂತೆ ರಾಜ್ಯದ ಎಲ್ಲಾ ತಾಲೂಕಿನ ಪಂಚಾಯತಿಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ವಿಶೇಷವಾಗಿ ಗ್ರಾಮ ಪಂಚಾಯತಿಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಈ ಅಧಿಕಾರವನ್ನು ಹೊಂದಿದ್ದಾರೆ. ಹೀಗೆ ಯಾವುದೇ ಗ್ರಾಮ ಪಂಚಾಯತಿಯಲ್ಲಿ 'ಮಕ್ಕಳ ದುಡಿಮೆ' ಅಥವಾ ಬಾಲಕಾರ್ಮಿಕತೆಯನ್ನು ತಡೆಗಟ್ಟಿ, ಕ್ರಮಕೈಗೊಳ್ಳ ಬೇಕಾದ್ದು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಜವಾಬ್ದಾರಿ. ಅಲ್ಲದೇ ಈ ಕಾಯ್ದೆಯ ಅಡಿಯಲ್ಲಿ ಬರುವ ಪರಿಚ್ಛೇದ 17ರ ಹೆಚ್ಚಿನ ಅಧಿಕಾರಿಗಳು ಮತ್ತು ಇಲಾಖೆಗಳು ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಒಳಪಟ್ಟಿದೆ. ಉದಾ: ತಾಲ್ಲೂಕು ಪಂಚಾಯತಿ, ಗ್ರಾಮ ಪಂಚಾಯತಿ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಮೀನುಗಾರಿಕೆ, ಕೃಷಿ ಮತ್ತು ತೋಟಗಾರಿಕಾ ಇಲಾಖೆ, ಹೀಗೆ 22 ಇಲಾಖೆಗಳ ಹಿಡಿತ ಜಿಲ್ಲಾ ಪಂಚಾಯತ್‌ನದೇ ಆಗಿದೆ. ಇದರ ಅನುಷ್ಠಾನ, ಪ್ರಗತಿ ಪರಿಶೀಲನೆ, ಉಸ್ತುವಾರಿ, ವರದಿ ಹಾಗು ಅನುಸರಣೆಯ ಜವಾಬ್ದಾರಿ ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಾಹಣಾ ಅಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳ ವ್ಯಾಪ್ತಿಯಲ್ಲಿದೆ.

**3. ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕು ಮಟ್ಟದ ಮಕ್ಕಳ ಹಕ್ಕುಗಳ ಸಂರಕ್ಷಣಾ, ಸಮನ್ವಯ ಮತ್ತು ಪರಿಶೀಲನಾ ಸಮಿತಿ ಹಾಗೂ ಗ್ರಾಮ ಪಂಚಾಯತಿ ಮಟ್ಟದ ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿ (ಮಕ್ಕಳ ಕಾವಲು ಸಮಿತಿ) ರಚಿಸುವ ಬಗ್ಗೆ ಆದೇಶ ಸಂಖ್ಯೆ :** ಮಮಿ105 ಮಮ2013, ಬೆಂಗಳೂರು, ದಿನಾಂಕ : 22.01.2014: ಈ ಸುತ್ತೋಲೆಯಂತೆ ರಾಜ್ಯದ ಎಲ್ಲ ಗ್ರಾಮ ಪಂಚಾಯತಿಗಳಲ್ಲಿ ಮಕ್ಕಳ ಕಾವಲು ಸಮಿತಿ ಕಡ್ಡಾಯ. ಈ ಸಮಿತಿಯ ಅಧ್ಯಕ್ಷರಾಗಿ ಆಯಾ ಗ್ರಾಮ ಪಂಚಾಯತಿಯ ಅಧ್ಯಕ್ಷರೇ ಕಾರ್ಯ ನಿರ್ವಹಿಸಲಿದ್ದು, ಕಾರ್ಯದರ್ಶಿಗಳಾಗಿ ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಾರೆ. ಈ ಸಮಿತಿಯಲ್ಲಿ ಸುಮಾರು 17 ಇಲಾಖೆಯ 30 ಜನ ಸದಸ್ಯರಿದ್ದಾರೆ. ಈ ಸಮಿತಿಯು ವರ್ಷಕ್ಕೆ 4 ಸಭೆಗಳನ್ನು ನಡೆಸಿ 30 ಕಾರ್ಯಸೂಚಿಗಳನ್ನು ಅನುಷ್ಠಾನಕ್ಕೆ ತಂದು 18 ವರ್ಷದೊಳಗಿನ ಎಲ್ಲ ಮಕ್ಕಳ ಸಂಪೂರ್ಣ ರಕ್ಷಣೆ, ಶಿಕ್ಷಣ ನೀಡಿ ಪಂಚಾಯತಿಯನ್ನು 'ಮಕ್ಕಳ ಸ್ನೇಹಿ' ಗ್ರಾಮ ಪಂಚಾಯತಿಯನ್ನಾಗಿ ಮಾಡುವುದು ಇದರ ಪ್ರಮುಖ ಆಶಯ. ತನ್ಮೂಲಕ ಬಾಲಕಾರ್ಮಿಕತೆ, ಬಾಲ್ಯವಿವಾಹ ಮುಕ್ತ ಹಾಗೂ ಮಹಿಳೆಯರ ಮತ್ತು ಮಕ್ಕಳ ಮಾರಾಟ ಹಾಗೂ ಸಾಗಾಣಿಕೆಯನ್ನು ಸಂಪೂರ್ಣ ತಡೆಗಟ್ಟುವುದೇ ಇದರ ಮುಖ್ಯ ಗುರಿ. ಇದರ ಸಂಪೂರ್ಣ ಜವಾಬ್ದಾರಿ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿಯದ್ದು. ಆದರೆ ಕೆಲವು ಬೆರಳೆಣಿಕೆಯ ಗ್ರಾಮಪಂಚಾಯತಿಗಳಲ್ಲಿ ಕೆಲವು ಕಾರ್ಯಕ್ರಮಗಳು ಕಂಡುಬಂದರೆ ಸಮಗ್ರವಾಗಿ ರಾಜ್ಯದಾದ್ಯಂತ ಎಲ್ಲ ಗ್ರಾಮ ಪಂಚಾಯತಿಗಳಲ್ಲಿ ಈ ಸಮಿತಿ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುವುದರ ಬಗ್ಗೆ ಯಾವುದೇ ಅಂಶಗಳು, ಕುರುಹುಗಳು ಕಾಣುತ್ತಿಲ್ಲ. ಇದಕ್ಕೆ ಪ್ರಮುಖ ಕಾರಣವಾಗಿ ಪಂಚಾಯತ್ ರಾಜ್ ಸಂಸ್ಥೆಯ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿಗಳ ನಿರಂತರ ಪರಿಶೀಲನೆ, ಅವಲೋಕನ, ಅನುಸರಣೆ ಮತ್ತು ಉಸ್ತುವಾರಿಯ ಕೊರತೆ. ಈ ನಿಟ್ಟಿನಲ್ಲಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳ ಪಾತ್ರ ಪ್ರಮುಖವಾದದ್ದು. (ಕೆಡಿಪಿನಲ್ಲಿ)

**4. ಮಕ್ಕಳ ಸಂರಕ್ಷಣೆಯಲ್ಲಿ ಗ್ರಾಮ ಪಂಚಾಯತಿಗಳ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಪ್ರಕಾರ್ಯಗಳು, ಕರ್ತವ್ಯಗಳು ಮತ್ತು ಅಧಿಕಾರಗಳು:**

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ಅಧಿನಿಯಮ–2015 ರ ಪ್ರಕಾರ ಪರಿಚ್ಛೇದ– 58 (1–ಎ)(1), ಪ್ರತಿ ವರ್ಷ 10% ರಷ್ಟು ಮನೆಗಳಿಗೆ ಶೌಚಾಲಯಗಳನ್ನು ಒದಗಿಸುವುದು. ವಿಧಿ (ಗಿ), ಪ್ರಾಥಮಿಕ ಶಾಲೆಗೆ ಮಕ್ಕಳ ಸಾರ್ವತ್ರಿಕ ದಾಖಲಾತಿಯನ್ನು ಖಚಿತಪಡಿಸುವುದು ಕೇವಲ ದಾಖಲಾತಿ ಅಲ್ಲ, ಸಾರ್ವತ್ರಿಕ ಹಾಜರಾತಿಯ ಖಾತ್ರಿ. ಇದರಲ್ಲಿ 100% ಸಾಧನೆಯಾಗಿದ್ದರೆ, ಬಾಲಕಾರ್ಮಿಕತೆಯ ಪ್ರಮಾಣ ಗ್ರಾಮ ಪ್ರದೇಶಗಳಲ್ಲಿ ಕಡಿಮೆಯಿರುತ್ತಿತ್ತು.

ವಿಧಿ (vi) – ಮಕ್ಕಳಿಗೆ ಸಾರ್ವತ್ರಿಕವಾಗಿ ರೋಗನಿರೋಧಕ ಚುಚ್ಚುಮದ್ದು ನೀಡುವ ಕಾರ್ಯಕ್ರಮಗಳನ್ನು 100% ಸಾಧಿಸುವುದು. (ಇದು ಸಾಧ್ಯವಾಗಿದ್ದರೆ ಹಳ್ಳಿಗಳಲ್ಲಿ ಮಕ್ಕಳ ಆರೋಗ್ಯದ ಸ್ಥಿತಿಗತಿ ಸೂಚ್ಯಂಕ ಉತ್ತಮವಾಗಿರುತಿತ್ತು.)

ವಿಧಿ (vii) – ಜನನ ಮತ್ತು ಮರಣ ಪ್ರಮಾಣ ಪತ್ರಗಳು ತ್ವರಿತ ನೋಂದಣಿ ಮತ್ತು ಅದನ್ನು ಕಾಲ ಕಾಲಕ್ಕೆ ವರದಿ ಮಾಡಿ ಖಚಿತಪಡಿಸಿಕೊಳ್ಳುವುದು. ಹೀಗೆ ಪಂಚಾಯತಿ

ನಿರ್ವಹಿಸಬೇಕಿರುವ ಅನೇಕ ಜವಾಬ್ದಾರಿಗಳಿವೆ. ಇವೆಲ್ಲವೂ 'ಮಕ್ಕಳ ಹಕ್ಕುಗಳ' ಅಂಶಗಳೇ ಆಗಿವೆ. ಮಕ್ಕಳಿಗೆ ಶೌಚಾಲಯ, ಶಿಕ್ಷಣ, ಆರೋಗ್ಯ, ಚುಚ್ಚುಮದ್ದು ಮುಂತಾದವು. ಇಂದು ಅಭಿವೃದ್ಧಿಯ ಸೂಚ್ಯಂಕಗಳಲ್ಲಿ ಬಹುಪಾಲು ಇವುಗಳೇ ಆಗಿವೆ.

ಈ ನೂತನ ಕಾಯ್ದೆಯ 3 (ಹೆಚ್ 2(1)) ಪ್ರಕಾರ ಪ್ರತಿ ಗ್ರಾಮ ಪಂಚಾಯತಿಯಲ್ಲಿ ಮಹಿಳೆಯರಿಗೆ ಮತ್ತು ಮಕ್ಕಳಿಗಾಗಿ ಪ್ರತ್ಯೇಕ ಗ್ರಾಮ ಸಭೆಗಳನ್ನು ನಡೆಸಲು ಕಡ್ಡಾಯಗೊಳಿಸಲಾಗಿದೆ. ಈ ಅಂಶವನ್ನು ರಾಜ್ಯದ 6020 ಗ್ರಾಮಪಂಚಾಯತಿಗಳಿಗೆ ಕೊಂಡೊಯ್ದು ಕ್ರಿಯಾಶೀಲ ಮಕ್ಕಳ ಗ್ರಾಮಸಭೆ ನಡೆಸುವ ಜವಾಬ್ದಾರಿ ಜಿಲ್ಲಾ ಪಂಚಾಯತಿಯದ್ದೇ ಆಗಿದೆ.

**5. ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯ್ದೆ–2012 ಮತ್ತು ಬಾಲ್ಯವಿವಾಹ ನಿಷೇಧ ಕಾಯ್ದೆ–2006ರ ಅನುಷ್ಠಾನದ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರದ ಕುರಿತು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಸುತ್ತೋಲೆ ಸಂಖ್ಯೆ : ಗ್ರಾಅಪ 10 ಸ್ವೀಮರ 2018 ದಿನಾಂಕ : 22.01.2018:**

ಈ ಸುತ್ತೋಲೆಯಂತೆ ಎಲ್ಲ ಗ್ರಾಮ ಪಂಚಾಯತಿಗಳಲ್ಲಿ ಬಾಲ್ಯವಿವಾಹಗಳನ್ನು ಸಂಪೂರ್ಣ ತಡೆಗಟ್ಟಿ ಹಾಗೂ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ 18 ವರ್ಷದೊಳಗಿನ ಯಾವುದೇ ಮಗುವಿನ ಲೈಂಗಿಕ ದೌರ್ಜನ್ಯ, ಹಿಂಸೆ, ಕಿರುಕುಳ ಆಗದಂತೆ ನೋಡಿಕೊಳ್ಳುವ ಜವಾಬ್ದಾರಿ ಇದೆ. ಹಾಗೂ 18 ವರ್ಷದೊಳಗಿನ ಯಾವುದೇ ಹೆಣ್ಣು ಮಗುವಿಗೆ ಬಾಲ್ಯವಿವಾಹವಾದಲ್ಲಿ ಅದನ್ನು ಪೋಕ್ಸೋ ಕಾಯ್ದೆಯ (POCSO-2012) ಒಳಗಡೆ ಹಾಗೂ ಭಾರತೀಯ ದಂಡ ಸಂಹಿತೆ ಸೆಕ್ಷನ್ – 370, 375, 376 ಒಳಗಡೆ ತಂದು ಆರೋಪಿಗಳಿಗೆ ಶಿಕ್ಷೆ ನೀಡುವ ಬಗ್ಗೆ ಉಲ್ಲೇಖಿಸಲಾಗಿದೆ. ಆದರೆ ಪಂಚಾಯತ್‌ರಾಜ್ ಇಲಾಖೆಯ ಅಧಿಕಾರಿಗಳನ್ನು ಈ ನಿಟ್ಟಿನಲ್ಲಿ ಜಾಗೃತಿ ಮೂಡಿಸುವ, ಬಲಪಡಿಸುವ ಮತ್ತು ಕ್ರಿಯಾಶೀಲಗೊಳಿಸುವ ಕಾರ್ಯದಲ್ಲಿ ಪಂಚಾಯತ್ ರಾಜ್ ಸಂಸ್ಥೆಯ ಯಾವುದೇ ತರಬೇತಿ ಕೈಪಿಡಿಯಲ್ಲಿ ಮಾಹಿತಿ ಇಲ್ಲ. ಹೀಗಿದ್ದಾಗ ಈ ಪಂಚಾಯತ್ ಅಧಿಕಾರಿಗಳು ಇದರ ಅನುಷ್ಠಾನದಲ್ಲಿ ಯಾವ ರೀತಿ ಕಾರ್ಯ ನಿರ್ವಹಿಸಲು ಸಾಧ್ಯ?. ಇದಕ್ಕೆ ಜಿಲ್ಲಾ ಪಂಚಾಯತ್ ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳೇ ಉತ್ತರಿಸಬೇಕು.

**6. ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ಮತ್ತು ಮಾರಾಟ ತಡೆ ಸಮಿತಿ:–**

29–12–2004, 30–5–2005, 9–02–2007, 24–05–2007, ಹೀಗೆ ಪ್ರತಿ ವರ್ಷ ಕರ್ನಾಟಕ ರಾಜ್ಯ ಸರ್ಕಾರ ಮಕ್ಕಳ ಮತ್ತು ಮಹಿಳೆಯರ ಸಾಗಾಣಿಕೆ ಮತ್ತು ಮಾರಾಟ ತಡೆಗಾಗಿ ವಿಶೇಷ ಸುತ್ತೋಲೆ ಹೊರಡಿಸಿ, ಜಿಲ್ಲೆಗಳಲ್ಲಿ 4 ಹಂತದ ತಡೆ ಸಮಿತಿ ರಚಿಸಿ (ಗ್ರಾಮ, ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ) ತನ್ಮೂಲಕ ಮಕ್ಕಳ ಮೇಲಿನ ('ಮಕ್ಕಳ ಹಕ್ಕುಗಳ ಒಡಂಬಡಿಕೆ' ಯಲ್ಲಿ ಹೇಳಿದ ಪರಿಚ್ಛೇದ 11, 35, 37) ದೌರ್ಜನ್ಯ ತಡೆ ಹಾಗೂ ಮಕ್ಕಳ ಸಾಗಾಣಿಕೆ ಮತ್ತು ಮಾರಾಟ ನಿಲ್ಲಿಸಲು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ಅಧಿನಿಯಮ –2015, ಸೆಕ್ಷನ್ 61 ಎ ರಂತೆ, ಸಾಮಾನ್ಯ ಸಮಿತಿಯಲ್ಲಿ ಉಪಸಮಿತಿಯಾಗಿ ರಚಿಸಿ ಅನುಷ್ಠಾನ ಮಾಡಬೇಕು ಎಂದು ತಿಳಿಸಿದೆ. ಪ್ರತಿ 2 ತಿಂಗಳಿಗೊಮ್ಮೆ ಈ ಸಮಿತಿ, ಪಂಚಾಯತಿ, ಗ್ರಾಮ ಮಟ್ಟದ ವಿಚಾರಗಳನ್ನು ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಲು ಗ್ರಾಮ ಪಂಚಾಯತಿಗೆ ಅಧಿಕಾರ ಒದಗಿಸಿದೆ. ಅದೇ ರೀತಿಯಲ್ಲಿ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಮಟ್ಟದ ಗ್ರಾಮ ಪಂಚಾಯತಿಗಳಲ್ಲಿ, ಪಂಚಾಯಿತಿ ಅಧ್ಯಕ್ಷರೇ, ಈ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಅಂಗನವಾಡಿಯ ಮೇಲ್ವಿಚಾರಕರು ಕಾರ್ಯದರ್ಶಿಯಾಗಿರುತ್ತಾರೆ ಮತ್ತು ಉಳಿದಂತೆ, ಇತರೆ 8 ಸ್ಥಳೀಯ ಅಧಿಕಾರಿಗಳು, ಯುವತಿ ಮತ್ತು ಮಹಿಳಾ ಮಂಡಳಿ ಸದಸ್ಯರು ಇದರ ಸದಸ್ಯರಾಗಿರುತ್ತಾರೆ. ಗ್ರಾಮಪಂಚಾಯತಿಗಳೂ, ಪ್ರತಿ 2 ತಿಂಗಳಿಗೊಮ್ಮೆ ಸಭೆ ಸೇರಿ 'ಮಕ್ಕಳ ಹಕ್ಕುಗಳ ಅನುಷ್ಠಾನ'ದ ಹಲವಾರು ಕಾನೂನುಗಳನ್ನು, ನೀತಿಗಳನ್ನು, ಕ್ರಮಗಳನ್ನು ಕೈಗೊಳ್ಳಬೇಕು.

**7. ಗ್ರಾಮ ಪಂಚಾಯತ್ ಮಟ್ಟದಲ್ಲಿ ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ಮತ್ತು ಮಾರಾಟ ತಡೆ ಸಮಿತಿಯನ್ನು ಬಲಪಡಿಸುವ ಬಗ್ಗೆ** : ಸಂಖ್ಯೆ: ಗ್ರಾಅಪ 142 ಗ್ರಾಪಂಅ 2016 ದಿನಾಂಕ 21.04.2016: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಜಂಟಿ ಕಾರ್ಯದರ್ಶಿಗಳ ಈ ಸುತ್ತೋಲೆಯ ಆಶಯವೇನೆಂದರೆ 2006 ರಿಂದಲೂ ಅನುಷ್ಠಾನ ಮಾಡಬೇಕೆಂದು ಹೊರಡಿಸಿರುವ ಸುತ್ತೋಲೆಯಂತೆ ಪ್ರತೀ ಗ್ರಾಮಪಂಚಾಯತಿಯಲ್ಲಿರುವ 'ಮಹಿಳೆಯರ ಮತ್ತು ಮಕ್ಕಳ ಸಾಗಾಣಿಕೆ ಮತ್ತು ಮಾರಾಟ ತಡೆ ಸಮಿತಿ'ಯನ್ನು ಬಲಪಡಿಸುವುದು. ಆದರೆ ಪರಿಸ್ಥಿತಿ ಹೇಗಿದೆ ಎಂದರೆ ರಾಜ್ಯದ

ಯಾವ ಗ್ರಾಮ ಪಂಚಾಯತಿಯಲ್ಲಿ ಈ ಸಮಿತಿಗಳು ಕಾರ್ಯನಿರ್ವಹಿಸುತ್ತಿದೆಯೋ ಇಲ್ಲವೋ ಎಂಬುದರ ಬಗ್ಗೆ ರಾಜ್ಯದಲ್ಲಿ ಯಾರಿಗೂ ಮಾಹಿತಿ ಇಲ್ಲ. ಇನ್ನು ಈ ಸಮಿತಿಯನ್ನು ಬಲಪಡಿಸುವುದರ ಕುರಿತಾದ ಈ ಸುತ್ತೋಲೆಯ ಅವಶ್ಯಕತೆಯ ಪ್ರಶ್ನೆ ನಮ್ಮನ್ನು ಕಾಡುತ್ತದೆ. ಈ ಹಿನ್ನೆಲೆಯಲ್ಲಿ ಇದೇ ರೀತಿಯ ಸಮಿತಿಗಳು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲೂ ಕೂಡ ಕಾರ್ಯನಿರ್ವಹಿಸಬೇಕು. ಇದನ್ನು ಕ್ರಿಯಾಶೀಲಗೊಳಿಸುವ ಕಾರ್ಯ ಮತ್ತೆ ಅದೇ ಪಂಚಾಯತ್ ರಾಜ್ ಸಂಸ್ಥೆಗಳೇ ಮಾಡಬೇಕು ಯಾಕೆಂದರೆ ಇವುಗಳೆಲ್ಲವೂ ಗ್ರಾಮ ಪಂಚಾಯತಿಗೆ ಸಂಬಂಧಿಸಿದ್ದೇ ಆಗಿದೆ.

**8. ಮಕ್ಕಳ ಗ್ರಾಮಸಭೆ:–**

'ಮಕ್ಕಳ ಹಕ್ಕುಗಳ' ಅನುಷ್ಠಾನದಲ್ಲಿ ಕರ್ನಾಟಕದಲ್ಲಿ ಹೊಸ ಸಂಚಲನ ಮೂಡಿಸಿದ ಅಂಶವೆಂದರೆ, ಗ್ರಾಮ ಪಂಚಾಯತಿ ಮಟ್ಟದಲ್ಲಿ ಕಡ್ಡಾಯವಾಗಿ ನಡೆಸಬೇಕಾದ 'ಮಕ್ಕಳ ಗ್ರಾಮಸಭೆ'. ಈ ಚಿಂತನೆ 2006 ರಲ್ಲಿಯೇ ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಚಿಂತನೆ ನಡೆಸಿ ಅನುಷ್ಠಾನಕ್ಕೆ ತಂದಿತು. ಪ್ರಾರಂಭದಲ್ಲಿ 'ಮಕ್ಕಳ ಗ್ರಾಮಸಭೆ' ಸಭೆ ಎಂದರೆ ಊರಿನ ಗ್ರಾಮಸ್ಥರನ್ನೆಲ್ಲಾ ಗ್ರಾಮ ಪಂಚಾಯತಿಗೆ ಕರೆದು ಮಕ್ಕಳಿಂದ ಹಾಡು, ನಾಟಕ ಡ್ಯಾನ್ಸ್, ಮಾಡಿಸಿ ಅವರಿಗೆ ಒಂದಿಷ್ಟು ಬಹುಮಾನ ನೀಡಿ ಸಿಹಿ ಹಂಚುವುದು ಅಂದುಕೊಂಡಿದ್ದರು. ಆದರೆ ದಿನಾಂಕ 18–09–2006 ರಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿಗಳವರ ಸುತ್ತೋಲೆ ಪತ್ರ ಸಂಖ್ಯೆ: ಗ್ರಾ.ಅಪ:367. ಗ್ರಾ.ಪಂ.ಅ.2006ರ ಪ್ರಕಾರ ತಿಳಿದು ಬಂದ ವಿಚಾರ, ಅದು ಮಕ್ಕಳ ಡ್ಯಾನ್ಸ್ ಅಲ್ಲಾ..... ಇಡೀ ಗ್ರಾಮ ಪಂಚಾಯತಿಯಲ್ಲಿರುವ 18 ವರ್ಷದೊಳಗಿನ ಎಲ್ಲಾ ಮಕ್ಕಳ ಸಮಸ್ಯೆಗಳ ಬಗ್ಗೆ ಜನಪ್ರತಿನಿಧಿಗಳು, ಅಧಿಕಾರಿಗಳು, ಸಮುದಾಯ, ಪೋಷಕರು, ನಾಗರಿಕ ಸಂಘ ಸಂಸ್ಥೆಗಳು, ಗ್ರಾಮಸ್ಥರು ಎಲ್ಲಾ ಸೇರಿ ಆಲಿಸಿ, ಪರಿಹರಿಸಿ, ತಮ್ಮ ಗ್ರಾಮ ಪಂಚಾಯತಿಯನ್ನು 'ಮಕ್ಕಳಿಗೆ ಸುರಕ್ಷಿತ'ವಾಗಿಸುವ ಮತ್ತು 'ಮಕ್ಕಳ ಸ್ನೇಹಿ' ಯನ್ನಾಗಿಸುವ ಪ್ರಕ್ರಿಯೆ ಎಂಬುದು ತಿಳಿಯಿತು. ಇದರಲ್ಲಿ ನಾವು ಈಗಾಗಲೇ ಚರ್ಚಿಸಿದ 'ಮಕ್ಕಳ ಹಕ್ಕುಗಳ'ನ್ನು, ಆಯಾ ಪಂಚಾಯತಿ ಮಕ್ಕಳಿಗೆ ಪರಿಚಯಿಸುವುದು, ಅವರ ಸಮಸ್ಯೆಗಳನ್ನು ಪರಿಹರಿಸುವುದು ಹಾಗೂ 'ಮಕ್ಕಳ ಹಕ್ಕುಗಳಿಗೆ' ಸಂಬಂಧಿಸಿದ ಎಲ್ಲಾ ಉಲ್ಲಂಘನೆಗಳನ್ನು ಪಂಚಾಯತಿ ಮಟ್ಟದಲ್ಲಿ ನಿಲ್ಲಿಸಿ ಕ್ರಮ ಕೈಗೊಳ್ಳುವುದು ಇದರ ಉದ್ದೇಶವಾಗಿದೆ. ಇದರಲ್ಲಿ ಮಕ್ಕಳ ಬೌದ್ಧಿಕ ಬೆಳವಣಿಗೆ, ಪೌಷ್ಠಿಕ ಆಹಾರ, ಅಂಗನವಾಡಿ, ಶಾಲಾ ಶಿಕ್ಷಣ, ದಾಖಲಾತಿ/ ಹಾಜರಾತಿ, ಶಾಲೆ ಮೂಲಭೂತ ಸೌಕರ್ಯ, ಬಾಲಕಾರ್ಮಿಕತೆ, ಬಾಲ್ಯವಿವಾಹ, ಮಕ್ಕಳ ಸಾಗಾಣಿಕೆಯಂತಹ ಹಲವಾರು ವಿಚಾರಗಳನ್ನು ಗ್ರಾಮ ಮಟ್ಟದಲ್ಲಿಯೇ ನಿರ್ಮೂಲನೆ ಮಾಡಬೇಕೆನ್ನುವುದು ಮೂಲ ಆಶಯ. ಜೊತೆಗೆ, ಜೀತ ಪದ್ಧತಿ, ಹೆಣ್ಣು ಮಕ್ಕಳ ಶೋಷಣೆಯಂತಹ ವಿಚಾರಗಳನ್ನು ಕೂಡ ಗ್ರಾಮ ಪಂಚಾಯತಿ, ಪಂಚಾಯತ್‌ರಾಜ್ ಸಂಸ್ಥೆಗಳು ಮಾಡಬೇಕು, ಎಂದು ಸುತ್ತೋಲೆಗಳು ಹೇಳುತ್ತವೆ. 2006ರ ನಂತರ ಪ್ರತಿ ವರ್ಷ 'ಮಕ್ಕಳ ಹಕ್ಕುಗಳ' ಬಗ್ಗೆ ಕಾಳಜಿಯುಳ್ಳ ಸುತ್ತೋಲೆಗಳನ್ನು ಹೊರಡಿಸಲಾಯಿತು.

30–10–2007ರ ಸುತ್ತೋಲೆ, ಪ್ರತಿ ವರ್ಷ ನವೆಂಬರ್‌ನಲ್ಲಿ, ಕಡ್ಡಾಯವಾಗಿ 'ಮಕ್ಕಳ ಗ್ರಾಮಸಭೆ' ಹಮ್ಮಿಕೊಂಡು ಪಂಚಾಯತಿ ಮಟ್ಟದಲ್ಲಿ ದೊಡ್ಡ ಆಂದೋಲನ ನಡೆಸಿ, ನವೆಂಬರ್ ಪೂರ್ಣ ಮಾಸಾಚರಣೆ ನಡೆಸಲು ತಿಳಿಸುತ್ತದೆ. ಈ 4 ಪುಟಗಳ ಸುದೀರ್ಘ ವಿವರ, ಪಂಚಾಯತಿಯ ತಯಾರಿ, ಅಧ್ಯಕ್ಷರ, ಸದಸ್ಯರ, ಕಾರ್ಯದರ್ಶಿ ಮತ್ತು ಈಗ ಪಿ.ಡಿ.ಒಗಳ ಕರ್ತವ್ಯಗಳನ್ನು, ಪರಿಹರಿಸಲಾಗದ ಮಕ್ಕಳ ಸಮಸ್ಯೆಗಳನ್ನು ತಾಲೂಕಿಗೆ, ಜಿಲ್ಲೆಗೆ ಕಳುಹಿಸುವ ಸೂಚನೆ ನೀಡಿದೆ. 'ಮಕ್ಕಳ ಹಕ್ಕುಗಳು' ಶಿಕ್ಷಣ, ಬಾಲಕಾರ್ಮಿಕತೆ, 100% ದಾಖಲಾತಿ ಮತ್ತು 100% ಹಾಜರಾತಿ ವಿಚಾರವನ್ನು ಪಂಚಾಯತಿಗಳು ಎತ್ತಿ ಹಿಡಿಯಬೇಕೆಂದು ಹೇಳಿದೆ.

**9. ಬಾಲ್ಯವಿವಾಹವನ್ನು ತಡೆಗಟ್ಟುವ ಹಾಗೂ "ಮಕ್ಕಳ ಹಕ್ಕ"ನ್ನು ಪ್ರತಿಪಾದಿಸುವ ನಿಟ್ಟಿನಲ್ಲಿ ಪಂಚಾಯತರಾಜ್ ಸಂಸ್ಥೆಗಳು ಅನುಸರಿಸಬೇಕಾದ ವಿಧಿ ವಿಧಾನಗಳ ಮಾರ್ಗಸೂಚಿಗಳು:–**

ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಇವರ ಸುತ್ತೋಲೆ ನಂ.ಗ್ರಾ.ಅಪ/174/ಗ್ರಾಪಂಅ/2011, ದಿನಾಂಕ 08–07–2011ರಂತೆ, ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ, ರಾಜ್ಯದ ಎಲ್ಲಾ ತಾಲೂಕು ಪಂಚಾಯತ್ ಕಾರ್ಯನಿರ್ವಹಣ ಅಧಿಕಾರಿಗಳಿಗೆ, ಈ ಸುತ್ತೋಲೆ ಏನು ಹೇಳುತ್ತದೆಂದರೆ, ಬೇರುಮಟ್ಟದಲ್ಲಿರುವ ಗ್ರಾಮಪಂಚಾಯತಿಗಳು ಮಕ್ಕಳ ಹಕ್ಕುಗಳನ್ನು ಪ್ರತಿಪಾದಿಸಬೇಕು ಎಂದು ಹೇಳುತ್ತಾ ಬಾಲ್ಯವಿವಾಹದ ನಿರ್ಮೂಲನೆಗೆ ಗ್ರಾಮ ಪಂಚಾಯತಿ, ತಾಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿ ಎಲ್ಲಾ ಕ್ರಮ ಕೈಗೊಂಡು ಬಾಲ್ಯವಿವಾಹ ತಡೆಗೆ ಮುಂದಾಗಿ

ಪಂಚಾಯತಿಗಳಲ್ಲಿ, ಹಳ್ಳಿಗಳಲ್ಲಿ ಯಾವುದೇ ಬಾಲ್ಯವಿವಾಹ ಆಗದಂತೆ ಎಚ್ಚರಿಕೆ ವಹಿಸಬೇಕು, ಎಂದು ತಿಳಿಸಿದೆ. ಯಾವುದೇ ಸವಲತ್ತು ನೀಡುವಾಗ, ಫಲಾನುಭವಿಗಳನ್ನು ಆಯ್ಕೆ ಮಾಡುವಾಗ, ಅಂತಹ ವ್ಯಕ್ತಿಗಳಿಂದ ಕೆಳಕಂಡ ಪ್ರತಿಜ್ಞಾ ವಿಧಿಯನ್ನು ಪಡೆಯಬೇಕು ಎಂದು ಹೇಳಿದೆ.

'ಬಾಲ್ಯವಿವಾಹವನ್ನು ನಾನು ನೆರವೇರಿಸುವುದಿಲ್ಲ' ಅಂತಹ ಕಾರ್ಯಕ್ರಮಗಳಲ್ಲಿ ಭಾಗಿಯಾಗಿರುವುದಿಲ್ಲ ಮತ್ತು ಇಂತಹ ಸಂಭವನೀಯ ಪ್ರಕರಣಗಳನ್ನು ಸರ್ಕಾರದ ಗಮನಕ್ಕೆ ತರುತ್ತೇನೆ, ತಪ್ಪಿದಲ್ಲಿ ನನಗೆ ಒದಗಿಸಿರುವ ಫಲಾನುಭವವನ್ನು ಹಿಂಪಡೆಯಬಹುದು. ಹೀಗೆ ಪಂಚಾಯತಿಯ ಪ್ರತಿ ಫಲಾನುಭವಿ, ಎನ್‌ಆರ್‌ಇಜಿಎ ಕಾರ್ಮಿಕರು ಸೇರಿದಂತೆ ಪ್ರತಿಜ್ಞೆ ಪಡೆದು ಸಹಿ ಮಾಡಬೇಕು. ಅದರ ನಿರ್ವಹಣೆಯನ್ನು 'ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು' ಮಾಡಬೇಕು.

**10. ಬಾಲ್ಯವಿವಾಹ ನಿರ್ಮೂಲನೆಗಾಗಿ ಸರಕಾರದ ಎಲ್ಲಾ ಫಲಾನುಭವಿಗಳಿಂದ ಘೋಷಣೆಗೆ ಸಹಿ ಹಾಗೂ ಯೋಜನೆಯ ಅರ್ಜಿಗಳಲ್ಲಿ ಹಾಗೂ ಪ್ರಮಾಣಪತ್ರಗಳಲ್ಲಿ ಮಾಹಿತಿ ಮುದ್ರಿಸುವ ಕುರಿತು:–** ಕರ್ನಾಟಕ ಸರ್ಕಾರದ ಸಚಿವಾಲಯದ ಅಪರ ಕಾರ್ಯದರ್ಶಿಗಳು ಹೊರಡಿಸಿದ ಪತ್ರ ಅ.ಸ.ಪತ್ರ ಸಂಖ್ಯೆ:ಮಮಇ 170. ಮಮಅ–2011 ದಿನಾಂಕ 25–08–2011 ರಲ್ಲಿ ತಿಳಿಸಿದಂತೆ ಎಲ್ಲಾ ಇಲಾಖೆಗಳ ವಿವಿಧ ಯೋಜನೆಗಳಡಿ ಸೌಲಭ್ಯಕ್ಕಾಗಿ ನೀಡುವ ಅರ್ಜಿಗಳಲ್ಲಿ 'ಬಾಲ್ಯವಿವಾಹವನ್ನು ನಿಷೇಧಿಸಲಾಗಿದೆ'. 'ಬಾಲ್ಯ ವಿವಾಹ ಶಿಕ್ಷಾರ್ಹ ಅಪರಾಧ', ಎಂದು ಮುದ್ರಿಸುವುದರ ಜೊತೆಗೆ, ಈ ಕೆಳಕಂಡಂತೆ ಅರ್ಜಿದಾರರಿಂದ ಘೋಷಣೆಗೆ ಸಹಿಯನ್ನು ಪಡೆಯಬೇಕು. 'ನನ್ನ ಕುಟುಂಬದಲ್ಲಿ ಯಾವುದೇ ಬಾಲ್ಯವಿವಾಹಕ್ಕೆ ಅವಕಾಶ ನೀಡುವುದಿಲ್ಲ. ಹಾಗೂ ಅಂತಹ ಬಾಲ್ಯವಿವಾಹದಲ್ಲಿ ಭಾಗಿಯಾಗುವುದಿಲ್ಲ ತಪ್ಪಿದ್ದಲ್ಲಿ ನನಗೆ ನೀಡಿರುವ ಸರ್ಕಾರದ ಸವಲತ್ತನ್ನು ಹಿಂಪಡೆಯಬಹುದಾಗಿದೆ'. ಎಲ್ಲಾ 22 ಇಲಾಖೆಗಳು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಒಳಪಟ್ಟಿವೆ. ಆ ಇಲಾಖೆಗಳು ಈ ಕಾರ್ಯವನ್ನು ಕ್ರಮಬದ್ಧವಾಗಿ ನಿರ್ವಹಿಸಬೇಕಾದ ಅನಿವಾರ್ಯತೆ ಇದೆ.

**11. ಬಡತನ ನಿರ್ಮೂಲನಾ ಯೋಜನೆಗಳಲ್ಲಿ ಬಾಲಕಾರ್ಮಿಕ ಕುಟುಂಬಗಳಿಗೆ ಪ್ರಥಮ ಆದ್ಯತೆ ನೀಡಲೇಬೇಕು:–**

ಭಾರತ ಸರ್ಕಾರದ ಆಶಯದಂತೆ 'ಯಾವುದೇ ಮಗುವನ್ನು' ಬಾಲಕಾರ್ಮಿಕತೆಯಿಂದ ಬಿಡುಗಡೆ ಮಾಡಿದ ತಕ್ಷಣ, ಸುಪ್ರೀಂ ಕೋರ್ಟ್ ನಿರ್ಧಾರದಂತೆ (ಅಪಾಯಕಾರಿ ಕ್ಷೇತ್ರ) ಮಾಲೀಕರ ಮೇಲೆ ಪ್ರಕರಣ ದಾಖಲಿಸುವುದು ಕಡ್ಡಾಯ, ಹಾಗೂ 'ಮಗು'ವಿನ ಕುಟುಂಬಕ್ಕೆ 'ಆರ್ಥಿಕ ಅಭಿವೃದ್ಧಿ' ಯೋಜನೆಗಳನ್ನು ಒದಗಿಸಬೇಕು. ಆ ಮೂಲಕ, ಆ ಕುಟುಂಬದಲ್ಲಿ ಮುಂದಿನ ಪೀಳಿಗೆಯಲ್ಲಿ ಈ ರೀತಿ 'ಬಾಲಕಾರ್ಮಿಕ' ಪದ್ಧತಿ ಮುಂದುವರೆಯಬಾರದು ಎನ್ನುವುದು, ಮಕ್ಕಳ ಹಕ್ಕುಗಳ ರಕ್ಷಣೆಯ ಪರಿಭಾಷೆಯಾಗಿದೆ ಎಂದು ಅರ್ಥೈಸಿಕೊಳ್ಳಬೇಕು. ಹೀಗೆ ಶೇಕಡಾ 90% ಅಭಿವೃದ್ಧಿ ಯೋಜನೆಗಳು, ಪಂಚಾಯತ್‌ರಾಜ್ ಸಂಸ್ಥೆಗಳ ಅಡಿಯಲ್ಲಿರುತ್ತವೆ. ಅದರಂತೆ, ಕಾರ್ಮಿಕ ಆಯುಕ್ತರು ಕರ್ನಾಟಕ ಸರ್ಕಾರ ಸಂಖ್ಯೆ: ಕಾ.ಇ.ಸಿ.ಎಲ್/ಸಿ.ಆರ್–26/06–07 ದಿನಾಂಕ 11–4–2007ರಲ್ಲಿ ಹೊರಡಿಸಿದ ಸುತ್ತೋಲೆಯಲ್ಲಿ ಹೇಳಿದಂತೆ ಯಾವುದೇ ಇಲಾಖೆಯು ಹಮ್ಮಿಕೊಂಡಿರುವ ವಿವಿಧ 'ಬಡತನ ನಿರ್ಮೂಲನಾ ಯೋಜನಾ' ಕಾರ್ಯಕ್ರಮಗಳ ಅಡಿಯಲ್ಲಿನ ಸೌಲಭ್ಯಗಳನ್ನು ಬಾಲಕಾರ್ಮಿಕರ ಕುಟುಂಬಗಳಿಗೆ, ಪೋಷಕರಿಗೆ, ಬಾಲ್ಯವಿವಾಹ, ನೊಂದ, ಹಿಂದುಳಿದ ವರ್ಗ, ದುರ್ಬಲ ವರ್ಗದವರಿಗೆ ಪ್ರಥಮ ಆದ್ಯತೆ ನೀಡಿ ಒದಗಿಸಬೇಕು.

**12. ಎಲ್ಲಾ ವಸತಿ ನಿಲಯಗಳಲ್ಲಿ, ಬಾಲಕಾರ್ಮಿಕತೆಯಿಂದ ಹೊರಬಂದು ಪುನರ್ವಸತಿ ಪಡೆದು "ಶಿಕ್ಷಣ" ಮುಂದುವರೆಸುತ್ತಿರುವ ಮಕ್ಕಳಿಗೆ 25% ಸೀಟು ಮೀಸಲು:–**

ಉಪಕಾರ್ಯದರ್ಶಿ, ಸಮಾಜಕಲ್ಯಾಣ ಇಲಾಖೆ ಬೆಂಗಳೂರು, ಇವರ ಪತ್ರ: ಸರ್ಕಾರದ ಆದೇಶ ಸಂ:ಸಕಇ 267 ಸಪಕವಿ 2007 ಬೆಂಗಳೂರು, ದಿನಾಂಕ 30–11–2007, ಭಾರತದ ರಾಷ್ಟ್ರಾಧ್ಯಕ್ಷರ ಆಜ್ಞಾನುಸಾರ ಮತ್ತು ಹೆಸರಿನಲ್ಲಿ ಹೊರಡಿಸಿದ ಆದೇಶ ದಿನಾಂಕದ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಡೆಸಲ್ಪಡುತ್ತಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿನಿಲಯಗಳಿಗೆ ಪ್ರವೇಶ ನೀಡುವ ಸಮಯದಲ್ಲಿ ಪರಿಶಿಷ್ಟ ಜಾತಿಯ 'ಬಾಲಕಾರ್ಮಿಕ ಮಕ್ಕಳು' ಶಾಲಾ ಕಾಲೇಜುಗಳಿಗೆ ದಾಖಲಾಗಿದ್ದು ವಿದ್ಯಾರ್ಥಿನಿಲಯಕ್ಕೆ ಸೇರಲು ಅರ್ಜಿ ಸಲ್ಲಿಸಿದ್ದಲ್ಲಿ ಅವರುಗಳಿಗೆ ಶೇ. 25ರಷ್ಟು ಸೀಟುಗಳ ಮೀಸಲಾತಿ ನೀಡಲು ಈ ಕೂಡಲೇ ಜಾರಿಗೆ ಬರುವಂತೆ ಸರ್ಕಾರ ಆದೇಶಿಸಿದ ಸುತ್ತೋಲೆ ಇದೆ. ಹಾಗಾಗಿ ಪಂಚಾಯತಿ ರಾಜ್ ಸಂಸ್ಥೆಗಳಿಗೆ ಇದರ ಅನುಷ್ಠಾನದಲ್ಲಿ ಹೆಚ್ಚಿನ ಪಾತ್ರ ನೀಡಲಾಗಿದೆ.

**13. ಬಾಲ್ಯವಿವಾಹ ನಿರ್ಮೂಲನೆಗಾಗಿ ಜಾಗೃತಿಗಾಗಿ ಎಲ್ಲಾ ಮದುವೆ ನಡೆಯುವ ದೇವಸ್ಥಾನ, ಮಠ, ಕಲ್ಯಾಣ ಮಂಟಪಗಳಲ್ಲಿ ಬಾಲ್ಯವಿವಾಹ ನಿಷೇಧದ ಬಗ್ಗೆ ಕಡ್ಡಾಯವಾಗಿ ಫಲಕಗಳನ್ನು ಪ್ರದರ್ಶಿಸುವ ಬಗ್ಗೆ:–**

ಸುತ್ತೋಲೆ ಸಂ.ಪೌನಿ: ಇತರ.ಸಿ.ಆರ್.423:2011:12, ದಿನಾಂಕ 21–09–2011ರ ಪ್ರಕಾರ, ರಾಜ್ಯದ, ಜಿಲ್ಲೆಯ, ತಾಲೂಕಿನ, ಗ್ರಾಮದ ವ್ಯಾಪ್ತಿಯಲ್ಲಿರುವ ಎಲ್ಲಾ ಮಂದಿರ, ಮಠ, ದೇವಸ್ಥಾನ, ಕಲ್ಯಾಣ ಮಂಟಪ ಹಾಗೂ ಮದುವೆ ಮತ್ತು ಸಾಮೂಹಿಕ ಮದುವೆ ಸಮಾರಂಭಗಳು ನಡೆಯುವ ಸ್ಥಳಗಳಲ್ಲಿ 'ಬಾಲ್ಯವಿವಾಹ ಶಿಕ್ಷಾರ್ಹ ಅಪರಾಧ', 18 ವರ್ಷದೊಳಗಿನ ಹೆಣ್ಣಿಗೆ, 21 ವರ್ಷದೊಳಗಿನ ಗಂಡಿಗೆ ಮದುವೆ ಮಾಡಿದಲ್ಲಿ ಸಂಬಂಧಿಕರು, ವ್ಯವಸ್ಥಾಪಕರು, ಮದುವೆ ನಡೆಸುವ ಪೂಜಾರಿ, ಸಂಬಂಧಪಟ್ಟವರು, ಭಾಗವಹಿಸಿದವರು ಎಲ್ಲರೂ ಶಿಕ್ಷೆಗೆ ಒಳಗಾಗುತ್ತಾರೆ. ಅವರೆಲ್ಲರಿಗೂ 2 ವರ್ಷ ಜೈಲು ರೂ 1 ಲಕ್ಷ ದಂಡ, ಎಂಬ ಸಂದೇಶವನ್ನು ಗೋಡೆಗಳ ಮೇಲೆ ಬರೆಸಬೇಕು. ಬಾಲ್ಯವಿವಾಹಗಳು 75% ಗ್ರಾಮೀಣ ಪ್ರದೇಶದಲ್ಲಿ ಆಗಿದ್ದಲ್ಲಿ, ಈ ಗೋಡೆ ಬರಹ ಬರೆಸುವ ಜವಾಬ್ದಾರಿ ಪಂಚಾಯತ್ ರಾಜ್ ಸಂಸ್ಥೆಗಳದ್ದೇ ಆಗಿರುತ್ತದೆ.

**14. ಬಾಲ್ಯವಿವಾಹ ನಿಷೇಧಾಧಿಕಾರಿಗಳಾಗಿ ಪಂಚಾಯತ್ ರಾಜ್ ಸಂಸ್ಥೆಯ ಅಧಿಕಾರಿಗಳಿಗೆ ಅಧಿಕಾರ:–**

30–06–2011ರಂದು, ಭಾರತದ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ನ್ಯಾಯಮೂರ್ತಿ ಶ್ರೀ ಶಿವರಾಜ ವಿ. ಪಾಟೀಲ್ ಇವರು ಕರ್ನಾಟಕದಲ್ಲಿ 'ಬಾಲ್ಯವಿವಾಹ ತಡೆ' ಕುರಿತು ನೀಡಿದ ವರದಿಯಂತೆ ಉತ್ತರ ಕರ್ನಾಟಕದಲ್ಲಿ 'ಬಾಲ್ಯವಿವಾಹಗಳ ಸಂಖ್ಯೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ನಿಷೇಧಾಧಿಕಾರಿಗಳನ್ನು ಹೆಚ್ಚಿಸಲು ಶಿಫಾರಸ್ಸು ಮಾಡಿದ್ದು, ಅದರಂತೆ ಗ್ರಾಮ ಪಂಚಾಯತಿ ಮಟ್ಟದಲ್ಲಿ ಯಾವುದೇ ಬಾಲ್ಯವಿವಾಹ ಆಗದಂತೆ ತಡೆಯುವ ಹಾಗೂ ಒಂದು ವೇಳೆ ಬಾಲ್ಯ ವಿವಾಹ ನಡೆದಲ್ಲಿ, ಕಾನೂನಿನ ಕ್ರಮ ಕೈಗೊಳ್ಳಲು ಅಧಿಕಾರ ಪಡೆದಿರುವ ಅಧಿಕಾರಿಗಳೆಂದರೆ, ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು. ಈ ಶಾಸನಬದ್ಧ, ಕಾನೂನು ರೀತ್ಯಾ ಆದೇಶ ಗೌರವಾನ್ವಿತ ರಾಜ್ಯಪಾಲರ ಆಜ್ಞಾನುಸಾರ ಹಾಗೂ ಅವರ ಹೆಸರಿನಲ್ಲಿ ಕಾರ್ಯದರ್ಶಿಗಳು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಇವರು ನೀಡಿದ ಆದೇಶದಂತೆ ಗ್ರಾಮ ಮತ್ತು ಗ್ರಾಮ ಪಂಚಾಯತಿ ಮಟ್ಟದಲ್ಲಿ, ಗ್ರಾಮ ಪಂಚಾಯತಿಯು ಎಲ್ಲಾ 'ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು', ಆ ಭಾಗದ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಗ್ರಾಮದ ಕಂದಾಯ ನಿರೀಕ್ಷಕರು, ಗ್ರಾಮ ಲೆಕ್ಕಿಗರು, ಮತ್ತು ಸರಕಾರಿ ಶಾಲೆಯ ಮುಖ್ಯ ಶಿಕ್ಷಕರು, ಇವರೆಲ್ಲಾ 'ಪಂಚಾಯತಿ ಮಟ್ಟದ ಬಾಲ್ಯವಿವಾಹ ನಿಷೇಧಾಧಿಕಾರಿಗಳಾಗಿದ್ದಾರೆ'.

ಕೊನೆ ಮಾತು: 'ಮಕ್ಕಳ ಅಭಿವೃದ್ಧಿ'ಯ ಹೆಚ್ಚಿನ ಜವಾಬ್ದಾರಿ ಪಂಚಾಯತ್‌ರಾಜ್ ಸಂಸ್ಥೆಗಳೇ ಹೊತ್ತಿವೆ. ಎಲ್ಲಿಯ ತನಕ ಪಂಚಾಯತ್‌ರಾಜ್ ಸಂಸ್ಥೆಗಳು ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುವುದಿಲ್ಲವೋ, ಅಲ್ಲಿಯ ತನಕ 'ಮಕ್ಕಳ ಅಭಿವೃದ್ಧಿ', ಮಕ್ಕಳ ಹಕ್ಕುಗಳ ಅನುಷ್ಠಾನ ಒಂದು ಕನಸಾಗಿಯೇ ಮುಂದುವರೆಯುತ್ತದೆ. 'ಮಕ್ಕಳ ಅಭಿವೃದ್ಧಿ' ಮಾನವ ಅಭಿವೃದ್ಧಿ ಮತ್ತು ದೇಶದ ಅಭಿವೃದ್ಧಿಯಲ್ಲಿ ಹೆಚ್ಚಿನ ಪಾಲನ್ನು ಹೊಂದಿದೆ. ಅಂದರೆ, ಮಕ್ಕಳ ಅಭಿವೃದ್ಧಿಯಾಗದ ಹೊರತು ಮಾನವ ಅಭಿವೃದ್ಧಿ, ದೇಶದ ಅಭಿವೃದ್ಧಿ ಕೂಡ ಕನಸೇ ಹಾಗೂ ಮಕ್ಕಳ ಹಕ್ಕುಗಳ ಅನುಷ್ಠಾನ ಕೂಡಾ ಒಂದು ಸವಾಲು. ಇದಕ್ಕೆಲ್ಲಾ ಒಂದೇ ಒಂದು ಆಶಾಕಿರಣವೆಂದರೆ, ಪಂಚಾಯತ್‌ರಾಜ್ ಸಂಸ್ಥೆಗಳು 'ಮಕ್ಕಳ ಹಕ್ಕುಗಳತ್ತ' ಕಾರ್ಯನಿರ್ವಹಿಸಬೇಕು. ಆಗ ಗ್ರಾಮ ಪಂಚಾಯತಿ ಅಭಿವೃದ್ಧಿಯತ್ತ ಸಾಗುತ್ತವೆ. ಯೋಚಿಸಿ.., ಲೇಖನದಲ್ಲಿ ತಿಳಿಸಿದ ಪಂಚಾಯತ್‌ರಾಜ್ ಸಂಸ್ಥೆಗಳು ಮಾಡಲೇಬೇಕಾದ ಕೆಲವು ಆಯ್ದ 'ಮಕ್ಕಳ ಹಕ್ಕುಗಳ' ಅನುಷ್ಠಾನಕ್ಕೆ ಸಹಕಾರ, ಸಹಭಾಗಿತ್ವ, ಸಮನ್ವಯತೆ..., ನೀಡಿ, ಸಾಕ್ಷಿಯಾಗ ಬೇಕು. ಆಗ ಅದು ದೇಶ ಮತ್ತು ಮಾನವನ ಅಭಿವೃದ್ಧಿಗೆ ನಾಂದಿಯಾಗುತ್ತದೆ. ಈ ಮೂಲಕ ಗ್ರಾಮ ಪಂಚಾಯತಿಗಳು ಮಾನವ ಮತ್ತು ದೇಶದ ಅಭಿವೃದ್ಧಿಗೆ ಕೊಡುಗೆ ನೀಡುತ್ತವೆ. ಆಗ 'ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಸಂಸ್ಥೆ'ಗಳು 'ಮಕ್ಕಳ ಸಂರಕ್ಷಣೆ'ಯಲ್ಲಿ ಸಫಲ.

***

# ಗ್ರಾಮ ಪಂಚಾಯತ್ (ಸ್ಥಳೀಯ ಸರಕಾರಗಳು) ಮತ್ತು ಶಿಕ್ಷಣ

✍ ತುಕಾರಾಮ ಎಕ್ಕಾರು



ನಮಗೆಲ್ಲಾ ಸೇವೆ ಅಥವಾ ಸೌಲಭ್ಯಗಳು ನಮ್ಮ ಪ್ರದೇಶಗಳಲ್ಲೇ (ಹತ್ತಿರದಲ್ಲೇ) ಇದ್ದರೆ ಖುಶಿಯಾಗುತ್ತದೆ ತಾನೇ ? ಹಾಗೇನೇ ನಮ್ಮ ಅಹವಾಲುಗಳನ್ನು ಹೇಳಿಕೊಳ್ಳಲು ಅಥವಾ ನಮ್ಮ ಬೇಕು-ಬೇಡಗಳನ್ನು ಗಮನಿಸುವ-ಉಸ್ತುವಾರಿ ವಹಿಸುವ ವ್ಯವಸ್ಥೆಯೂ ಹತ್ತಿರದಲ್ಲೇ ಇದ್ದರೂ ಖುಶಿಯೇ. ಇಂತಹ ಒಂದು ವ್ಯವಸ್ಥೆ ಗ್ರಾಮಪಂಚಾಯತ್. ಇದು ಸ್ಥಳೀಯ ಸರಕಾರವೂ ಹೌದು. ಗ್ರಾಮದ ಎಲ್ಲಾ ಚಟುವಟಿಕೆ, ನಿರ್ಧಾರಗಳಲ್ಲಿ ಪಾಲ್ಗೊಳ್ಳುವ, ಸ್ಥಳೀಯ ಸರ್ಕಾರ (ಗ್ರಾಮಪಂಚಾಯತ್)ಕ್ಕೆ ಸಲಹೆ ನೀಡುವ ಅವಕಾಶ ಗ್ರಾಮಪಂಚಾಯತ್ ವ್ಯವಸ್ಥೆಯಲ್ಲಿ ಇದೆ. ನಿಜವಾದ ಅಭಿವೃದ್ಧಿ, ಸ್ವರಾಜ್ಯವನ್ನು ಕಾಣುವ ಉದ್ದೇಶದೊಂದಿಗೆ ಗ್ರಾಮ ಪಂಚಾಯತ್‌ಗಳಿಗೆ ಹತ್ತು ಹಲವು ಜವಾಬ್ದಾರಿ (ಪ್ರಕಾರ್ಯ)ಗಳನ್ನು ನೀಡಲಾಗಿದೆ. ಇವುಗಳಲ್ಲಿ ಶಿಕ್ಷಣವೂ ಒಂದು.

ಪ್ರಾಥಮಿಕ ಶಿಕ್ಷಣ ಕ್ಷೇತ್ರವನ್ನು ನಾವು ನೋಡುವುದಾದಲ್ಲಿ ಇಲ್ಲಿರುವ ಸಮಸ್ಯೆಗಳು ಹತ್ತುಹಲವು. ಪ್ರಾಥಮಿಕ ಶಾಲೆಗಳೇ ಇಲ್ಲದ ಗ್ರಾಮಗಳು, ಸಾಕಷ್ಟು ಕೊಠಡಿಗಳಿಲ್ಲದಿರುವುದು, ಬೀಳುವ ಸ್ಥಿತಿಯಲ್ಲಿರುವ ಶಾಲೆಗಳು, ಬೆಂಚು-ಕುರ್ಚಿಗಳಿಲ್ಲದ ಶಾಲೆಗಳು, ವಿದ್ಯುತ್ ಸಂಪರ್ಕವಿಲ್ಲದ ಶಾಲೆಗಳು, ನೀರು-ಶೌಚಾಲಯ-ಗ್ರಂಥಾಲಯ-ಪಾಠೋಪಕರಣಗಳ-ಆಟದ ಮೈದಾನಗಳಿಲ್ಲದಿರುವುದು, ಶಾಲೆಗೇ ದಾಖಲಾಗದ ಮಕ್ಕಳು, ಅರ್ಧದಲ್ಲಿ ಶಾಲೆ ಬಿಡುವ ಮಕ್ಕಳು, ಬೇಕಾದಷ್ಟು ಶಿಕ್ಷಕರಿಲ್ಲದಿರುವುದು, ಶಿಕ್ಷಕರ ಗೈರುಹಾಜರಿ, ಮುಚ್ಚುತ್ತಿರುವ ಸರಕಾರಿ ಶಾಲೆಗಳು, ಹೆಚ್ಚುತ್ತಿರುವ ಆಂಗ್ಲಮಾಧ್ಯಮ ಶಾಲೆಗಳು, ಒಟ್ಟು ಸಮುದಾಯದಲ್ಲಿ ಶಾಲೆ ನಮ್ಮದೆನ್ನುವ ಕಲ್ಪನೆಯ ಕೊರತೆ ಇತ್ಯಾದಿ. ಇತ್ತೀಚಿನ ದಿನಗಳಲ್ಲಿ ಕೆಲವು ಸಮಸ್ಯೆಗಳಲ್ಲಿ ಸ್ವಲ್ಪ ಮಟ್ಟಿನ ಸುಧಾರಣೆಯಾಗಿದೆ. ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮ ಈ ನಿಟ್ಟಿನಲ್ಲಿ ಬಹಳಷ್ಟು ಶ್ರಮಿಸಿದೆ.

2009ರ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ ಇಲ್ಲಿ ಮತ್ತೊಂದು ಶ್ಲಾಘನೀಯ ಪ್ರಯತ್ನ. ಇಲ್ಲಿ ಸ್ಥಳೀಯ ಸರಕಾರಗಳಿಗೆ(ಉದಾ:ಗ್ರಾಮಪಂಚಾಯತ್, ನಗರಸಭೆ, ಪುರಸಭೆ, ಪಟ್ಟಣ ಪಂಚಾಯತ್, ಜಿಲ್ಲಾ ಪಂಚಾಯತ್-ಸೆಕ್ಷನ್-2ಎಚ್) ಜವಾಬ್ದಾರಿಯನ್ನು ನೀಡಲಾಗಿದೆ. ಅವು- ಕಾಯ್ದೆ ಜಾರಿಗೆ ಬಂದ 3 ವರುಷದೊಳಗೆ ಶಾಲೆ ಇಲ್ಲದ ಪ್ರದೇಶದಲ್ಲಿ ಸರಕಾರದ ಜತೆಗೂಡಿ ನೆರೆಕರೆ ಶಾಲೆ ವ್ಯವಸ್ಥೆ ಮಾಡುವುದು, ಎಲ್ಲಾ ಮಕ್ಕಳಿಗೆ 8ನೇ ತರಗತಿ ತನಕ ಉಚಿತ-ಕಡ್ಡಾಯ ಶಿಕ್ಷಣ ಒದಗಿಸುವುದು, ದುರ್ಬಲ ವರ್ಗದ ಮಕ್ಕಳು ತಾರತಮ್ಯಕ್ಕೆ ಒಳಗಾಗದಂತೆ ನೋಡಿಕೊಳ್ಳುವುದು, 14 ವರುಷದೊಳಗಿನ ಮಕ್ಕಳ ದಾಖಲೆಗಳನ್ನಿಟ್ಟುಕೊಳ್ಳುವುದು, ಮಕ್ಕಳ ದಾಖಲಾತಿ-ಹಾಜರಾತಿ ಜತೆಗೆ ಪ್ರಾಥಮಿಕ ಶಿಕ್ಷಣ ಪೂರ್ತಿಗೊಳಿಸುವುದನ್ನು ಖಾತರಿಗೊಳಿಸುವುದು ಮತ್ತು ಅದರ ಮೇಲ್ವಿಚಾರಣೆ, ಶಾಲಾ ಕಟ್ಟಡ-ಶಿಕ್ಷಕರು-ಕಲಿಕಾ ಸಾಮಗ್ರಿಗಳನ್ನು ಒದಗಿಸುವುದು, 6 ವರುಷ ಮೇಲ್ಪಟ್ಟ ಮಕ್ಕಳಿಗೆ ವಿಶೇಷ ತರಬೇತಿಗಳನ್ನು ವ್ಯವಸ್ಥೆ ಮಾಡಿ ಅವರ ಸಾಮರ್ಥ್ಯದ ಆಧಾರದ ಮೇಲೆ ಸಂಬಂಧಿತ ತರಗತಿಗಳಿಗೆ ದಾಖಲಿಸುವುದು, ಗುಣಾತ್ಮಕ ಶಿಕ್ಷಣವನ್ನು ಖಾತರಿಗೊಳಿಸುವುದು, ಪಾಠ ಚಟುವಟಿಕೆಗಳು

ನಿಗದಿತವಾಗಿ ನಡೆಯುವಂತೆ ನೋಡಿಕೊಳ್ಳುವುದು, ಶಿಕ್ಷಕರಿಗೆ ತರಬೇತಿ ಸೌಲಭ್ಯಗಳನ್ನು ಒದಗಿಸುವುದು, ವಲಸೆ ಕುಟುಂಬದ ದಾಖಲಾತಿಯನ್ನು ಖಾತರಿಗೊಳಿಸುವುದು, ಶಾಲೆಗಳ ಕಾರ್ಯವೈಖರಿಯನ್ನು ಮೇಲ್ವಿಚಾರಣೆ ಮಾಡುವುದು, ಶಾಲೆಗಳ ಶೈಕ್ಷಣಿಕ ಅವಧಿಯನ್ನು ನಿರ್ಧರಿಸುವುದು (ಸೆಕ್ಷನ್ 9(ಎ–ಎಮ್). ಈ ಅಂಶಗಳತ್ತ ಗ್ರಾಮಪಂಚಾಯತ್ ಅಥವಾ ಸ್ಥಳೀಯ ಸರಕಾರಗಳು ಗಮನಹರಿಸಿದಾಗ ಮಕ್ಕಳಿಗೆ ಶಿಕ್ಷಣ ಮತ್ತು ಗುಣಾತ್ಮಕ ಶಿಕ್ಷಣ ಒದಗಲು ಸಾಧ್ಯ.

ಮೇಲ್ಕಂಡ ಕಾಯ್ದೆಯಲ್ಲಿ ಮಕ್ಕಳ ಹಕ್ಕುಗಳ ಉಲ್ಲಂಘನೆಗೆ ಸಂಬಂಧಿಸಿ ಯಾರೇ ನಾಗರಿಕರು ಲಿಖಿತ ದೂರುಗಳನ್ನು ಸ್ಥಳೀಯ ಸರಕಾರಗಳಿಗೆ ಸಲ್ಲಿಸಿದಲ್ಲಿ ಇವು ಮೂರು ತಿಂಗಳೊಳಗೆ ಅವನ್ನು ಇತ್ಯರ್ಥಪಡಿಸಲು ಸೂಚಿಸಲಾಗಿದೆ (ಸೆಕ್ಷನ್ 32(1). ಶಾಲಾ ಸಮಿತಿಯಲ್ಲಿ ಗ್ರಾಮಪಂಚಾಯತ್ ಪ್ರತಿನಿಧಿಗೆ ಅವಕಾಶವನ್ನು ನೀಡಲಾಗಿದ್ದು (ಸೆಕ್ಷನ್ 21(1), ಜತೆಗೆ ಸ್ಥಳೀಯ ಸರಕಾರವು ಶಾಲಾ ಆಡಳಿತ ಸಮಿತಿಗೆ ಕಾಯ್ದೆಯನ್ನು ಕಾರ್ಯಗತಗೊಳಿಸುವುದಕ್ಕೆ ಸಂಬಂಧಿಸಿ ಮಾರ್ಗದರ್ಶನ–ನಿರ್ದೇಶನಗಳನ್ನು ನೀಡಬಹುದಾಗಿದೆ (ಸೆಕ್ಷನ್ 35[3]).

1993ರ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಯಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ಮಕ್ಕಳ ದಾಖಲಾತಿಯನ್ನು ಖಾತರಿಗೊಳಿಸುವ ಕರ್ತವ್ಯವನ್ನು ನೀಡಲಾಗಿದೆ (ಅಧ್ಯಾಯ–4–ಸೆಕ್ಷನ್ 58–1ಎ). 2015ರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆಯಲ್ಲಿ ಶಿಕ್ಷಣವನ್ನು ಉತ್ತೇಜಿಸಲು ಗ್ರಾಮಪಂಚಾಯತ್‌ಗಳು ವ್ಯವಸ್ಥೆಯನ್ನು ಮಾಡಲು ಹೇಳಲಾಗಿದೆ (ಸೆಕ್ಷನ್–6(3)). ಅಲ್ಲದೆ ಗ್ರಾಮ ಪಂಚಾಯತ್‌ನ ಎರಡು ಮುಖ್ಯ ಸಮಿತಿಗಳಲ್ಲಿ ಸಾಮಾನ್ಯ ಸ್ಥಾಯಿ ಸಮಿತಿಯು ಶಿಕ್ಷಣಕ್ಕೆ ಸಂಬಂಧಿಸಿದ ಕರ್ತವ್ಯಗಳನ್ನು ನಿರ್ವಹಿಸಲು ಹೇಳಲಾಗಿದೆ (ಸೆಕ್ಷನ್ 61–1(1)), ಸಾಮಾಜಿಕ ನ್ಯಾಯ ಸಮಿತಿಯು ಪರಿಶಿಷ್ಟ ಜಾತಿ–ಪಂಗಡ, ಹಿಂದುಳಿದ ವರ್ಗಗಳ ಶೈಕ್ಷಣಿಕ ಆಸಕ್ತಿಗಳನ್ನು ಪ್ರೋತ್ಸಾಹಿಸಬೇಕು ಎಂದು ಹೇಳುತ್ತದೆ (ಸೆಕ್ಷನ್ 61–1(3). ಇಲ್ಲಿ ಗ್ರಾಮ ಪಂಚಾಯತ್ ಸದಸ್ಯರು ಅವರ ಪ್ರದೇಶದ ಉತ್ತಮ ಆಡಳಿತದಲ್ಲಿ ಭಾಗವಹಿಸಬೇಕು ಮತ್ತು ಪ್ರದೇಶದ ಜನರು ನಿರ್ಧಾರ ತೆಗೆದುಕೊಳ್ಳುವಿಕೆಯಲ್ಲಿ ಭಾಗವಹಿಸುವಂತೆ ಮಾಡುವುದು ಪಂಚಾಯತ್ ಸದಸ್ಯರ ಕರ್ತವ್ಯವೆಂದು ಹೇಳುತ್ತದೆ (ಅಧ್ಯಾಯ 4ಎ–110ಎ–ಕೆ). ಒಟ್ಟಿನಲ್ಲಿ ಗ್ರಾಮದ ಎಲ್ಲಾ ಮಕ್ಕಳು ಶಾಲೆಗೆ ಹೋಗಲು, ಪ್ರಾಥಮಿಕ ಶಿಕ್ಷಣ ಪಡೆಯಲು, ಗುಣಾತ್ಮಕ ಶಿಕ್ಷಣ ಪಡೆಯಲು, ಮಕ್ಕಳ ಹಕ್ಕುಗಳನ್ನು ಸಂರಕ್ಷಿಸಲು ಗ್ರಾಮ ಪಂಚಾಯತ್ ವ್ಯವಸ್ಥೆಗೆ ಮಹತ್ತರ ಜವಾಬ್ದಾರಿಯನ್ನು ನೀಡಲಾಗಿದೆ. ಇವು ಸಾಕಾರವಾಗಬೇಕಾದರೆ ಗ್ರಾಮ ಪಂಚಾಯತ್ ಸದಸ್ಯರು, ಗ್ರಾಮಪಂಚಾಯತ್ ಅಧಿಕಾರಿಗಳ ಬದ್ಧತೆ ಬಹಳ ಮುಖ್ಯ. ಪಂಚಾಯತ್‌ಗಳ ಸದಸ್ಯರು ತಿಂಗಳಿಗೊಮ್ಮೆ ನಡೆಸುವ ಸಾಮಾನ್ಯ ಸಭೆಯಲ್ಲಿ ಶಿಕ್ಷಣವನ್ನು ಒಂದು ವಿಷಯ ಸೂಚಿ (ಎಜೆಂಡಾ)ಯಾಗಿ ಇಡಬೇಕು. ಶಾಲೆ, ಮಕ್ಕಳು, ಶಾಲಾ ಪಠ್ಯ, ಚಟುವಟಿಕೆಗಳ ಬಗ್ಗೆ ಚರ್ಚಿಸಬೇಕು. ಗ್ರಾಮ ಪಂಚಾಯತ್ ತನ್ನ ಆಯವ್ಯಯಕ್ಕೆ ಪೂರಕವಾಗಿ ಶಾಲೆಗಳ ಅಗತ್ಯಗಳನ್ನು ಆದ್ಯತೆಯ ಕೆಲಸಗಳಾಗಿ ಮಾಡಬಹುದಾಗಿದೆ. ಜತೆಗೆ ಸ್ಥಳೀಯ ದಾನಿಗಳಿಗೆ ತಿಳಿಸಿ ಕ್ರಮ ಕೈಗೊಳ್ಳಬಹುದು. ಕೆಲವೊಂದನ್ನು ತಾಲೂಕು ಪಂಚಾಯತ್, ಜಿಲ್ಲಾ ಪಂಚಾಯತ್‌ಗೂ ತಿಳಿಸಿ ವ್ಯವಸ್ಥೆ ಮಾಡಬಹುದು. ಶಾಲೆ–ಶಿಕ್ಷಣ ಪೂರಕ ಸಲಹೆಗಳನ್ನು, ನಿರ್ಣಯಗಳನ್ನು ದಾಖಲಿಸಿ ಸಂಬಂಧಪಟ್ಟವರಿಗೆ ತಲುಪಿಸಬೇಕು. ಮೇಲ್ಕಂಡ ಕಾಯ್ದೆಗಳನ್ನು ಓದಿ ಅರ್ಥೈಸಿ ಕಾರ್ಯರೂಪಕ್ಕಿಳಿಸುವುದೇ ಅಲ್ಲದೆ ಜನರ ಸಹಕಾರ ಸಹಭಾಗಿತ್ವದ ಮೂಲಕ ಇವು ಸಾಧ್ಯವಿದೆ.

ಗ್ರಾಮ ಪಂಚಾಯತ್‌ಗೆ ಶಿಕ್ಷಣದ ಗುಣ ಮಟ್ಟವನ್ನು ಉತ್ತಮಗೊಳಿಸಲು, ಸಮುದಾಯವನ್ನು ಶಿಕ್ಷಣದತ್ತ ಬದ್ಧಗೊಳಿಸಲು ಇರುವ ಇನ್ನೊಂದು ಅವಕಾಶ ವಾರ್ಡ್ ಸಭೆ, ಗ್ರಾಮಸಭೆ, ಈ ಸಭೆಗಳು ಸಂವಿಧಾನಬದ್ಧ ಸಭೆಗಳು. ಜತೆಗೆ ಇತ್ತೀಚೆಗೆ ಮಕ್ಕಳ ಹಕ್ಕುಗಳ ಗ್ರಾಮಸಭೆ, ಮಹಿಳಾ ಗ್ರಾಮಸಭೆಗಳನ್ನೂ ವ್ಯವಸ್ಥೆಗೊಳಿಸಲಾಗಿದೆ. ಮತದಾರರೇ ಈ ಸಭೆಗಳ ಸದಸ್ಯರು, ಗ್ರಾಮ ಸರಕಾರದ ಪಾಲುದಾರರು. ಈ ಮತದಾರರು ಮಕ್ಕಳ ಪೋಷಕರಾಗಿರಬಹುದು, ಶಾಲಾ

ಸಮಿತಿ ಸದಸ್ಯರಾಗಿರಬಹುದು, ಸಂಘ ಸಂಸ್ಥೆಗಳು ಆಗಿರಬಹುದು. ಗ್ರಾಮಸಭೆಗಳಿಗೆ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಮುಖ್ಯೋಪಾಧ್ಯಾಯರುಗಳನ್ನು ಆಮಂತ್ರಿಸಿ ಮಾಹಿತಿ ನೀಡಲು ಅವಕಾಶಗಳಿವೆ. ಅವರು ಕಡ್ಡಾಯವಾಗಿ ಭಾಗವಹಿಸಬೇಕು.ಇಲ್ಲಿ ಮಕ್ಕಳ ಶಾಲಾ ದಾಖಲಾತಿ, ಶಾಲೆ ಬಿಟ್ಟ ಮಕ್ಕಳು, ಬಾಲಕಾರ್ಮಿಕರು, ಶಾಲಾ ಸೌಲಭ್ಯಗಳು, ಶಾಲಾ ಸಮಸ್ಯೆಗಳು, ಶಿಕ್ಷಣ ಮಾಹಿತಿಯನ್ನು ವಾರ್ಡ್–ಗ್ರಾಮ ಸಭೆಗಳ ಮತದಾರರಿಗೆ ತಿಳಿಸಬಹುದು. ಆ ಮೂಲಕ ಇಂಥಹ ವಿಚಾರ, ಸಮಸ್ಯೆಗಳಿಗೆ ಸ್ಪಂದಿಸುವಂತೆ ಮಾಡಬಹುದು. ಅವರ ಬದ್ಧತೆಯನ್ನು ಹೆಚ್ಚಿಸಬಹುದು. ಈ ಸಂಬಂಧ ಯೋಜನೆ. ಚಟುವಟಿಕೆಯನ್ನು ಹಮ್ಮಿಕೊಳ್ಳುವಂತೆ ಮಾಡಬಹುದು. ಈ ವಿಚಾರಗಳನ್ನು ಶಾಲಾ ಶಿಕ್ಷಕರು, ಸಮುದಾಯ ಗಮನಿಸಬೇಕು ಮತ್ತು ಅಗತ್ಯವಾಗಿ ಸಭೆಗಳನ್ನು ಬಳಸಿಕೊಳ್ಳಬೇಕು. ಮಕ್ಕಳ ಗ್ರಾಮಸಭೆಗಳಿಗೂ ಮಕ್ಕಳನ್ನು ತಯಾರುಗೊಳಿಸುವ ಮೂಲಕ ಅವರು ಸಮಸ್ಯೆಗಳ ಬಗ್ಗೆ ಪಂಚಾಯತ್‌ನ–ಮತದಾರರ ಗಮನಕ್ಕೆ ತರುವಂತೆ ಮಾಡಬಹುದು. ಈ ಮೂಲಕ ಸ್ಥಳೀಯ ಸರಕಾರ–ಸಮುದಾಯವನ್ನು ಎಚ್ಚರಿಸಬಹುದು, ಅವರು ಕಾರ್ಯಾಚರಿಸುವಂತೆ ಮಾಡಬಹುದು. ನಾಗರಿಕರೂ ಕೂಡಾ ಸ್ಥಳೀಯ ಸರಕಾರಗಳಿಗೆ ಸಂಬಂಧಿಸಿದ ಕಾಯ್ದೆಗಳು, ಶಿಕ್ಷಣಸಂಬಂಧಿ ಕಾಯ್ದೆಗಳು–ವ್ಯವಸ್ಥೆಗಳು–ಸೌಲಭ್ಯಗಳನ್ನು ತಿಳಿದುಕೊಂಡು ಈ ವೇದಿಕೆಗಳಲ್ಲಿ ಅವುಗಳ ಲಭ್ಯತೆ–ಕಾರ್ಯಗತಗೊಳಿಸುವ ಬಗ್ಗೆ ಗಮನಕ್ಕೆ ತರಬೇಕು. ಈ ಮೂಲಕ ಗ್ರಾಮ ವ್ಯಾಪ್ತಿಯ ಪ್ರತಿಯೊಂದು ಮಗು ತನ್ನ ಹಕ್ಕುಗಳನ್ನು ಪಡೆದುಕೊಳ್ಳಲು, ಶಾಲೆಗೆ ದಾಖಲಾಗಲು, ಗುಣಾತ್ಮಕ ಶಿಕ್ಷಣ ಲಭ್ಯವಾಗಲು ಸಾಧ್ಯವಿದೆ.

ಮಕ್ಕಳ ಹಕ್ಕು ಮತ್ತು ಮಕ್ಕಳ ಶಿಕ್ಷಣಕ್ಕೆ ಪೂರಕವಾದ ಸಮಿತಿಗಳೂ ಗ್ರಾಮ ಪಂಚಾಯತ್ ಅಥವಾ ಸ್ಥಳೀಯ ಸರಕಾರಗಳ ವ್ಯವಸ್ಥೆಗಳಲ್ಲಿರುವುದು ಇನ್ನೊಂದು ಗಮನೀಯ ವಿಚಾರ. ಉದಾಹರಣೆಗೆ ಪ್ರತೀ ಗ್ರಾಮ ಪಂಚಾಯತ್‌ನಲ್ಲಿ ರಚಿತವಾದ ಬಾಲಕಾರ್ಮಿಕ ಪದ್ಧತಿ ನಿರ್ಮೂಲನ ಸಮಿತಿ, ಬಾಲ್ಯವಿವಾಹ ತಡೆ ಸಮಿತಿ, ಮಕ್ಕಳ ಮತ್ತು ಮಹಿಳೆಯರ ಸಾಗಾಟ ಮಾರಾಟ ತಡೆ ಸಮಿತಿಗಳು ಪರಿಣಾಮಕಾರಿಯಾಗಿ ಕಾರ್ಯಾಚರಿಸಿದಲ್ಲಿ ಗ್ರಾಮದಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆ ಸಾಧ್ಯ. ವಂಚಿತ ಮಕ್ಕಳು ಶಿಕ್ಷಣ ಪಡೆಯಲು ಸಾಧ್ಯ. ಅವಕಾಶವಂಚಿತ ಮಕ್ಕಳು ಶಿಕ್ಷಣ ಪಡೆಯಲು ತಡೆ ಒಡ್ಡುವ ಅಂಶಗಳನ್ನು ಗುರುತಿಸಿ, ಆ ಕುಟುಂಬವನ್ನು ಆದ್ಯತಾ ಕುಟುಂಬವಾಗಿ ಗುರುತಿಸಿ, ಅವರಿಗೆ ಬೇಕಾಗುವ ಎಲ್ಲಾ ಸೌಲಭ್ಯಗಳನ್ನು ಒದಗಿಸಲು ಪ್ರಯತ್ನಿಸಬೇಕು. ಉದಾಹರಣೆಗೆ ವಸತಿ ವ್ಯವಸ್ಥೆ, ರೇಶನ್ ವ್ಯವಸ್ಥೆ, ಆರೋಗ್ಯ ವ್ಯವಸ್ಥೆ, ಉದ್ಯೋಗ ವ್ಯವಸ್ಥೆ ಇತ್ಯಾದಿ. ಇಂತಹ ವ್ಯವಸ್ಥೆ ಲಭಿಸಿದಾಗ ಮಕ್ಕಳು ಶಾಲೆಗೆ ಹೋಗುವ ವಾತಾವರಣ ಸುಲಭವಾಗುತ್ತದೆ.

ಸಮಸ್ಯೆಗಳ ನಡುವೆ ಅಲ್ಲಲ್ಲಿ ಮಾದರಿ ಗ್ರಾಮ ಪಂಚಾಯತ್ ಸದಸ್ಯರು–ಜನಪ್ರತಿನಿಧಿಗಳು, ಗ್ರಾಮ ಪಂಚಾಯತ್‌ಗಳು (ಸ್ಥಳೀಯ ಸರಕಾರಗಳು)–ಅಧಿಕಾರಿಗಳು, ವಾರ್ಡ್–ಗ್ರಾಮಸಭೆಗಳು (ಮಕ್ಕಳ ಹಕ್ಕುಗಳ ಗ್ರಾಮಸಭೆ, ಮಹಿಳಾ ಗ್ರಾಮಸಭೆ), ಸಂಘ ಸಂಸ್ಥೆಗಳು, ಶಾಲಾ ಸಮಿತಿಗಳು, ಪೋಷಕರ ಪರಿಷತ್‌ಗಳು ಇವೆ. ಮಕ್ಕಳು ಮತ್ತು ಮಕ್ಕಳ ಉತ್ತಮ ಶಿಕ್ಷಣಕ್ಕಾಗಿ ಕಾರ್ಯಾಚರಿಸುತ್ತವೆ. ಇದರ ನಡುವೆ ಇತ್ತೀಚಿನ ದಿನಗಳಲ್ಲಿ ಶಿಕ್ಷಣ ಕ್ಷೇತ್ರ (ಮೂಲಭೂತ ಹಕ್ಕಿನ ಶಿಕ್ಷಣ) ಬಡ ಜನಗಳಿಂದ ದೂರವಾಗಲಿದೆಯೋ ಎಂಬಂತಹ ಭಯ ಕಾಡುತ್ತದೆ. 18 ವರುಷದೊಳಗಿನ ಮಕ್ಕಳ ಶಿಕ್ಷಣದ ಪೂರ್ತಿ ಜವಾಬ್ದಾರಿ, ಬದ್ಧತೆಗಾಗಿ ನೀತಿ ನಿರೂಪಕ, ಆಡಳಿತಗಾರ ಗ್ರಾಮ ಪಂಚಾಯತ್ ಪ್ರತಿನಿಧಿಗಳನ್ನು ಗಟ್ಟಿಗೊಳಿಸುವ ಕೆಲಸ ಆಗಬೇಕಿದೆ. ಅದರ ಜತೆಗೆ ವಾರ್ಡ್ ಸಭೆ, ಗ್ರಾಮ ಸಭೆಗಳು, ಸಮುದಾಯ ಸಂಘಟನೆಗಳು, ಸಮುದಾಯ ಬಲಗೊಳ್ಳಬೇಕಿದೆ. ಇವಕ್ಕೆಲ್ಲಾ ಒಂದೇ ಸಾಧ್ಯತೆ ಎಲ್ಲರೂ ಶಿಕ್ಷಣ ಸಂಪನ್ಮೂಲರಾಗುವುದು (ಶಿಕ್ಷಣ ಪೂರಕ ಮಾಹಿತಿಗಳನ್ನು ಹೊಂದುವುದು), ಕ್ರಿಯಾಶೀಲ ಶಿಕ್ಷಣದ ಉಸಿರನ್ನು ಹೊಂದುವುದು, ಅದಕ್ಕೆ ಬದ್ಧರಾಗುವುದು.

***

# ಜೀವನವು ಬದಲಾವಣೆಯಿತ್ತಾ



– ದೀಕ್ಷಿತ್ ಅಚ್ರಪ್ಪಾಡಿ
ಪಡಿ ಸಂಸ್ಥೆ ಮಂಗಳೂರು

ನೀವು ಜೀವನದಲ್ಲಿ ಅನೇಕ ಕಥೆಗಳನ್ನು ಕೇಳಿರುತ್ತೀರಿ, ಇನ್ನೂ ಕೆಲವೊಂದು ಘಟನೆಗಳನ್ನು ನೇರವಾಗಿ ಕಂಡಿರುತ್ತೀರಿ. ಆದ್ರೆ ನಾನೀಗ ಕಥಾರೂಪದಲ್ಲಿ ಹೇಳ ಹೊರಟಿರುವುದು ಒಂದು ನೈಜ ಘಟನೆಯನ್ನಾಧರಿಸಿದ ಮುಗ್ಧ ಮನಸ್ಸಿನ ಬಾಲಕಿಯ ಶೋಕ ಕಥೆಯನ್ನು....

ಗ್ರಾಮೀಣ ಪ್ರದೇಶದ ಸ್ಥಳೀಯ ಸರ್ಕಾರಿ ಶಾಲೆಯೊಂದರಲ್ಲಿ 10ನೇ ತರಗತಿಯಲ್ಲಿ ಬಾಲಕಿಯೊಬ್ಬಳು ವಿದ್ಯಾಭ್ಯಾಸ ಮಾಡುತ್ತಿದ್ದಳು. ಆಕೆಯ ಮನೆಯಲ್ಲಿ ಸುಮಾರು 42 ವರ್ಷ ಪ್ರಾಯದ ತಂದೆ, ತಾಯಿ, ಅಜ್ಜಿ ಹಾಗೂ ಇಬ್ಬರು ಸಣ್ಣ ಪ್ರಾಯದ ತಂಗಿಯಂದಿರ ಜೊತೆಗೆ ಮುದ್ದಾದ ಸಂಸಾರ. ಬಾಲಕಿಯು ಕಲಿಕೆಯ ಜೊತೆಗೆ ಆಟೋಟ ಸೇರಿದಂತೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತನ್ನನ್ನು ತಾನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಳು. ಮನೆಯಲ್ಲಿ ತಾಯಿಗೆ ಪ್ರೀತಿಯ ಮಗಳಾಗಿ ಅಜ್ಜಿಗೆ ಮುದ್ದಿನ ಮೊಮ್ಮಗಳಾಗಿ ತಂಗಿಯಂದಿರಿಗೆ ಪ್ರೀತಿಯ ಅಕ್ಕನಾಗಿ ಹಾಗೂ ಶಾಲಾ ಶಿಕ್ಷಕರಿಗೆ ವಿಧೇಯ ವಿದ್ಯಾರ್ಥಿಯಾಗಿ, ತರಗತಿಯಲ್ಲಿ ಗೆಳೆಯ ಗೆಳತಿಯರಿಗೂ ಉತ್ತಮ ಗೆಳತಿಯಾಗಿ ಸಹಪಾಠಿಯಾಗಿ ಯಾರ ತಂಟೆತಕರಾರುಗಳಿಗೂ ಹೋಗದೇ ತನ್ನಷ್ಟಕ್ಕೆ ತನ್ನ ಪಾಡಿಗೆ ತಾನು ಖುಶಿ, ಖುಶಿಯಿಂದ ಶಾಲೆಗೆ ಹೋಗುತ್ತಿದ್ದ ಬಾಲಕಿಯಾಗಿದ್ದಳು.

ಇಷ್ಟೊಂದು ಸಂತೋಷದಿಂದ ಜೀವನ ನಡೆಸುತ್ತಿದ್ದ ಬಾಲಕಿಗೆ ಒಂದು ದಿವಸ ಇದ್ದಕ್ಕಿದ್ದ ಹಾಗೆ ಹೊಟ್ಟೆನೋವು ಶುರುವಾಗುತ್ತದೆ. ಬಾಲಕಿಯು ಹೊಟ್ಟೆ ನೋವಿನ ವಿಷಯವನ್ನು ತಾಯಿಯ ಜೊತೆ ಹೇಳದೆ ತಂದೆಯ ಜೊತೆ ಹೇಳುತ್ತಾಳೆ. ತಂದೆಯು ಮಗಳನ್ನು ಊರಿನಿಂದ ಸರಿಸುಮಾರು 15 ಕಿಲೋಮೀಟರ್ ದೂರದಲ್ಲಿರುವ ಖಾಸಗಿ ಆಸ್ಪತ್ರೆಯೊಂದಕ್ಕೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗುತ್ತಾರೆ. ಆದರೆ ಬಾಲಕಿಯ ಚಿಕಿತ್ಸೆಯನ್ನು ನಡೆಸಿರುವ ವೈದ್ಯರು ಜಿಲ್ಲೆಯಲ್ಲಿರುವ ಸರ್ಕಾರಿ ಆಸ್ಪತ್ರೆಗೆ ಹೋಗಿ ಪರೀಕ್ಷೆ ನಡೆಸುವಂತೆ ಸೂಚಿಸುತ್ತಾರೆ. ಆಸ್ಪತ್ರೆಯ ವೈದ್ಯರ ಸೂಚನೆಯಂತೆ ತಂದೆಯು ಮಗಳನ್ನು ಚಿಕಿತ್ಸೆಗಾಗಿ ಜಿಲ್ಲಾ ಕೇಂದ್ರದಲ್ಲಿರುವ ಸರ್ಕಾರಿ ಆಸ್ಪತ್ರೆಯೊಂದಕ್ಕೆ ಕರೆದುಕೊಂಡು ಬರುತ್ತಾರೆ. ತಂದೆಯು ಮಗಳಿಗೆ ಚಿಕಿತ್ಸೆ ಮಾಡುವಂತೆ ವೈದ್ಯರ ಬಳಿ ಒತ್ತಾಯಿಸುತ್ತಾರೆ. ವೈದ್ಯರು ಕೂಡಲೇ ವೈದ್ಯಕೀಯ ಚಿಕಿತ್ಸೆಗೆ ಒಳಪಡಿಸುತ್ತಾರೆ. ಆದರೆ ಬಾಲಕಿಯ ಮುಖದಲ್ಲಿ ಭಯ, ಆತಂಕ ತುಂಬಿತ್ತು. ಬಾಲಕಿಯು ಗಾಬರಿ ಗೊಂಡಿರುವುದನ್ನು ಗಮನಿಸಿದ ವೈದ್ಯರೊಬ್ಬರು ಕೂಡಲೇ ಬಾಲಕಿಯನ್ನು ಆಪ್ತ ಸಮಾಲೋಚನಾ ವಿಭಾಗಕ್ಕೆ ಕಳುಹಿಸಿಕೊಡುತ್ತಾರೆ. ಆಪ್ತಸಮಾಲೋಚಕರು ಬಾಲಕಿಯನ್ನು ಸಮಾಧಾನ ಪಡಿಸಿ, ಧೈರ್ಯ ತುಂಬಿ ಆಪ್ತ ಸಮಾಲೋಚನೆಯನ್ನು ನಡೆಸುತ್ತಾರೆ. ಬಾಲಕಿಯು ಸಮಾಲೋಚನೆಯ ವೇಳೆ ತಂದೆಯ ಮುಖವನ್ನೊಮ್ಮೆ ನೋಡಿ ಆಪ್ತ ಸಮಾಲೋಚಕರ ಜೊತೆ ಅಳುತ್ತಾ ಹೀಗೆ ಹೇಳುತ್ತಾಳೆ... 2 ವರುಷಗಳ ಹಿಂದೆ ನಮ್ಮ ಊರಿಗೊಬ್ಬ ಗಾರೆ ಕೆಲಸಕ್ಕೆಂದು ಒಬ್ಬ ಯುವಕ ಬಂದಿರುತ್ತಾನೆ ಹಾಗೂ ಆತನೊಂದಿಗೆ ತಾನು ದೈಹಿಕ ಸಂಪರ್ಕವನ್ನು ಹೊಂದಿದ್ದೆ, ಆದರೆ ನನಗೀಗ ಅದರ ಅರಿವಾಗಿದೆ, ಹಾಗೂ ಭಯವಾಗುತ್ತಿದೆ ತಾವು ಏನಾದರೂ ಮಾಡಿ ಎಂಬುದಾಗಿ ಬಾಲಕಿಯು ಆಪ್ತಸಮಾಲೋಚಕರಲ್ಲಿ ಕೇಳಿಕೊಳ್ಳುತ್ತಾಳೆ. ಬಾಲಕಿಯ ತಂದೆಯ ಜೊತೆ ಮಾತನಾಡಿದಾಗ ಬಾಲಕಿ ಹೇಳಿರುವ ಹೇಳಿಕೆಯಂತೆ ತಂದೆಯು ಕೂಡ ಮರು ಮಾತನಾಡದೇ ಆದಷ್ಟು ಬೇಗ ಮಗಳ ಹೊಟ್ಟೆಯಲ್ಲಿರುವ ಮಗುವನ್ನು ತೆಗೆದುಬಿಡಿ ಎಂಬುದಾಗಿ ಒತ್ತಾಯಿಸಿ ಲಂಚದ ರೂಪದಲ್ಲಿ ಹಣವನ್ನು ಕೊಡಲು ಮುಂದಾಗುತ್ತಾನೆ. ಈತನ ನಡವಳಿಕೆಯಿಂದ ಸಂಶಯಗೊಂಡ ಆಪ್ತಸಮಾಲೋಚಕರು ಕೂಡಲೇ ಆತನ ಬಳಿ ನೀನು ಈವಾಗ ಮನೆಗೆ ಹೋಗು ನಾಳೆ ಮಗಳನ್ನು ಕರೆದುಕೊಂಡು ಬಾ ಎಂಬುದಾಗಿ ಉಪಾಯದಲ್ಲಿ ತಂದೆ ಹಾಗೂ ಬಾಲಕಿಯನ್ನು ಕಳುಹಿಸಿಕೊಡುತ್ತಾರೆ. ಆಪ್ತಸಮಾಲೋಚಕರಲ್ಲಿ ಮೂಡಿದ ಸಂಶಯದ ಮಾಹಿತಿಯನ್ನು ಕೂಡಲೇ ಮಕ್ಕಳ ಸಹಾಯವಾಣಿಗೆ ಕರೆಯನ್ನು ಮಾಡಿ ತಿಳಿಸುತ್ತಾರೆ. ಕೆಲವೇ

ಕ್ಷಣದಲ್ಲಿ ಮಕ್ಕಳ ಸಹಾಯವಾಣಿ ಸಿಬ್ಬಂದಿಯವರು ಸರ್ಕಾರಿ ಆಸ್ಪತ್ರೆಗೆ ಧಾವಿಸುತ್ತಾರೆ, ಹಾಗೂ ಇಲಾಖಾ ಸಹ ಯೋಗದೊಂದಿಗೆ ಕೂಡಲೇ ತಂದೆ ಹಾಗೂ ಮಗಳು ವಾಸವಿರುವ ಪಕ್ಕದ ಪೊಲೀಸ್ ಠಾಣೆಗೆ ಮಾಹಿತಿ ನೀಡುತ್ತಾರೆ. ಕೂಡಲೇ ಚುರುಕುಗೊಂಡ ಪೊಲೀಸರು ತಂದೆ ಹಾಗೂ ಮಗಳನ್ನು ಪ್ರತ್ಯೇಕವಾಗಿ ವಿಚಾರಣೆಗೊಳಪಡಿಸಿ ಹೇಳಿಕೆಯನ್ನು ಪಡೆದುಕೊಳ್ಳುತ್ತಾರೆ. ಆ ಸಮಯದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದವರು ಬಾಲಕಿಗೆ ಆಪ್ತ ಸಮಾಲೋಚನೆಯನ್ನು ಮಾಡಿದಾಗ ಬಾಲಕಿಯು ತಂದೆಯಿಂದಲೇ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿರುವುದಾಗಿ ತನ್ನ ವೇದನೆಯನ್ನು ಹೇಳಿಕೊಳ್ಳುತ್ತಾಳೆ. ಕೂಡಲೇ ಪೊಲೀಸರು ಬಾಲಕಿಯ ತಂದೆಯ ಬಳಿ ಹೇಳಿಕೆಯನ್ನು ಪಡೆದುಕೊಂಡಾಗ ತಂದೆಯು ಮೊದ ಮೊದಲು ನಿರಾಕರಿಸಿದರೂ ಪೊಲೀಸರ ವಿಚಾರಣೆಯ ಬಳಿಕ ಸತ್ಯಾಂಶವನ್ನು ಬಾಯಿ ಬಿಡುತ್ತಾನೆ ಮತ್ತು ನಡೆದ ನೈಜ ಘಟನೆಯ ವಿಷಯವನ್ನು ಹೇಳುತ್ತಾನೆ ತಾನೇ ಮಗಳ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿರುವ ಬಗ್ಗೆ ಪೊಲೀಸ್ ಅಧಿಕಾರಿಯ ಮುಂದೆ ಹೇಳಿಕೆಯನ್ನು ನೀಡುತ್ತಾನೆ. ತಂದೆಯೇ ಮಗಳ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿರುವುದಾಗಿ ಪೊಲೀಸರು ಸ್ಪಷ್ಟೀಕರಣವನ್ನು ನೀಡುತ್ತಾರೆ. ಈ ವಿಷಯ ಮನೆಯವರಿಗೆ ಗೊತ್ತಾದ ಕೂಡಲೇ ಬಾಲಕಿಯ ಅಜ್ಜಿಯು ಸ್ಮೃತಿ ತಪ್ಪಿ ನೆಲಕ್ಕುರುಳುತ್ತಾರೆ, ತಾಯಿಗೆ ನಂಬಲು ಅಸಾಧ್ಯ ಆಗುತ್ತದೆ ಆದರೆ ತಂಗಿಯಂದಿರಿಗೆ ತಂದೆಯ ಮೇಲೆ ಕೆಟ್ಟ ಕೋಪ ಉದ್ಭವಿಸಿ ದಿಕ್ಕೇ ತೋಚದಂತಾಗುತ್ತದೆ. ಕೊನೆಗೆ ತಂದೆಯನ್ನು ನೋಡಲೂ ಇಷ್ಟಪಡದ ಪರಿಸ್ಥಿತಿ ಉಂಟಾಯಿತು. ಬಾಲಕಿಯಿಂದ ಸ್ಪಷ್ಟ ಹೇಳಿಕೆಯನ್ನು ತೆಗೆದುಕೊಂಡು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯ್ದೆ-2012(ಪೋಕ್ಸೋ ಖಾಯಿದೆ)ಯ ಪ್ರಕಾರ ಪೊಲೀಸರು ಪ್ರಕರಣ ದೂರು ದಾಖಲಿಸಿ ಬಾಲಕಿಯ ತಂದೆಯನ್ನು ಬಂಧಿಸುತ್ತಾರೆ ಹಾಗೂ ಜೈಲಿಗೆ ಕಳುಹಿಸುತ್ತಾರೆ.

ಆದರೆ ಆಗಲೇ ಸಮಯ ಮೀರಿ ಹೋಗಿತ್ತು ಬಾಲಕಿಯು 10ನೇ ತರಗತಿಯಲ್ಲಿ ವ್ಯಾಸಂಗ ಮಾಡುವುದರೊಂದಿಗೆ ಆಕೆ 5 ತಿಂಗಳ ಗರ್ಭಿಣಿ ಆಗಿರುವುದು ಸ್ಪಷ್ಟವಾಯಿತು. ಈ ಪ್ರಕರಣದ ಕುರಿತು ನಿರಂತರ ಅನುಸರಣೆಯನ್ನು ಮಾಡುತ್ತಿದ್ದ ಚೈಲ್ಡ್‌ಲೈನ್ ತಂಡವು ಇಲಾಖಾ ಸಹಕಾರದೊಂದಿಗೆ ನೊಂದ ಬಾಲಕಿಯ ಮನೆ ಭೇಟಿಯನ್ನು ಮಾಡಿ ಬಾಲಕಿಯ ಪುನರ್ವಸತಿ, ಶಿಕ್ಷಣ ತುರ್ತು ಅಗತ್ಯವಾಗಿ ಬೇಕಾಗಿರುವ ವ್ಯವಸ್ಥೆಗಳ ಕುರಿತು ಚೈಲ್ಡ್‌ಲೈನ್ ತಂಡವು ಸ್ಪಷ್ಟ ವರದಿಯನ್ನು ತಯಾರು ಮಾಡಿ ಮಕ್ಕಳ ಕಲ್ಯಾಣ ಸಮಿತಿಗೆ ಸಲ್ಲಿಸುತ್ತದೆ. ಮಕ್ಕಳ ಕಲ್ಯಾಣ ಸಮಿತಿಯ ಸೂಚನೆಯಂತೆ ಬಾಲಕಿಯನ್ನು ರಕ್ಷಿಸಿ ಸರ್ಕಾರದ ಮಾನ್ಯತೆ ಪಡೆದ ಅರ್ಹ ಸಂಸ್ಥೆಯ ಹೆಣ್ಣುಮಕ್ಕಳ ಹಾಸ್ಟೆಲ್ ಒಂದರಲ್ಲಿ ವಸತಿ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತದೆ. ಆದರೆ ಅವಳು ಆಗತಾನೆ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದುದರಿಂದ ಹಾಸ್ಟೆಲಿನಿಂದ 10ನೇ ತರಗತಿ ಪಬ್ಲಿಕ್ ಪರೀಕ್ಷೆಗೆ ಹಾಜರಾಗಲು ತೊಂದರೆಯಾಗದಂತೆ ಅವಳು ಕಲಿತಿರುವ ಶಾಲೆಯಿಂದ ಜಿಲ್ಲಾ ಎಸ್.ಎಸ್.ಎಲ್.ಸಿ. ಪರೀಕ್ಷಾ ಬೋರ್ಡ್‌ಗೆ ಪ್ರವೇಶ ಪತ್ರಕ್ಕೆ ಅರ್ಜಿ ಹಾಕಲಾಯಿತು. ಪ್ರವೇಶಪತ್ರವು ಅವಳು ಈ ಹಿಂದೆ ವ್ಯಾಸಂಗ ಮಾಡುತ್ತಿದ್ದ ಸ್ಥಳಕ್ಕೆ ಬರುವ ಸಾಧ್ಯತೆ ಇದೆ. ಈ ಬಾಲಕಿಯು ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿರುವುದರಿಂದ ಮತ್ತು ಆಕೆಯು ಈ ಹಿಂದೆ ಇದ್ದ ವಾಸಸ್ಥಳದಲ್ಲಿ 10ನೇ ತರಗತಿಯ ಪಬ್ಲಿಕ್ ಪರೀಕ್ಷೆ ಬರೆಯಲು ಕಷ್ಟವಾಗುವುದರಿಂದ ಆಕೆಗೆ ಪರೀಕ್ಷೆ ಬರೆಯಲು ಯಾವುದೇ ಸಮಸ್ಯೆಯಾಗದಂತೆ ನೋಡಿಕೊಂಡು ಬಾಲಕಿಯು ಪ್ರಸ್ತುತ ವಾಸವಿರುವ ಹಾಸ್ಟೆಲ್‌ನ ಪಕ್ಕದ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಬರೆಯಲು ಅನುಮತಿ ಮಾಡಿಕೊಡಿ ಎಂಬುದಾಗಿ ಪತ್ರವೊಂದು ಶಿಕ್ಷಣ ಇಲಾಖೆಗೆ ನೀಡಲಾಗುತ್ತದೆ. ಈ ಪತ್ರಕ್ಕೆ ಕೂಡಲೇ ಸ್ಪಂದಿಸಿದ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಕೂಡಲೇ ಮೇಲಧಿಕಾರಿಗೆ ಪತ್ರವನ್ನು ಬರೆಯುತ್ತಾರೆ. ಆಡಳಿತವು ಚುರುಕುಗೊಂಡು ಸ್ಪಂದಿಸಿದ ಕಾರಣ ಬಾಲಕಿಯು ಪ್ರಸ್ತುತ ವಾಸವಿದ್ದ ಹಾಸ್ಟೆಲಿನ ಸಮೀಪದ ಕೇಂದ್ರದಲ್ಲಿ 10ನೇ ತರಗತಿಯ ಪರೀಕ್ಷೆಯನ್ನು ಬರೆಯುವಂತೆ ಪರೀಕ್ಷಾ ಮಂಡಳಿಯಿಂದ ಪ್ರವೇಶಪತ್ರ ಲಭ್ಯವಾಗುತ್ತದೆ. ತನಗಾದ ನೋವನ್ನು ತಾನೇ ಸಮಾಧಾನ ಮಾಡಿಸಿಕೊಂಡ ಈ ಬಾಲಕಿಯು ಕೆಲವೇ ದಿನಗಳಲ್ಲಿ ವಾಸವಿದ್ದ ಹಾಸ್ಟೆಲ್ ಪಕ್ಕದ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆಯನ್ನು ಬರೆಯುತ್ತಾಳೆ. ಇಲಾಖೆಯು ಬಾಲಕಿಗೆ ಸತತ ಧೈರ್ಯವನ್ನು ತುಂಬುತ್ತಿತ್ತು. ಆದುದರಿಂದ ಬಾಲಕಿಯು 10ನೇ ತರಗತಿಯ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣಳಾಗಿರುತ್ತಾಳೆ.

ಇಷ್ಟೆಲ್ಲಾ ಆಗುವಾಗ ತಿಂಗಳು ಉರುಳಿದ್ದೇ ತಿಳಿಯಲಿಲ್ಲ ಬಾಲಕಿಯು ಒಂಭತ್ತು ತಿಂಗಳ ತುಂಬು ಗರ್ಭಿಣಿಯಾಗಿರುತ್ತಾಳೆ. ಈ ಸಂದರ್ಭದಲ್ಲಿ ಬಾಲಕಿಯ ಹಿತದೃಷ್ಟಿಯಿಂದ ಮಕ್ಕಳ ಕಲ್ಯಾಣ ಸಮಿತಿಯವರು ಬಾಲಕಿಯನ್ನು ಸರ್ಕಾರಿ ಆಸ್ಪತ್ರೆಯ ಸಮೀಪವಿರುವ ಹಾಸ್ಟೆಲೊಂದಕ್ಕೆ ವರ್ಗಾಯಿಸುತ್ತಾರೆ. ನಂತರ

2 ವಾರದ ಬಳಿಕ ಬಾಲಕಿಗೆ ತೀವ್ರಹೊಟ್ಟೆ ನೋವು ಕಾಣಿಸಿಕೊಂಡಿದ್ದರಿಂದ ಬಾಲಕಿಯನ್ನು ಸರ್ಕಾರಿ ಆಸ್ಪತ್ರೆಯೊಂದರಲ್ಲಿ ದಾಖಲಿಸಲಾಗುತ್ತದೆ ಹಾಗೂ ಬಾಲಕಿಯ ಯೋಗ ಕ್ಷೇಮವನ್ನು ನೋಡಿಕೊಳ್ಳಲು ಬಾಲಕಿಯ ಜೊತೆ ಆಕೆಯ ತಾಯಿಯು ಕೂಡ ಇರುತ್ತಾರೆ. ಬಾಲಕಿಯು ತಿಂಗಳು ಉರುಳಿದ ಮೇಲೆ ಒಂದು ಗಂಡು ಮಗುವಿಗೆ ಜನ್ಮ ನೀಡುತ್ತಾಳೆ. ನಿರಂತರ ಪ್ರಕರಣದ ಅನುಸರಣೆಯನ್ನು ಮಾಡುತ್ತಿರುವ ಚೈಲ್ಡ್‌ಲೈನ್ ತಂಡವು ಬಾಲಕಿಯು ದಾಖಲಾಗಿರುವ ಆಸ್ಪತ್ರೆಗೆ ತೆರಳಿ ಬಾಲಕಿಗೆ ಧೈರ್ಯ ತುಂಬುತ್ತಾರೆ, ಸಾಂತ್ವನ ನೀಡುತ್ತಾರೆ. ಆ ಸಂದರ್ಭದಲ್ಲಿ ಬಾಲಕಿಯು ತನಗೆ ಮಗುವನ್ನು ಸಾಕಲು ಇಷ್ಟವಿಲ್ಲ. ಏಕೆಂದರೆ ನಾನು ಶಿಕ್ಷಣವನ್ನು ಮುಂದುವರಿಸ ಬೇಕೆಂದು ತುಂಬಾ ಕನಸನ್ನು ಕಂಡಿದ್ದೇನೆ. ಮಗುವನ್ನು ದತ್ತು ಕೊಡುವುದಾಗಿ ನೊಂದ ಮನಸ್ಸಿನಿಂದ ಹೇಳುತ್ತಾಳೆ. ಕ್ರಮೇಣ ಬಾಲಕಿಯ ಒಪ್ಪಿಗೆಯಂತೆ ಮಗುವನ್ನು ಜಿಲ್ಲೆಯ ದತ್ತು ಕೇಂದ್ರಕ್ಕೆ ನೀಡಲಾಗುತ್ತದೆ. ಬಾಲಕಿಗೆ ಅಂತರಂಗದಲ್ಲಿ ತನ್ನ ತಾಯಿ ಬಗ್ಗೆ ಅದೇ ರೀತಿ ತನ್ನ ತಂಗಿಯಂದಿರ ಜೀವನದ ಭವಿಷ್ಯದ ಬಗ್ಗೆ ಮನದಲ್ಲಿ ನೆನೆಸಿಕೊಳ್ಳುತ್ತಾ ದು:ಖ ಉಕ್ಕಿ ಬರುತ್ತಿದ್ದರೂ ಯಾರ ಮುಂದೆಯೂ ವ್ಯಕ್ತಪಡಿಸದೇ, ಭಾರವಾದ ಮನಸ್ಸಿನಿಂದ ಭವಿಷ್ಯದೆಡೆಗೆ ಹೆಜ್ಜೆಯಿಡುತ್ತಾಳೆ. ಆದರೆ ಈ ಬಾಲಕಿಯ ಜೀವನ ಕಥೆ ಇಲ್ಲಿಗೆ ಮುಗಿದಿಲ್ಲ ಚೈಲ್ಡ್‌ಲೈನ್, ಮಕ್ಕಳ ಕಲ್ಯಾಣ ಸಮಿತಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಪೊಲೀಸ್ ಇಲಾಖೆಯ ಆಶಯದಂತೆ ಬಾಲಕಿಯು ಜೀವನದಲ್ಲಿ ನಡೆದ ಘಟನೆಗಳು ಕೆಟ್ಟ ಕನಸೆಂದು ಮರೆತು ಮುಂದಿನ ದಿನಗಳಲ್ಲಿ ಪದವಿಪೂರ್ವ ವಿದ್ಯಾಭ್ಯಾಸವನ್ನು ಮುಂದುವರೆಸುತ್ತಾ ಹಾಗೂ ಜೀವನದಲ್ಲಿ ಉನ್ನತ ಉದ್ಯೋಗಕ್ಕೆ ಸೇರಿ ಸ್ವಾವಲಂಬಿಯಾಗಿ ತನ್ನ ಕಾಲು ಮೇಲೆ ತಾನು ನಿಲ್ಲುವುದರೊಂದಿಗೆ ನೊಂದ ತಾಯಿ ತಂಗಿಯಂದಿರನ್ನು ಚೆನ್ನಾಗಿ ನೋಡಿಕೊಳ್ಳುತ್ತಾ ತನ್ನ ಜೀವನದಲ್ಲಿ ಯಶಸ್ಸು ಕಾಣುತ್ತಾಳೆ. ಅವಳ ಭವಿಷ್ಯ ಸುಂದರವಾಗಿರಲಿ ಎಂಬುದೇ ನಮ್ಮ ಹಾರೈಕೆಯಾಗಿದೆ.

ಓದಿದಿರಿ ಅಲ್ವಾ.... ಮಿತ್ರರೇ ಜೀವನದಲ್ಲಿ ನಡೆಯುವ ಹಲವಾರು ಘಟನೆಗಳಲ್ಲಿ ಈ ಘಟನೆ ಅಘಾತವುಂಟು ಮಾಡಿದ ಒಂದು ನೈಜ ಘಟನೆಯಾಗಿದೆ. ಈ ಘಟನೆಯನ್ನು ಓದಿದ ನಿಮಗೆ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ತಂದೆಯ ಮೇಲೆ ಕೋಪ ಬರ್ತಾ ಇರ್ಬೋದು... ಮುಂದಿನ ದಿನಗಳಲ್ಲಿ ಆತನು ಜೈಲಿಂದ ಹೊರಗಡೆ ಬರಲೂ ಬಹುದು... ಮಾಡಿರುವ ತಪ್ಪಿಗೆ ಪಶ್ಚಾತ್ತಾಪ ಪಟ್ಟಿರಬಹುದು. ಈ ಸಂಬಂಧಗಳ ಬಗ್ಗೆ ಅಸಹ್ಯವೂ ಆಗಬಹುದು... ಆತನ ಜೀವನ ಏನಾಗುತ್ತೆ ಗೊತ್ತಿಲ್ಲ.

ಅದೇ ರೀತಿ ಬಾಲಕಿಯು ಸ್ಥಾನದಲ್ಲಿ ನಿಂತು ಯೋಚಿಸಿದರೆ ಬಾಲಕಿಯು ತನ್ನ ಮಗುವನ್ನು ದತ್ತುಕೊಡದೇ ಒಂದು ವೇಳೆ ಸಾಕುತ್ತಿದ್ದರೂ ಸಮಾಜದ ಜನರ ಕೆಟ್ಟ ಮಾತುಗಳಿಗೆ ತುತ್ತಾಗಿ ಜೀವನದಲ್ಲಿ ಮಾನಸಿಕ ಹಿಂಸೆಯನ್ನು ಅನುಭವಿಸಬೇಕಾದ ಪರಿಸ್ಥಿತಿ ಉಂಟಾಗುವ ಸಾಧ್ಯತೆಯು ಇತ್ತು ಹಾಗೂ ಆಕೆಯ ಶಿಕ್ಷಣದ ಕನಸುಗಳು ಮುರಿದು ಬೀಳುತ್ತಿದ್ದವು. ಮುಂದೊಂದು ದಿನಗಳಲ್ಲಿ ಮಗುವು ತಂದೆ ಯಾರೆಂದು ತಾಯಿಯ ಜೊತೆ ಕೇಳಿದಾಗ ತಾಯಿ ಈ ಪ್ರಶ್ನೆಗಳಿಗೆ ಹೇಗೆ ಉತ್ತರಿಸಿ ಸಮಾಧಾನ ಮಾಡುತ್ತಿದ್ದಳೋ ಗೊತ್ತಿಲ್ಲ....ಇವೆಲ್ಲವೂ ಊಹೆ ಮಾಡಲು ಸಾಧ್ಯವಿಲ್ಲದ ವಿಷಯ.

ಏನೇ ಇರಲಿ.... ಮಿತ್ರರೇ, ಸಮಾಜದಲ್ಲಿ ವಿದ್ಯಾವಂತರಿರಬಹುದು, ಅವಿದ್ಯಾವಂತರಿರಬಹುದು, ಶ್ರೀಮಂತರು ಇರಬಹುದು ಬಡವರೂ ಇರಬಹುದು, ಆದರೆ ಸಂಬಂಧಗಳನ್ನು ಮೀರಿ ಮಕ್ಕಳ ಮೇಲೆ ನಿರಂತರ ದೌರ್ಜನ್ಯಗಳನ್ನು ನಡೆಯುತ್ತಿವೆ ಹಾಗೂ ನಡೆಯುತ್ತಾ ಇದೆ. ಮಕ್ಕಳ ಮೇಲಿನ ದೌರ್ಜನ್ಯ ತಡೆಗಟ್ಟಲು ಯಾವುದೇ ಕಾನೂನುಗಳು ಜಾರಿಗೆ ಬಂದರೂ, ಇಲಾಖೆಗಳು ಎಷ್ಟೇ ಪ್ರಯತ್ನ ಪಟ್ಟರೂ ಮಕ್ಕಳ ಮೇಲೆ ನಡೆಯವ ದೌರ್ಜನ್ಯಗಳನ್ನು ಸಂಪೂರ್ಣ ತಡೆಗಟ್ಟಲು ತುಂಬಾ ಕಷ್ಟಕರವಾಗಿರುವ ವಿಷಯ. ಆದರೆ ಮಕ್ಕಳ ಹಕ್ಕುಗಳ ಉಲ್ಲಂಘನೆಯಾಗದಂತೆ ಮಕ್ಕಳು ಯಾವುದೇ ರೀತಿಯ ದೌರ್ಜನ್ಯಕ್ಕೆ ಒಳಗಾಗದಂತೆ ಮಕ್ಕಳ ಹೆತ್ತವರು ಎಚ್ಚರ ವಹಿಸಬೇಕು ಅದೇ ರೀತಿ ಸಮಾಜದ ಜನರು ಜಾತಿ ಮತ ಲಿಂಗವೆಂದೂ ಭೇದಭಾವ ಮಾಡದೇ ಒಗ್ಗಟ್ಟಾಗಿ ಮಗು ಸ್ನೇಹಿ ಸಮಾಜವನ್ನು ನಿರ್ಮಾಣ ಮಾಡುವಲ್ಲಿ ಕೈಜೋಡಿಸಬೇಕಾಗಿದೆ.

'ಮಕ್ಕಳ ರಕ್ಷಣೆ ನಮ್ಮೆಲ್ಲರ ಹೊಣೆ ಮಕ್ಕಳ ಹಕ್ಕುಗಳಿಗೆ ಬೆಂಬಲಿಸೋಣ ಮಗುಸ್ನೇಹಿ ಸಮಾಜ ನಿರ್ಮಾಣ ಮಾಡೋಣ'

***

# ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಕ್ಕಳ ಸಹಾಯವಾಣಿ ಕಾರ್ಯವೈಖರಿ ಮತ್ತು ಎದುರಿಸುತ್ತಿರುವ ಸವಾಲುಗಳು



**ಯೋಗೀಶ್ ಮಲ್ಲಿಗೆಮಾಡು**
ನಗರ ಸಂಯೋಜಕರು,
ಚೈಲ್ಡ್‌ಲೈನ್ ಮಂಗಳೂರು

**ಚೈಲ್ಡ್‌ಲೈನ್ ಕಿರುಪರಿಚಯ:**

ಚೈಲ್ಡ್‌ಲೈನ್ 1098, ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಒಂದು ಯೋಜನೆಯಾಗಿದ್ದು ಇದು ರಕ್ಷಣೆ ಮತ್ತು ಪೋಷಣೆಯ ಅಗತ್ಯತೆ ಇರುವ ಮಕ್ಕಳಿಗಾಗಿ ಇಪ್ಪತ್ತನಾಲ್ಕು ಗಂಟೆಗಳ ಉಚಿತ, ತುರ್ತು ದೂರವಾಣಿ ಹಾಗೂ ಹೊರಸಂಪರ್ಕ ಸೇವೆಯನ್ನು ನೀಡುತ್ತಿದೆ. ಭಾರತದಾದ್ಯಂತ ಮಕ್ಕಳ ಸಹಾಯಕ್ಕಾಗಿ ಇರುವಂತಹ ಏಕೈಕ ಸಹಾಯವಾಣಿ ಇದಾಗಿದ್ದು 1996ರಲ್ಲಿ ಈ ಯೋಜನೆ ಆರಂಭಗೊಂಡಿದ್ದು ಪ್ರಸ್ತುತ ಭಾರತದಾದ್ಯಂತ ಚೈಲ್ಡ್‌ಲೈನ್ ಕೇಂದ್ರಗಳು ಸ್ಥಾಪನೆಗೊಂಡಿದೆ.

**ಸಿ.ಐ.ಎಫ್:**

ಭಾರತ ಸರ್ಕಾರದ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಚೈಲ್ಡ್‌ಲೈನ್ ಇಂಡಿಯಾ ಫೌಂಡೇಶನ್ (ಸಿ.ಐ.ಎಫ್) ಎಂಬ ಸಂಸ್ಥೆಯನ್ನು ನೋಡಲ್ ಏಜನ್ಸಿಯನ್ನಾಗಿ ಮಾಡಿದೆ. ಈ ಸಿ.ಐ.ಎಫ್ ಸಂಸ್ಥೆಯು ಭಾರತದಾದ್ಯಂತ ಚೈಲ್ಡ್‌ಲೈನ್ ಸೇವೆಯನ್ನು ಸ್ಥಾಪಿಸುವ, ಮೇಲುಸ್ತುವಾರಿ ನೋಡಿಕೊಳ್ಳುವ, ಹಣಕಾಸು ಬಟವಾಡೆ ಮಾಡುವ, ತರಬೇತಿ, ಸಮೀಕ್ಷೆ, ದಾಖಲೀಕರಣ, ಜಾಗೃತಿ, ವಕಾಲತ್ತು ಹಾಗೂ ಹೆಚ್ಚುವರಿ ಸಂಪನ್ಮೂಲ ಕ್ರೋಢೀಕರಣಗಳಂತಹ ಜವಾಬ್ದಾರಿಯನ್ನು ಹೊಂದಿದೆ. ದಕ್ಷಿಣ ಭಾರತದಲ್ಲಿ ಸಿ.ಐ.ಎಫ್ ಸಂಸ್ಥೆಯ ಪ್ರಾದೇಶಿಕ ಕಛೇರಿಯು ಚೆನ್ನೈನಲ್ಲಿದ್ದು ಅಲ್ಲಿಯ ಕಾರ್ಯಕ್ರಮ ಸಂಯೋಜಕರು ಜಿಲ್ಲೆಗಳಲ್ಲಿ ಕಾರ್ಯಾಚರಿಸುವ ಚೈಲ್ಡ್‌ಲೈನ್ ಸೇವೆಗಳ ಮೇಲುಸ್ತುವಾರಿಯನ್ನು ನೋಡಿಕೊಳ್ಳುತ್ತಾರೆ.

**ಮಂಗಳೂರು ಚೈಲ್ಡ್‌ಲೈನ್:**

2001ರಲ್ಲಿ ಮಂಗಳೂರಿನಲ್ಲಿ ಚೈಲ್ಡ್‌ಲೈನ್ ಸೇವೆ ಆರಂಭಗೊಂಡಿದ್ದು, "ಸ್ಕೂಲ್ ಆಫ್ ಸೋಶಿಯಲ್ ವರ್ಕ್, ರೋಶನಿ ನಿಲಯ" ನೋಡಲ್ ಏಜನ್ಸಿಯಾಗಿ ಕಾರ್ಯ ನಿರ್ವಹಿಸುತ್ತಿದೆ. ಜೊತೆಗೆ "ಪಡಿ" ಸಂಸ್ಥೆಯು ಕೊಲಾಬ್ ಏಜನ್ಸಿಯಾಗಿ 2012 ರಿಂದ ಕಾರ್ಯಾಚರಿಸುತ್ತಿದೆ.

ಚೈಲ್ಡ್‌ಲೈನ್ ಸೇವೆಯು ಎರಡು ರೀತಿಯ ಮಾದರಿಯನ್ನು ಹೊಂದಿದೆ. ನಗರ ಮಾದರಿ (ಅರ್ಬನ್ ಮೊಡೆಲ್) ಹಾಗೂ ಗ್ರಾಮ ಮಾದರಿ (ರೂರಲ್ ಮೊಡೆಲ್). ನಗರ ಮಾದರಿಯಲ್ಲಿ ಒಂದು ನೋಡೆಲ್, ಒಂದು ಕೊಲಾಬ್ ಅಥವಾ ಕೇವಲ ಕೊಲಾಬ್ ಏಜನ್ಸಿ ಕಾರ್ಯಾಚರಿಸುತ್ತದೆ ಹಾಗೂ ಇದು ಕೇವಲ ನಗರ ವಲಯಕ್ಕೆ ಸೀಮಿತವಾಗಿರುತ್ತದೆ. ಗ್ರಾಮ ಮಾದರಿಯಲ್ಲಿ ನೋಡಲ್, ಕೊಲಾಬ್ ಏಜನ್ಸಿಯ ಜೊತೆಗೆ ಸಬ್ ಸೆಂಟರ್‌ಗಳು ಜಿಲ್ಲೆಯ ಬೇರೆ ಬೇರೆ ತಾಲೂಕುಗಳಿಂದ ಸೇವೆ ನೀಡುತ್ತವೆ. ಚೈಲ್ಡ್‌ಲೈನ್ ಮಂಗಳೂರು ನಗರ ಮಾದರಿಯಾಗಿದೆ.

ದಕ್ಷಿಣ ಕನ್ನಡ ಜಿಲ್ಲೆ ಐದು ತಾಲೂಕುಗಳನ್ನು ಒಳಗೊಂಡಿದ್ದು ಮಂಗಳೂರು ನಗರವು ಬೆಳೆಯುತ್ತಿರುವ ನಗರಗಳಲ್ಲಿ ಒಂದಾಗಿದೆ. ನಗರ ಮಾದರಿಯನ್ನು ಹೊಂದಿರುವ ಚೈಲ್ಡ್‌ಲೈನ್ ಮಂಗಳೂರು ನಗರ ಪ್ರದೇಶಕ್ಕೆ ಸೀಮಿತವಾಗಿದ್ದರೂ ದಕ್ಷಿಣ ಕನ್ನಡದಾದ್ಯಂತ ಮಕ್ಕಳ ಸಮಸ್ಯೆಗಳ ಕುರಿತು ಕರೆಗಳು ಬರುತ್ತಲೇ ಇರುತ್ತವೆ. ಬೆಳೆಯುತ್ತಿರುವ ನಗರವಾದ ಮಂಗಳೂರಿನಲ್ಲಿ ಮಕ್ಕಳ ಸಮಸ್ಯೆಗಳ ಸರಮಾಲೆಯೆ ಇದೆ. ಭಿಕ್ಷಾಟನೆಯಲ್ಲಿ ನಿರತವಾದ ಮಕ್ಕಳು, ಶಿಕ್ಷಣದಿಂದ ವಂಚಿತವಾದ ಮಕ್ಕಳು, ನಗರ ಪ್ರದೇಶದ ಆಕರ್ಷಣೆ, ಒತ್ತಡ ಅಥವಾ ಕೌಟುಂಬಿಕ ಸಮಸ್ಯೆಗೆ ಒಳಗಾಗಿ ಊರು ಬಿಟ್ಟು ಬರುವಂತಹ ಮಕ್ಕಳು, ಲೈಂಗಿಕ ಕಿರುಕುಳ ಹಾಗೂ ದೌರ್ಜನ್ಯಕ್ಕೆ ಒಳಗಾದ ಮಕ್ಕಳು, ಬಾಲ್ಯ ವಿವಾಹ, ಬಾಲ ಕಾರ್ಮಿಕತೆ, ಮಕ್ಕಳ ಮಾರಾಟ ಸಾಗಾಟ, ಮನೆ, ಶಾಲೆ ಅಥವಾ ಇತರ ಪ್ರದೇಶಗಳಲ್ಲಿ ಮಕ್ಕಳ ಮೇಲೆ ದೈಹಿಕ ಅಥವಾ ಮಾನಸಿಕ ಹಿಂಸೆ, ವಸತಿ, ವೈದ್ಯಕೀಯ ನೆರವು, ಭಾವನಾತ್ಮಕ ಬೆಂಬಲ ಮತ್ತು ಮಾರ್ಗದರ್ಶನ ಬಯಸುವ ಮಕ್ಕಳು, ನಾಪತ್ತೆಯಾದ ಮಕ್ಕಳು ಹೀಗೆ ಹತ್ತು ಹಲವು ರೀತಿಯಲ್ಲಿ ಮಕ್ಕಳ ಸಮಸ್ಯೆಗಳಿಗಾಗಿ ದಕ್ಷಿಣ ಕನ್ನಡದಾದ್ಯಂತ ಕರೆಗಳು 1098 ಸಂಖ್ಯೆಗೆ ಬರುತ್ತಲೇ ಇರುತ್ತವೆ. ದಕ್ಷಿಣ ಭಾರತದ ಯಾವುದೇ ಭಾಗದಿಂದಲೂ 1098 ಕ್ಕೆ ಮಾಡುವಂತಹ ಕರೆಗಳು ಚೆನ್ನೈನಲ್ಲಿರುವ ಕೇಂದ್ರೀಕೃತ ಸಂಪರ್ಕ ಕೇಂದ್ರ (ಸೆಂಟ್ರಲಾಯಿಸ್ಡ್ ಕಾಂಟ್ಯಾಕ್ಟ್ ಸೆಂಟರ್)ಕ್ಕೆ ರವಾನೆಯಾಗಿ ಅಲ್ಲಿಂದ ಸಂಬಂಧಪಟ್ಟ ಜಿಲ್ಲೆಯ ಚೈಲ್ಡ್‌ಲೈನ್ ಕಛೇರಿಗೆ ಸಮಸ್ಯೆಯ ಕುರಿತು ಮಾಹಿತಿ ನೀಡಲಾಗುತ್ತದೆ.

**ಚೈಲ್ಡ್‌ಲೈನ್ ಕೊಲಾಬ್ ಏಜನ್ಸಿ ಕಾರ್ಯವೈಖರಿ:**

ಚೈಲ್ಡ್‌ಲೈನ್‌ಗೆ ಮಕ್ಕಳ ಸಮಸ್ಯೆಗಳ ಕುರಿತು ಕರೆಗಳು ಬಂದಾಗ ಚೈಲ್ಡ್‌ಲೈನ್ ಕೊಲಾಬ್ ಏಜನ್ಸಿಯಲ್ಲಿರುವ ಕೇಂದ್ರ ಸಂಯೋಜಕರು ಆ ಪ್ರಕರಣಕ್ಕೆ ಸಂಬಂಧಪಟ್ಟ ಇಲಾಖೆಗಳಿಗೆ

ಮಾಹಿತಿಯನ್ನು ನೀಡುತ್ತಾರೆ ಹಾಗೂ ಚೈಲ್ಡ್‌ಲೈನ್ ತಂಡ ಸದಸ್ಯರನ್ನು ಮಕ್ಕಳ ರಕ್ಷಣೆ ಮತ್ತು ಪೋಷಣೆಯ ಸಲುವಾಗಿ ಸ್ಥಳಕ್ಕೆ ಕಳುಹಿಸಿ ಕೊಡುತ್ತಾರೆ. ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪೋಲೀಸ್ ಇಲಾಖೆ, ಶಿಕ್ಷಣ ಇಲಾಖೆ, ಕಾರ್ಮಿಕ ಇಲಾಖೆ, ಆರೋಗ್ಯ ಇಲಾಖೆ ಹೀಗೆ ಸಂಬಂಧಪಟ್ಟ ಇಲಾಖೆಗಳ ಸಹಯೋಗದೊಂದಿಗೆ ಚೈಲ್ಡ್‌ಲೈನ್ ಮಕ್ಕಳ ರಕ್ಷಣೆಗೆ ಸಹಕರಿಸುತ್ತದೆ. ಮಕ್ಕಳನ್ನು ರಕ್ಷಿಸಿದ ನಂತರ ಆ ಮಕ್ಕಳನ್ನು "ಮಕ್ಕಳ ಕಲ್ಯಾಣ ಸಮಿತಿ"ಗೆ ಸೂಕ್ತ ಪುನರ್ವಸತಿಗಾಗಿ ಹಾಜರುಪಡಿಸಲಾಗುತ್ತದೆ. ಮಕ್ಕಳ ಕಲ್ಯಾಣ ಸಮಿತಿಯು ಮಕ್ಕಳ ರಕ್ಷಣೆ ಮತ್ತು ಪೋಷಣೆಗಾಗಿ ಬೇಕಾದಂತಹ ವ್ಯವಸ್ಥೆಯನ್ನು ನೀಡುವ ಒಂದು ಸಮಿತಿಯಾಗಿದೆ.

**ಚೈಲ್ಡ್‌ಲೈನ್ ನೋಡಲ್ ಏಜನ್ಸಿ ಕಾರ್ಯವೈಖರಿ:**

ಚೈಲ್ಡ್‌ಲೈನ್ ನೋಡಲ್ ಏಜನ್ಸಿಯು ವಿವಿಧ ಇಲಾಖೆಗಳ ಜೊತೆ ವಕಾಲತ್ತು, ಸಂಯೋಜನೆಯನ್ನು, ದಾಖಲೀಕರಣ ಮಾಡುತ್ತದೆ. ಚೈಲ್ಡ್‌ಲೈನ್ 1098 ಕ್ಕೆ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿದ್ದು ಅವರ ಅಧ್ಯಕ್ಷತೆಯಲ್ಲಿ ಸಲಹಾ ಸಮಿತಿ ಸಭೆಯನ್ನು ನೋಡಲ್ ಏಜನ್ಸಿಯು ಆಯೋಜಿಸುತ್ತದೆ. ಇದಲ್ಲದೆ ಕೊಲಾಬ್ ಏಜನ್ಸಿಗೆ ಬೇಕಾದಂತಹ ಸಹಕಾರ, ತರಬೇತಿ, ಇಲಾಖಾಮಟ್ಟದ ತರಬೇತಿಗಳನ್ನು ನೋಡಲ್ ಏಜನ್ಸಿಯು ಆಯೋಜಿಸುತ್ತದೆ.

**ಚೈಲ್ಡ್‌ಲೈನ್ ಜಾಗೃತಿ ಕಾರ್ಯಕ್ರಮಗಳು:**

ಚೈಲ್ಡ್‌ಲೈನ್ ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಜನಸಂದಣಿ ಇರುವ ಪ್ರದೇಶಗಳಲ್ಲಿ, ಬಸ್‌ಸ್ಟ್ಯಾಂಡ್, ರೈಲ್ವೆ ನಿಲ್ದಾಣ, ಅಟೊ ಸ್ಟ್ಯಾಂಡ್ ಮುಂತಾದೆಡೆ ಚೈಲ್ಡ್‌ಲೈನ್‌ನ ಕರಪತ್ರ ವಿತರಿಸುವ ಮೂಲಕ ಹೊರಸಂಪರ್ಕ (ಔಟ್‌ರೀಚ್) ಸೇವೆಯನ್ನು ನೀಡುತ್ತದೆ, "ತೆರೆದ ಮನೆ" (ಓಪನ್ ಹೌಸ್) ಕಾರ್ಯಕ್ರಮಗಳ ಮುಖಾಂತರ ವಿವಿಧ ವಾರ್ಡ್‌ಗಳಲ್ಲಿ ಮಕ್ಕಳ ಸಮಸ್ಯೆಗಳ ಕುರಿತು ಚರ್ಚಿಸುತ್ತದೆ, ಶಾಲೆಗಳಲ್ಲಿ ಮಕ್ಕಳಿಗೆ ಚೈಲ್ಡ್‌ಲೈನ್ ಬಗ್ಗೆ ಮಾಹಿತಿಯನ್ನು ನೀಡಲಾಗುತ್ತದೆ, ನವೆಂಬರ್ ತಿಂಗಳಲ್ಲಿ ಒಂದು ವಾರಗಳ ಕಾಲ "ಚೈಲ್ಡ್‌ಲೈನ್ ಸೆ ದೋಸ್ತಿ ಸಪ್ತಾಹ" ಆಚರಿಸುವ ಮುಖಾಂತರ ವಿವಿಧ ಕಾರ್ಯಕ್ರಮಗಳಾದ ಜಾಥ, ಬೀದಿ ನಾಟಕ, ಬೊಂಬೆ ಆಟ ಮುಂತಾದವುಗಳ ಮೂಲಕ ಸಾಮೂಹಿಕ ಜಾಗೃತಿಯನ್ನು ಮಾಡಲಾಗುತ್ತದೆ. ಇದಲ್ಲದೆ ಸ್ವಸಹಾಯ ಗುಂಪುಗಳ ಸಭೆ, ಪಂಚಾಯತ್ ಮಟ್ಟದ ಸಭೆ, ಇಲಾಖಾ ತರಬೇತಿ, ಕಾರ್ಯಾಗಾರಗಳಲ್ಲೂ ಚೈಲ್ಡ್‌ಲೈನ್ ಕುರಿತು ಮಾಹಿತಿ ನೀಡಲಾಗುತ್ತದೆ. ಭಿಕ್ಷಾಟನೆಯಲ್ಲಿ ನಿರತವಾಗಿರುವ ಮಕ್ಕಳ ಕುಟುಂಬಗಳನ್ನು ಭೇಟಿ ಮಾಡಿ ಮಕ್ಕಳ ಹಕ್ಕುಗಳ ಬಗ್ಗೆ ಹಾಗೂ ರಕ್ಷಣೆ ಮತ್ತು ಶಿಕ್ಷಣದ ಕುರಿತು ಅರಿವು ಮೂಡಿಸಲಾಗುತ್ತದೆ.

**ಚೈಲ್ಡ್‌ಲೈನ್ ಮಂಗಳೂರಿಗೆ ಬಂದ ಕರೆಗಳ ವಿವರ:**

ಕಳೆದ ಐದು ವರುಷಗಳಲ್ಲಿ ಮಕ್ಕಳ ಸಮಸ್ಯೆಗಳ ಕುರಿತು ಚೈಲ್ಡ್‌ಲೈನ್ ಮಂಗಳೂರಿಗೆ ಬರುವ ಕರೆಗಳ ಸಂಖ್ಯೆಯಲ್ಲಿ ಗಣನೀಯ ಏರಿಕೆ ಕಂಡುಬಂದಿದೆ. ಹಲವು ಮಕ್ಕಳಿಗೆ ರಕ್ಷಣೆ ಮತ್ತು ಪೋಷಣೆ ನೀಡುವುದು ಸಾಧ್ಯವಾಗಿದೆ. ವಿವಿಧ ಇಲಾಖೆಗಳ ಸಹಯೋಗ, ಸಾರ್ವಜನಿಕರ ಸಹಕಾರ, ಮಾಧ್ಯಮದವರ ಸ್ಪಂದನೆಯ ಮೂಲಕ ಮಕ್ಕಳ ಸಮಸ್ಯೆಗಳನ್ನು ಪತ್ತೆ ಹಚ್ಚಿ ಮಕ್ಕಳಿಗೆ ರಕ್ಷಣೆ ಕೊಡುವಲ್ಲಿ ಮಹತ್ತರ ಪಾತ್ರವಹಿಸುತ್ತಿದೆ.

**ಕಳೆದ 2012– 2017ರ ವರೆಗಿನ ಕರೆಗಳ ಅಂಕಿಅಂಶ ಇಂತಿದೆ:**

| ಇಸವಿ | ಮಕ್ಕಳ ರಕ್ಷಣೆ ಮತ್ತು ಪೋಷಣೆಗೆ ಸಂಬಂಧಿಸಿ ಬಂದ ಕರೆಗಳು |
|---|---|
| 2014 | 272 |
| 2015 | 519 |
| 2016 | 497 |
| 2017 | 604 |

**ಸವಾಲುಗಳು:**

ಚೈಲ್ಡ್‌ಲೈನ್ ಸೇವೆಯ ಕುರಿತು ದಕ್ಷಿಣ ಕನ್ನಡದಾದ್ಯಂತ ಜಾಗೃತಿ ಮೂಡಿಸಲು ಹಾಗೂ ಇತರ ತಾಲೂಕುಗಳಿಂದ ಬರುವ ಕರೆಗಳಿಗೆ ತುರ್ತು ಸ್ಪಂದನೆ ನೀಡಲು ದಕ್ಷಿಣ ಕನ್ನಡದ ಇತರ ತಾಲೂಕುಗಳಲ್ಲಿ ಚೈಲ್ಡ್‌ಲೈನ್ ಸಬ್ ಸೆಂಟರ್‌ಗಳ ಅಗತ್ಯವಿದೆ. ಬೇರೆ ತಾಲೂಕಿನಿಂದ ಬರುವ ಕರೆಗಳಿಗೆ ತತ್‌ಕ್ಷಣ ಸ್ಪಂದಿಸಲು ವಿವಿಧ ತಾಲೂಕುಗಳಲ್ಲಿರುವ ಚೈಲ್ಡ್‌ಲೈನ್ ಸ್ವಯಂಸೇವಕರು, ವಿವಿಧ ಇಲಾಖೆಗಳ ಸಿಬ್ಬಂದಿಗಳ ಸಹಕಾರ ಪಡೆಯಲಾಗುತ್ತಿದ್ದರೂ ತಾಲೂಕುಮಟ್ಟದಲ್ಲಿ ಚೈಲ್ಡ್‌ಲೈನ್ ಸಬ್‌ಸೆಂಟರ್‌ಗಳು ಇದ್ದಲ್ಲಿ ಇನ್ನೂ ಉತ್ತಮ ಸೇವೆ ನೀಡುವಲ್ಲಿ ಸಹಕಾರಿಯಾಗುತ್ತದೆ. ಸ್ವಂತ ವಾಹನ ಸೌಲಭ್ಯವಿಲ್ಲದಿರುವುದು, ತಾಲೂಕು ಮಟ್ಟದ ಸಬ್ ಸೆಂಟರ್‌ಗಳು ಚೈಲ್ಡ್‌ಲೈನ್‌ಗೆ ಇಂದಿನ ಸವಾಲಾಗಿದೆ. ಇವುಗಳ ಒದಗಿಸುವಿಕೆಯು ಈ ಜಿಲ್ಲೆಯಲ್ಲಿ ಚೈಲ್ಡ್‌ಲೈನ್ ಇನ್ನೂ ತುರ್ತು ಹಾಗೂ ಸಮಗ್ರ ರಕ್ಷಣೆಯನ್ನು ಮಕ್ಕಳಿಗೆ ನೀಡುವಲ್ಲಿ ಸಾಧ್ಯವಾಗುತ್ತದೆ.

# ಪ್ರತಿಭೆಗೊಂದು ಪ್ರದರ್ಶನದ ಕಾರಂಜಿ



✍ ಪ್ರವೀಣ್ ಬಹುಮಾನ್

"ಮಾನವ ಮೊದಲಾ ಸ್ಪರ್ಧೆ ಮೊದಲಾ" ಎನ್ನುವಂತಾಗಿದೆ ಜೀವನದ ಪ್ರತಿಯೊಂದು ಮೆಟ್ಟಿಲು ಮಗು ಹುಟ್ಟಿದ ಕೂಡಲೇ ಹೋಲಿಕೆ ಎನ್ನುವ ಪದ ವಾಡಿಕೆಯು ಆಗಿರುತ್ತದೆ ಮಗು ನಗುವ ಆಳುವ ತಿನ್ನುವ, ಆಡುವ ಎಲ್ಲಾ ವಿಷಯಗಳಲ್ಲೂ 'ಹೋಲಿಕೆ' ಮಾಡಿಸಿಕೊಂಡೇ ಮನೆ ಮಂದಿ ಎಲ್ಲಾ ಸಂಭ್ರಮಿಸುತ್ತಾರೆ. ಅಥವಾ ಹಲಬುತ್ತಾರೆ, ಮಗು ಸಾಕು ಎನ್ನುವಷ್ಟರ ಮಟ್ಟಿಗೆ ಹೋಲಿಕೆಗಳು ನಡೆಯುತ್ತದೆ. ಆದರೂ ಮನೆಯಲ್ಲಿರುವ ತಾಯಿ, ತಂದೆ ಯೋಚನೆ ಮಾಡದೇ ಅನುಕರಿಸುತ್ತಾರೆ, ನಮ್ಮ ಹೋಲಿಕೆಗಳು ಯಾವಾಗಲೂ ಉತ್ತಮ, ಒಳ್ಳೆಯ ವಿಷಯಗಳಿಗೆ ಸೀಮಿತ ಆಗುತ್ತದೆ, ಹೋಲಿಕೆಯ ವಿಷಯಗಳಿಗೆ ಮಾನದಂಡಗಳು ಎಂಬುದೇ ಇಲ್ಲ. ಹೊರಗಿನ ಅಂಶಗಳನ್ನು ಗಮನಿಸಿಯೇ ಹೋಲಿಕೆಗಳು ಹುಟ್ಟಿಕೊಳ್ಳುತ್ತವೆ. ಮಗು ಕಲಿಕೆಯ ಮೆಟ್ಟಿಲೇರಲು ಸಮಾನ ಅವಕಾಶ ಹಾಗೂ ಪ್ರೇರಣಾ ಕೇಂದ್ರಗಳಾಗಬೇಕಿದ್ದ ಶಾಲೆಗಳು ಕೂಡ ಭಿನ್ನವಾಗಿಲ್ಲ. ಶಾಲೆಯ ಪರೀಕ್ಷೆಯೆಂಬ ಭಯದಿಂದ ಪ್ರಾರಂಭವಾದ ಮಗುವಿನ ಶಾಲಾ ದಿನಗಳು ಪ್ರತಿಭೆಯ ಹೆಸರಿನಲ್ಲಿ ಹೋಲಿಕೆಯೊಂದಿಗೆ ಅರಳುವ ಸಮಯದಲ್ಲಿ ಮುದುಡಿಕೊಳ್ಳಲು ಪ್ರಾರಂಭಿಸುತ್ತದೆ.

ಮಗು, ಮನುಷ್ಯ ಪ್ರತಿಯೊಂದಕ್ಕೂ ಅದರದ್ದೇ ಆದ ವ್ಯಕ್ತಿತ್ವ ಪ್ರತಿಭೆ ಇರುತ್ತದೆ, ಪ್ರತಿಯೊಂದಕ್ಕೂ ಅದರದ್ದೇ ಅದ ಇತಿಮಿತಿಗಳು ಇರುತ್ತವೆ, ಹಾಗಿರುವಾಗ ಹೋಲಿಕೆಯೆಂಬುದು ಸಾಧ್ಯವೇ ಇಲ್ಲ, ಹೋಲಿಕೆ ನಡೆಸಲೇ ಬೇಕೆಂದರೆ ವಯಸ್ಸು ದೈಹಿಕ ಮತ್ತು ಮಾನಸಿಕ ಸಾಮರ್ಥ್ಯ, ಕೆಲವು ಸಮಯದಲ್ಲಿ ಲಿಂಗ ಈ ಮುಂತಾದ ಅಂಶಗಳನ್ನು ಪರಿಗಣಿಸಲೇ ಬೇಕು. ಈ ಹಿಂದೆ ಪ್ರತಿಭಾ ಕಾರಂಜಿ ಎಂಬ ಪ್ರದರ್ಶನ ವೇದಿಕೆ ಬಗ್ಗೆ ಬರೆದಿದ್ದೆ, ಸುಮಾರು ಹತ್ತು ವರ್ಷಗಳಾಗಿರಬಹುದು ಅಂದು ಮಕ್ಕಳ ಪ್ರತಿಭೆಯ ಹೆಸರಿನಲ್ಲಿ ಪ್ರದರ್ಶನ ನಡೆಸಿ ಬಹುಮಾನ ಪ್ರಕ್ರಿಯೆಯಲ್ಲಿನ ರಾಜಕೀಯದ ಬಗ್ಗೆ ವಿಶ್ಲೇಷಿಸಿದ್ದೆ. 10 ವರ್ಷದ ಬಳಿಕವೂ ಪ್ರತಿಭೆಯನ್ನು ಬಾಲ್ಯಾವಸ್ಥೆಯಲ್ಲಿ ಕೊಳ್ಳಿ ಇಡುವ ಕೆಲಸ ನಿಂತಿಲ್ಲ.

ಇತ್ತೀಚಿಗಿನ ದಿನಗಳಲ್ಲಿ ಶಾಲೆ ಮಾತ್ರವಲ್ಲ ನಮ್ಮ ಮಾಧ್ಯಮಗಳು ಕೂಡ ರಿಯಾಲಿಟಿ ಷೋ ಹೆಸರಿನಲ್ಲಿ ಎಲ್ಲಾ ವಯೋಮಾನದ ಮಕ್ಕಳನ್ನು ಸೇರಿಸಿ ನೃತ್ಯ ಹಾಗೂ ಸಂಗೀತದ ಸ್ಪರ್ಧೆಗಳನ್ನು ನಡೆಸುತ್ತಾರೆ, ಟಿ.ಆರ್.ಪಿಗೋಸ್ಕರ ಫಲಿತಾಂಶ ಪ್ರಕಟಣೆಯಲ್ಲಿ ಸಮಯ ತೆಗೆದು ಕೊಂಡು ಹೆಚ್ಚು ಆಸಕ್ತಿ ಮೂಡಿಸಿ ಆ ದಿನದ ಪ್ರದರ್ಶನ ಚೆನ್ನಾಗಿ ಮಾಡದೆಯೋ ಆಥವಾ ಕುಳಿತಿರುವ ನಿರ್ಣಾಯಕರಿಗೆ ಸಮಾಧಾನ ಆಗದೆಯೋ ಅಂತಹ ಸ್ಪರ್ಧಿಗಳನ್ನು ಕರೆಸಿ ಆಳುತ್ತಾ ಕಳುಹಿಸುವುದು ವಾಡಿಕೆಯಾಗಿದೆ.

ಯಾವುದೇ ವೇದಿಕೆ ಅಥವಾ ಸ್ಥಳವೊಂದು ವ್ಯಕ್ತಿಗೆ ಹಿತವೆನಿಸಲು ಪ್ರೇರಕ ವಾತಾವರಣವಿರಬೇಕು ಆಗ ಮಾತ್ರ ವ್ಯಕ್ತಿ ಆತನಲ್ಲಿರುವ ಎಲ್ಲಾ ಸಾಮಾರ್ಥ್ಯವನ್ನು ಪ್ರದರ್ಶಿಸಿಸಲು ಸಾಧ್ಯ. ಆದರೆ ಹೋಲಿಕೆ ಎನ್ನುವ ಗುಮ್ಮ ಹೇಗೆ ತಾನೇ ಪ್ರೇರಣೆಯಾಗಬಹುದು ನೀವೇ ಯೋಚಿಸಿ? ಟಿ.ವಿ ಪರದೆಯಲ್ಲಿ ಬರುವ ನೃತ್ಯ ಸಂಗೀತದಲ್ಲಿ ಬರುವ ಸ್ಪರ್ಧಿಗಳು 3 ವರ್ಷದಿಂದ 18 ವರ್ಷ ವರೆಗೆ ಇರುತ್ತಾರೆ. ಇದು ಹೇಗೆ ಸಾಧ್ಯ? ಪುಟ್ಟ ಮಗುವೊಂದು ಹೆಚ್ಚು ಪರಿಣತಿ ಹೊಂದಿದ ಆಭ್ಯಾಸ ಮಾಡಿದ ಮಗುವಿನೊಂದಿಗೆ ಸ್ಪರ್ಧಿಸಲು ಸಾಧ್ಯವೇ?

ನಮ್ಮ ಶಾಲೆಗಳಲ್ಲೂ ನಡೆಯುವುದು ಇದೇ ತಾನೇ? ಕಿರಿಯ, ಹಿರಿಯ ವಿಭಾಗ ಮಾಡಿ ಪ್ರತಿಭಾ ಕಾರಂಜಿ ಎನ್ನುವ ವೇದಿಕೆ ಸಿದ್ಧ ಪಡಿಸಿದ್ದು ಕಿರಿಯರು ಎಂದರೆ ಯಾರು? 4ನೇ ತರಗತಿಗಿಂತ ಕಡಿಮೆ ದರ್ಜೆಯಲ್ಲಿ ವ್ಯಾಸಂಗ ಮಾಡುವವರು, 2ನೇ ತರಗತಿ ಮಗು 4ನೇ ತರಗತಿ ಮಗುವಿನ ಜೊತೆ ಸ್ಪರ್ಧೆ ಹಾಗೇ ಹಿರಿಯರ ವಿಭಾಗದಲ್ಲಿ 6ನೇ ತರಗತಿ ಮಗು 7 ಅಥವಾ 8ನೇ ತರಗತಿ ಮಗುವಿನ ಜೊತೆ ಸ್ಪರ್ಧೆ. ಹೆಚ್ಚಿನ ಪ್ರತಿಭಾ ಕಾರಂಜಿಯಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಅವಕಾಶ ಸಿಕ್ಕಿರುವುದೇ ಇಲ್ಲ. ಈ ವಿಶೇಷ ಅಗತ್ಯವುಳ್ಳ ಮಕ್ಕಳಲ್ಲಿ ಪ್ರತಿಭೆಗಳಿಲ್ಲವೇ?

ನಮ್ಮ ಪೀಳಿಗೆಗೆ ಬೇಕಿರುವುದು ಸ್ಪರ್ಧೆ ಎಂಬ ಭೂತವಲ್ಲ ಬದಲಿಗೆ ಜೀವನ ನಡೆಸಲು ಕೌಶಲ್ಯ, ಸಮಸ್ಯೆಗಳನ್ನು ಎದುರಿಸಲು ಸಾಮರ್ಥ್ಯದ ವೃದ್ಧಿ ಬೇಕಾಗಿದೆ. ಶಿಕ್ಷಣ ಕೇವಲ ಓದು ಬರಹ ಕಲಿಸಿದರೆ ಸಾಲದು. ಪ್ರತಿ ಮಗುವಿನಲ್ಲಿ ಸಾಮರ್ಥ್ಯ ಬೆಳೆಸಬೇಕು. ಪ್ರತಿಭಾ ಕಾರಂಜಿ ಅಥವಾ ಇನ್ನಾವುದೇ ಸ್ಪರ್ಧೆಯಲ್ಲಿ ಜಯಗಳಿಸಿದ, ಮೊದಲ ಸ್ಥಾನ ಪಡೆದ ಸ್ಪರ್ಧಿಗಳು ಈಗ ಏನು ಮಾಡುತ್ತಾರೆ? ಗಮನಿಸಿ ಸ್ಪರ್ಧೆ ನಂತರ ಹೆಚ್ಚಿನವರು ಮತ್ಯಾವುದೇ ಸ್ಪರ್ಧೆಯಲ್ಲಿ ಅರ್ಹತೆಗಳಿಸಿರುವುದಿಲ್ಲ ಅಥವಾ ಅವಕಾಶ ಸಿಕ್ಕಿರುವುದಿಲ್ಲ. ಪ್ರತಿಭೆಯ ಜೊತೆಗೆ ಜೀವನ ಕೌಶಲ್ಯ ನೀಡಿದರೆ ಮಗು ಹೇಗೆಲ್ಲಾ ವೇದಿಕೆಯನ್ನು ಬಳಸಬಹುದು ಹಾಗೂ ಯಾವುದೇ ವೇದಿಕೆ ತನ್ನ ಜೀವನ ಸುಧಾರಣೆಯಲ್ಲಿ ಪ್ರೇರಣೆಯಾಗಬಲ್ಲದು ಎಂದು ಯೋಚಿಸುತ್ತದೆ.






**ಎಂ.ಪಿ. ರೋಹಿಣಿ. ಆರ್.ಆಚಾರ್**
ಸಂಘಟನಾ ಕಾರ್ಯದರ್ಶಿ, ಕಾರ್ಯಾಕಾರಿ ಸಮಿತಿ,
ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟ, ದ.ಕ. ಜಿಲ್ಲೆ.

ಶಿಕ್ಷಣ ಎನ್ನುವ ವಿಷಯ ಎಲ್ಲರ ಬಾಯಲ್ಲೂ ಇರುವುದು, ಬಾಯಲ್ಲಿ ಹಲ್ಲು ಇರುವುದು ಎಷ್ಟು ಸತ್ಯವೋ, ಅಷ್ಟೇ ಶಿಕ್ಷಣದ ಹೆಸರು ಹಲವು ವಿಧಗಳು ಎಲ್ಲರಲ್ಲೂ ಇದೆ. ಕ್ಷಣ ಕ್ಷಣವು ಶಿಸ್ತನ್ನು ಕಾಪಾಡಿಕೊಳ್ಳಲು, ಒಳ್ಳೆಯ ಗುಣವನ್ನು ಪಡೆಯಲು ಎಲ್ಲರೊಂದಿಗೇ ಬೆರೆತು ಮಾತನಾಡಲು ಕೂಡ ಶಿಕ್ಷಣದ ಅವಶ್ಯಕತೆ ಇದೆ. ಶಿಕ್ಷಣವನ್ನು ಎಲ್ಲರು ಪಡೆದು ಕೊಳ್ಳುತ್ತಾರೆ ಎನ್ನುವುದು ಸುಳ್ಳು, ಒಳ್ಳೆಯ ಗುಣವುಳ್ಳವರಿಗೂ ಕೂಡ, ಶಿಕ್ಷಣದ ಮಹತ್ವ ತಿಳಿಯದಿರಬಹುದು.

ಶಿಕ್ಷಣವನ್ನು ಶಾಲೆಯಿಂದಲೇ ಪಡೆಯಬೇಕು ಎಂದು ಈಗ ಪ್ರಚಲಿತವಾಗಿರುವ ವಿಚಾರಗಳಾಗಿವೆ. ಹಿಂದೆ ಶಿಕ್ಷಣವನ್ನು ರಾಜ ಮಹಾ ರಾಜರ ಕಾಲದಲ್ಲಿ ಮಕ್ಕಳನ್ನು ಗುರುಕುಲದಲ್ಲಿ ಬಿಟ್ಟು ಒಳ್ಳೆಯ ಗುಣವಂತನಾಗಿ ವೇದ ಉಪನಿಷತ್ತುಗಳ ಜ್ಞಾನವನ್ನು ಪಡೆದುಕೋ, ಒಳ್ಳೆಯ ಸಂಸ್ಕಾರವನ್ನು ಪಡೆದು ಕೋ, ಒಳ್ಳೆಯ ಬಿಲ್ಲು ವಿದ್ಯೆ ಗಳನ್ನು ಪಡೆದು ಬಾ, ಒಳ್ಳೆಯ ಪಂಡಿತನಾಗು, ಹೀಗೆ ಹಲವು ವಿಧಗಳಲ್ಲಿ ತಂದೆ, ತಾಯಿಯರು ತಮ್ಮ ಮಕ್ಕಳನ್ನು ಗುರುಕುಲದಲ್ಲಿ ಬಿಟ್ಟು ಬರುತ್ತಿದ್ದರು. ಆಗ ಗುರು ಕುಲದಲ್ಲಿ ಗುರುವೇ ಉಪಾಧ್ಯಾಯರಾಗಿ, ಒಳ್ಳೆಯ ಬಂಧುವಾಗಿ, ಒಳ್ಳೆಯ ಹಿತೈಷಿಯಾಗಿ, ಗೆಳೆಯನಾಗಿ, ಒಳ್ಳೆಯ ಕುಸ್ತಿ ಪಟು, ಕತ್ತಿ ವರಸೆ, ಕುದುರೆ ಸವಾರಿ, ಜಟ್ಟಿ ಕಾಳಗ, ಯೋಗ, ಜಪ, ತಪ, ಶ್ಲೋಕ, ಎಲ್ಲವನ್ನು ಕ್ರಮ ಕ್ರಮವಾಗಿ ಕಲಿಸುತ್ತಿದ್ದರು.

ಬದಲಾವಣೆಗಳು ಎಲ್ಲಿಯವರೆಗೆ ಬಂದಿತ್ತು ಎಂದರೆ, ವಿಜ್ಞಾನದ ಅವಿಷ್ಕಾರವಾಯಿತು. ಕಂಪ್ಯೂಟರ್ ಆಗಮನವಾಯಿತು. ಮನುಷ್ಯ ಅತೀ ಬುದ್ಧಿವಂತನಾದ, ತನ್ನ ಸಾವಿಗೆ ಕೂಡ ಔಷಧಿ ತಯಾರು ಮಾಡುವುದನ್ನು ಕಲಿತ. ಕುಳಿತ ಜಾಗದಿಂದಲೇ ಎಲ್ಲವನ್ನು ನೋಡಿ ಬರೆಯಬಹುದು, ನೋಡ ಬಹುದು ಎನ್ನುವುದನ್ನು ಕಲಿತ, ಬಹು ಹಿಂದೆಯೇ ಶಿಕ್ಷಣವು ಎಲ್ಲರಿಗೂ ಸಿಗಲಿ ಎಂದು "UNO,UNCRC ವಿಶ್ವ ಮಾನವ ಹಕ್ಕು ಯುನೈಟೆಡ್ ನೇಶನ್ಸ್ ಆರ್ಗ್‌ನೈಜ್" ಎನ್ನುವ ಸಂಸ್ಥೆಯು ಈ ನಿಟ್ಟಿನಲ್ಲಿ ಗುಣಮಟ್ಟದ ಶಿಕ್ಷಣವು ಇತ್ತೀಚೆಗೆ ಎಲ್ಲರಿಗೂ ಸಿಗಲಿ ಎಂದು ಘೋಷಿಸಿದರು. ಆದರೂ ಏಲ್ಲೋ ಒಂದು ಕಡೆ ಮಕ್ಕಳು ಶಿಕ್ಷಣದಿಂದ ವಂಚಿತರಾಗಿರುವುದು, ಕಂಡು ಬಂದಿರುವುದು ಸತ್ಯ. ಮಕ್ಕಳಿಗೆ ತನ್ನ 14ನೇ ವಯಸ್ಸಿನಲ್ಲಿ ಮನಸ್ಸನ್ನು ಕೇಂದ್ರೀಕರಿಸಲು ತಿಳಿಯುವುದಿಲ್ಲಾ. ಅವರ ಮನಸ್ಸನ್ನು ಪರಿಪಕ್ವ ಮಾಡುವ ವಾತಾವರಣ, ತಂದೆ, ತಾಯಿ, ಟೀಚರ್ಸ್, ಗೆಳೆಯರು, ಎಲ್ಲವೂ ಸರಿ ಇದ್ದರೆ ಮಾತ್ರ ಮಕ್ಕಳು ಶಿಕ್ಷಣ ಪಡೆದಿದ್ದು ಸಾರ್ಥಕ ವಾಗುತ್ತದೆ. ನಾವು ಸಾಧನೆ ಮಾಡಿದರೆ ಏನೂ ಮಾಡಬಹುದು ಎನ್ನುವ ವಿಚಾರಗಳು ಬಲಗೊಂಡ ನಂತರ ಹಲವಾರು

ವಿಷಯಗಳು ಹೊರಹೊಮ್ಮಿದವು. ಹಲವಾರು ಜನ ಶಿಕ್ಷಣದ ಪರಿಣಿತಿ ಪಡೆದ ಮಹಾ ಪಂಡಿತರು, ಜ್ಞಾನಿಗಳನ್ನು ನೋಡಿ ಶಿಕ್ಷಣ ಪಡೆದರೇ ಒಳ್ಳೆಯ ವ್ಯಕ್ತಿಯಾಗುವನು ಎನ್ನುವ ಸತ್ಯದ ಅರಿವಾಯಿತು. ಶಿಕ್ಷಣ ಮನುಷ್ಯನ ಅಂಗಾಂಗಗಳಲ್ಲಿ ಹಾಸು ಹೊಕ್ಕಾಗಿದೆ ಆದರೂ ಶಿಕ್ಷಣವನ್ನು ಪಡೆದ ವ್ಯಕ್ತಿ ಯಾವಾಗಲೂ ಒಳ್ಳೆಯವ ಎಂದು ತಿಳಿಯಲು ಆಗುವುದಿಲ್ಲ. ಎಲ್ಲೋ ಒಂದು ಕಡೆ ಅಪಸ್ವರಗಳು ಏಳುತ್ತಾ ಇರುತ್ತದೆ. ಶಿಕ್ಷಣದ ಅರಿವನ್ನು ಶಿಕ್ಷಣದ ಆಸಕ್ತರಿಗೇ ಮಾತ್ರ ಎಂದು ಇರಬಾರದು. ಎಲ್ಲರಿಗೂ ಶಿಕ್ಷಣದ ಮಹತ್ವ ತಿಳಿದಿರಬೇಕು. ಶಿಕ್ಷಣವನ್ನು ತಾಯಿ ತನ್ನ ಮಗುವಿನ ಹುಟ್ಟಿನಿಂದಲೇ ಕಲಿಸಿರುತ್ತಾಳೆ. ತಾಯಿ ತನ್ನ ಮಗು ಹೇಗೆ ಬೆಳೆಯಬೇಕು, ಹೇಗೆ ಬೆಳೆಸಬೇಕು ಎನ್ನುವ ಅರಿವನ್ನು ಪಡೆದಿರುತ್ತಾಳೆ.

ಹಲವಾರು ರೀತಿಯ ಶಿಕ್ಷಣಗಳಿವೆ. ಅದರಲ್ಲಿ ಪಾಠಕ್ಕೆ ಸಂಬಂಧ ಪಟ್ಟ ಹಲವಾರು ವಿಷಯಗಳಿರುತ್ತವೆ. ಇಂದಿನ ಯುಗದಲ್ಲಿ ಶಿಕ್ಷಣ ಒಂದು ಮಾರಾಟದ ವಸ್ತುವಿನಂತೆ ನಡೆಯುತ್ತಿದೆ. ಕೆಲವೊಂದು ಮಕ್ಕಳ ಅದೃಷ್ಟವನ್ನು ದೇವರು ಪರೀಕ್ಷಿಸುತ್ತಾನೆಯೇ?, ತುಂಬಾ ಚೂಟಿಯಾಗಿ ಎಲ್ಲದರಲ್ಲೂ “ಶಭಾಶ” ಎಂದು ಹೇಳಿಸಿಕೊಳ್ಳುವ ಮಗು ದೊಡ್ಡವನಾದಂತೆ ಸ್ನೇಹಿತರೊಂದಿಗೇ ಸೇರಿ ತನ್ನ ಬುದ್ಧಿಯನ್ನು ಸ್ವಲ್ಪ ಸ್ವಲ್ಪವೇ ಹಾಳು ಮಾಡಿಕೊಳ್ಳುತ್ತಾನೆ. ಎಷ್ಟೇ ಬುದ್ಧಿವಂತರಾದರೂ ಕೂಡ ಎಡವುದು ಸಹಜ ಎನ್ನುವ ಗಾದೆ ಮಾತಿದೆ. ಆದರೆ ಎಡವಿದವರು ಎದ್ದು ಗಟ್ಟಿಯಾಗಿ ನಿಂತುಕೊಂಡು ತನ್ನ ಕಾಲ ಮೇಲೆ ನಿಂತುಕೊಂಡು ಸುಂದರ ಬದುಕನ್ನು ರೂಪಿಸಿಕೊಳ್ಳಬೇಕು. ಏನಾದರೊಂದು ಸಾಧನೆಯ ಗುರಿಯನ್ನು ಇಟ್ಟುಕೊಂಡು ಸಾಧನೆಯನ್ನು ಮಾಡಿದರೆ ಮಾತ್ರ ಶಿಕ್ಷಣವನ್ನು ಪಡೆದಿದ್ದು ಸಾರ್ಥಕ ಆಗುತ್ತದೆ. ಹೆತ್ತವರೇ ಇರಲಿ, ಗೆಳೆಯರಿರಲಿ, ಗುರುವಿರಲಿ, ಮಾರ್ಗದರ್ಶಕರಿರಲಿ, ಎಲ್ಲರಿಗೂ ಸಂತಸವುಂಟಾಗುತ್ತದೆ. ಸಾಧನೆಯ ಗುರಿ ಇದ್ದರೆ, ಬದುಕು ತನ್ನಿಂದ ತಾನೇ, ನಡೆಯುತ್ತದೆ. ನಾ ಹೇಳುವುದಿಷ್ಟೇ ಶಿಕ್ಷಣ ಇರಬೇಕು, ಶಿಕ್ಷಣ ಬೇಕು, ಅರಿವನ್ನು ಹೆಚ್ಚಿಸಲು, ಶಿಕ್ಷಣಕ್ಕೆ ಒತ್ತು ಕೊಡಬೇಕು. ಇನ್ನೊಬ್ಬರನ್ನು ಬೆಳೆಸುವಂತೆ ಶಿಕ್ಷಣವು ಶಿಸ್ತಿನಿಂದ ಸಾಗಿದರೆ ಸುಂದರ ಬದುಕನ್ನು ರೂಪಿಸಬಹುದು, ಇಂತಹ ಶಿಕ್ಷಣವನ್ನು ಪಡೆದವನಂತೂ ಧನ್ಯತೆಯ ಭಾವ ತುಂಬಿದ ವ್ಯಕ್ತಿಯಾಗುವನು.

ಆಟ, ಪಾಠ, ಊಟ, ಕೃಷಿ ಎಲ್ಲದರಲ್ಲೂ ಶಿಕ್ಷಣದ ಮಹತ್ವವಿರುವುದು, ಎಲ್ಲಾ ಬಣ್ಣಗಳು ಸೇರಿ ಬಿಳಿ ಬಣ್ಣ ಆಗುವುದೋ ಹಾಗೇ ಪ್ರಕೃತಿಯಲ್ಲಿ ಕೂಡ ಚಳಿ, ಗಾಳಿ, ಮಳೆ, ಬಿಸಿಲು, ಆಹಾರ, ಕೃಷಿ, ಭೂಮಿ, ಆಕಾಶ ಇತರೇ ಹಲವಾರು ವಿಷಯಗಳಿರುವುದು. ಒಂದೊಂದು ವಿಷಯದಲ್ಲಿಯೂ ಹಲವಾರು ವಿಷಯಗಳು ಅಡಕವಾಗಿವೆ. ಎಲ್ಲವೂ ಶಿಕ್ಷಣ ಪಡೆದ ಮನುಷ್ಯನಲ್ಲಿ ಅಡಕವಾಗಿವೆ. ಒಂದೊಂದು ವಿಷಯವನ್ನು ತೆಗೆದು ಕೊಂಡು ಅದರಲ್ಲೂ ಶಿಕ್ಷಣವನ್ನು ಪಡೆದುಕೊಂಡು ಪರಿಣತಿ ಹೊಂದಲು ಸಾಧ್ಯವಿದೆ.

***

*Development and all that are encompassed in it, whether they be economic progress, social upliftment, political consciousness and above all education and awareness building, have as their first aim the liberating of people from all that prevents them from living a full human life. This cannot be achieved unless there is a transformation of society.*

**- Desmond A. D’abreo**

# ಎಸ್. ಎಂ. ಅಬೂಬಕ್ಕರ್
# ವೆಲೊರೆಡ್ – ಮೌಲ್ಯಾಧಾರಿತ ಶಿಕ್ಷಣದ ಪ್ರತಿಫಲನ



1993ರಲ್ಲಿ ವೆಲೊರೆಡ್ ಅಸ್ತಿತ್ವಕ್ಕೆ ಬಂದಿದ್ದು, ಅನೇಕ ಸಮೀಕ್ಷೆ, ಅಧ್ಯಯನಗಳನ್ನು ಸಮುದಾಯದಲ್ಲಿ ಮಾಡುತ್ತಾ ಶಿಕ್ಷಕರು, ಶಿಕ್ಷಣಾಸಕ್ತರನ್ನು ಕಲೆ ಹಾಕಿಕೊಂಡು ಸಮುದಾಯದ ಅಭಿವೃದ್ಧಿಯಲ್ಲಿ ಶಿಕ್ಷಣ ಮಹತ್ವದ ಪಾತ್ರವಾಗಿದೆ. ಅದರಲ್ಲೂ ಮೌಲ್ಯಯುತ ಶಿಕ್ಷಣಕ್ಕೆ ಒತ್ತು ನೀಡುತ್ತಾ ವಿಭಿನ್ನ ರೀತಿಯ ಕಾರ್ಯವನ್ನು ಕೈಗೊಳ್ಳುತ್ತಾ ಇರುವ ಸಂಧರ್ಭ. ಬಂಟ್ವಾಳದಲ್ಲಿ ಈಗಾಗಲೇ ಸಂಪನ್ಮೂಲ ಕೇಂದ್ರವನ್ನು ಆರಂಭಿಸಿ ಶ್ರೀಮತಿ ವಿಜಯಲಕ್ಷ್ಮಿ, ಕೇಂದ್ರ ಸಂಯೋಜಕಿಯಾಗಿ ಕಾರ್ಯ ನಿರ್ವಹಿಸುವ ಸಮಯದಲ್ಲಿ ಅಂದರೆ 1995–96ರಲ್ಲಿ ಅಭಿವೃದ್ಧಿಯೆಡೆ ಚಿಂತನೆ ಮಾಡುತ್ತಿರುವ, ಸ್ವಯಂ ತನ್ನನ್ನೇ ತೊಡಗಿಸಿ ಕೊಂಡು ಸಮಾಜ ಸೇವೆಯಲ್ಲಿ ನಿರತರಾಗಿದ್ದ ಎಸ್.ಎಂ. ಅಬೂಬಕ್ಕರ್‌ರವರ ಭೇಟಿಯನ್ನು ಮಾಡಿದ್ದರು, ಕಾರಣ ಶ್ರೀ ಅಬೂಬಕ್ಕರ್‌ರವರು ಕೊಳ್ನಾಡು ಗ್ರಾಮ ಪಂಚಾಯತ್‌ನ ಸದಸ್ಯರಾಗಿದ್ದುದು ಕೂಡಾ. ಆ ಸಮಯದಲ್ಲಿ ಶಾಲಾಭಿವೃದ್ಧಿ ಸಮಿತಿ (School Betterment Committee) ಯ ಸದಸ್ಯರು ಆಯಾ ಗ್ರಾಮ ಪಂಚಾಯತ್‌ನ ಸದಸ್ಯರುಗಳು ಆಗಬೇಕಾಗಿತ್ತು. ಇಲ್ಲಿ ವೆಲೊರೆಡ್ ಪರಿಕಲ್ಪನೆಯ ಅಗಾಧ ಮಾಹಿತಿಯನ್ನು ನೀಡುತ್ತಾ ವೆಲೊರೆಡ್ ಯೋಜನೆಯ ಯೋಚನೆಯನ್ನು ತಿಳಿಸುತ್ತಾ ಗ್ರಾಮ ಶಿಕ್ಷಣ ಸಮಿತಿಯ ಮೂಲಕ ಸಂಪನ್ಮೂಲ ಕೇಂದ್ರದ ಜೊತೆ ಸೇರಿ ಕಾರ್ಯ ನಿರ್ವಹಿಸುವಂತೆ ಶ್ರೀಯುತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಬಂಟ್ವಾಳ ಶಿ. ಸಂ. ಕೇಂದ್ರದ ಸದಸ್ಯರಾಗಿ ಸೇರ್ಪಡೆ ಮಾಡಲಾಯಿತು. ಬಹಳ ಸಕ್ರಿಯವಾಗಿ ಚಿಕ್ಕ ತಂಡದೊಂದಿಗೆ ಬಹಳ ಉತ್ಸುಕತೆ ಹಾಗೂ ಆಸಕ್ತಿಯನ್ನು ಹೊಂದಿದ್ದ ಇವರು ವೆಲೊರೆಡ್ ಸಹಕಾರದೊಂದಿಗೆ ಪಂಚಾಯತ್ ಸದಸ್ಯರ ಒಕ್ಕೂಟವನ್ನು 1997–98ರಲ್ಲಿ ಆರಂಭಿಸಿ, ಜಿಲ್ಲಾ ಮಟ್ಟದ ಸಮ್ಮೇಳನವನ್ನು ಬಂಟ್ವಾಳದಲ್ಲಿ ಅದ್ದೂರಿಯಾಗಿ ನಡೆಸಿದ್ದು, ಪರಿಕಲ್ಪನೆಯ ಆಳವಾದ ಅನುಭವವನ್ನು ಹೆಚ್ಚಿಸಿ ವೆಲೊರೆಡ್‌ನ ಪ್ರೇರಕರಾಗಿ ಹೆಜ್ಜೆ ಇಡಲು ಆರಂಭಿಸಿದರು. ನಂತರ ವೆಲೊರೆಡ್ ಯೋಜನೆಯು 2008ರಲ್ಲಿ 5 ತಾಲೂಕು ಘಟಕಗಳನ್ನು ಜನಸಮುದಾಯದ ಒಕ್ಕೂಟವಾಗಿ ರಚಿಸಿದ ನಂತರ ಈ ಒಕ್ಕೂಟದ ಮೊದಲ ಅಧ್ಯಕ್ಷರಾಗಿ ಆಯ್ಕೆಯಾಗಿ ವೆಲೊರೆಡ್ ಆಶಯವನ್ನು ದ.ಕ. ಜಿಲ್ಲೆಯ 5 ತಾಲೂಕು ಘಟಕಗಳಲ್ಲೂ ಪಸರಿಸುತ್ತಾ, ಜನಾಂದೋಲನ, ಜನ ಸಂಘಟನೆಗಳ ಮೂಲಕ ಸಕಾಲಿಕ ವಿಚಾರಗಳನ್ನು ಸರಕಾರ, ವಿವಿಧ ಇಲಾಖೆಗಳು ಜನನಾಯಕರುಗಳಿಗೆ ತಲುಪಿಸುತ್ತಾ ಬದಲಾವಣೆಗಾಗಿ ಪ್ರಯತ್ನಿಸಲು ತನ್ನನ್ನು ಬಹಳಷ್ಟು ತೊಡಗಿಸಿಕೊಂಡಿರುವರು.

ವೆಲೊರೆಡ್ –ಶಿಕ್ಷಣ ಸಂಪನ್ಮೂಲ ಕೇಂದ್ರದ ಆಶಯದಂತೆ ಅಬೂಬಕ್ಕರ್‌ರವರು ತನ್ನ ಊರಿನ ಶಾಲೆಯನ್ನು ಮಗುಸ್ನೇಹಿ ಶಾಲೆಯ ಮಾದರಿಯಾಗಿ ಮಾಡುವುದರ ಮೂಲಕ ನಾಯಿಕೊಡೆಗಳಂತೆ ದಿನದಿಂದ ದಿನಕ್ಕೆ ಏರುವ ಆಂಗ್ಲ ಮಾಧ್ಯಮ ಶಾಲೆಗಳಿಗೆ ಸವಾಲಾಗಿ ನಿಲ್ಲಿಸುವ ಪಣತೊಟ್ಟರು. ಆಗಲೇ ಸಂಪನ್ಮೂಲ ಕೇಂದ್ರ, ಊರವರ, ಗ್ರಾಮ ಪಂಚಾಯತ್, ಶಿಕ್ಷಕರ, ದಾನಗಳ, ಇಲಾಖೆಗಳ ವಿಶ್ವಾಸವನ್ನು ಪಡೆದು ಎಲ್ಲರ ಸಹಯೋಗದೊಂದಿಗೆ ರಾಜ್ಯ ಹಾಗೂ ರಾಷ್ಟ್ರ ಮಟ್ಟವು ಗುರುತಿಸುವ ಮಟ್ಟಿಗೆ ಬೆಳೆಸಿದ ಪರಿ ಬಹಳ ಶ್ಲಾಘನೀಯ. ಕಾರ್ಯಕ್ರಮ, ಸಭೆ, ಚರ್ಚೆ ಇತ್ಯಾದಿ ಸಂದರ್ಭದಲ್ಲಿ ಶ್ರೀಯುತರ ಒಂದು ಮಾತು ನೆನಪಿಸಲೇ ಬೇಕಾದದ್ದು. **"ತಮಗೇನಾದರೂ ಒಳ್ಳೆಯದಾದಲ್ಲಿ, ದಾನ ಮಾಡಬೇಕೆಂದು ಅನ್ನಿಸಿದಲ್ಲಿ ತಮ್ಮ ಊರಿನ ಸರಕಾರಿ ಶಾಲೆಗೆ ಮಕ್ಕಳ ಶಿಕ್ಷಣಕ್ಕಾಗಿ ಕೂಡಾ ನೀಡಿ, ಇದು ತಾವು ಚರ್ಚ್, ದೇವಸ್ಥಾನ ಮತ್ತು ಮಸೀದಿಗಳಿಗೆ ಕೃತಜ್ಞತಾ ಕಾಣಿಕೆ ನೀಡಿ ಬಯಸುವ ತೃಪ್ತಿ, ಪ್ರತಿಫಲದಷ್ಟೇ ಮೌಲ್ಯವನ್ನು ಹೊಂದಿದ್ದಾಗಿದೆ."** ಇವರ ಈ ಮಾತು ನಿಜಕ್ಕೂ ಅರ್ಥಗರ್ಭಿತವಾದದ್ದು ಮತ್ತು ಇದನ್ನು ಎಲ್ಲರೂ ಅನುಸರಿಸಿದಲ್ಲಿ ಮಾತ್ರ ಅನೇಕರಿಗೆ ಜೀವನ ಕೊಡುವ ಸರಕಾರಿ ಶಾಲೆಗಳನ್ನು ಉಳಿಸಿ

ಬೆಳೆಸುವಲ್ಲಿ ನಮ್ಮದೂ ಒಂದು ಪಾಲಿದೆ ಅನ್ನುವಂತಾಗುತ್ತದೆ ಅಲ್ಲವೇ?

ಶಾಲಾಭಿವೃದ್ಧಿ ಸಮಿತಿಯಲ್ಲಿ ತೊಡಗಿಸಿಕೊಂಡಂತಹ ಶ್ರೀ ಅಬೂಬಕ್ಕರ್‌ರವರು ಅಧ್ಯಾಪಕ ವೃಂದದವರೊಂದಿಗೆ 2003-04ರಲ್ಲಿ ಶಿಥಿಲಗೊಂಡ ಸುರಿಬೈಲು ಶಾಲಾ ಕಟ್ಟಡವನ್ನು ಸರಕಾರಿ ಅನುದಾನಗಳ ಮೂಲಕ ಸುಸಜ್ಜಿತವಾಗಿ ನಿರ್ಮಾಣ ಮಾಡುವಲ್ಲಿ ಉಸ್ತುವಾರಿಯನ್ನು ತೆಗೆದುಕೊಂಡಿದ್ದರು. ಸುರಿಬೈಲು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ವ್ಯಾಪ್ತಿ ಬೋಳುಗುಡ್ಡವಾಗಿದ್ದು, ಶಾಲೆಯ ಅಭಿವೃದ್ಧಿಯೆಡೆ ಚಿಂತನೆ ನಡೆಸಿ ನಿರೀಕ್ಷೆಗೂ ಮೀರಿದ ನೀರನ್ನೊಳಗೊಂಡ ಕೊಳವೆ ಬಾವಿಯನ್ನು ನಿರ್ಮಿಸಿದರು, ದೂರದೃಷ್ಟಿಯನ್ನಿಟ್ಟು ಮುಂದೆ ಇದರ ನೀರಿನ ಉತ್ಪತ್ತಿ ಕಡಿಮೆಯಾಗದಂತೆ ಮಳೆಕೊಯ್ಲು ವ್ಯವಸ್ಥೆಯನ್ನೂ ಮಾಡಿ, ಊರ ಆಸುಪಾಸಿಗೂ ಈ ವ್ಯವಸ್ಥೆ ನೀರಿನ ಆಧಾರ ಬುಗ್ಗೆಯಾಗುವಂತೆ ಮಾಡಿದ ಯೋಜನೆ ನಿಜವಾಗಿಯೂ ಸಮುದಾಯಕ್ಕೊಂದು ಮಾದರಿಯೇ ಸರಿ. ನಂತರ 4 ಎಕ್ರೆ ಜಾಗದಲ್ಲಿ ಶಾಲೆಯ ಮಕ್ಕಳಿಗೆ ಸ್ವಚ್ಛಂದ ವಾತಾವರಣ ಹಸಿರು ತೋಟಗಳ ನಿರ್ಮಾಣದೊಂದಿಗೆ ಮಧ್ಯಾಹ್ನದ ಊಟಕ್ಕಾಗಿ ತಾಜಾ ಹಸಿರು ತರಕಾರಿಗಳು, ತೆಂಗಿನ ಮರಗಳು, ಫಲಭರಿತ ಅಡಿಕೆ, 300ಕ್ಕೂ ಅಧಿಕ ಬಾಳೆಗಿಡಗಳು, ಅನಾನಸು, ಪಪ್ಪಾಯ, ತೊಂಡೆ, ಸೋರೆ, ಕುಂಬಳ, ಅಲಸಂಡೆ, ನುಗ್ಗೆ, ದೀವಿನಲಸು ಹೀಗೆ ರುಚಿಯಾದ ಹಣ್ಣು ಹಂಪಲುಗಳು ಹೀಗೆ ಶಾಲೆಯ ಫಲಭರಿತ ತೋಟವು 2010ನೇ ವರ್ಷದಿಂದೀಚೆ ಕಂಗೊಳಿಸುತ್ತಿದೆ. ಮಣ್ಣಿನ ಫಲವತ್ತತೆಯತ್ತ ಕೂಡಾ ಗಮನ ನೀಡಿದ್ದಲ್ಲದೆ, ತ್ಯಾಜ್ಯವಸ್ತುಗಳನ್ನು ಬೇರ್ಪಡಿಸುವ ನಿಗದಿತ ಕ್ರಮವೂ ಬಹಳ ಸುಸೂತ್ರವಾಗಿ ನಡೆಸುತ್ತಾ ಪರಿಸರ ನೈರ್ಮಲ್ಯತೆ ಮತ್ತು ಸೌಂದರೀಕರಣ ಮಗುವಿನ ಸರ್ವತೋಮುಖ ಬೆಳವಣಿಗೆಯೆಡೆ ಬಹಳ ಪರಿಣಾಮವನ್ನು ಬೀರುತ್ತಿದೆ. ಮಗುಸ್ನೇಹಿ ಶಾಲೆಯ ಸಂಪೂರ್ಣವಾದ ಚಿತ್ರಣವನ್ನು ಈ ಶಾಲೆಯ ಎಲ್ಲಾ ರಂಗದಲ್ಲೂ ನಾವು ಕಾಣಬಹುದಾಗಿದೆ.

ಈ ಬೆಳವಣಿಗೆಯು ಸುಪ್ರಸಿದ್ಧವಾಗಿ ತ್ರಿಪುರಾ, ನಾಗಾಲ್ಯಾಂಡ್ ಮೇಘಾಲಯ ಸರಕಾರದ ವಾರ್ತಾ ಇಲಾಖೆಗಳೂ ಇಲ್ಲಿ ಆಗಮಿಸಿ ಅಧ್ಯಯನವನ್ನು ನಡೆಸಿದ್ದು ಗಮನಾರ್ಹ. ಇದಲ್ಲದೆ ಶಾಲೆಯು ಶಿಕ್ಷಣ ಕ್ಷೇತ್ರದಲ್ಲಿ ಕೂಡಾ ಅತ್ಯುತ್ತಮವಾಗಿ ವಿದ್ಯಾರ್ಥಿಗಳನ್ನು ಬೆಳೆಸಿಕೊಂಡು ನವೀನ ಮತ್ತು ಅನನ್ಯ ಶಿಕ್ಷಣ ರೀತಿಯನ್ನು ಅಳವಡಿಸುತ್ತಾ ಪ್ರತೀ ಹಂತ ಹಂತಗಳಲ್ಲೂ ಹಿರಿದಾದ ಸ್ಥಾನದಲ್ಲಿದ್ದು ಪ್ರಶಸ್ತಿಗೆ ಪಾತ್ರವಾಗಿದ್ದನ್ನೂ ನೆನಪಿಸುತ್ತೇವೆ.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದದ್ದು ಅಭಿವೃದ್ಧಿಯೆಡೆ ಪರಿಪಕ್ವ ತಿಳುವಳಿಕೆ, ಪರಿಕಲ್ಪನೆಯನ್ನು ಸರಿಯಾಗಿ ಅರ್ಥೈಸಿಕೊಂಡು ಈ ನಿಟ್ಟಿನಲ್ಲಿ ಯೋಜನೆಯನ್ನು ಅನುಷ್ಠಾನಿಸುವುದು, ಮೌಲ್ಯಗಳನ್ನು ಈ ಕಾರ್ಯಗಳೊಳಗೆ ಅಳವಡಿಸುತ್ತಾ ಗುಣಮಟ್ಟದ ಬೆಳವಣಿಗೆಯ ದೂರದೃಷ್ಟಿಯನ್ನು ಹೊಂದಿರುವ ವ್ಯಕ್ತಿತ್ವ ಶ್ರೀ ಅಬೂಬಕ್ಕರ್‌ರವರದ್ದಾಗಿದ್ದದ್ದು ಈ ಒಂದು ಸುಂದರವಾದ "ನಮ್ಮೂರ ಮಗು ಸ್ನೇಹಿ ಶಾಲೆ" ಒಂದು ಮಾದರಿ ಶಾಲೆ ಅನ್ನುವ ಮಹತ್ವದ ಬದಲಾವಣೆಯಾಗಿ ಹೊರತರಲು ಸಾಧ್ಯವಾಗಿದೆ ಅನ್ನುವುದನ್ನು ನಾವು ಗಮನಿಸಿದ್ದೇವೆ. ಈ ನಿಷ್ಠೆಯ ಪ್ರಯತ್ನಕ್ಕೆ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಪರಿಸರ ಶಾಲೆ ಪ್ರಶಸ್ತಿ, ಹಸಿರು ಶಾಲೆ ಪ್ರಶಸ್ತಿ, ಸ್ವಚ್ಛ ವಿದ್ಯಾಲಯ ಪ್ರಶಸ್ತಿ ಹೀಗೆ ಪ್ರಶಸ್ತಿಗಳ ಸರಮಾಲೆಗಳಿಗೆ ಶಾಲೆ ಹಾಗೂ ಶ್ರೀ ಅಬೂಬಕ್ಕರ್‌ರವರು ಪಾತ್ರರಾಗಿದ್ದಾರೆ.

ಆತ್ಮೀಯರಾದ ಶ್ರೀ ಅಬೂಬಕ್ಕರ್‌ರವರನ್ನು ಪಡಿ-ವೆಲೊರೆಡ್ ತನ್ನ ರಜತ ಸಂಭ್ರಮದ ವಿಶೇಷ ಸಂಧರ್ಭದಲ್ಲಿ ಗೌರವಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತಿದೆ. ವೆಲೊರೆಡ್ ಪರಿಕಲ್ಪನೆಯ ಅನುಷ್ಠಾನದ ಸಾಧನವಾಗಿ ಅದರ ಮೂಲ ಆಶಯವನ್ನು ಶಿಕ್ಷಣ ಸಂಪನ್ಮೂಲ ಕೇಂದ್ರಗಳಲ್ಲಿ ತೊಡಗಿಸುತ್ತಾ ಜನಸಂಘಟನೆ-ಜನಾಂದೋಲನಗಳ ಮೂಲಕ ಮುಖ್ಯವಾಗಿ ಶಿಕ್ಷಣ, ಮಕ್ಕಳ ಹಕ್ಕುಗಳು ಮತ್ತು ರಕ್ಷಣೆ ಕಾರ್ಯದಲ್ಲಿ ಇನ್ನಷ್ಟು ಪರಿಣಾಮಕಾರಿಯಾಗಿ ಸಮುದಾಯವನ್ನು ಮುಂದೊಯ್ಯುವಂತಾಗಲಿ ಅನ್ನುವ ಹಾರೈಕೆ ನಮ್ಮದಾಗಿದೆ.



**ಜಾಯ್ಸ್ ವಾಟ್ಸನ್**
ಪಡಿ ಬಳಗದ ಪರವಾಗಿ

# Functioning Of Documentation And Research Unit Of PADI

PADI-VALORED has developed its library in 1993 with most of books related to teachers, community schools, in order to cater to the concept of the Project 'VALUE ORIENTED EDUCATION IN GOVERNMENT SCHOOLS'.

Active Teacher's Networks have come together to learn unique and innovative themes related to the school curriculum, practicing skills to improve the handwriting in different style very specially Italic, classes of subjects like English, Maths and science under the expert guides which were projected later as Resource Centres. These members are the members of Education Resource Centres and the learning materials become the resources to Library and model presented such as Teaching-learning Materials, masquerade for theatre shows, street plays which are very much useful in creating awareness. Thus it began with creative, imaginative, artistic, innovative and ingenious human resource team.

Initially a STUDY "Situation of Primary Education in D.K" has taken up in the year 1994-95 under the guidance of our Founder Dr. Desmond D'Abreo. Through this study imperative points were taken to build the Community participation in the development field of Education which later turned into Education Resource Centers and finally the Community Owned Federations in 2 districts.

This Unit has given more importance towards the curriculum and pressuring to teach on Local customs and observances to be involved in curriculum are very easily understandable to the children. 1993-95 Government introduced ODUVA AATA text book, during this time it was prepared a module for teachers how to implement this text book in class room.

In 1995-96 the members of centre were mostly Educationists, thinkers and Teachers. They felt the need of having newsletters with relevant contents for sharing the knowledge, experience with the likeminded. They started with a newsletter named 'Mathukathe' later it has been Registered NEWS LETTER SHIKSHANA MATHUKATHE in November 2000, it has taken as activity under the PRERANHA Education Development & Research Trust which was mainly formed for the development actitivities of community representatives. This is continued till 2009. The collection of the Mathukathe & Shikshana mathukathe has consisting with wonderful articles subsists in PADI Documentation Unit. In this Unit one can understand the situations of those days in the development analysis by reading these Newsletters.

Keeping in mind of all categorized children we have given importance to Ashram schools of Dakshin Kannada and Udupi, A study has been taken in the year 2005 i.e. SITUATION OF CHILDREN IN ASHRAM SCHOOLS. With the outcome, an Advocacy process been continued with the discussions & consultations with the related department, Government consequence a difference in the thoughts and government policies too.

A visit to Rishi Vally Education Centre, Andhra Pradesh was a study of Quality and value based Education, which was in fame. This education foundation has particular goal to build the human values, intelligence and the generosity of spirit in students, to create love of nature and a concern for mankind. Its great study for all our Resource persons and really the experience enriched to way forward in the VALORED concept. This is also one of the major programs of Research Plan.

Keeping in mind child rights a workshop has been organized on Painting and produced Child related painting which is a mode of expression of children problems 25 years back. The outcome leads the team to deeper thoughts, which were taken very seriously and given importance through the Advocacy with the concerned wherein the efforts continued to bring changes in education as well child rights and protection.

A film titled SAAKSHI, the documentary on the Migration And Child Labour. An effort of stretch the concepts of Value Based Education widely in community. In commemoration of 10 years and 15 years service of VALORED, we have composed child related songs in a cassette NAMMA MAKKALU i.e. in 2002 and a film DHWANI has been produced on the outcome of VALORED concept i.e. in 2006-07 respectively.

Thus starting Library Resource Unit and Research & Study, now PADI has wide range in collection of books pertaining to Children Gender sensitivity, Women, various ACTs and policies, health HIV /AIDS, civil rights, Dalith rights, Education such more than 3000 books. Very specially the collection of books written by our founder and great Visionary Dr. Desmond D'Abreo which is inspiring one to the Development practitioners/Workers.

To bring the change in Quality education PADI-VALORED come to know the base problem in the curriculum of Teacher Education. Hence in the year 2011-14 and in the year 2017-20 a very keen work is going on along with the DIET.

This situational analysis of Education system evaluated the text books of primary schools, D.Ed. curriculum Analysis, Surveys, FGD's were helped to critically analysis of quality education. Time to time problem and situational analysis helped to develop strong tools for advocacy.

HOME WORK IN SCHOOL, a study in Dakshina Kannada has been done in 2016-17 to understand the impact of homework on children. This study was

taken to understand the practicality of Home works in children Education. The outcome and understanding by this study is Home work methodology is not a child friendly and this is forwarded to the Government and is in process and advocating to bring-up the universal policies in this regard.

Also in 2016-17 A RTE Stock takings in Karnataka is a remarkable study. We opted 4 educational blocks of the Karnataka, 580 schools were surveyed with the help of PAFRE network. The purpose of this stock taking is to ensure the implementation of RTE in the schools. It is an indeed clear that most of the schools still does not having the basic amenities, a no infrastructures in the schools and the Act is not been followed. The Advocacy process in this regard is going on.

Other documentation includes Magazines Articles, Paper Cuttings, Various IEC material related to education and on child right publications, Gazetted order, circulars with relation to Primary education and child right. Audio visuals and videos which could be enlightening for teacher children and community. Library is accessed by development work practitioners, teachers, Research students, resources persons and PADI staff. PADI has digitalized library in place where one can get information from our official website.

PADI produces IEC materials related to its Projects according the concepts, activities, the Situations/Problems, category wise viz children, gender, schools, Panchayath, Departments, Rules, Acts, Girl Child, Child Labour and Child Marriages. That is Wall Papers, Handbills, Posters.

Now opted the present technology PADI has its own website wherein one can get all the ongoing activities and library of PADI organization through www.padivalored.com

All the above products of PADI Documentation and Research Unit are playing a great role to make known the concepts in an easy way, whoever can understand the problems, strategically thoughts, and pain of unprivileged. Especially the lines of songs automatically attract the listener or viewer towards the children's feelings. Really the Products are turned to thought provoking.

We are greatly thankful to all the Respectful Resource Persons, Teachers, Government Departments, Voluntary Organizations, Artists, Writers, Film Supportive personnel's, Research Guides, Statisticians & Consultants for all their supports in the respective period shared their concern and forethoughts to bring up this Unit. We welcome all likeminded to join with us and give your support in the transformation deeds of the Organisation.

✍ **CHANDRASHEKAR**
Documentation Coordinator

Support: **Joicy Watson,**
Office Manager

# ಪಡಿ ಮತ್ತು ನಾವು
# ನೆನಪಿನಾಳದಿಂದ ..........

# ಡೆಸ್ಮಂಡ್‌ರವರ ಆಶಯಗಳ ಬೆನ್ನೇರುತ್ತಾ..........
# ..........ಸಾಗಿವೆ 25 ಸಂತೃಪ್ತ ಸಂವತ್ಸರಗಳು



**ಐಡಾ ಡಿಸೋಜ,** ಉಪನ್ಯಾಸಕರು
ಪ್ರಸನ್ನ ಸ್ಕೂಲ್ ಆಫ್ ಪಬ್ಲಿಕ್ ಹೆಲ್ತ್
ಮಾಹೆ ಮಣಿಪಾಲ
(ವೆಲೊರೆಡ್ ಯೋಜನೆಯ ಸ್ಥಾಪಕ ತಂಡದ ಸದಸ್ಯರು)

ಈಗ ಪಡಿ ವೆಲೊರೆಡ್ ತನ್ನ 25 ಯಶಸ್ವಿ ಸಂವತ್ಸರಗಳನ್ನು ಪೂರೈಸಿ ಸಂತೃಪ್ತಿಯಿಂದ ಬೀಗುತ್ತಿದೆ. ಅದು ಸಹಜವೆ. ಸಂಭ್ರಮಿಸಲು ಕಾರಣಗಳು ಹಲವಾರು. **'ಆಡು ಮುಟ್ಟದ ಸೊಪ್ಪಿಲ್ಲ'** ಎನ್ನುವ ಹಾಗೆ ವೆಲೊರೆಡ್ ಕೈಗೆ ಎತ್ತಿಕೊಳ್ಳದ ಮಕ್ಕಳ ವಿಷಯಗಳಿಲ್ಲ. ಮಕ್ಕಳ ಹಕ್ಕುಗಳನ್ನು ಪ್ರತಿಪಾದಿಸಿ ಮಕ್ಕಳ ಸರ್ವತೋಮುಖ ಅಭಿವೃದ್ದಿಗೆ ದ.ಕ ಮತ್ತು ಉಡುಪಿ ಜಿಲ್ಲೆಯಲ್ಲಿ ಅಹರ್ನಿಶಿ ದುಡಿಯುತ್ತಿರುವ ಏಕೈಕ ಸಂಸ್ಥೆ ಪಡಿ ವೆಲೊರೆಡ್. ಇದರ ಹೆಗ್ಗಳಿಕೆಯು ಪಡಿ ವೆಲೊರೆಡ್ ತಂಡದ ಆಡಳಿತ ಮಂಡಳಿ, ಸಿಬ್ಬಂದಿಗಳಿಗೆ, ಶಿಕ್ಷಣ ಸಂಪನ್ಮೂಲ ಕೇಂದ್ರದ ಸದಸ್ಯರಿಗೆ, ಸ್ವಯಂಸೇವಕರಿಗೆ ಸಲ್ಲಬೇಕು. ಯಾಕೆಂದರೆ ಇದರ ಯಶಸ್ವಿಗೆ **'ಪಡಿ'**ಯುವರು ತಟ್ಟದ ಕದಗಳಿಲ್ಲ, ಬಳಸದ ಸಂಪನ್ಮೂಲಗಳಿಲ್ಲ, ಬಿಟ್ಟುಕೊಡದ ಅವಕಾಶಗಳಿಲ್ಲ. ಪೋಷಕರಿಂದ ಹಿಡಿದು ಮಕ್ಕಳ ರಕ್ಷಣಾ ಘಟಕದವರೆಗೂ, ಪಂಚಾಯತಿನಿಂದ ವಿಧಾನಸೌಧದವರೆಗೂ, ಶಿಶುವಿನಿಂದ ಹದಿಹರೆಯದವರೆಗೂ ಎಲ್ಲರನ್ನು ತನ್ನೊಂದಿಗೆ ಸೇರಿಸಿ ಕೊಂಡು ಮುನ್ನಡೆದಿದೆ, ನಡೆಯುತ್ತಲೇ ಇದೆ. ಅದಕ್ಕೇ ಈ ಸಂಭ್ರಮ.

ನನ್ನ ಮತ್ತು ವೆಲೊರೆಡ್ ಸಂಬಂಧ ವೃತ್ತಿಪರ ಹಾಗೂ ವ್ಯಕ್ತಿಗತ. 1993ರಲ್ಲಿ ನಾನು ಆಗ ತಾನೆ ರೆನ್ನಿಯವರೊಂದಿಗೆ ದಾಂಪತ್ಯ ಜೀವನಕ್ಕೆ ಕಾಲಿರಿಸಿದ್ದ ರಮ್ಯ ಕಾಲ. ವೃತ್ತಿ ಪರವಾಗಿ ಸಾಕ್ಷರತಾ ಅಂದೋಲನದಲ್ಲಿ ಸರಕಾರದೊಂದಿಗೆ ಬಹಳ ನಿಕಟವಾಗಿ ಕಾರ್ಯನಿರ್ವಹಿಸಿದ ಅನುಭವ ಹಸಿಯಾಗಿತ್ತು ಹಾಗೂ ಆಶಾದಾಯಕವಾಗಿತ್ತು. ಸಮಾಜದ ಆಗುಹೋಗುಗಳ ಬಗ್ಗೆ, ಅನ್ಯಾಯಗಳ ಬಗ್ಗೆ ಅಸಹನೆ ಇತ್ತು. ರೆನ್ನಿಯವರು ಕರ್ನಾಟಕದ ವಿವಿಧ ಭಾಗಗಳಲ್ಲಿ ದುಡಿದು ಅಸಮಾನತೆಯನ್ನು ಹೋಗಲಾಡಿಸಲು ಏನಾದರೂ ಸಾಧಿಸಬೇಕೆಂದು ಹಣಾಹಣಿಯಲ್ಲಿದ್ದರು, ನಮ್ಮಿಬ್ಬರ ತುಡಿತಗಳು, ಆಶಯಗಳು ಒಂದೇ ಆಗಿದ್ದವು. ಇದೇ ಸಂದರ್ಭದಲ್ಲಿ ಡಾ. ಡೆಸ್ಮಂಡ್ ಡಿ. ಅಬ್ರಿಯೋರವರು ಹಾಗೂ ಶ್ರೀಮತಿ ಮಾರ್ಗರೆಟ್ ಅಬ್ರಿಯೋರವರು ಆಗ ತಾನೇ ಮಂಗಳೂರಿಗೆ ಮರಳಿದ್ದರು. ಅಭಿವೃದ್ಧಿಯ ಪರಿಕಲ್ಪನೆಯನ್ನು ಬಹಳ ಆಳವಾಗಿ ಅರ್ಥೈಸಿಕೊಂಡ ಅರವತ್ತರ ಹಿರಿಯ ಚೇತನ, ಮಹಾನ್ ವಿದ್ವಾಂಸ, ಪ್ರಾದೇಶಿಕ ಹಾಗೂ ಅಂತರಾಷ್ಟ್ರೀಯ ಮಟ್ಟದ ವಿವಿಧ ಸ್ತರಗಳಲ್ಲಿ ದುಡಿದು ಮಾಗಿದ ಜೀವನ ಅನುಭವಗಳ ಆಗರ. ಅವರಿಗೆ ಮಂಗಳೂರು ಹೊಸತೇನಲ್ಲ. ದಶಕದ ಹಿಂದೆಯೇ ಮಂಗಳೂರಿನಲ್ಲಿ **'ಡೀಡ್ಸ್'** ಅನ್ನುವ ಸ್ವಯಂ ಸೇವಾ ಸಂಸ್ಥೆಯನ್ನು ಸ್ಥಾಪಿಸಿದ್ದರು. ಶ್ರೀಮತಿ ಮರ್ಲಿನ್ ಮಾರ್ಟಿಸ್‌ರವರ ಸುಪರ್ದಿಯಲ್ಲಿ ಅನೇಕ ಆ್ಯಕ್ಟಿವಿಸ್ಟ್‌ಗಳ ಸಾಂಗತ್ಯದಲ್ಲಿ ಅಧ್ಯಯನ, ಚಿಂತನೆ, ಸಂಘಟನೆ, ಕಲಾ ಮಾಧ್ಯಮಗಳ ಮೂಲಕ ಜನರನ್ನು ಹರಿವಿಗೆ ಹಚ್ಚುವಲ್ಲಿ ಡೀಡ್ಸ್ ಮುಂಚೂಣಿಯಲ್ಲಿತ್ತು. ಇಂದಿಗೂ ಮಹಿಳಾ ಹಕ್ಕುಗಳ ಪ್ರತಿಪಾದನೆಗೆ ಮುಡಿಪಾಗಿರುವ ಏಕೈಕ ಸಂಸ್ಥೆ ಡೀಡ್ಸ್. ಅವರ 40 ವರ್ಷಗಳ ಅನುಭವಗಳಲ್ಲಿ ಡಾ. ಡೆಸ್ಮಂಡ್ ಕಂಡುಕೊಂಡ ಸತ್ಯ ಅಂದರೆ, ಸಮಾಜದ ಅಸಮಾನತೆಗೆ, ಶೋಷಣೆಗೆ, ದಾರಿದ್ರ್ಯಗಳಿಗೆ ಮುಖ್ಯ ಕಾರಣ ರಾಜಕೀಯ, ಧಾರ್ಮಿಕ, ಸಾಮಾಜಿಕ, ಆರ್ಥಿಕ ಅವ್ಯವಸ್ಥೆಗಳು. ಈ ಬಗ್ಗೆ 'From Developmet worker to Activist' ಅನ್ನುವ ಅವರ ಮಹತ್ವದ ಕೃತಿಯಲ್ಲಿ ಸವಿವರವಾಗಿ ಬರೆದಿದ್ದಾರೆ. ಈ ಪುಸ್ತಕವು ಅಭಿವೃದ್ಧಿ ರಂಗದಲ್ಲಿ ಕೆಲಸ ಮಾಡುವವರು ಓದಲೇ ಬೇಕಾದ ಕೈಪಿಡಿ ಎಂದರೆ ಎರಡು ಮಾತಿಲ್ಲ. ಈ ಅವ್ಯವಸ್ಥೆಗಳು ತೊಲಗಿ, ನ್ಯಾಯಯುತ ಜೀವನ ಸ್ಥಾಪನೆಯಾಗ

ಬೇಕೆಂದರೆ, ಮೌಲ್ಯಯುತ ಸಮಾಜ ನಿರ್ಮಾಣ ಆಗಬೇಕೆಂದು ದೃಢವಾಗಿ ನಂಬಿದ್ದರು. ಇದಕ್ಕಾಗಿ ಸಮಾನತೆ, ಶಾಂತಿ, ಸಹಬಾಗಿತ್ವ, ಒಳಗೊಳ್ಳುವಿಕೆ, ಲಿಂಗ ಸೂಕ್ಷ್ಮತೆ, ಕೋಮು ಸೌಹಾರ್ದ, ಪರಿಸರ ಪ್ರೇಮ, ಸಹಕಾರ ಮುಂತಾದ ಮೌಲ್ಯಗಳನ್ನು ಜನರು ಪರಿಪಾಲಿಸಬೇಕು ಹಾಗೂ ಈ ಬಗ್ಗೆ ಜನರನ್ನು ಜಾಗೃತಗೊಳಿಸುವುದು ನಮ್ಮ ಕರ್ತವ್ಯ ಎಂದು ತಿಳಿದಿದ್ದರು. ಈ ಮೌಲ್ಯಗಳನ್ನು ಮಕ್ಕಳಲ್ಲಿ ಎಳವೆಯಲ್ಲಿಯೇ ಮೂಡಿಸಿದಲ್ಲಿ, ಭವಿಷ್ಯದಲ್ಲಿ ಸುಂದರವಾದ ಸಮಾಜವು ಸೃಷ್ಠಿಯಾಗಲು ಸಾಧ್ಯ ಎಂದು ಕನಸು ಕಂಡಿದ್ದರು. ಇದಕ್ಕಾಗಿ ಇರುವ ಎಕೈಕ ರಹದಾರಿ **'ಶಿಕ್ಷಣ'**ಎಂಬುದನ್ನು ತನ್ನ ಅಗಾಧ ಅನುಭವಗಳಿಂದ ಖಾತ್ರಿಪಡಿಸಿಕೊಂಡಿದ್ದರು. ಆದರೆ ನಮ್ಮ ಪ್ರಸ್ತುತ ಶಿಕ್ಷಣ ಪದ್ದತಿಯಲ್ಲಿ ಅವರು ನಂಬಿಕೆಯನ್ನು ಕಳೆದುಕೊಂಡಿದ್ದರು. ಅದು ಅಹಿತಕರ ಸ್ಪರ್ಧೆಯಿಂದ ಕೂಡಿದ್ದು, ವಾಣಿಜ್ಯಮಯ ಆಗಿದೆ, ಉಳ್ಳವರ ಸೊತ್ತಾಗಿದೆ. **'ಶಿಕ್ಷಣವು ಮಗುಸ್ನೇಹಿ'** ಆಗಿರದೆ, ಮಗುವಿನ ಮನಸ್ಸಿನ ಮೇಲೆ ಒತ್ತಡ ಹೇರುತ್ತಿದೆ ಎಂದು ಟೀಕಿಸಿದ್ದರು. ಅವರು ಪೌಲ್ ಫ್ರೇರೆ, ಈವನ್ ಇಲ್ಲಿಚ್, ಬರ್ಟಂಡ್ರ್ ರಶೆಲ್‌ರವರ ಸಿದ್ಧಾಂತಗಳಿಂದ ಪ್ರಭಾವಗೊಂಡು, ನಿಜವಾದ ಶಿಕ್ಷಣವು ಜನರನ್ನು ಶೋಷಣೆಯಿಂದ ಮುಕ್ತಗೊಳಿಸುತ್ತದೆ ಹಾಗೂ ಅವರನ್ನು ಸಶಕ್ತರನ್ನಾಗಿಸುತ್ತದೆ. ಹಾಗೂ ನ್ಯಾಯಯುತ ಸಮಾಜವನ್ನು ನಿರ್ಮಿಸುತ್ತದೆ ಎಂದು ನಂಬಿದ್ದರು.

ಅದುದರಿಂದಲೇ ಇಂದಿನ ಮಕ್ಕಳನ್ನು ಕ್ರೀಯಾತ್ಮಕವಾಗಿ ಹಾಗೂ ಸಂತೋಷದಾಯಕ ಮೌಲ್ಯಯುಕ್ತವಾಗಿ ಬೆಳೆಸಲು ಪ್ರಸ್ತುತ ಶಿಕ್ಷಣದ ಗುಣಮಟ್ಟವನ್ನು ವೃದ್ಧಿಸಿ, ಶಿಕ್ಷಣವನ್ನು ಮಗುಸ್ನೇಹಿ ಮತ್ತು ಸಮಾಜಮುಖಿಯನ್ನಾಗಿಸಬೇಕು ಎಂಬ ಬೃಹತ್ ಆಶಯದಿಂದ ವೆಲೊರೆಡ್ ಯೋಜನೆಯನ್ನು 25 ವರ್ಷಗಳ ಹಿಂದೆ ಹುಟ್ಟುಹಾಕಿದ್ದರು. ತಮ್ಮ ಈ ಕನಸಿನ ಕೂಸನ್ನು ಯಾರ ಮಡಿಲಿಗೆ ಸೇರಿಸುವುದು ಎಂಬ ಹುಡುಕಾಟದಲ್ಲಿದ್ದಾಗ ಡೆಸ್ಮಂಡ್ ದಂಪತಿಗಳಿಗೆ ಕಂಡಿದ್ದು ಶೀಯುತ ರೆನ್ನಿ ಡಿಸೋಜರವರು. ಅವರ ಸರಳ, ಸಜ್ಜನ, ಹಾಗೂ ಜನಪರ ಕಾಳಜಿ ಡೆಸ್ಮಂಡ್ ದಂಪತಿಗಳಿಗೆ ಮೆಚ್ಚುಗೆಯಾಗಿತ್ತು. ಡಾ। ಡೆಸ್ಮಂಡ್‌ರವರು ನಮ್ಮಿಬ್ಬರ ತುಡಿತಗಳಿಗೆ ಮೂರ್ತ ರೂಪ ಕೊಟ್ಟು ಅದನ್ನು ಸೂಕ್ತವಾಗಿ ಹರಿಯಲು ವೆಲೊರೆಡ್ ಒಂದು ಮಾಧ್ಯಮ, ವೇದಿಕೆಯನ್ನಾಗಿ ರೂಪಿಸಿದ್ದರು.

ತಮ್ಮ ಕನಸುಗಳನ್ನು ಸಕಾರಣವಾಗಿ ಹಾಗೂ ಆಶಯಪೂರ್ಣವಾಗಿ ರೆನ್ನಿ ದಂಪತಿಗಳಿಗೆ ಅರೆದು, ಕೊರೆದು ಮನನಗೊಲಿಸಿ, ಸಂಸ್ಥೆಯ ತಳಪಾಯ ಹಾಕಿ, ಆರ್ಥಿಕ ನೆರವನ್ನು ಆಯೋಜಿಸಿದ್ದರು. ಕ್ರಮೇಣ ತನ್ನ ಅನಾರೋಗ್ಯದಿಂದಾಗಿ ನೇಪಥ್ಯಕ್ಕೆ ಸರಿದರು. 2000 ಇಸವಿಯಲ್ಲಿ ಅಭಿವೃದ್ಧಿ ರಂಗವು ಮಹಾನ್ ಚೇತನವೊಂದನ್ನು ಕಳೆದುಕೊಂಡಿತ್ತು. ತದನಂತರ ರೆನ್ನಿಯವರು ಪಡಿ ವೆಲೊರೆಡ್ ಸಂಸ್ಥೆಯನ್ನು ಬಹಳ ಮುತುವರ್ಜಿಯಿಂದ ಮುಂದುವರಿಸಿ, ಡೆಸ್ಮಂಡ್‌ರವರ ಆಶೋತ್ತರಗಳನ್ನು ಹಂತಹಂತವಾಗಿ ಈಡೇರಿಸುವಲ್ಲಿ ಫಲಪ್ರದವಾಗಿದ್ದಾರೆ. ಮಕ್ಕಳ ಅಭಿವೃದ್ಧಿಗೆ ಕಾಯಾ ವಾಚ ಮನಸ್ಸ ದುಡಿಯುತ್ತಿದ್ದು ಅದರ ಸಂತೃಪ್ತಭಾವ ಸದಾ ಜಿನುಗುತ್ತಿದೆ. ಹಾಗೂ ಸದಾ ಇತರರನ್ನು ಪ್ರೇರೆಪಿಸುತ್ತಿದೆ.

ಇಂದು ಪಡಿ ವೆಲೊರೆಡ್ ಸಂಸ್ಥೆಯಾಗಿ ಉಳಿದಿಲ್ಲ, ಒಂದು ಚಳುವಳಿಯಾಗಿ ಸಾಗುತ್ತಿದೆ. ಸಾವಿರಾರು ಶಿಕ್ಷಣಾಸಕ್ತರು ಅಂದರೆ ಪಾಲಕರು, ಶಿಕ್ಷಕರು, ಚಿಂತಕರು, ಸರಕಾರಿ ಅಧಿಕಾರಿಗಳು, ಸ್ವಯಂಸೇವಾ ಸಂಸ್ಥೆಗಳು, ಸಮುದಾಯ ಸಂಘಟನೆಗಳು, ಧಾರ್ಮಿಕ ಸಂಸ್ಥೆಗಳು ಪಡಿಯೊಂದಿಗೆ ಕೈಜೋಡಿಸಿದ್ದಾರೆ. ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಮೂಲಕ ಜನಪರ ಕಾಳಜಿಯುಳ್ಳವರು ಸ್ವಯಂಪ್ರೇರಣೆಯಿಂದ ಯಾವುದೇ ಫಲಾಪೇಕ್ಷೆಯಿಲ್ಲದೆ ಮಕ್ಕಳ ಹಕ್ಕುಗಳಿಗಾಗಿ ಹೋರಾಡುತ್ತಿದ್ದಾರೆ.

ಸರಕಾರದ ಧನಾತ್ಮಕ ಸಹಯೋಗದೊಂದಿಗೆ ಸರಕಾರದ ಎಲ್ಲಾ ನೀತಿ ಯೋಜನೆಗಳಿಗೆ ಪಡಿಯು ಟೀಕಾತ್ಮಕವಾಗಿ ಪ್ರತಿಕ್ರಿಯಿಸುತ್ತದೆ. ಅಲ್ಲದೆ ಕ್ರೀಯಾತ್ಮಕವಾಗಿ ಕೂಡಿ

ಕಾರ್ಯನಿರ್ವಹಿಸುತ್ತದೆ. ಇಂದು ಸರಕಾರದ, ಯಾವುದೇ ಮಗು ಕೇಂದ್ರಿತ ಕಾರ್ಯಕ್ರಮಗಳು ಪಡಿಯ ಅನುಪಸ್ಥಿತಿಯಲ್ಲಿ ಜರಗುವುದು ಬಹಳ ಅಪರೂಪ, ಇಲ್ಲವೇ ಇಲ್ಲ ಎಂದರೂ ಸರಿಯೇ. ಪಡಿಯ ಅನೇಕ ಕಾರ್ಯಕ್ರಮಗಳು, ಕಾರ್ಯವೈಖರಿಯೂ ಅವುಗಳ ಪ್ರಯೋಜನಗಳ ಸುದೀರ್ಘ ಪಟ್ಟಿಯೂ ಅವರ ವರದಿಗಳಲ್ಲಿ ಲಿಖಿತಗೊಂಡಿದೆ. ಯಾಕೆಂದರೆ ದಾಖಲಾತಿ ದೃಷ್ಟಿಯಲ್ಲಿ ವೆಲೊರೆಡ್‌ಗೆ ವಿಶೇಷ ಸ್ಥಾನ. ಇವರ ಕೆಲವು ವಿಶೇಷತೆಗಳನ್ನು ನಮೂದಿಸದಿದ್ದಲ್ಲಿ ಈ ಲೇಖನವು ಅಪೂರ್ಣ ಎಂದೆ ಭಾವಿಸುತ್ತೇನೆ.

ವೆಲೊರೆಡ್‌ನ ವಿಶೇಷತೆ ಎಂದರೆ, ಇದರ ಎಲ್ಲಾ ಯೋಜನೆಗಳನ್ನು ಸಿಬ್ಬಂದಿಯವರು ಕಾರ್ಯಕಾರಿ ಸಮಿತಿಯವರೂ ಹಾಗೂ ಸ್ವಯಂಸೇವಕರನ್ನು ಒಳಗೊಂಡು ಚರ್ಚಿಸಿ ಅಂತರಾಷ್ಟ್ರೀಯ ಗುಣಮಟ್ಟದಲ್ಲಿಯೇ ರಚಿಸಲ್ಪಡುತ್ತದೆ. ಹಣಕಾಸಿನ ಎಲ್ಲಾ ವ್ಯವಹಾರಗಳು, ಲೆಕ್ಕಪತ್ರಗಳು ಮುಕ್ತವಾಗಿ ಚರ್ಚಿಸಲ್ಪಡುತ್ತದೆ. ಹಾಗೂ ಲೆಕ್ಕ ಪತ್ರ ಶೋಧಕರಿಂದ ಪರಿಶೀಲನೆಗೆ ಒಳಪಡುತ್ತದೆ ಹಾಗೂ ಸೂಕ್ತ ಪದ್ದತಿಯಿಂದ ಸಿಬ್ಬಂದಿಗಳ ಆಯ್ಕೆ, ಕಾಲಕಾಲಕ್ಕೆ ತರಬೇತಿ, ಅರೋಗ್ಯ (ESI) ವಿಮಾ ಸೌಲಭ್ಯ, ಪ್ರತಿಯೊಬ್ಬ ಸಿಬ್ಬಂದಿಯ ಕಾರ್ಯಕ್ಷಮತೆಯ ಮೌಲ್ಯಮಾಪನ, ಸಂವಹನಕ್ಕಾಗಿ ವಾಟ್ಸ್‌ಪ್ ಗ್ರೂಪ್ ಇಂತಹ ಸಿಬ್ಬಂದಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸರಕಾರೇತರ ಸಂಸ್ಥೆ ಕೈಗೆತ್ತಿಕೊಳ್ಳುವುದು ಬಹಳ ವಿರಳ. ಅದು ಪಡಿ ವೆಲೊರೆಡ್‌ನ ಹೆಗ್ಗಳಿಕೆ.

ಎಂ.ಎಸ್.ಡಬ್ಲ್ಯು, ಬಿ.ಎಸ್.ಡಬ್ಲ್ಯು, ಎಂ.ಬಿ.ಎ, ಎಲ್.ಎಲ್.ಬಿ, ಬಿ.ಎ, ಜರ್ನಲಿಸಂನ ಸುಮಾರು 40ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಪ್ರತಿ ವರ್ಷ ಬಂದು ತರಬೇತಿ ಪಡೆಯುತ್ತಿದ್ದಾರೆ. ಈ ವಿದ್ಯಾರ್ಥಿಗಳ ಬಗ್ಗೆ ಅತೀವ ಕಾಳಜಿವಹಿಸುವ ಪಡಿ ವೆಲೊರಡ್ ಎಲ್ಲಾ ಕೋರ್ಸ್‌ಗಳಿಗೂ ಪಠ್ಯಕ್ರಮವನ್ನು ತಯಾರಿಸಿ, ಅವಧಿಗಳನ್ನು ನಿಗದಿಗೊಳಿಸಿ, ಕ್ರೆಡಿಟ್‌ಗಳನ್ನು ರೂಪಿಸಿ, ಮೇಲ್ವಿಚಾರಕರನ್ನು ನಿಯೋಜಿಸಿ ತರಬೇತಿ ನೀಡುವುದು ಅಲ್ಲದೆ ಪ್ರತಿ ವಿದ್ಯಾರ್ಥಿಗಳಿಗೂ ಅಂಕಗಳನ್ನು ನೀಡಿ ಪ್ರಮಾಣಪತ್ರವನ್ನು ಕೊಡುತ್ತಾರೆ. ಇದು ಎನ್.ಜಿ.ಒಗಳಲ್ಲಿ ಬಹಳ ಅಪರೂಪವಾದ ಪ್ರಕ್ರಿಯೆ.

ಸರಕಾರದ ಯಾವುದೇ ಹೊಸ ನೀತಿ, ಯೋಜನೆಗಳು ಬಂದಲ್ಲಿ ಅದನ್ನು ಮೊದಲು ಅಧ್ಯಯನ ಮಾಡಿ ಸಾರ್ವಜನಿಕರನ್ನು ಕರೆಸಿ ಆ ಬಗ್ಗೆ ಚರ್ಚೆ ಮಾಡುವುದು ಮಾತ್ರವಲ್ಲದೆ ಅದರ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮವು ಪಡಿ ವೆಲೊರೆಡ್‌ನ ಪ್ರಥಮ ಆಧ್ಯತೆ. ಅಂತೆಯೇ ಅದರ ಅನುಷ್ಠಾನದಲ್ಲಿಯೂ ಸರಕಾರದೊಂದಿಗೆ ಹಾಗೂ ಸಾರ್ವಜನಿಕರೊಂದಿಗೆ ಸಂಪೂರ್ಣ ಸಹಕಾರ ನೀಡುತ್ತದೆ. ನಮ್ಮ ದೇಶದ ಸಂವಿಧಾನವನ್ನು ಉತ್ಕೃಷ್ಟವಾಗಿ ಗೌರವಿಸುತ್ತದೆ ಅಲ್ಲದೇ, ಕಾರ್ಯನುಷ್ಠಾನದಲ್ಲಿ ಆಧ್ಯ ಸ್ಥಾನ ನೀಡುತ್ತಿದೆ.

ಪಡಿ ವೆಲೊರೆಡ್ ಒಂದು ಮಾದರಿ ಸಂಸ್ಥೆ, ಒಂದು ವಿರಳವಾದ ಸಂಘಟನೆ, ಇದರ ಬೆಳ್ಳಿ ಸಂಭ್ರಮಕ್ಕೆ ಎಷ್ಟೊಂದು ಕಾರಣಗಳು ಇದರ ಶ್ರೇಯಸ್ಸು ಅವರ ಎಲ್ಲಾ ಸ್ವಯಂಸೇವಕರಿಗೆ, ಇಡೀ ವೆಲೊರೆಡ್ ತಂಡದವರಿಗೆ ಹಾಗೂ ಪಡಿಗೆ ದಾನಿ ಸಂಸ್ಥೆಯಾಗಿರುವ Bread For the World Germany ಸಂಸ್ಥೆಗೂ ಮತ್ತು ಪಡಿಗೆ ಮಾರ್ಗದರ್ಶಕರಾಗಿ ಯೋಜನೆಗಳ ಅನುಷ್ಠಾನಕ್ಕೆ ಸಮಯೋಚಿತ ಸಲಹೆ ಸೂಚನೆಗಳನ್ನು ನೀಡುತ್ತಾ ಇರುವ ಆ್ಯನಿ ಜಯರಾಜ್ ದಂಪತಿಗಳಿಗೂ ಸಲ್ಲುತ್ತದೆ. ಬಹಳ ಮುಖ್ಯವಾಗಿ ಇಡೀ ಪಡಿ ವೆಲೊರೆಡ್ ಸಂಸ್ಥೆಯನ್ನು ಕಳೆದ 25 ವರ್ಷಗಳಿಂದ ಸಮರ್ಥವಾಗಿ ನಿರ್ವಹಿಸುತ್ತಿರುವ ಇದರ ನಿರ್ದೇಶಕರಾದ ಶ್ರೀಯುತ ರೆನ್ನಿ ಡಿಸೋಜರವರಿಗೆ ಸಲ್ಲುತ್ತದೆ. ಪಡಿ ವೆಲೊರೆಡ್‌ನ ಸಹದ್ಯೋಗಿಗಳಿಗೆ ನನ್ನ ಹಾರ್ದಿಕ ಶುಭಾಶಯಗಳು. ಪಡಿ ವೆಲೊರೆಡ್ ಸಂಸ್ಥೆ ಮತ್ತಷ್ಟು ಬೆಳೆಯಲಿ ಮಕ್ಕಳ ಸ್ನೇಹಿ ಸಮಾಜವು ಬೇಗನೆ ನೆಲೆಯಾಗಲಿ ಎಂದು ಹಾರೈಸುತ್ತೇನೆ.

# ಪರಿಣಾಮಕಾರಿ ಶಿಕ್ಷಣಕ್ಕಾಗಿ ವೈಜ್ಞಾನಿಕ ಹಾದಿ



ಡಾ। ಜಯಂತ ಎಚ್.
ನಿಕಟಪೂರ್ವ ಅಧ್ಯಕ್ಷರು ಹಾಗೂ ಪ್ರಸ್ತುತ
ಸದಸ್ಯರು, ಪಡಿ ಆಡಳಿತ ಮಂಡಳಿ

ನೈಸರ್ಗಿಕವಾಗಿ ಪ್ರತಿಯೊಂದು ಜೀವಿಗೂ ತನ್ನ ಬದುಕನ್ನು ನಡೆಸಲು ಸಹಜ ಹುಟ್ಟು ಗುಣಗಳೇ ದಾರಿ ತೋರಿಸುತ್ತವೆ. ಹಸಿವು ಬಾಯಾರಿಕೆ, ಒಳ, ಹೊರಗಿನ ತೊಂದರೆಗಳಿಂದ ರಕ್ಷಣೆ, ಪರಿಸರದ ಜೊತೆಗಿನ ಹೊಂದಾಣಿಕೆ, ಅವುಗಳ ಮೇಲಿನ ಅವಲಂಬನೆ ಎಲ್ಲವೂ ಸಹಜವಾಗಿಯೇ ಅರಿವಿಗೆ ಬರುತ್ತಾ, ಕಾರ್ಯಪ್ರವೃತ್ತವಾಗುತ್ತಾ ಜೀವನ ಸಾಗುತ್ತದೆ. ಇಲ್ಲಿ ಎಲ್ಲಾ ತರಹದ ಏಳು ಬೀಳುಗಳೂ, ಅವುಗಳನ್ನು ಎದುರಿಸುತ್ತಾ ಪರಿಹರಿಸುತ್ತಾ ಸಾಗುವ ಹೆಜ್ಜೆಗಳೂ ಹೊಸತೇನಲ್ಲ ಎನ್ನುವ ರೀತಿಯಲ್ಲಿ ನಡೆಯುತ್ತವೆ.

ಆದರೆ ಮನುಷ್ಯನ ಪ್ರಸಕ್ತ ಜೀವನ ನಡೆಯನ್ನು ಗಮನಿಸಿದಾಗ ಎಲ್ಲವೂ ಸಹಜವಾಗಿಯೇ ನಡೆಯುತ್ತಾ ಇವೆ ಎನ್ನಲು ಬಹಳ ಕಷ್ಟವೆನಿಸುತ್ತದೆ. ತನ್ನ ಸುತ್ತಮುತ್ತಲಿನ ಪರಿಸರದ ಜತೆ ಹೊಂದಾಣಿಕೆಯಲ್ಲೇ ಬಹಳ ಒದ್ದಾಡುತ್ತಿರುವಂತೆಯೇ, ತನ್ನ ಸಹಚರರ ಜತೆಗೂ ಸಮತೋಲನ ಸಾಧಿಸಲಾಗದ ಸ್ಥಿತಿಯಲ್ಲಿ ಇರುವಂತೆ ಕಾಣುತ್ತದೆ. ತನ್ನ ಸಹಜ ಪ್ರವೃತ್ತಿಯಿಂದ ಬಹಳಷ್ಟು ದೂರವಾದಂತೆ ಅನಿಸಿದ ಕಾಲದಿಂದ ಸಮತೋಲನ ಕಾಪಾಡಲು ಶಿಕ್ಷಣ ವ್ಯವಸ್ಥೆ ರೂಪುಗೊಂಡಿದ್ದರೂ ಬಹಳಷ್ಟು ಸಾಧಿಸಬೇಕಾಗಿರುವುದು ವಿಪರ್ಯಾಸವೇ ಸರಿ. ಈ ಜೀವನ ನಡೆ ಮತ್ತೆ ಸಹಜವಾಗಿ ನಡೆಯಲು, ಅದಕ್ಕಿಂತ ಮುಂಚಿತವಾಗಿ ನಡೆ ಹಾದಿ ತಪ್ಪಿರುವ ಅರಿವು ಮೂಡಲು ಸರಿಯಾದ ಶಿಕ್ಷಣದ ವ್ಯವಸ್ಥೆಯೇ ಒಂದು ಪರಿಹಾರವೆಂದು ಎನಿಸುತ್ತದೆ.

ಈ ನಿಟ್ಟಿನಲ್ಲಿ ಶಿಕ್ಷಣ ವ್ಯವಸ್ಥೆಯ ಪರಿಣಾಮಕಾರಿ ಹೆಜ್ಜೆಗಳನ್ನು ರೂಪಿಸುವಲ್ಲಿ, ಬದಲಾವಣೆಗಳನ್ನು ತರುವಲ್ಲಿ ವೆಲೊರೆಡ್ ಅನೇಕ ಪ್ರಯತ್ನಗಳನ್ನು ಮಾಡುತ್ತಾ ಬಂದಿದೆ. ಈ ಸಂಸ್ಥೆಯ ಆಡಳಿತಾತ್ಮಕ ಹಾಗೂ ಕಾರ್ಯಕಾರಿ ವಿಭಾಗಗಳ ಕೆಲಸಕಾರ್ಯಗಳು ಇದಕ್ಕೆ ಪೂರಕವಾಗಿಯೇ ಸ್ಪಂದಿಸಿರುವುದು ಬಹಳ ಪ್ರೋತ್ಸಾಹದಾಯಕವಾಗಿದೆ. ಹಮ್ಮಿಕೊಂಡ ಚಟುವಟಿಕೆಗಳಲ್ಲಿ ಮಕ್ಕಳ ಮಾನಸಿಕ, ಬೌದ್ಧಿಕ ಯೋಗ್ಯತೆಗಳ ಬೆಳವಣಿಗೆಗೆ ಅಗತ್ಯವಿರುವ ಅನೇಕ ಆಯಾಮಗಳು ವೈಜ್ಞಾನಿಕ ಹಾದಿಯಲ್ಲಿ ಸಾಗಿವೆ. ವೈಜ್ಞಾನಿಕವೆಂದರೆ ಸಹಜವಾಗಿ ಆಲೋಚಿಸುವ, ತುಲನಾತ್ಮಕ ಮತ್ತು ವಿಶ್ಲೇಷಣಾತ್ಮಕವಾಗಿ ಚಿಂತಿಸುವ, ಪ್ರಶ್ನೆಮಾಡುವ, ತನ್ನನ್ನು ಈ ಪ್ರಕ್ರಿಯೆಗಳಲ್ಲಿ ತೊಡಗಿಸಿಕೊಳ್ಳುವ ಅವಕಾಶಗಳನ್ನು ಒದಗಿಸುವುದಾಗಿದೆ. ಮಕ್ಕಳಿಗಾಗಿ ರಂಗಚಟುವಟಿಕೆಗಳು, ಶೈಕ್ಷಣಿಕ ಮಾದರಿಗಳ ತಯಾರಿ, ಮುಖವಾಡಗಳ ರಚನೆ, ವಿಜ್ಞಾನ ಪಾಠದ ಪ್ರಯೋಗಗಳು, ವಿಜ್ಞಾನ ಚಟುವಟಿಕೆಗಳು ಉಲ್ಲೇಖಿಸ ಬಹುದಾದ ಕೆಲವೊಂದು ಅಂಶಗಳು. ಇವುಗಳಿಗೆ ಪೂರಕವಾಗಿ ನಡೆಯುತ್ತಿದ್ದ ಶಿಕ್ಷಕರ ಸಮೂಹದ ಭಾಗವಹಿಸುವಿಕೆ ಈ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು ಬಹಳಷ್ಟು ಸಹಕಾರಿಯಾಗಿವೆ. ಶಿಕ್ಷಕರ ಸಮಾಲೋಚನೆಗಳಿಂದ ಹೊಸ ಹೊಸ ವೈಜ್ಞಾನಿಕ ಚಟುವಟಿಕೆಗಳನ್ನು ರೂಪಿಸಲು ಸಾಧ್ಯವಾಗಿದೆ. ಇವುಗಳ ಫಲವಾಗಿ ಪಡಿ–ವೆಲೊರೆಡ್‌ನ ಜಾಲದ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗಾಗಿ, ಹೆತ್ತವರಿಗಾಗಿ, ಸಾರ್ವಜನಿಕರಿಗಾಗಿ ನಡೆಸಲಾದ ಅನೇಕ ಆಕಾಶ ವೀಕ್ಷಣೆ ಕಾರ್ಯಕ್ರಮಗಳು ಬಹಳಷ್ಟು ಕುತೂಹಲವನ್ನು ಹುಟ್ಟಿಸಿ ಅನೇಕ ಮೂಲಭೂತ ಪ್ರಶ್ನೆಗಳಿಗೆ ಉತ್ತರಗಳನ್ನು ಪಡೆದುಕೊಳ್ಳುವಲ್ಲಿ ಸಹಕಾರಿ ಆಯಿತು. ಕೆಲವೊಮ್ಮೆ ಈ ಕಾರ್ಯಕ್ರಮಗಳು ಸೂರ್ಯಾಸ್ತದಿಂದ ಸೂರ್ಯೋದಯದವರೆಗೂ ನಡೆದದ್ದು ವಿಶೇಷ. ಹಿಂದೊಮ್ಮೆ ನಡೆದ ವಿಜ್ಞಾನ ಸಂತೆ ಕಾರ್ಯಕ್ರಮವು ವಿಜ್ಞಾನದ ಪ್ರಯೋಗಗಳನ್ನು ಶಿಕ್ಷಕರಿಗೆ ವಿದ್ಯಾರ್ಥಿಗಳೇ ಪ್ರಾತ್ಯಕ್ಷಿಕೆಯ ಮೂಲಕ ಬೋಧಿಸುವ ಅವಕಾಶ ಕಲ್ಪಿಸಿತ್ತು, ಬೇರೆ ಬೇರೆ ಕೋನಗಳಲ್ಲಿ ವಿಜ್ಞಾನವನ್ನು ಸಾರ್ವಜನಿಕರಿಗೆ ತಿಳಿಸಿಕೊಡುವಲ್ಲಿ ಯಶಸ್ವಿಯಾಯಿತು. ಸಮುದಾಯದಲ್ಲಿನ ಎಲ್ಲರೂ ಸ್ವತಂತ್ರವಾಗಿ ಆಲೋಚಿಸುವ, ಅಳುಕಿಲ್ಲದೇ ಪ್ರಶ್ನೆ ಮಾಡುತ್ತಾ ತಮ್ಮ ಅನುಮಾನಗಳನ್ನು ಪರಿಹರಿಸಿಕೊಳ್ಳುವುದಕ್ಕೆ ಮತ್ತು ಆತ್ಮ ವಿಶ್ವಾಸದಿಂದ ಬದುಕುವುದಕ್ಕೆ ಈ ಚಟುವಟಿಕೆಗಳು ಬಹಳ ಸಹಕಾರಿಯಾಗಿವೆ.

ಏಕೆಂದರೆ ಸಮುದಾಯದ ಆರೋಗ್ಯಕರ ನಡವಳಿಕೆಗೆ ತನ್ನನ್ನು ತೊಡಗಿಸಿಕೊಳ್ಳಲು ಪ್ರತಿಯೊಬ್ಬರಿಗೂ ಅವಕಾಶಗಳು ಲಭಿಸುತ್ತಾ ಇರುತ್ತವೆ. ಈ ಸಂಸ್ಥೆ ಈಗಲೂ ಸಹ ಈ ದಿಕ್ಕಿನಲ್ಲಿ ಕಾರ್ಯೋನ್ಮುಖವಾಗಿದೆ, ಶಿಕ್ಷಣದ ವ್ಯವಸ್ಥೆಗೆ ಅದರ ಆರೋಗ್ಯಪೂರ್ಣ ಬೆಳವಣಿಗೆಗೆ ಪೂರಕವಾಗಿ ಕೆಲಸ ಮಾಡುತ್ತಿದೆ. ಮನುಜನ ಸಹಜ ಪ್ರವೃತ್ತಿಯನ್ನು ತಿಳಿದುಕೊಂಡು ಅದರ ಹಾದಿಯಲ್ಲಿ ನಡೆಯಲು ಅವಕಾಶ ನೀಡಿದಂತಾಗಿ, ಶಿಕ್ಷಣವು ನಿಜಾರ್ಥವನ್ನು ಕಂಡುಕೊಳ್ಳಲು ವೈಜ್ಞಾನಿಕ ಹಾದಿಯನ್ನು ತೋರಿಸಿದಂತಾಗಿದೆ.

***

# ವೆಲೊರೆಡ್ ನೆನಪುಗಳು

✍ **ಗೋಪಾಲ್ ಪೆರಾಜೆ** ಸುಳ್ಯ



ವೆಲೊರೆಡ್ ಮತ್ತು ನನ್ನ ಸಂಬಂಧ ಒಂದು ದಶಕಗಳಿಗೂ ಮೀರಿದ್ದು, ಸಂಸ್ಥೆಯ ಆರಂಭದಲ್ಲೆ ನಾನು ಅದರ ಜೊತೆಗೂಡಿದ್ದೆ. ಆ ದಿನಗಳಲ್ಲಿ ಸಂಸ್ಥೆಯ ಸಂಸ್ಥಾಪಕರಲ್ಲಿ ಓರ್ವರಾದ ಡೆಸ್ಮಂಡ್ ಅಬ್ರಿಯೋ ಅವರ ನೇತೃತ್ವ ಮತ್ತು ಮಾರ್ಗದರ್ಶನ ಸದಾ ನಮ್ಮ ಜೊತೆಗಿತ್ತು. ಅದರ ಫಲವಾಗಿ ಶಿಕ್ಷಣ ಕ್ಷೇತ್ರದ ಒಳ ನೋಟಗಳು ಜತೆಗೆ ಹಲವು ಶೈಕ್ಷಣಿಕ ಚಟುವಟಿಕೆಗಳನ್ನು ನಾವು ನಡೆಸುತ್ತಿದ್ದೆವು. ಆಗಿನ್ನು ಸರ್ವ ಶಿಕ್ಷಾ ಅಭಿಯಾನ ಜಾರಿಯಾಗಿರಲಿಲ್ಲ. ಇದರಿಂದಾಗಿ ನಮ್ಮ ಹೊಸ ಹೊಸ ಚಟುವಟಿಕೆಗಳನ್ನು ಶಿಕ್ಷಣ ಇಲಾಖೆ, ಶಿಕ್ಷಕ ವೃಂದ, ಶಾಲಾ ಸಮಿತಿಗಳು ಮತ್ತು ಪೋಷಕರು ಇನ್ನಿಲ್ಲದಷ್ಟು ಪ್ರೋತ್ಸಾಹಿಸಿದವು. ವಿಶೇಷವಾಗಿ ಶಿಕ್ಷಕರಿಗೆ ಸ್ಥಳೀಯ ಮತ್ತು ರಾಜ್ಯಮಟ್ಟದ ಶೈಕ್ಷಣಿಕ ವಿಚಾರ ಗೋಷ್ಠಿಗಳು ಮಕ್ಕಳಿಗೆ ಬೇಸಿಗೆ ಶಿಬಿರಗಳಂತಹ ಪಠ್ಯೇತರ ಚಟುವಟಿಕೆಗಳು, ಪರಿಸರಕ್ಕೆ ಸಂಬಂಧಿಸಿದ ಕಾರ್ಯ ಚಟುವಟಿಕೆಗಳನ್ನು ವೆಲೊರೆಡ್ ನಡೆಸುತ್ತಾ ಬಂತು. ಈ ಚಟುವಟಿಕೆಗಳ ಕಾರ್ಯ ವ್ಯಾಪ್ತಿ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು ಒಳಗೊಂಡಿತ್ತು. ಅಪರೂಪದಲ್ಲಿ ಕೊಡಗು ಜಿಲ್ಲೆಗೆ ಸೇರಿದ ಕೆಲ ಕಡೆಗಳಲ್ಲಿ ಚಟುವಟಿಕೆಗಳು ನಡೆದಿದ್ದವು. ಇವುಗಳಲ್ಲಿ ವಿಜ್ಞಾನ ಪಾಠಗಳಿಗೆ ಸಂಬಂಧಿಸಿದಂತೆ ಆಕಾಶ ವೀಕ್ಷಣೆ, ಪರಿಸರ ವೀಕ್ಷಣೆ ಕಾರ್ಯಕ್ರಮಗಳು ಸೇರಿವೆ.

ಬೆಳ್ತಂಗಡಿ, ಬಂಟ್ವಾಳ, ಉಡುಪಿ ಸೇರಿದಂತೆ ಕೆಲಕಡೆಗಳಲ್ಲಿ ಸಂಸ್ಥೆಯು Teachers Net Work ಎನ್ನುವ ಕಲ್ಪನೆಯಲ್ಲಿ ಕಾಲ ಕಾಲಕ್ಕೆ ಶಿಕ್ಷಕರ ಗುಂಪೂ ಚಟುವಟಿಕೆಗಳನ್ನು ನಡೆಸುತ್ತಿದ್ದು, ಶಿಕ್ಷಕರಿಗೆ ನವೀನ ಕಲಿಕೆಯ ಕುರಿತು ತಜ್ಞರಿಂದ ತರಬೇತಿ ನೀಡಲಾಗುತ್ತಿತ್ತು. ಶಾಲೆಗಳಲ್ಲಿ ಎಸ್.ಡಿ.ಎಂ.ಸಿ.ಗಳು ಚಾಲ್ತಿಗೆ ಬಂದ ನಂತರ ನೇರವಾಗಿ ಗ್ರಾಮ ಪಂಚಾಯತ್‌ಗಳು ಮತ್ತು ಪೋಷಕ ಸಮಿತಿಗಳ ಸಂಪರ್ಕದೊಂದಿಗೆ ಅನೇಕ ಮಾಹಿತಿ ಕಾರ್ಯಾಗಾರಗಳನ್ನು ನಡೆಸಿ ಯೋಜನೆಯ ಸಫಲತೆಗೆ ಸರಕಾರಕ್ಕೆ, ಶಿಕ್ಷಣ ಇಲಾಖೆಗೆ ಬೆನ್ನೆಲುಬಾಗಿ ಕೆಲಸ ಮಾಡಿದ್ದೆವು. ಇವುಗಳಿಂದಾಗಿ ಸಾಕಷ್ಟು ಬದಲಾವಣೆಯನ್ನು ದ.ಕ. ಮತ್ತು ಉಡುಪಿ ಜಿಲ್ಲೆಗಳಲ್ಲಿ ನಾವು ಕಾಣುವಂತಾಯಿತು. ಇಂದು ಮಕ್ಕಳ ಪೋಷಕರ ಜತೆಗೆ ಶಿಕ್ಷಣ ಕುರಿತಾದ ಸಂವಾದ ನಡೆಸುವ ಅಗತ್ಯವನ್ನು ಎಲ್ಲರೂ ಮನಗಾಣಬೇಕು. ಶಿಕ್ಷಕರ ಕಾರ್ಯ ವೈಖರಿ ಅವರ ಸಾಮರ್ಥ್ಯವನ್ನು ಹೆಚ್ಚಿಸುವುದು ಕೂಡಾ ಅನಿವಾರ್ಯ. ಈ ನೆಲೆಯಲ್ಲಿ ಸಂಸ್ಥೆಯು ಕಾಲ ಕಾಲಕ್ಕೆ ಬದಲಾಗುತ್ತಿರುವ ಶೈಕ್ಷಣಿಕ ಸಂಗತಿಗಳನ್ನು ಅನುಷ್ಠಾನಗೊಳ್ಳುತ್ತಿರುವ ಕಾರ್ಯಕ್ರಮಗಳ ಕುರಿತಾಗಿ ಸೈದ್ಧಾಂತಿಕ ಚಿಂತನೆಗಳನ್ನು ತನ್ನ ಕಾರ್ಯಕರ್ತರಲ್ಲಿ ಬೆಳೆಸುವುದು ಸಂಸ್ಥೆಯ ಬೆಳವಣಿಗೆಗೆ ಅತೀ ಅಗತ್ಯ.

ಶಿಕ್ಷಣ ಇಲಾಖೆ ಇಂದು ಹೊಂದಿರುವ ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಕಲ್ಪನೆ ಏನಿತ್ತು ಅದೆಲ್ಲ ಜಾರಿಯಾಗುವ ಮೊದಲೆ ಎರಡೂ ಜಿಲ್ಲೆಗಳ ತಾಲೂಕು ಕೇಂದ್ರಗಳಲ್ಲಿ ನಾವು ಶಿಕ್ಷಣ ಸಂಪನ್ಮೂಲ ಕೇಂದ್ರಗಳನ್ನು ತೆರೆದಿದ್ದೆವು. ಈಗ ಅದರ ಚಟುವಟಿಕೆಗಳು ಹಿನ್ನಲೆಗೆ ಸರಿದಿದ್ದರೂ ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಒಕ್ಕೂಟ ಎಂಬ ಸಂಸ್ಥೆಯು ಚಾಲ್ತಿಯಲ್ಲಿದೆ. ವೆಲೊರೆಡ್‌ನಲ್ಲಿ ನಾನಿರುವ ಸಮಯದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿ 'ಶಿಕ್ಷಣ ವಾತುಕತೆ'ಎಂಬ ಪತ್ರಿಕೆಯನ್ನು ಹೊರತರುತ್ತಿದ್ದೆವು. ಶಿಕ್ಷಣ ಕುರಿತಾದ ಸೈದ್ಧಾಂತಿಕ ವಿಚಾರಗಳು, ಶಿಕ್ಷಕರ ಅನುಭವಗಳು ಕಲಿಕೆಯ ನವೀನ ಚಟುವಟಿಕೆಗಳು, ಮಾತ್ರವಲ್ಲ ಇಲಾಖೆಯ ಸುತ್ತೋಲೆಗಳು ಅದರಲ್ಲಿರುತ್ತಿದ್ದ ಕಾರಣ ಬಹಳಷ್ಟು ಶಿಕ್ಷಕರು ಅದನ್ನು ಮೆಚ್ಚಿಕೊಂಡಿದ್ದರು. ಸಂಸ್ಥೆಯು ಪ್ರಸಿದ್ಧಿಗೆ ಬರಲು ಅದು ಪ್ರಮುಖ ಪಾತ್ರವಹಿಸಿತ್ತು. ಬಹಳ ಸಮಯ ನಾನು ಅದರ ಸಂಪಾದಕನಾಗಿದ್ದು, ಈಗಲೂ ಹೆಮ್ಮೆ ಎನಿಸುತ್ತದೆ.

ಸಂಸ್ಥೆಯು ಈಗ ಪಡಿ–ವೆಲೊರೆಡ್ ಆಗಿದ್ದರೂ, ಆಗಿನ ಕಾಲದಲ್ಲಿ ನಾವು ಎಲ್ಲರೂ ಒಂದಾಗಿ ಸಂಸ್ಥೆಯ ಏಳಿಗೆಗಾಗಿ ದುಡಿದಿರುವುದು ಶೈಕ್ಷಣಿಕ ಅಧ್ಯಯನಕ್ಕಾಗಿ ರಾಜ್ಯದಾದ್ಯಂತ ಸುತ್ತಾಡಿರುವುದು ಇದೇ ವಿಚಾರಕ್ಕೆ ಸಂಬಂಧಿಸಿ ಬಾಂಬೆ, ಮದ್ರಾಸುಗಳಿಗೆ ಭೇಟಿಯಾಗಿರುವುದು ಎಲ್ಲಾ ನೆನಪಾಗುತ್ತಿದೆ. ಶಿಕ್ಷಣ ವ್ಯವಸ್ಥೆಯಲ್ಲಿ ಯಾವ ಬದಲಾವಣೆಯನ್ನು ಮಾಡಬೇಕಾಗಿದೆ ಎಂಬುದಾಗಿ ಹಲವು ವಿಚಾರಗಳು ಇವತ್ತು ಪತ್ರಿಕೆಗಳಲ್ಲಿ ಸಮೂಹ ಮಾಧ್ಯಮಗಳಲ್ಲಿ, ವಿಚಾರ ಗೋಷ್ಠಿಗಳ ಸಂವಾದಗಳಲ್ಲಿ ಚರ್ಚೆಯಾಗುತ್ತಿದೆಯೋ ಅವುಗಳಲ್ಲಿ ಅನೇಕವನ್ನು ನಾವು ದಶಕಗಳ ಹಿಂದೆಯೇ ಚರ್ಚಿಸಿದ್ದೇವೆ. ಆದರೂ ಶಿಕ್ಷಣದ ಗುಣಮಟ್ಟ ದಿನೇ ದಿನೇ ಕುಸಿಯುತ್ತಿರುವುದು ಸರಕಾರಿ ಕನ್ನಡ ಶಾಲೆಗಳು ಮುಚ್ಚುತ್ತಿರುವುದು ಈ ವ್ಯವಸ್ಥೆಯ ವಿಫಲತೆಗೆ ಸಾಕ್ಷಿ. ಈ ಹೊತ್ತಲ್ಲಿ ಶೈಕ್ಷಣಿಕ ವ್ಯವಸ್ಥೆ ಇನ್ನಷ್ಟು ಪರಿಣಾಮಕಾರಿಯಾಗಿ ಕಾರ್ಯಾಚರಿಸುವಲ್ಲಿ ಪಡಿ ವೆಲೊರೆಡ್ ಸಂಸ್ಥೆ ಇನ್ನಷ್ಟು ದುಡಿಯುವಂತಾಗಲಿ ಎಂದು ಹಾರೈಸುವೆ.

# ಪಡಿಯೊಂದಿಗಿನ ಮರೆಯಲಾರದ ನೆನಪುಗಳು



**ರೇಶ್ಮಾ ಉಳ್ಳಾಲ್**
ಉರ್ವ, ಮಂಗಳೂರು

'ಬೇರೆಯವರಿಗೆ ಸ್ವಾತಂತ್ರ್ಯವನ್ನು ನಿರಾಕರಿಸುವವರು ತಾವೂ ಅದಕ್ಕೆ ಅರ್ಹರಲ್ಲ'. ಅಮೆರಿಕಾದ ಅಧ್ಯಕ್ಷರಾಗಿದ್ದ ಅಬ್ರಹಾಂ ಲಿಂಕನ್ ವರ್ಣ ತಾರತಮ್ಯದ ವಿರುದ್ಧ ಶತಮಾನದ ಹಿಂದೆ ಆಡಿದ ಮಾತು. ಲಿಂಕನ್ನರ ಈ ಮಾತು ಇಪ್ಪತ್ತೊಂದನೆಯ ಶತಮಾನದಲ್ಲಿಯೂ ಭಾರತದಂತಹ ದೇಶಗಳನ್ನು ಮತ್ತೆ ಮತ್ತೆ ಕಾಡುತ್ತಿದೆ.

ಜಾತಿ, ಧರ್ಮ, ಲಿಂಗತ್ವ ಅಸಮಾನತೆಯಿಂದಾಗುವ ಹಿಂಸೆ, ಕೊಲೆ, ಮಕ್ಕಳ ರಕ್ಷಣೆಯ ಉಲ್ಲಂಘನೆಗೆ ಕಾನೂನುಗಳಿದ್ದರೂ ಅಪರಾಧಗಳಿಗೆ ಕೊನೆಯಿಲ್ಲ. ಅಸಮಾನತೆ, ದೌರ್ಜನ್ಯದ ವಿರುದ್ಧ ಜನಜಾಗೃತಿ ಮೂಡಿಸುವ ನಿಟ್ಟಿನಲ್ಲಿ ದೇಶದಲ್ಲಿ ವಿವಿಧ ಸಂಘಟನೆಗಳು ಸರಕಾರದ ಜೊತೆಗೆ ಭಾಗಿಯಾಗುತ್ತಲೇ ಇವೆ. ಸಂವಿಧಾನದ ಮೌಲ್ಯಗಳನ್ನು ಪರಿಣಾಮಕಾರಿಯಾಗಿಸುವಲ್ಲಿ ಶಿಕ್ಷಣದ ಪಾತ್ರ ಪ್ರಮುಖವಾದುದು. ಗುಣಾತ್ಮಕ ಶಿಕ್ಷಣವೊಂದೇ ಸಮಾಜದ ದಿಕ್ಕನ್ನು ಬದಲಾಯಿಸಲು ಸಾಧ್ಯ ಎಂಬ ಚಿಂತನೆ ಮಂಗಳೂರಿನಲ್ಲಿಯೂ ಎರಡೂವರೆ ದಶಕಗಳ ಹಿಂದೆ ಮೊಳಕೆಯೊಡೆಯಿತು. ಡೆಸ್ಮಂಡ್ ಡಿ'ಆಬ್ರಿಯೊ ಹಾಗೂ ಮಾರ್ಗರೆಟ್ ದಂಪತಿ, ಹೆಣ್ಮಕ್ಕಳ ಶಿಕ್ಷಣ, ಲಿಂಗತ್ವ ಅಸಮಾನತೆಯ ವಿರುದ್ಧ ಮಾಡಿದ ಆಂದೋಲನದ ರೂವಾರಿಗಳು. ಅವರ ಜೊತೆಗೆ ಸಮಾನ ಮನಸ್ಕರು ಕೈಜೋಡಿಸಿದ್ದರಿಂದ ಆಂದೋಲನಕ್ಕೆ ಸಾಂಸ್ಥಿಕ ರೂಪ ದೊರೆಯಿತು. ಮೌಲ್ಯಾಧಾರಿತ ಶಿಕ್ಷಣದೆಡೆಗಿನ ಈ ಪ್ರಯಾಣಕ್ಕೆ ಇದೀಗ ರಜತ ಸಂಭ್ರಮ.

ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಗುಣಾತ್ಮಕ ಶಿಕ್ಷಣದ ಪರಿಣಾಮಕಾರಿ ಜಾರಿಗಾಗಿ ಪಡಿ–ವೆಲೊರೆಡ್ ಯೋಜನೆ ಆಯೋಜಿಸದ ಕಾರ್ಯಕ್ರಮಗಳಿಲ್ಲ; ಶಿಕ್ಷಕರು, ಪೋಷಕರು, ಮಕ್ಕಳು, ಅಧಿಕಾರಿಗಳು, ಪತ್ರಕರ್ತರು ಹೀಗೆ ಎಲ್ಲಾ ವರ್ಗದವರನ್ನು, ತಳಮಟ್ಟದ ಸಮುದಾಯದವರನ್ನೂ ಆಂದೋಲನದ ಪಾಲುದಾರರನ್ನಾಗಿಸಿದೆ. ಇಂದಿಗೂ ಮೌಲ್ಯಗಳ ಜೊತೆಗೆ ರಾಜಿ ಮಾಡಿಕೊಳ್ಳದೆ ಕಾರ್ಯ ನಿರ್ವಹಿಸುವಲ್ಲಿ ವೆಲೊರೆಡ್ ಸಂಸ್ಥೆಯ ಇಡೀ ತಂಡ ಶ್ರಮಿಸುತ್ತಿದೆ. 2003ರಿಂದ 2006ರವರೆಗೆ ನಾನೂ ಈ ತಂಡದ ಸದಸ್ಯೆಯಾಗಿ ಕಾರ್ಯ ನಿರ್ವಹಿಸಿದ ಹೆಮ್ಮೆಯಿದೆ.

ಸಾಮಾನ್ಯವಾಗಿ ಯಾವುದೇ ಸಂಸ್ಥೆಯಲ್ಲಿ ತಾವಾಯಿತು, ತಮ್ಮ ಕೆಲಸವಾಯಿತು ಎಂದುಕೊಳ್ಳುವವರೇ ಬಹಳ ಮಂದಿ. ಆದರೆ, ಪಡಿ–ವೆಲೊರೆಡ್ ಸಂಸ್ಥೆಯೆನ್ನುವುದಕ್ಕಿಂತ ಕುಟುಂಬ ಎಂಬ ಅನ್ವರ್ಥವೇ ಸರಿಯೆನಿಸುತ್ತದೆ. ಇಲ್ಲಿ ಕ್ಷೇತ್ರಕಾರ್ಯದಲ್ಲಿ ತೊಡಗಿರುವವರು ವಾರಾಂತ್ಯದಲ್ಲಿ ಅಥವಾ ಹದಿನೈದು ದಿನಗಳಿಗೊಮ್ಮೆ ನಡೆಯುವ ಸಭೆಯಲ್ಲಿ ಕ್ಷೇತ್ರದಲ್ಲಿರುವ ಪ್ರತಿಯೊಂದು ಸಮಸ್ಯೆಯನ್ನು ಸಭೆಯ ಮುಂದಿಡುತ್ತಾರೆ. ಆ ಸಮಸ್ಯೆಯನ್ನು ಪರಿಹರಿಸುವ ನಿಟ್ಟಿನಲ್ಲಿ ಎಲ್ಲರೂ ಕಾರ್ಯೋನ್ಮುಖರಾಗುತ್ತಾರೆ. ಅದು ನನ್ನ ಕೆಲಸ, ನಿನ್ನ ಕೆಲಸವೆಂಬ ಭೇದವಿಲ್ಲ. ಈ ಮನೆಯವರ ಕಷ್ಟ ಎಂಬ ಮನೋಭಾವ ಎಲ್ಲರದ್ದು. ಮನೆಯ ಯಜಮಾನನಂತೆ ರೆನ್ನಿ ಡಿಸೋಜ ಕುಳಿತಿದ್ದರೂ ಅಲ್ಲಿ ಎಲ್ಲರ ಅಭಿಪ್ರಾಯಗಳಿಗೆ ಹೆಚ್ಚು ಗೌರವ. ಬಹುಷ: ಪ್ರಜಾಪ್ರಭುತ್ವ ಮಾದರಿಯಲ್ಲಿ ಕೆಲಸ ಮಾಡುವ ಸಂಸ್ಥೆಯೊಂದಿದ್ದರೆ ಅದು ಪಡಿ–ವೆಲೊರೆಡ್ ಎಂದರೆ ಅತಿಶಯವಲ್ಲ. ಇದು ಬರೀ ಸಂಸ್ಥೆಯಲ್ಲ; ವಿಶ್ವವಿದ್ಯಾನಿಲಯ. ನಾನಲ್ಲಿದ್ದಷ್ಟು ದಿನವೂ ವೆಲೊರೆಡ್ ನನ್ನ ಜೀವನದ ಕಲಿಕೆಯ ಭಾಗವೇ ಆಗಿತ್ತು.

ವೆಲೊರೆಡ್‌ನಲ್ಲಿದ್ದ ಸ್ನೇಹಿತರಲ್ಲಿ ಕೆಲವರು ಅನಿವಾರ್ಯ ಕಾರ್ಯಗಳಿಂದಾಗಿ ಬೇರೆಡೆ ಉದ್ಯೋಗ ಮಾಡುತ್ತಿದ್ದರೆ, ಇನ್ನು ಕೆಲವರು ನಮ್ಮನ್ನಗಲಿದ್ದಾರೆ. ವೀಣಕ್ಕನದ್ದು ತುಂಬಾ ಕಾಡುವ ವ್ಯಕ್ತಿತ್ವ. ಈಗಲೂ ನಾನು ಮಾನಸಿಕ ಒತ್ತಡಕ್ಕೊಳಗಾದಾಗ ಅವರ ಸಂಯಮ, ನಿಷ್ಕಲ್ಮಶ ನಗು ಅನೇಕ ಬಾರಿ ನನಗೆ ದಿವ್ಯೌಷಧವಾಗಿದೆ. ಅವರನ್ನು ದ್ವೇಷಿಸುವವರು ಬಹುಷ: ಆ ಸಂಸ್ಥೆಯಲ್ಲಿ ಯಾರೂ ಇರಲಿಲ್ಲ. ಅವರ ತಾಳ್ಮೆ, ಚಿಂತನೆ, ಯೋಜನೆಯ ದೂರದೃಷ್ಟಿ ಹೆಚ್‌ಐವಿ ಪೀಡಿತರ ಬಗ್ಗೆ ಸಮಾಜಕ್ಕಿದ್ದ ಅಸಹ್ಯ, ಅಸಹನೆಯನ್ನು ಹೋಗಲಾಡಿಸುವಲ್ಲಿ ಯಶಸ್ವಿಯಾಗಿದೆ. ಎಷ್ಟು ದಿನ ಬದುಕುತ್ತೇವೆ ಅನ್ನೋದಕ್ಕಿಂತ ಹೇಗೆ ಬದುಕಿದ್ದೇವೆ ಎಂಬುವುದನ್ನು ವೀಣಕ್ಕ ಸಾಕ್ಷೀಕರಿಸಿದ್ದಾರೆ. ಕೊನೆಯದಾಗಿ, ವೆಲೊರೆಡ್ 'ಪಡಿ'ಯಾಗಿ ರೂಪಾಂತರಗೊಂಡು ಕಾರ್ಯ ನಿರ್ವಹಿಸುತ್ತಿದೆ. ಆದರೆ, ಆದರ್ಶಗಳು, ಮೌಲ್ಯಗಳು, ಕಸುವಿನಲ್ಲಿ ಯಾವುದೇ ಬದಲಾವಣೆಯಿಲ್ಲ. ತಂಡದ ಸದಸ್ಯರ ಪರಿಶ್ರಮ, ಇಚ್ಛಾಶಕ್ತಿಯೇ ಸಂಸ್ಥೆಯ ಶಕ್ತಿ. ರೆನ್ನಿ ಅವರ ನೇತೃತ್ವದಲ್ಲಿ ಸಂಸ್ಥೆ ಮತ್ತಷ್ಟು ಬಲಗೊಳ್ಳಲಿ ಎಂದಷ್ಟೇ ಈ ಸಂದರ್ಭದಲ್ಲಿ ಹಾರೈಸುತ್ತೇನೆ.

***

# 'ಪಡಿ'ಯಲ್ಲಿ ಪಡೆದದ್ದು

**ಬಸವರಾಜ. ಹುಲಗನ್ನವರ**
ದೂರವಾಣಿ: 7795410089
ಇಮೇಲ್: basuh88@gmail.com



'ಬದುಕು ಎಂಬುವುದು ಒಂದು ನದಿಯ ಹಾಗೆ ಕೊನೆ ಇಲ್ಲದ ಪಯಣ', ಯಾವುದು ನಮ್ಮೊಂದಿಗೆ ಬರುವುದಿಲ್ಲ ಮತ್ತು ಶಾಶ್ವತವಾಗಿ ಉಳಿಯುವುದಿಲ್ಲ, ಶಾಶ್ವತವಾಗಿ ಉಳಿಯುವುದು ಮತ್ತು ನಮ್ಮ ಜೊತೆಗೆ ಬರುವುದು ಕೇವಲ 'ಹೃದಯ ತಟ್ಟಿದ ನೆನಪುಗಳು ಮತ್ತು ಪಡೆದ ಅನುಭವಗಳು' ಎಂಬ ಈ ಸಾಲುಗಳು ನನ್ನ ಜೀವನದಲ್ಲಿ ತುಂಬ ಮಹತ್ವದ ಪಾತ್ರ ವಹಿಸುತ್ತವೆ. ಮಂಗಳೂರಿನಲ್ಲಿ ಸಮಾಜಕಾರ್ಯ ವಿಭಾಗದಲ್ಲಿ ಮಾನವ ಸಂಪನ್ಮೂಲ ವಿಷಯವನ್ನು ಆಯ್ಕೆ ಮಾಡಿಕೊಂಡು ಅದೇ ವಿಭಾಗದಲ್ಲಿ ವೃತ್ತಿಯನ್ನು ಆರಂಭಿಸಿದ ನನಗೆ ಜೀವನದಲ್ಲಿ ತಿರುವು ನೀಡಿದ್ದು ಪಡಿ ಸಂಸ್ಥೆ. ವೃತ್ತಿ ಜೀವನದಲ್ಲಿ ಬದಲಾವಣೆಗಾಗಿ ನೋಡುತ್ತಿದ್ದ ನನಗೆ ಪಡಿಯ ಪರಿಚಯವಾಗಿದ್ದು 2014ರಲ್ಲಿ ನನ್ನ ಸ್ನೇಹಿತೆಯಿಂದ; ಪಡಿ ಸಂಸ್ಥೆಯ ನಿರ್ದೇಶಕರಾದ ಶ್ರೀಯುತ ರೆನ್ನಿ ಡಿ'ಸೋಜರವರು ನನ್ನನ್ನು 'ಬಾಲಕಾರ್ಮಿಕ ಪದ್ಧತಿ ವಿರೋಧಿ ಆಂದೋಲನ–ಕರ್ನಾಟಕ' ಎಂಬ ಯೋಜನೆಗೆ ರಾಜ್ಯ ಸಂಯೋಜಕನಾಗಿ ಆಯ್ಕೆ ಮಾಡಿ ಮತ್ತೆ ಮಂಗಳೂರಿನತ್ತ ಮುಖ ಮಾಡಿ ಮಕ್ಕಳ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಲು ಅವಕಾಶ ಮಾಡಿಕೊಟ್ಟರು.

ಯಾವುದೇ ಒಂದು ಸಂಸ್ಥೆಯು ಕೆಲಸ ಮಾಡುವವರಿಗೆ ಕೇವಲ ಸಂಸ್ಥೆ, ಆದರೆ ನನಗೆ ಪಡಿಯು ನನ್ನ ಸ್ವಂತ ಕುಟುಂಬ. 2014ರಿಂದ 2016ರ ವರೆಗೆ ಪಡಿಯಲ್ಲಿ ಕಾರ್ಯ ನಿರ್ವಹಿಸಿದ ಅನುಭವ ಅದ್ಭುತ. ನಿಜವಾಗಿಯೂ ನನ್ನ ವೃತ್ತಿ ಜೀವನದ ಮಹತ್ವದ ಘಟ್ಟ ಪ್ರಾರಂಭವಾದ ಕ್ಷಣ ಅದು. ಒಂದೊಂದು ಕ್ಷಣವು ಒಂದೊಂದು ರೀತಿಯ ಅನುಭವವನ್ನು ನೀಡುತ್ತ ಬಂತು. ಮಕ್ಕಳ ಹಕ್ಕುಗಳ ರಕ್ಷಣೆ, ಅದರಲ್ಲಿ ಮುಖ್ಯವಾಗಿ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಮತ್ತು ಬಾಲ್ಯ ವಿವಾಹ ನಿಷೇಧದ ಸಲುವಾಗಿ ಪಡಿಯು ಮಾಡಿದ ಮತ್ತು ಈವಾಗಲೂ ಮಾಡುತ್ತಿರುವ ಕೆಲಸ ಗಮನಾರ್ಹವಾದದ್ದು. ಕರ್ನಾಟಕದ ಸುಮಾರು ಎಂಟು ಜಿಲ್ಲೆಗಳಲ್ಲಿ ಇ.ಎಮ್.ಸಿ. (Escape from Marriage to Childhood) ಯೋಜನೆಯ ಸಹಭಾಗಿತ್ವದಲ್ಲಿ ಹಾಗೂ ಬಾಲಕಾರ್ಮಿಕ ವಿರೋಧಿ ಪದ್ಧತಿ ಆಂದೋಲನದಿಂದ ಇನ್ನುಳಿದ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಈ ಸಮಯದಲ್ಲಿ ಬೇರೆ ಬೇರೆ ಜಿಲ್ಲೆಗಳಲ್ಲಿ ಮತ್ತು ಪ್ರದೇಶಗಳಲ್ಲಿ ಬಾಲ್ಯ ವಿವಾಹ ಹಾಗೂ ಬಾಲಕಾರ್ಮಿಕ ಪದ್ಧತಿಯು ನಿರ್ಮೂಲನೆಗಾಗಿ ಹಲವಾರು ಜಿಲ್ಲಾ ಮಟ್ಟದ ಮತ್ತು ರಾಜ್ಯ ಮಟ್ಟದ ಸಮಾವೇಶಗಳನ್ನು ಮಾಡಿದ್ದು ನಿಜಕ್ಕೂ ಒಂದು ಹೊಸ ಅನುಭವ ಮತ್ತು ಜ್ಞಾನಾರ್ಜನೆಯೇ ಸರಿ. ಇದರ ಜೊತೆಗೆ ರಾಜ್ಯ ಮಟ್ಟದ ನೆಟ್‌ವರ್ಕ್‌ಗಳಾದ ಸಿ.ಎ.ಸಿ.ಎಲ್–ಕೆ, ಫಾಪ್ರೆ ಮತ್ತು ಆರ್.ಟಿ.ಇ. ಫೋರಂಗಳ ಸದಸ್ಯತ್ವವನ್ನು ಪಡೆದ ಪಡಿ ಸಂಸ್ಥೆಯು ರಾಜ್ಯ ಮಟ್ಟದಲ್ಲಿ ತಾನು ಮಾಡುತ್ತಿರುವ ಒಳ್ಳೆಯ ಕಾರ್ಯಕ್ರಮಗಳ ಮೂಲಕ ಪ್ರಸಿದ್ಧಿಯನ್ನು ಗಳಿಸಿತು. ಬಾಲಕಾರ್ಮಿಕ ಪದ್ಧತಿಯ ವಿರುದ್ಧ ಮತ್ತು ಬಾಲ್ಯ ವಿವಾಹಗಳನ್ನು ತಡೆಗಟ್ಟಲು ಜನ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ದೇಶದಲ್ಲಿ ವಿವಿಧ

ಸಂಘಟನೆಗಳು ಸರಕಾರದ ಜೊತೆಗೆ ಭಾಗಿಯಾಗುತ್ತಲೇ ಇವೆ. ಹಾಗೂ ಸಂವಿಧಾನದ ಮೌಲ್ಯಗಳನ್ನು ಮತ್ತು ಮಕ್ಕಳಿಗಾಗಿ ಇರುವ ಕಾನೂನುಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವಲ್ಲಿ ಶಿಕ್ಷಣದ ಪಾತ್ರ ಪ್ರಮುಖವಾದುದು, ಈ ಕ್ಷೇತ್ರದಲ್ಲಿಯೂ ಕೂಡ ಪಡಿ ಸಂಸ್ಥೆಯದ್ದು ಮೇಲುಗೈ. ಗುಣಾತ್ಮಕ ಶಿಕ್ಷಣವೊಂದೇ ಸಮಾಜದ ದಿಕ್ಕನ್ನು ಬದಲಾಯಿಸಲು ಸಾಧ್ಯ ಎಂಬ ಚಿಂತನೆಯೊಂದಿಗೆ ಕಳೆದ ಎರಡೂವರೆ ದಶಕಗಳಿಂದ ಕಾರ್ಯನಿರ್ವಹಿಸುತ್ತ ಉತ್ತಮ ಸಮಾಜ ಕಟ್ಟುವ ಮತ್ತು ಮಕ್ಕಳನ್ನು ರಕ್ಷಣೆ ಮಾಡುವ ನಿಟ್ಟಿನಲ್ಲಿ ಶ್ರಮಿಸುತ್ತಿದೆ.

ಮಕ್ಕಳ ಹಕ್ಕುಗಳ ರಕ್ಷಣೆಗೆ ಸದಾ ಸಿದ್ಧವಾಗಿರುವ ಸಂಸ್ಥೆಗಳನ್ನು ಒಟ್ಟುಗೂಡಿಸಿ ರಾಜ್ಯದ 15 ಜಿಲ್ಲೆಗಳಲ್ಲಿ ಶ್ರೀಯುತ ರೆನ್ನಿ ಡಿ'ಸೋಜರವರ ಮಾರ್ಗದರ್ಶನದಲ್ಲಿ ನಾನು ಮಾಡಿದ 'ಸುರಕ್ಷಿತ ಬಾಲ್ಯ' ಎಂಬ ಜಾಥಾವನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ. ಈ 15 ದಿನಗಳ ಜಾಥಾದಲ್ಲಿ ಆದ ಅನುಭವಗಳು ನಿಜ ಜೀವನವನ್ನು ಮತ್ತಷ್ಟು ಹತ್ತಿರದಿಂದ ನೋಡುವಂತೆ ಮಾಡಿತು. ಎಲ್ಲ ಜಿಲ್ಲೆಗಳಲ್ಲಿಯೂ ಇಲಾಖೆಯವರು ನಮ್ಮನ್ನು ಸ್ವಾಗತಿಸಿದ ರೀತಿ ಪಡಿ ಸಂಸ್ಥೆಯ ಬಗ್ಗೆ ಮತ್ತಷ್ಟು ಹೆಮ್ಮೆ ಪಡುವಂತೆ ಮಾಡಿತು. ಇದರ ಪರಿಣಾಮವಾಗಿ ಸುಮಾರು ಬಾಲ್ಯ ವಿವಾಹಗಳ, ಬಾಲಕಾರ್ಮಿಕರ ಸಂಖ್ಯೆ ಕಡಿಮೆಯಾಗಿದ್ದು ಮತ್ತು ಮಕ್ಕಳ ಹಕ್ಕುಗಳ ರಕ್ಷಣೆ ಮಾಡಿದ್ದು ತೃಪ್ತಿಕರ ಸಂಗತಿ. ಸಮಾಜ ಕಾರ್ಯವನ್ನು ಓದಿದ ನನಗೆ ನಿಜವಾಗಲೂ ಸಮಾಜ ಸೇವೆಯನ್ನು ಮಾಡುವಂತೆ ಮಾಡಿದ್ದು ಪಡಿ ಸಂಸ್ಥೆ ಮತ್ತು ಅದರ ನಿರ್ದೇಶಕರು ಎಂದು ಹೇಳಲು ಹೆಮ್ಮೆಯಾಗುತ್ತದೆ. ಇಲ್ಲಿ ಪಡೆದ ಅನುಭವವೇ ನನ್ನನ್ನು ಇವತ್ತು ರಾಷ್ಟ್ರ ಮಟ್ಟದಲ್ಲಿ ಕಾರ್ಯನಿರ್ವಹಿಸುವಂತೆ ಮಾಡಿದೆ.

ಪಡಿ ಸಂಸ್ಥೆಯು ಮಾಡುತ್ತಿರುವ ಈ ಕೆಲಸವು ಎಷ್ಟೋ ಜನ ಮಕ್ಕಳ ಭವಿಷ್ಯವನ್ನು ರೂಪಿಸುತ್ತಿದೆ, ಈ ಮಹತ್ವದ ಕಾರ್ಯಗಳಲ್ಲಿ ನಾನೂ ಕೂಡ ಭಾಗಿಯಾಗಿದ್ದೆ ಎಂದು ಹೇಳಲು ಹೆಮ್ಮೆಯಾಗುತ್ತದೆ. ಇದಲ್ಲದೆ ಪಡಿಯಲ್ಲಿ ನನ್ನನ್ನು ತಮ್ಮ ಕುಟುಂಬದ ಸದಸ್ಯನಂತೆ ಕಂಡ ಸಂಸ್ಥೆಯ ಎಲ್ಲ ಸದಸ್ಯರನ್ನು ಮತ್ತು ನಿರ್ದೇಶಕರನ್ನು ನನ್ನ ಜೀವನದುದ್ದಕ್ಕೂ ಮರೆಯಲು ಸಾಧ್ಯವಿಲ್ಲ. ಅನಿವಾರ್ಯ ಕಾರಣಗಳಿಂದ ಪಡಿ ಸಂಸ್ಥೆಯಲ್ಲಿ ನನ್ನ ಪಯಣವನ್ನು ಮುಗಿಸ ಬೇಕಾಯಿತು, ಆದರೆ ಇಂದಿಗೂ ಕೂಡ ಪಡಿ ನನ್ನ ಪಾಲಿಗೆ ಸ್ವಂತ ಮನೆಯೇ ಸರಿ. ಒಂದು ವಿಷಯ ನಾನು ಈ ಸಂದರ್ಭದಲ್ಲಿ ಹೇಳಲೇಬೇಕು, ನಾನು ನನ್ನ ಬಾಳ ಸಂಗಾತಿಯನ್ನು ಭೇಟಿ ಮಾಡಿದ್ದೂ ಕೂಡ ಇದೇ ಪಡಿ ಸಂಸ್ಥೆಯಲ್ಲಿ. ಹಾಗಾಗಿ ಪಡಿ ಸಂಸ್ಥೆಯೊಂದಿಗಿನ ನನ್ನ ನಂಟು ಬಿಡಿಸಲಾಗದ್ದು, ಈಗ ಪಡಿ ಸಂಸ್ಥೆಯು 'ರಜತ ಮಹೋತ್ಸವ'ದ ಹೊಸ್ತಿಲಲ್ಲಿರುವುದು ನನ್ನ ಸಂತೋಷವನ್ನು ಇಮ್ಮಡಿಗೊಳಿಸಿದೆ. ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ನನ್ನ ಆತ್ಮೀಯ ಸಹೋದ್ಯೋಗಿ ಮಿತ್ರರಿಗೂ ಮತ್ತು ನಿರ್ದೇಶಕರಿಗೂ ಶುಭ ಹಾರೈಸುತ್ತ, ಪಡಿ ಸಂಸ್ಥೆಯಿಂದ ಸಮಾಜಕ್ಕೆ ಇನ್ನೂ ಒಳ್ಳೆಯ ಕೆಲಸಗಳಾಗಲಿ ಎಂದು ಆಶಿಸುತ್ತ, ನನಗೆ ಅನುಭವಗಳನ್ನು ಹಂಚಿಕೊಳ್ಳಲು ಅವಕಾಶ ಮಾಡಿ ಕೊಟ್ಟ ನನ್ನ ಪ್ರೀತಿಯ ನಿರ್ದೇಶಕರಾದ ಶ್ರೀಯುತ ರೆನ್ನಿ ಡಿ'ಸೋಜರವರಿಗೆ ನನ್ನ ಮನದಾಳದ ಧನ್ಯವಾದಗಳು.

ಕೊನೆಯದಾಗಿ, ಪಡಿ ಸಂಸ್ಥೆಯು ಆದರ್ಶ, ಮೌಲ್ಯಗಳು, ಹುಮ್ಮಸ್ಸು ಮತ್ತು ಕಾರ್ಯ ವೈಖರಿಯಲ್ಲಿ ಯಾವುದೇ ರೀತಿಯ ಸಂಧಾನದ ಮಾತೇ ಇಲ್ಲ. ತಂಡದ ಸದಸ್ಯರ ಪರಿಶ್ರಮ, 'ಇಚ್ಛಾಶಕ್ತಿಯೇ ಸಂಸ್ಥೆಯ ದೊಡ್ಡ ಶಕ್ತಿ'. ಶ್ರೀಯುತ ರೆನ್ನಿಡಿ'ಸೋಜರವರ ನೇತೃತ್ವದಲ್ಲಿ ಸಂಸ್ಥೆ ಮತ್ತಷ್ಟು ಬಲಗೊಳ್ಳಲಿ ಮತ್ತು ಇನ್ನೂ ಹಲವಾರು ಜನರಿಗೆ ಮತ್ತು ಮಕ್ಕಳ ಭವಿಷ್ಯಕ್ಕೆ ದಾರಿದೀಪವಾಗಲಿ ಎಂದು ಈ ಸಂದರ್ಭದಲ್ಲಿ ಹಾರೈಸುತ್ತೇನೆ.

***

# ಶಿಕ್ಷಣ - ಹಕ್ಕು- ಸಮುದಾಯ



✎ **ಪ್ರವೀಣ್ ಬಹುಮಾನ್**

ವೆಲೊರೆಡ್(ಪಡಿ) ಸಂಸ್ಥೆಗೆ ಸೇರುವ ಮೊದಲು ಶಿಕ್ಷಣ ಕ್ಷೇತ್ರದಲ್ಲಿ ಸ್ವಯಂ ಸೇವಾ ಸಂಸ್ಥೆಯಲ್ಲಿ ಕೆಲಸ ಮಾಡಿಕೊಂಡಿದ್ದೆ. ವೆಲೊರೆಡ್(ಪಡಿ)ನಲ್ಲಿ ಕೆಲಸ ಸಿಕ್ಕಿದ್ದು ಅದೃಷ್ಟ, ಈಗಲೂ ಇಲ್ಲಿ ಸಿಕ್ಕ ಅನುಭವ ನನ್ನನ್ನು ಇಂದು ಬೇರೆ ಬೇರೆ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸಲು ತಯಾರು ಮಾಡಿರುತ್ತದೆ.

ವೆಲೊರೆಡ್(ಪಡಿ ಸಂಸ್ಥೆ) ನನ್ನಲ್ಲಿ ಸಮಾಜದ ವಿವಿಧ ಆಯಾಮಗಳ ಬಗ್ಗೆ ಒಳನೋಟ ಹಾಕಿ ವಿಶ್ಲೇಷಿಸಲು ದಾರಿ ಮಾಡಿಕೊಟ್ಟಿರುತ್ತದೆ. ಎಲ್ಲರಿಗೂ ಶಿಕ್ಷಣ ಎನ್ನುವ ಕಲ್ಪನೆಗೆ ಅಂಟಿಕೊಂಡಿರುವ ಲಿಂಗ, ಹಕ್ಕು, ಸಮಾನತೆ, ಸ್ವಾತಂತ್ರ್ಯ ಈ ಪರಿಕಲ್ಪನೆಗಳನ್ನು ಸ್ಪಷ್ಟಪಡಿಸಿದ್ದು ವೆಲೊರೆಡ್ (ಪಡಿ)ಆಗಿರುತ್ತದೆ.

ನನ್ನನ್ನು ಬೇರೆ ಸಂಸ್ಥೆಗಳೊಂದಿಗೆ ಹಾಗೂ ವ್ಯಕ್ತಿಗಳೊಂದಿಗೆ ಪರಿಚಯಿಸಿ ಸಮಾಜಸೇವಾ ಕ್ಷೇತ್ರದಲ್ಲಿ ನನ್ನ ತೊಡಗಿಕೊಳ್ಳುವಿಕೆಗೆ ಕನಸನ್ನು ಕಟ್ಟಿರುವ ಸಂಸ್ಥೆ ವೆಲೊರೆಡ್ (ಪಡಿ). ಸಾಮಾಜಿಕ ಸಮಸ್ಯೆಗಳನ್ನು ವಿಶ್ಲೇಷಿಸುವ, ಕಾರಣ ಹುಡುಕುವ ಪ್ರಜಾಪ್ರಭುತ್ವದ ಮಾದರಿ ಸಂಸ್ಥೆ. ಅಂದರೆ ವೆಲೊರೆಡ್(ಪಡಿ) ಇಲ್ಲಿ ನಿರ್ದೇಶಕರಲ್ಲದೆ ಸಂಸ್ಥೆಯಲ್ಲಿ ಕೆಲಸ ಮಾಡುವ ಯಾವುದೇ ಸ್ಥರದ ವ್ಯಕ್ತಿಗಳ ಮಾತಿಗೊಂದು ಬೆಲೆ ಇದ್ದೇ ಇರುತ್ತದೆ.

ಈ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸಿದ ಅನುಭವ ಇಲ್ಲದಿದ್ದರೆ ನಾನು ಸಮಾಜ ಸೇವಾ ವಿಭಾಗದಲ್ಲಿ ಮುಂದುವರಿಯುತ್ತಿರಲಿಲ್ಲವೆಂದು ಅನಿಸುತ್ತದೆ. ಈ ಸಂಸ್ಥೆ ನನಗೆ ಜವಾಬ್ದಾರಿ ನಿಭಾಯಿಸುವ ಚಟುವಟಿಕೆ ನೀಡಿ ನನ್ನಲ್ಲಿ ಸಾಮಾರ್ಥ್ಯ ಹಾಗೂ ನಾಯಕತ್ವ ಗುಣಗಳನ್ನು ಬೆಳೆಸಿದೆ.

ನನ್ನ ವ್ಯಕ್ತಿತ್ವ ವಿಕಸನದಲ್ಲಿ ಕಾರಣರಾದ ವೆಲೊರೆಡ್(ಪಡಿ) ಸಂಸ್ಥೆಯ ನಿರ್ದೇಶಕರಾದ ರೆನ್ನಿ ಡಿ'ಸೋಜ ಹಾಗೂ ಎಲ್ಲಾ ಆತ್ಮೀಯ ಸ್ನೇಹಿತರಂತಿದ್ದ ಸಿಬ್ಬಂದಿ ವರ್ಗದವರಿಗೆ ನಮನಗಳು.

***

# ಶಿಕ್ಷಣದೊಳಗೊಂದು ಮಗುಸ್ನೇಹಿ ಕಲ್ಪನೆ ಬಿಚ್ಚಿಟ್ಟ ಪಡಿ

✍ ರಶ್ಮಿತಾ ನರಿಮೊಗರು
ಮುಖ್ಯ ಗುರು ಸ.ಹಿ.ಪ್ರಾ ಶಾಲೆ,
ಪುಣ್ಚಪ್ಪಾಡಿ, ಪುತ್ತೂರು.



**ಆಡಿ ಬಾ ನನಕಂದ ಅಂಗಾಲ ತೊಳೆದೇನಾ**
**ತೆಂಗಿನ ಕಾಯಿ ತಿಳಿ ನೀರ ತಕ್ಕೊಂಡು**
**ಬಂಗಾರದ ಮೊರೆ ತೊಳೆದೇನಾ.......**

ಅಮ್ಮನ ಅಂತಃಕರಣದ ಭಾವವೇ ಅದು... ಅಮ್ಮನಿಗೆ ಆಕೆಯ ಮಗುವೇ ಪ್ರಪಂಚ. ಆಕೆಗೆ ಮಗುವಿನ ಮೇಲಿನ ಭಾವುಕತೆ, ಆಸೆ, ಕನಸು ನಿಜಕ್ಕೂ ಶ್ರೇಷ್ಠ. ಅದರಿಂದ ಸಿಗುವ ಸಂತಸಕ್ಕಿಂತ ಮಿಗಿಲಾದದು ಇನ್ನೇನೂ ಇಲ್ಲ.... ನನಗೆ ಮತ್ತೆ ನೆನಪಾಗುವುದು ಶಿಕ್ಷಕಿ ಎಂಬ ತಾಯಿ.... ಬಲ್ಲವರು ಹೀಗೆ ಹೇಳುತ್ತಾರೆ... ಯಾರಿಗೆ ತಂದೆಯ ಜವಾಬ್ದಾರಿ, ತಾಯಿಯ ಆಸಕ್ತಿ ಇದೆಯೋ... ಅವರೇ ನಿಜವಾದ ಶಿಕ್ಷಕರು ಎಂದು...

ಮಗಾ, ನನಗೆ ಅಕ್ಷರ ಕಲಿಯಲಾಗಲಿಲ್ಲ....... ನೀನಾದರೂ ನಾಲ್ಕು ಮಕ್ಕಳಿಗೆ ಅಕ್ಷರ ಕಲಿಸೋ ಗುರುವಾಗಬೇಕು ಅನ್ನೋ ಅಮ್ಮನ ಮಾತುಗಳನ್ನು ಕೇಳುತ್ತಾ ಬೆಳೆದವಳಿಗೆ ಬಾಲ್ಯದಿಂದಲೇ ಶಿಕ್ಷಕಿಯಾಗುವ ಕನಸು ಮನದೊಳಗೆ ಗೂಡು ಕಟ್ಟಿತ್ತು. ಪಿ. ಯು. ಸಿ. ಮುಗಿದ ಬಳಿಕ ಪುತ್ತೂರಿನ ವಿವೇಕಾನಂದ ಟೀಚರ್ ಟ್ರೈನಿಂಗ್ ಇನ್ಸ್‌ಸ್ಟಿಟ್ಯೂಟ್‌ನಲ್ಲಿ ಡಿ.ಇಡಿ ಪೂರ್ಣಗೊಳಿಸಿ ಗೌರವ ಶಿಕ್ಷಕಿಯಾಗಿ ಪಕ್ಕದ ಸರಕಾರಿ ಶಾಲೆಯಲ್ಲಿ ವೃತ್ತಿ ಜೀವನವನ್ನು ಆರಂಭಿಸಿದವಳಿಗೆ ಮುಗ್ಧ ಮಕ್ಕಳ ಒಡನಾಟ, ಅನುಭವಿ ಶಿಕ್ಷಕರ ಮಾರ್ಗದರ್ಶನ ಅಧ್ಯಾಪಕ ವೃತ್ತಿಯನ್ನು ಬಹು ಪ್ರೀತಿಸುವಂತೆ ಮಾಡಿತು. ಮುಂದೆ ಆರ್ಥಿಕ ಒತ್ತಾಸೆಯೊಂದಿಗಿನ ಉದ್ಯೋಗದ ಹುಡುಕಾಟದಲ್ಲಿ ದೊರಕಿದ್ದು 'ಪಡಿ' ಸಂಸ್ಥೆಯಲ್ಲಿ ಮಗು ಸ್ನೇಹಿ ಶಾಲೆ ಯೋಜನೆಯ ತಾಲೂಕು ಸಂಯೋಜಕಿಯಾಗಿ ಕೆಲಸ ಮಾಡುವ ಅವಕಾಶ.

ಬಹುಶಃ ನನ್ನ ಬದುಕಿನ ವಿಶಿಷ್ಟ ಅನುಭವದ ನೆಲೆಯಾಗಿ ಹೊಸ ಆಯಾಮದಲ್ಲಿ ತೆರೆದುಕೊಳ್ಳುವಂತೆ ಮಾಡಿದ್ದು 'ಪಡಿ ಸಂಸ್ಥೆ'. ಸಮಾನ ಮತ್ತು ನ್ಯಾಯಯುತ ಮಾನವೀಯ ಸಮಾಜಕ್ಕಾಗಿ ಕಾರ್ಯ ನಿರ್ವಹಿಸುವುದರೊಂದಿಗೆ ಆಗತಾನೆ ಮಗುಸ್ನೇಹಿ ಶಾಲೆಗಳ ನಿರ್ಮಾಣದ ಹೊಸ ಯೋಜನೆಯನ್ನು ಕೈಗೆತ್ತಿಕೊಂಡಿತ್ತು, ಪಂಚಾಯತ್, ಶಾಲೆ, ಎಸ್.ಡಿ.ಎಮ್.ಸಿ, ಪೋಷಕರು, ಶಿಕ್ಷಕರು, ಸಮುದಾಯ ಮಕ್ಕಳೊಂದಿಗಿನ ಕೊಂಡಿಯಾಗಿ ಮಗು ಸ್ನೇಹಿ ಶಾಲೆಗಳ ಪರಿಕಲ್ಪನೆಯನ್ನು ಬಿತ್ತುವ ಕಾರ್ಯವು ನಿಜವಾಗಿಯೂ ಸವಾಲಿನ ಕೆಲಸವೇ ಆಗಿತ್ತು. ಈ ಪರಿಕಲ್ಪನೆಯ ಮೂಲಕ ಎಲ್ಲಾ ಮಕ್ಕಳಿಗೂ ಮಕ್ಕಳ ಸ್ನೇಹಿ ವಾತಾವರಣದೊಂದಿಗೆ ವಿನೋದಮಯ ಕಲಿಕೆ, ಶಿಕ್ಷಣವನ್ನು ಹೊಂದುವ ಸ್ವಾತಂತ್ರ್ಯ ಹಾಗೂ ಹಕ್ಕನ್ನು ನೀಡಿತು. ಇದನ್ನು ಖಾತ್ರಿ ಪಡಿಸುವಂತಹ ಸಮಾಜನಿರ್ಮಾಣದ ಮಹತ್ತರವಾದ ಆಶಯವನ್ನು ಈಡೇರಿಸುವಂತ ಕಾರ್ಯದಲ್ಲಿ ಮಗ್ನಳಾದಾಗ ಬಹಳಷ್ಟು ವಿಚಾರಗಳನ್ನು ಕಂಡುಕೊಳ್ಳುವ ಸದವಕಾಶ ನನ್ನದಾಯಿತು.

ಪುತ್ತೂರು ತಾಲೂಕಿನ ಒಂದು ಗ್ರಾಮ ಪಂಚಾಯತ್ ಹಾಗೂ ಅದರಡಿಯಲ್ಲಿರುವ ಶಾಲೆಗಳಲ್ಲಿ ಫೀಲ್ಡ್‌ವರ್ಕ್ ಮಾಡಿದಾಗ ಪಂಚಾಯತ್-ಸಮುದಾಯ-ಶಾಲೆ-ಶಿಕ್ಷಣದ ವಿಚಾರದಲ್ಲಿ ಅಧ್ಯಯನ ಕೈಗೊಂಡೆ. ನೂರಾರು ಪೋಷಕರೊಂದಿಗಿನ ಸಂವಹನದಿಂದ ಅವರು ತಮ್ಮ ಮಕ್ಕಳು ಡಾಕ್ಟರ್-ಇಂಜಿನಿಯರ್‌ಗಳಾಗಬೇಕೆಂಬ ಆಸೆಯೊಡನೆ ಇರುವ ವಿವಿಧ ತುಮುಲ-ತುಡಿತದ ಭಾವಗಳಿಗೆ ಸಾಕ್ಷಿಯಾದೆ. ಶಿಕ್ಷಕರೊಂದಿಗಿನ ಮಾತುಕತೆಯಲ್ಲಿ ಶಿಕ್ಷಕರಿಗೆ ತಮ್ಮ ಕಾರ್ಯ ಕ್ಷೇತ್ರದಲ್ಲಿರುವ ಸಾಧ್ಯತೆ-ಭಾಧ್ಯತೆಗಳ ಅರಿವು ನನಗಾಯಿತು. ಮಕ್ಕಳೊಂದಿಗೆ ಬೆರೆತು ಮಕ್ಕಳ ಹಕ್ಕುಗಳ ಬಗ್ಗೆ- ಅವುಗಳ

ರಕ್ಷಣೆಯ ಕುರಿತಾಗಿ ಮಾತುಗಳನ್ನು ಹಂಚಿಕೊಂಡಾಗ ಮಕ್ಕಳ ಆಪ್ತ ಮಾತುಗಳಿಗೆ ಕಿವಿಯಾದ ಅನುಭವವೇ ಮಕ್ಕಳೊಂದಿಗಿನ ಆಪ್ತತೆಗೆ ದಾರಿಯಾಯಿತು. ಮಕ್ಕಳ ಗ್ರಾಮಸಭೆಗಳಲ್ಲಿ ಪಾಲ್ಗೊಂಡ ಅನುಭವವು ಹೊಸದಾಗಿತ್ತು. ಶಿಕ್ಷಣಾಧಿಕಾರಿಗಳು, ಪಂಚಾಯತ್ ಆಧಿಕಾರಿಗಳು, ಜನಪ್ರತಿನಿಧಿಗಳು, ಪೋಷಕರು, ಶಿಕ್ಷಕರು, ಮಕ್ಕಳು, ಸಮುದಾಯದೊಂದಿಗಿನ ನೇರ ಸಂಪರ್ಕ, ಸಂವಹನ ಮಾತುಕತೆಯಿಂದ ಶಿಕ್ಷಣದ ಹೊಸ ಸಾಧ್ಯತೆಗಳ ಚಿಂತನೆಗೆ ಪ್ರೇರೆಪಣೆಯಾಯಿತು.

ಪಡಿಯಲ್ಲಿ ಮಕ್ಕಳ ಸಹಾಯವಾಣಿಯ ಕಾರ್ಯ ಚಟುವಟಿಗಳನ್ನು ಬಹು ಸಮೀಪದಿಂದ ಗಮನಿಸಿದ ನನಗೆ ಮಕ್ಕಳ ಹಕ್ಕುಗಳ ರಕ್ಷಣೆಯ ಜವಾಬ್ದಾರಿಯ ಜಾಗೃತಿ ಮೂಡಿತು. ಶಿಕ್ಷಣ ಸಂಪನ್ಮೂಲ ಕೇಂದ್ರದ ಸಂಪನ್ಮೂಲ ವ್ಯಕ್ತಿಗಳೊಂದಿಗಿನ ಒಡನಾಟ ನಿಸ್ವಾರ್ಥವಾಗಿ ಶಿಕ್ಷಣಕ್ಕಾಗಿ ಸ್ವಯಂ ಸೇವಕರಾಗಿ ದುಡಿಯುವ ಅವರ ಉತ್ಸಾಹ, ಕಾರ್ಯ ಚಟುವಟಿಕೆಗಳು ನಿಜಕ್ಕೂ ಸ್ಪೂರ್ತಿಯನ್ನು ನೀಡಿತು.

ನಾನಿಂದು ಸರಕಾರಿ ಶಾಲೆಯ ಶಿಕ್ಷಕಿಯಾಗಿದ್ದೇನೆ, ನಾನು ಅನುಭವಿಸಿ ಕಂಡುಕೊಂಡ ಬಹಳಷ್ಟು ಅಂಶಗಳನ್ನು ನನ್ನ ಶಾಲೆಯಲ್ಲಿ ಪ್ರಯೋಗಕ್ಕಿಳಿಸಿದ್ದೇನೆ. ಸ್ಥಳೀಯ ಸಂಸ್ಥೆ, ಇಲಾಖೆ, ಮಕ್ಕಳು, ಪೋಷಕರು, ಎಸ್.ಡಿ.ಎಮ್.ಸಿ, ಸಮುದಾಯ, ಊರವರು, ಶಿಕ್ಷಕರು, ಇಲಾಖೆ ಒಟ್ಟುಗೂಡಿ ಶಾಲೆಯನ್ನು ಮುನ್ನಡೆಸುತ್ತಿದ್ದೇನೆ. ನಮ್ಮೂರಿನ ಎಲ್ಲಾ ಮಕ್ಕಳು ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ಪಡೆಯಲು ದಾಖಲಾತಿ, ಹಾಜರಾತಿಗೆ ಪ್ರೋತ್ರಾಹಿಸುತ್ತಿದ್ದೇನೆ. ನಾವು ಮಕ್ಕಳ ಹಕ್ಕುಗಳನ್ನು ಗೌರವಿಸುತ್ತಾ, ಪ್ರತಿಯೊಂದು ಮಗುವನ್ನೂ ಗೌರವಿಸುತ್ತೇವೆ. ನಮ್ಮ ಶಾಲೆಯಲ್ಲಿ ಸಂಪೂರ್ಣ ಶಿಕ್ಷೆ ರಹಿತ ಬೋಧನೆಯಾಗುವಂತೆ ನೋಡಿಕೊಳ್ಳುತ್ತಿದ್ದೇವೆ. ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ಪೂರಕವಾದ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಿದ್ದೇವೆ.

ಒಂದು ಸಮುದಾಯ ಧನಾತ್ಮಕವಾಗಿ ಚಿಂತಿಸಿದರೆ ಏನೆಲ್ಲಾ ಮಾಡಬಹುದು ಎಂಬುದಕ್ಕೆ ಅತ್ಯುತ್ತಮ ನಿದರ್ಶನವಾಗಿ ನಮ್ಮ ಶಾಲೆ ಇಂದು ರೂಪುಗೊಂಡಿದೆ. ಮಕ್ಕಳ ಹಿತದೃಷ್ಟಿಯಿಂದ ಊರಿನ ಕನಸಿನಂತೆ ಕಿರಿಯ ಪ್ರಾಥಮಿಕ ಶಾಲೆಯನ್ನು ಹಿರಿಯ ಪ್ರಾಥಮಿಕ ಶಾಲೆಯನ್ನಾಗಿ ಮೇಲ್ದರ್ಜೆಗೇರಿಸಿದ್ದೇವೆ. ಊರವರು ಕೊಠಡಿಗಳು ಕೊರತೆಯಾದಾಗ ಸುಂದರ ಕೊಠಡಿಗಳನ್ನು ನಿರ್ಮಿಸಿಕೊಟ್ಟಿದ್ದಾರೆ. ಸುಮಾರು 2 ಲಕ್ಷಕ್ಕೂ ಮೀರಿ ಶಾಲೆಯ ಅಗತ್ಯ ವಸ್ತುಗಳು ಕೊಡುಗೆಯಾಗಿ ಶಾಲೆಗೆ ಹರಿದು ಬಂದಿದೆ. ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಧನ ಸಹಾಯ ಹಾಗೂ ಪ್ರಸ್ತುತ ವರ್ಷ ಜ್ಞಾನ ದೀಪ ಶಿಕ್ಷಕಿಯನ್ನು ಪಡೆದು ಕೊಂಡಿರುವುದು ಊರವರ ಕಾಳಜಿಯ ಮನವಿಯಿಂದ. ಶಾಲೆಯ ಪ್ರತಿಯೊಂದು ಕಾರ್ಯ ಚಟುವಟಿಕೆಗಳು ಸಂಭ್ರಮದಿಂದ ಮನೆಯ ಕಾರ್ಯಕ್ರಮದಂತೆ ನಡೆದು ಹೋಗುತ್ತದೆ. ಶಾಲೆಯು ಪ್ರತಿ ವರ್ಷ ತನ್ನ ವಾರ್ಷಿಕೋತ್ಸವವನ್ನು ಊರಿನ ಹಬ್ಬವಾಗಿ ಆಚರಿಸಿಕೊಳ್ಳುತ್ತದೆ. ಇವೆಲ್ಲವೂ ನನ್ನ ಶಾಲೆಯ ಜೀವಂತಿಕೆಯ ಸಾಕ್ಷಿಗಳು.

ಸ್ವಸ್ಥ ಸಮಾಜದ ನಿರ್ಮಾಣದ ಕಾರ್ಯ ಶಾಲೆಯಿಂದ ಆರಂಭಗೊಳ್ಳುತ್ತದೆ. 'ಇಂದಿನ ಮಕ್ಕಳು ಮುಂದಿನ ಪ್ರಜೆ' ಗಳಾಗಿರುವಾಗ ಈ ಸಮಾಜದ ಪ್ರತಿಯೊಂದು ಮನಸ್ಸು ಗುಣಮಟ್ಟದ ಶಿಕ್ಷಣಕ್ಕಾಗಿ ಮಿಡಿದಾಗಲೇ ಭವ್ಯ ಭಾರತದ ಭವಿತವ್ಯ ನಿರ್ಮಾಣವಾಗುತ್ತದೆ.

ಎಲ್ಲೋ ಕೇಳಿದ ನೆನಪು ಥಾಮಸ್ ಆಲ್ವಾ ಎಡಿಸನ್‌ನ ತಾಯಿ ತನ್ನ ಮಗು ವಿಜ್ಞಾನಿಯಾಗುವಂತೆ ಪ್ರೇರಿಪಿಸಲಿಲ್ಲ ಮಗುವಾಗಿ ಪ್ರೀತಿಸಿದಳಷ್ಟೇ. ದೇಶಕ್ಕೆ ಮಹಾತ್ಮರೆನ್ನಿಸಿದ ಗಾಂಧೀಜಿ ಅಧ್ಯಾಪಕನಾಗಲಿಲ್ಲ ಮಕ್ಕಳನ್ನು ಮಕ್ಕಳಾಗಿಯೇ ನೋಡಿದರಷ್ಟೇ, ನೋಬೆಲ್ ಪ್ರಶಸ್ತಿ ಪುರಸ್ಕೃತ ಕೈಲಾಸ್ ಸತ್ಯಾರ್ಥಿ ಶಾಲೆಯ ಸಂಚಾಲಕನಾಗಲಿಲ್ಲ, ಮಕ್ಕಳನ್ನು ಪ್ರೀತಿಸಿದರು ಅಷ್ಟೇ, ಮಕ್ಕಳ ಕುತೂಹಲದ ದಾಹಕ್ಕೆ ನೀರುಣಿಸುವ ತಾಳ್ಮೆಯೇ ಮಗುಸ್ನೇಹಿ ಎಂಬುದೆಂದು ಗೊತ್ತು ಪಡಿಸಿದ 'ಪಡಿ'ಗೆ ಈ ಮೂಲಕ ದೀರ್ಘ ದಂಡ ನಮನಗಳು.....

***

# ವೆಲೊರೆಡ್ ಅಂಗಳದಲ್ಲಿ.... !!

–ಎಂ. ವಾಸುದೇವ ರಾವ್
ನಿವೃತ್ತ ಶಿಕ್ಷಕರು, ಉಳ್ಳಾಲ



ಸರ್, ನಮಸ್ತೇ! ಒಳಗೆ ಬರಬಹುದಾ?

ಬನ್ನಿ ಬನ್ನಿ, ಒಳಗೆ ಕೂತ್ಕೊಳ್ಳಿ

"ಸರ್, ನಾನು ವಾಸುದೇವ ರಾವ್ ಅಂತ. ಉಳ್ಳಾಲ ಭಾರತ್ ಹೈಸ್ಕೂಲ್‌ನಲ್ಲಿ ಮಾಸ್ಟ್ರಾಗ್ರಿದ್ದೇನೆ. 'ಸಮುಚ್ಚಯ'ದ ಉಮಾಶಂಕರ್ ಪೆರಿಯೋಡಿಯವರು ನಿಮ್ಮಲ್ಲಿಗೆ ಕಳಿಸಿದ್ದಾರೆ. ಹೌದಾ, ಹೇಳಿ.".

"ನಾವು ಆರು ಮಂದಿ ಶಿಕ್ಷಕರು 'ಏಮ್ ಇನ್‌ಸೈಟ್ಸ್'ನಲ್ಲಿ ಉಮಾಶಂಕರ್ ಪೆರಿಯೋಡಿಯವರ ಮಾರ್ಗದರ್ಶನದಲ್ಲಿ ಶೈಕ್ಷಣಿಕ ಸಂಶೋಧನೆಗಳನ್ನು ಮಾಡಿದ್ದೇವೆ–ಬರಿಗಾಲ ಸಂಶೋಧನೆ ಅಂತ ಹೇಳ್ತೇವೆ. ಈಗ ಈ ಸಂಶೋಧನಾ ಪ್ರಬಂಧಗಳನ್ನು ಒಟ್ಟು ಸೇರಿಸಿ ಒಂದು ಪುಸ್ತಕವನ್ನು ಮಾಡಬೇಕೆಂದಿದ್ದೇವೆ. ಹೇಗೆ ಪ್ರಿಂಟ್ ಮಾಡಿಸಬೇಕಂತ ಗೊತ್ತಿಲ್ಲ. ಇದಕ್ಕೆ ನೀವು ಮಾರ್ಗದರ್ಶನ ನೀಡಬೇಕು". "ನಮ್ಮಿಂದ ಯಾವ ರೀತಿಯ ಸಹಕಾರ ಬೇಕು? ಅದನ್ನು ಕೊಡಲಿಕ್ಕೆ ನಾವು ಖಂಡಿತಾ ನಿಮ್ಮ ಜೊತೆ ಇರ್ತೇವೆ".

